ವಿಶ್ವವಾಣಿ
ವಿಶ್ವಾಸವೇ ವಿಶ್ವ

ಕುಸಿದ ಚೆನ್ನೈ ಕಿಂಗ್‌ಗಳು

ಕಳೆದ ವರ್ಷದ ಐಪಿಎಲ್‌ನಲ್ಲಿ ತೀರಾ ಕಳಪೆ ಪ್ರದರ್ಶನ ನೀಡಿದ್ದ ಚೆನ್ನೈ ಸೂಪರ್ ಕಿಂಗ್ಸ್, ಈ ಬಾರಿಯೂ ಅದನ್ನೇ ಮುಂದುವರಿಸಿದೆ. ಸೋಮವಾರ ಗುವಾಹಟಿಯಲ್ಲಿ ನಡೆದ ರಾಜಸ್ಥಾನ್ ವಿರುದ್ಧದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿ 127 ರನ್‌ಗಳಿಗೆ ಆಲೌಟಾಗಿದೆ. 8 ವಿಕೆಟ್‌ಗಳಿಂದ ಸೋತಿದೆ.

ಸೊಂಪಾದ ಪುಟಗಳು

ತರಾತುರಿಯಲ್ಲಿ ತೃತೀಯ ಭಾಷೆ ಕೈಬಿಟ್ಟಿದ್ದೇಕೆ?

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ

6

ಕನ್ನಡ ಎನ್ನುವುದು ನಮ್ಮ ಗುರುತಾಗಬೇಕು..

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ

7

ದಾರಿದೀಪೋಕ್ತಿ

ನಿಮ್ಮ ಅತಿ ದೊಡ್ಡ ಅಭಿಮಾನಿಗೆ ನಿಮ್ಮ ಬಗ್ಗೆ ಏನೂ ಗೊತ್ತಿರುವುದಿಲ್ಲ. ನಿಮ್ಮನ್ನು ಯಾರು ದ್ವೇಷಿಸುತ್ತಾರೋ, ನಿಮ್ಮ ಬಗ್ಗೆ ಕೆಟ್ಟದಾಗಿ ಮಾತಾಡುತ್ತಾರೋ, ಅವರಿಗೆ ನಿಮ್ಮ ಬಗ್ಗೆ ಎಲ್ಲವೂ ಗೊತ್ತಿರುತ್ತದೆ. ಯಾರ ಬಗ್ಗೆ ಎಚ್ಚರಿಕೆಯಿಂದಿರಬೇಕು ಎಂಬುದನ್ನು ತಿಳಿದಿರಬೇಕು.

ವಕ್ರತುಂಡೋಕ್ತಿ

ಕೆಲವರ ಬ್ಯಾಂಕ್ ಬ್ಯಾಲೆನ್ಸ್ ನೋಡಿದರೆ ಜೀವನದಲ್ಲಿ ಅವರು 'ಸೇವ್' ಮಾಡೋದು ಕೇವಲ ಕೀಬೋರ್ಡ್ ಮೇಲೆ ಮಾತ್ರ.

ರಾಯಚೂರು: 600 ಚೀಲ ಪಡಿತರ ವಶ

ರಾಯಚೂರು: ಜಿಲ್ಲೆಯ ಸಿರವಾರ ತಾಲೂಕಿನ ಹಾಲಾಪುರದಿಂದ ಅಂದಾಜು 8 ಲಕ್ಷ ರು. ಮೌಲ್ಯದ 600 ಚೀಲ ಪಡಿತರ ಅಕ್ಕಿಯನ್ನು ಅಕ್ರಮವಾಗಿ ಸಾಗಣೆ ಮಾಡುತ್ತಿದ್ದ ಲಾರಿಯನ್ನು ಪೊಲೀಸರು ಜಪ್ತಿ ಮಾಡಿದ್ದಾರೆ. ಕವಿತಾಳ-ಮಸ್ಕಿ ರಸ್ತೆಯ ಜಂಗುರ ಹಳ್ಳಿ ಕ್ರಾಸ್ ಬಳಿ ಅಧಿಕಾರಿಗಳು ದಾಳಿ ಮಾಡಿದ್ದಾರೆ.

6 ಲಕ್ಷ ರು. ಲಂಚ ಪಡೆವಾಗಲೇ ಡಿಸಿ ಲೋಕಾ ಬಲೆಗೆ

ಹುಬ್ಬಳ್ಳಿ: 6 ಲಕ್ಷ ರು. ಲಂಚ ಪಡೆಯುವಾಗಲೇ ವಾಣಿಜ್ಯ ತೆರಿಗೆ ಇಲಾಖೆ ಡಿಸಿ ಭರತ್ ಹೆಗ್ಡೆ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ. ಅಂಕೋಲಾ ಉದ್ಯಮಿ ವಿಶ್ವಜಿತ್ ನಾಯಕ್ ಎಂಬುವವರಿಂದ 6 ಲಕ್ಷ ಲಂಚ ರು. ಪಡೆಯುವಾಗಲೇ ಸಿಕ್ಕಿಬಿದ್ದಿದ್ದಾರೆ. ವಿಶ್ವಜಿತ್ ವಿರುದ್ಧದ ಪ್ರಕರಣ ಮುಗಿಸಲು ಈ ಲಂಚ ಪಡೆದಿದ್ದಾರೆಂದು ಹೇಳಲಾಗಿದೆ.

ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ನುಗ್ಗಿದ ಕರಡಿ: ಕೊನೆಗೂ ಸೆರೆ

ಶಿವಮೊಗ್ಗ: ಇಲ್ಲಿನ ವಿಮಾನ ನಿಲ್ದಾಣದಲ್ಲಿ ಸೋಮವಾರ ಬೆಳಗ್ಗೆ ದಿಢೀರ್ ಕರಡಿಯೊಂದು ಪ್ರತ್ಯಕ್ಷವಾಗಿ ಸ್ಥಳೀಯರಲ್ಲಿ ಆತಂಕ ಮೂಡಿಸಿತ್ತು. ತಕ್ಷಣ ಅರಣ್ಯ ಇಲಾಖೆ ಹರಸಾಹಸ ಮಾಡಿ ಅರಿವಳಿಕೆ ನೀಡಿ, ಕರಡಿಯನ್ನು ಹಿಡಿದಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -



ರಾಜ್ಯ ಸರಕಾರದಿಂದ ವಿವಿಧ ಇಲಾಖೆಗಳ ಮುಖ್ಯಸ್ಥರಿಗೆ ಕಠಿಣ ಸೂಚನೆ

96000ಕ್ಕೂ ಹೆಚ್ಚು ಹೊರಗುತ್ತಿಗೆ ಆಧಾರಿತ ನೌಕರರ ಉದ್ಯೋಗಕ್ಕೆ ಕುತ್ತು

ಗುತ್ತಿಗೆ ನೌಕರರಿಗೆ ಸಂಬಂಧಿಸಿದ ಹೈಕೋರ್ಟ್ ತೀರ್ಪು ಆಧರಿಸಿ ಆದೇಶ

ಹೊರಗುತ್ತಿಗೆ ನೌಕರರ ಅವಧಿ ಮುಗಿದ ಕೂಡಲೇ ಕಿತ್ತುಹಾಕಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಾಯಂ ನೌಕರರ ನೇಮಕಕ್ಕೆ ಇರುವ ಹತ್ತಾರು ಸಮಸ್ಯೆಗಳಿಗೆ ಪರಿಹಾರವಾಗಿರುವ ಹೊರಗುತ್ತಿಗೆ ನೌಕರರ ವಿಷಯದಲ್ಲಿ ಆರ್ಥಿಕ ಇಲಾಖೆ ಮಹತ್ವದ ತೀರ್ಮಾನ ಕೈಗೊಂಡಿದ್ದರೂ ಆಡಳಿತಕ್ಕೆ ಕುತ್ತು ಬರುವ ಸಂಭವವಿದೆ. ರಾಜ್ಯದ ವಿವಿಧ ಇಲಾಖೆಯಲ್ಲಿರುವ 96 ಸಾವಿರಕ್ಕೂ ಹೆಚ್ಚು ಹೊರಗುತ್ತಿಗೆ ಸಿಬ್ಬಂದಿಯಲ್ಲಿ ಬಹುಪಾಲು ಮಂದಿ ಹಲವು ವರ್ಷಗಳಿಂದ ಒಂದೇ ಕಡೆ ಭದ್ರವಾಗಿದ್ದಾರೆ. ಕಾಯಂ ನೌಕರರಷ್ಟೇ 'ಪರಿಣಿತಿ' ಇರುವುದರಿಂದ ಬದಲಾಯಿಸಬೇಕೆಂಬ ಸೂಚನೆಯಿದ್ದರೂ, ಬಹುಪಾಲು ಇಲಾಖೆಗಳು ಬದಲಾಯಿಸುವ ಗೋಜಿಗೆ ಹೋಗುತ್ತಿಲ್ಲ. ಆದರೆ ಆರ್ಥಿಕ ಇಲಾಖೆ ಇದೀಗ, ಅವಧಿ ಮುಗಿದ ಕೂಡಲೇ ಗುತ್ತಿಗೆ ನೌಕರರನ್ನು ಕಳುಹಿಸದಿದ್ದರೆ ಕಠಿಣ ಕ್ರಮದ ಎಚ್ಚರಿಕೆ ನೀಡಿದೆ. ಸರಕಾರದ ಇಂತಹ ದಿಢೀರ್ ನಿರ್ಧಾರಕ್ಕೆ ಸ್ಪಷ್ಟ ಕಾರಣ ತಿಳಿದುಬಂದಿಲ್ಲ.

ಸರಕಾರಿ ಇಲಾಖೆ, ನಿಗಮ ಮಂಡಳಿಗಳಲ್ಲಿ ಕಾರ್ಯನಿರ್ವಹಿಸಿತ್ತಿರುವ ಹೊರಗುತ್ತಿಗೆ ನೌಕರರ ಅವಧಿ ಮುಗಿಯುತ್ತಿದ್ದಂತೆ ಮನೆಗೆ ಕಳುಹಿಸಬೇಕು. ಯಾವುದೇ ಕನಿಕರ, ಮಾನವೀಯತೆ ತೋರಿ ಅವರನ್ನು ಮುಂದುವರಿಸುವಂತಿಲ್ಲ. ಒಂದು ವೇಳೆ ಈ ರೀತಿಯಾಗಿರುವುದು ಕಂಡು ಬಂದರೆ ಅಧಿಕಾರಿಯ ವೇತನದಲ್ಲಿಯೇ ಈ ಹಣವನ್ನು ವಸೂಲಿ ಮಾಡಬೇಕು ಎನ್ನುವ ಕಟ್ಟುನಿಟ್ಟಿನ ಆದೇಶ ಹೊರಡಿಸಲಾಗಿದೆ.

ಹೊರಗುತ್ತಿಗೆ ನೌಕರರ ಅವಧಿ ಮುಗಿಯುತ್ತಿದ್ದಂತೆ ಕಳುಹಿಸಬೇಕು ಎನ್ನುವ ಆದೇಶ ಹೊರಡಿಸಿರುವ ಹಿಂದೆ ಸಿಎಜಿ ವರದಿಯನ್ನು ಪ್ರಸ್ತಾಪಿಸಲಾಗಿದೆ. ಅನೇಕ ಇಲಾಖೆಗಳಲ್ಲಿ ಒಪ್ಪಂಬ ಮುಗಿದಿದ್ದರೂ ಸಿಬ್ಬಂದಿಯನ್ನು ಮುಂದುವರಿಸಿರುವುದು 'ಅನಧಿಕೃತ ವೆಚ್ಚ' ಎಂದು ಸಿಎಜಿ ವರದಿಯಲ್ಲಿ ಪ್ರಸ್ತಾಪಿಸಲಾಗಿದೆ. ಆದ್ದರಿಂದ ಮಾನವೀಯ ಆಧಾರದಲ್ಲಿ ಸಿಬ್ಬಂದಿಯನ್ನು ಮುಂದುವರೆಸುವ ಪ್ರಕ್ರಿಯೆಗೆ ವಿರಾಮ ನೀಡಬೇಕು. ಇನ್ನು ಹೊರಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿ ಏಜೆನ್ಸಿಯ ಸಿಬ್ಬಂದಿಯೇ ಹೊರತು, ಸರಕಾರದವರಲ್ಲ. ಆದ್ದರಿಂದ ಟೆಂಡರ್‌ನಲ್ಲಿ ಹೊಸ ಏಜೆನ್ಸಿಯವರು ಬಂದಾಗ ಹಳಬರನ್ನು ಮುಂದುವರಿಸಬೇಕು ಎಂದು ಹೇಳುವಂತಿಲ್ಲ ಎಂದು ಆದೇಶದಲ್ಲಿ ಸ್ಪಷ್ಟಪಡಿಸಿದೆ.

→ 4



ಅಧಿಕಾರಿಗಳ ಆತಂಕವೇನು?

- ಕಾಯಂ ನೌಕರರು ಕಡಿಮೆ ಇರುವ ಸಮಯದಲ್ಲಿ ಈ ತೀರ್ಮಾನದಿಂದ ಇಲಾಖೆ ನಿರ್ವಹಣೆಗೆ ಭಾರೀ ಕಷ್ಟ
- ಅವಧಿ ಮುಗಿಯುತ್ತಿದ್ದಂತೆ ತೆಗೆದರೆ ಬದಲಿ ವ್ಯವಸ್ಥೆಯ ತನಕ ಕಾಯಂ ನೌಕರರಿಗೆ ತೀವ್ರ ಹೊರೆಯಾಗುತ್ತದೆ
- ಟೆಂಡರ್ ಪ್ರಕ್ರಿಯೆ ಮುಗಿದು ಬಂದರೂ, ಹೊಸಬರಿಗೆ ಕಲಿಸಲು ಬಹಳ ಸಮಯ ಹಿಡಿಯುತ್ತದೆ, ಇದು ಶ್ರಮದಾಯಕ
- ಇಲಾಖೆಗಳಲ್ಲಿ ಡಿಟಿಪಿ ಆಪರೇಟರ್‌ಗಳು, ಚಾಲಕ ಹುದ್ದೆಯಲ್ಲಿರುವವರು ಬಹುಪಾಲು ಗುತ್ತಿಗೆ ಆಧಾರಿತ ನೌಕರರು
- ಪ್ರತಿಬಾರಿಯೂ ಹೊಸಬರಿಗೆ ಕಲಿಸುತ್ತಾ ಕೂತರೇ, ಸಮಯ ವ್ಯರ್ಥ, ಇಲಾಖೆಯ ನಿರ್ವಹಣೆಗೂ ಹೊಡೆತ

ಆದೇಶದಲ್ಲಿನ ಸೂಚನೆಗಳೇನು?

- ಒಪ್ಪಂದ ಅವಧಿ ಪೂರ್ಣಗೊಂಡ ತಕ್ಷಣವೇ, ಪ್ರತ್ಯೇಕ ಆದೇಶ ನೀಡದೇ ಆ ಸಿಬ್ಬಂದಿಯ ಸೇವೆ ಕೊನೆಗೊಂಡಂತೆ ಎಂದು ಪರಿಗಣಿಸಬೇಕು
- ಅವಧಿ ಪೂರ್ಣಗೊಂಡ ನಂತರ ಸಿಬ್ಬಂದಿಯನ್ನು ಅದೇ ಸಂಸ್ಥೆ/ವಿಭಾಗದಲ್ಲಿ ಯಾವುದೇ ಕಾರಣಕ್ಕೂ ಮುಂದುವರಿಸಲು ಅನುಮತಿ ಇರುವುದಿಲ್ಲ
- ಹೊರಗುತ್ತಿಗೆ ನೌಕರರು ಸಂಬಂಧಿತ ಏಜೆನ್ಸಿಗೆ ಸೇರಿದವರು. ಆದ್ದರಿಂದ ಇಲಾಖೆಯವರು ತಮ್ಮ ಸಿಬ್ಬಂದಿಯಂತೆ ಪರಿಗಣಿಸುವುದು ಮಾನ್ಯವಲ್ಲ
- ಹೊರಗುತ್ತಿಗೆ ಸಿಬ್ಬಂದಿಗೆ ಯಾವುದೇ ರೀತಿಯ ಕಾಯಮಾತಿ ಅವಕಾಶವಿಲ್ಲ, ಒಪ್ಪಂದ ನಂತರ ಸೇವೆ ಮುಂದುವರಿಸಲು ಅವಕಾಶವಿರುವುದಿಲ್ಲ
- ಹೊಸ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ, ಅಗತ್ಯ ಸಿಬ್ಬಂದಿಯ ಆಯ್ಕೆ, ನಿಯೋಜನೆಯ ನಿರ್ಧಾರ ಹೊಸ ಏಜೆನ್ಸಿಯದ್ದಾಗಿರುತ್ತದೆ
- ಹಿಂದಿನ ಸಿಬ್ಬಂದಿಗೆ ಯಾವುದೇ ಆದ್ಯತೆ ನೀಡುವ ಬಾಧ್ಯತೆ ಸರಕಾರಕ್ಕಿಲ್ಲ, ಅವರಿಗೆ ಸಂಬಂಧಪಟ್ಟಂತೆ ಯಾವುದೇ ಹೊಣೆಗಾರಿಕೆಯೂ ಇರುವುದಿಲ್ಲ

ಹೊರಗುತ್ತಿಗೆ ನೌಕರರ ಕಾಯಮಾತಿ ಸಾಧ್ಯವಿಲ್ಲ

ಕಾಯಂ ನೌಕರರ ಸಮಸ್ಯೆಯಿಂದಾಗಿ ಕೆಲ ಇಲಾಖೆಗಳಲ್ಲಿ ದಶಕದಿಂದ ಹೊರಗುತ್ತಿಗೆ ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ. ಕಾಯಂ ನೌಕರರನ್ನು ಪಡೆಯುವ ಸಮಯದಲ್ಲಿ ನಮಗೆ ಅವಕಾಶ ಸಿಗಬಹುದು ಎನ್ನುವ ನಿರೀಕ್ಷೆಯಲ್ಲಿ ಅನೇಕರಿದ್ದಾರೆ. ಆದರೆ ಹೊರಗುತ್ತಿಗೆ ನೌಕರರನ್ನು ಕಾಯಂಗೊಳಿಸಲು ಸಾಧ್ಯವಿಲ್ಲ ಎಂದು ಆದೇಶದಲ್ಲಿ ಸ್ಪಷ್ಟಪಡಿಸಿದೆ. ಹೈಕೋರ್ಟ್‌ನ ವಿವಿಧ ಆದೇಶವನ್ನು ಉಲ್ಲೇಖಿಸಿರುವ ಆರ್ಥಿಕ ಇಲಾಖೆ, 'ಹೊರಗುತ್ತಿಗೆ ಸಿಬ್ಬಂದಿಗೆ ಕಾಯಂಗೊಳ್ಳುವ ಹಕ್ಕಿಲ್ಲ' ಎಂದು ಸ್ಪಷ್ಟಪಡಿಸಿದೆ.

ಜಲಸಂಧಿ ತೆರೆಯದಿದ್ದರೆ ತೈಲ ಬಾವಿ, ವಿದ್ಯುತ್ ಸ್ಥಾವರ ಸ್ಫೋಟ: ಅಮೆರಿಕ

ತೆರೆಮರೆಯಲ್ಲಿ ಸಂಧಾನ ಮಾತುಕತೆ, ಟ್ರಂಪ್ ಎಚ್ಚರಿಕೆಗೆ ಜಗ್ಗದ ಇರಾನ್

ಇರಾನ್ ತೈಲ ಸ್ಥಾವರಕ್ಕೇ ಬಾಂಬ್ | ಇರಾನ್ ಪ್ರತಿದಾಳಿ, ಇಸ್ರೇಲ್‌ಗೆ ಏಟು

ಹೊರ್ಮುಜ್ ತೆರವಿಗೆ ಟ್ರಂಪ್ ಪಟ್ಟು: ಇರಾನ್‌ಗೆ ಕಡೇ ಎಚ್ಚರಿಕೆ

ದೆಹಲಿ: ಮಧ್ಯಪ್ರಾಚ್ಯ ಯುದ್ಧ ಸರಿಯಾಗಿ 31 ದಿನಗಳನ್ನು ಪೂರೈಸಿದೆ. ಇರಾನ್ ಮೇಲೆ ಅಮೆರಿಕ-ಇಸ್ರೇಲ್ ಪಡೆಗಳ ದಾಳಿ ಮುಂದುವರಿದಿದೆ. ಇದಕ್ಕೆ ಪ್ರತಿಯಾಗಿ ಇರಾನ್ ಕೂಡ ಶಕ್ತಿಮೀರಿ ಪ್ರತಿದಾಳಿ ನಡೆಸುತ್ತಿದೆ. ಇದರ ನಡುವೆಯೇ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇರಾನ್‌ಗೆ ಕಡೆಯದ್ದು ಎನ್ನಲಾಗಿರುವ ಎಚ್ಚರಿಕೆ ಯೊಂದನ್ನು ರವಾನಿಸಿದ್ದಾರೆ. ಇರಾನ್ ಹೊರ್ಮುಜ್ ಜಲಸಂಧಿಯನ್ನು ಎಲ್ಲ ದೇಶಗಳ ಹಡಗುಗಳಿಗೆ ಮುಕ್ತಗೊಳಿಸದಿದ್ದರೆ, ಒಪ್ಪಂದಕ್ಕೆ ಬರದಿದ್ದರೆ ಭೀಕರವಾದ ದಾಳಿ ನಡೆಸಲಾಗುವುದು. ಅಲ್ಲಿನ ತೈಲಬಾವಿಗಳು, ವಿದ್ಯುತ್ ಸ್ಥಾವರಗಳು, ತೈಲ ಸಂಸ್ಕರಣಾ ಘಟಕಗಳಿರುವ ಖಾರ್ಗ್ ದ್ವೀಪದ ಮೇಲೆ ಹಿಂದೆಂದೂ ನಡೆಸದಂತಹ ದಾಳಿ ನಡೆಸಿ ಸ್ಫೋಟಿಸಲಾಗುತ್ತದೆ ಎಂದಿದ್ದಾರೆ.

ತಮ್ಮ ಟ್ರುಥ್ ಖಾತೆಯಲ್ಲಿ ಎಚ್ಚರಿಕೆ ನೀಡಿರುವ ಟ್ರಂಪ್, ಮಾತುಕತೆ ಯಶಸ್ವಿಯಾಗಿ ನಡೆಯುತ್ತಿದೆ, ಒಪ್ಪಂದವಾಗುವ ಸಾಧ್ಯತೆಯಿದೆ. ಒಂದು ವೇಳೆ ಒಪ್ಪಂದವಾಗದಿದ್ದರೆ, ಭೀಕರ ದಾಳಿ ಮಾಡುತ್ತೇವೆ. ಶುದ್ಧ ನೀರು ಪೂರೈಕೆ ಘಟಕಗಳನ್ನೂ ಬಿಡುವುದಿಲ್ಲ ಎಂದು ಹೇಳಿದ್ದಾರೆ. ಅಲ್ಲಿಗೆ ನೀರಿಗೂ ಇರಾನ್ ಪರದಾಡುವ ಸ್ಥಿತಿ ಬರುತ್ತದೆ ಎಂಬ ಪರೋಕ್ಷ ಸೂಚನೆ ನೀಡಿದ್ದಾರೆ.

ಅಮೆರಿಕ 15 ಷರತ್ತುಗಳನ್ನು ಇರಾನ್‌ಗೆ ಒಡ್ಡಿದೆ. ಅವಕ್ಕೆ ಇರಾನ್ ಒಪ್ಪುತ್ತಿಲ್ಲ. ಮುಖ್ಯವಾಗಿ ಇರಾನ್ ಅಣ್ವಸ್ತ್ರ ಯೋಜನೆ ನಿಲ್ಲಿಸಬೇಕು, ತನ್ನಲ್ಲಿರುವ ಸಂಪೂರ್ಣ ಯುರೇನಿಯಂ ಅನ್ನು ಅಮೆರಿಕದ ವಶಕ್ಕೆ ಒಪ್ಪಿಸಬೇಕು, ಕೆಲವು ವ್ಯಾಪ್ತಿಯ ಕ್ಷಿಪಣಿಗಳನ್ನು ಬಳಸಬಾರದು, ಸ್ಥಳೀಯ ಉಗ್ರರ ಗುಂಪುಗಳಿಗೆ ಬೆಂಬಲ ನೀಡಬಾರದು, ಹೊರ್ಮುಜ್ ಜಲಸಂಧಿಯಲ್ಲಿ ಸಲೀಸಾಗಿ, ಉಚಿತವಾಗಿ ಸಂಚರಿಸಲು ಅವಕಾಶ ನೀಡಬೇಕು ಎಂದು ಅಮೆರಿಕ ಹೇಳುತ್ತಿದೆ. ಇದಕ್ಕೆ ಇರಾನ್ ಸುತಾರಾಂ ಒಪ್ಪಿಲ್ಲ. ಬದಲಿಗೆ ಯುದ್ಧದಿಂದಾದ ಹಾನಿಗೆ ಪರಿಹಾರ ನೀಡಬೇಕು, ಮುಂದೆಂದೂ ದಾಳಿ ನಡೆಸುವುದಿಲ್ಲ ಎಂದು ಖಾತ್ರಿ ನೀಡಬೇಕು ಎಂದು ಹಠ ಹಿಡಿದಿದೆ.

2 ದಿನದಲ್ಲಿ 40ಕ್ಕೂ ಹೆಚ್ಚು ಸೇನಾ ಕೇಂದ್ರ-ಕೈಗಾರಿಕೆಗಳು ಧ್ವಂಸ!

ಇರಾನ್ ಮೇಲೆ ಕಳೆದ 2 ದಿನಗಳಲ್ಲಿ ಇಸ್ರೇಲ್ ವ್ಯಾಪಕ ದಾಳಿ ನಡೆಸಿದ್ದು, ಸುಮಾರು 40 ಇರಾನಿ ಸೇನಾನೆಲೆಗಳು, ಸಂಶೋಧನಾ ಕೇಂದ್ರಗಳು ಹಾಗೂ ಕೈಗಾರಿಕಾ ಸೌಲಭ್ಯಗಳನ್ನು ಧ್ವಂಸಗೊಳಿಸಲಾಗಿದೆ ಎಂದು ಇಸ್ರೇಲಿ ಸೇನೆ ತಿಳಿಸಿದೆ. ಇರಾನ್‌ನ ಶಸ್ತ್ರಾಸ್ತ್ರ ಉತ್ಪಾದನಾ ಸಾಮರ್ಥ್ಯಗಳನ್ನು ಕುಗ್ಗಿಸಲು ಮತ್ತು ಭವಿಷ್ಯದ ಬೆದರಿಕೆಗಳನ್ನು ಮಿತಿಗೊಳಿಸಲು ನಡೆಯುತ್ತಿರುವ ಪ್ರಯತ್ನದ ಭಾಗವಾಗಿ ಈ ದಾಳಿ ನಡೆಯುತ್ತಿದೆ.

ಅಮೆರಿಕಕ್ಕೆ ಸ್ಪೇನ್ ದೇಶದ ವಾಯುಮಾರ್ಗ ಬಂದ್

ಇರಾನ್ ವಿರುದ್ಧ ದಾಳಿಯನ್ನು ವಿರೋಧಿಸಿ ಸ್ಪೇನ್ ದೇಶ, ಅಮೆರಿಕಕ್ಕೆ ತನ್ನ ವಾಯುಮಾರ್ಗವನ್ನು ಮುಚ್ಚಿದೆ. ಸ್ಪೇನ್ ಸೇನಾನೆಲೆಗಳನ್ನಾಗಲೀ, ವಾಯುಮಾರ್ಗವನ್ನಾಗಲೀ ಯುದ್ಧದ ಕಾರಣಕ್ಕೆ ಬಳಸಿಕೊಳ್ಳುವುದಕ್ಕೆ ಅನುಮತಿ ನೀಡುವುದಿಲ್ಲ ಎಂದು ಹೇಳಿದೆ. ಬಹಿರಂಗವಾಗಿ ಅಮೆರಿಕದ ಯುದ್ಧ ವಿರೋಧಿಸಿದ ಮೊದಲ ಯುರೋಪ್ ದೇಶ ಸ್ಪೇನ್.

ಇಸ್ರೇಲ್‌ನಲ್ಲಿ 6 ಸಾವಿರಕ್ಕೂ ಅಧಿಕ ಮಂದಿಗೆ ಗಾಯ

ಇಸ್ರೇಲ್ ಮೇಲೆ ಇರಾನ್ ಸಹ ದಾಳಿ ನಡೆಸಿದ್ದು, ಈ ದಾಳಿಗಳಲ್ಲಿ 6,000ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ ಎಂದು ಇಸ್ರೇಲ್ ತಿಳಿಸಿದೆ. ಕಳೆದ 24 ಗಂಟೆಗಳಲ್ಲಿ ನಡೆದ ದಾಳಿಗಳಲ್ಲಿ 232 ಜನ ಗಾಯಗೊಂಡಿದ್ದಾರೆ ಎಂದು ಇಸ್ರೇಲ್ ತಿಳಿಸಿದೆ. ಇದರ ಹೊರತಾಗಿಯೂ ಇಸ್ರೇಲ್, ಇರಾನ್ ಮತ್ತು ಲೆಬನಾನ್ ಮೇಲೆ ದಾಳಿ ಮುಂದುವರಿಸಿದೆ.

ಷರತ್ತಿಗೆ ಇರಾನ್ ತಿರಸ್ಕಾರ

ಸಂಘರ್ಷ ಕೊನೆಗೊಳಿಸಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮುಂದಿಟ್ಟಿದ್ದ 15 ಅಂಶಗಳ ಪ್ರಸ್ತಾವನೆಯನ್ನು ಇರಾನ್ ತಿರಸ್ಕರಿಸಿದೆ. ಈ ಅಂಶಗಳು ಅವಾಸ್ತವಿಕ, ಅಸಮಂಜಸ ಎಂದು ಇರಾನ್ ಕಿಡಿಕಾರಿದೆ. ಈ ಬಗ್ಗೆ ಮಾತನಾಡಿರುವ ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಇಸ್ಮಾಯಿಲ್ ಬಘೈ ಸೋಮವಾರ, ಸದ್ಯ ಅಮೆರಿಕದೊಂದಿಗೆ ಯಾವುದೇ ನೇರ ಮಾತುಕತೆಗಳು ನಡೆದಿಲ್ಲ ಎನ್ನುವ ಮೂಲಕ ಷರತ್ತುಗಳಿಗೆ ಇರಾನ್ ಒಪ್ಪಿದೆ ಎಂಬ ಟ್ರಂಪ್ ಹೇಳಿಕೆಯನ್ನು ತಿರಸ್ಕರಿಸಿದ್ದಾರೆ.

ಕುವೈತ್ ವಿದ್ಯುತ್ ಸ್ಥಾವರದ ಮೇಲೆ ದಾಳಿ, ಭಾರತೀಯ ಸಾವು

ಕುವೈತ್‌ನ ವಿದ್ಯುತ್ ಸ್ಥಾವರದ ಮೇಲೆ ಇರಾನ್ ದಾಳಿಯಲ್ಲಿ ಭಾರತೀಯ ಕಾರ್ಮಿಕರೊಬ್ಬರು ಮೃತಪಟ್ಟಿದ್ದಾರೆ. ದಾಳಿಯಿಂದ ವಿದ್ಯುತ್ ಘಟಕದ ಕಟ್ಟಡವೊಂದಕ್ಕೆ ಭಾರೀ ಹಾನಿಯಾಗಿದೆ. ಭಾನುವಾರ ಸಂಜೆ ಈ ಘಟನೆ ಸಂಭವಿಸಿದ್ದು, ಇದು ಕುವೈತ್ ಮೇಲೆ ಇರಾನ್ ನಡೆಸಿದ ಅತಿದೊಡ್ಡ ಆಕ್ರಮಣಗಳಲ್ಲಿ ಒಂದಾಗಿದೆ ಎಂದು ಕುವೈತ್‌ನ ವಿದ್ಯುತ್, ನೀರು ಮತ್ತು ನವೀಕರಣ ಇಂಧನ ಸಚಿವಾಲಯ ತಿಳಿಸಿದೆ. ಕುವೈತ್ ಸದ್ಯ ತೀವ್ರ ಒತ್ತಡದ ಸ್ಥಿತಿಯಲ್ಲಿದೆ.

ಎಲ್‌ಪಿಜಿ ಕೊರತೆ ನೀಗಲು ಸರಕಾರದ ತಾತ್ಕಾಲಿಕ ಕ್ರಮ

ಪೆಟ್ರೋಲ್ ಬಂಕಲ್ಲಿ ಸೀಮೆಯೆಣ್ಣೆ ಮಾರಾಟ

ದೆಹಲಿ: ದೇಶದಲ್ಲಿನ್ನೂ ಎಲ್‌ಪಿಜಿ ಸಿಲಿಂಡರ್‌ಗಳ ಪೂರೈಕೆ ಸಹಜ ಸ್ಥಿತಿಗೆ ಬಾರದ ಹಿನ್ನೆಲೆಯಲ್ಲಿ ಜನರಿಗೆ, ಹೋಟೆಲ್‌ಗಳಿಗೆ ಅಡುಗೆ ಮಾಡುವುದಕ್ಕೆ ಅನುಕೂಲವಾಗಲಿ ಎಂದು ಪೆಟ್ರೋಲ್ ಬಂಕ್‌ಗಳಲ್ಲಿಯೇ 'ಸೀಮೆಎಣ್ಣೆ' ಮಾರಾಟಕ್ಕೆ ಕೇಂದ್ರ ಸರಕಾರ ಅನುಮತಿ ನೀಡಿದೆ. ಇದೇ ಕಾರಣವಾಗಿ ಕೇಂದ್ರ ಸರಕಾರ ಸೀಮೆಎಣ್ಣೆ ವಿತರಣೆ ನಿಯಮದಲ್ಲಿನ ಕೆಲವು ಕಠಿಣ ಷರತ್ತುಗಳನ್ನು ಸಡಿಲಗೊಳಿಸಿದೆ. ಮುಂದಿನ 60 ದಿನಗಳ ಕಾಲ ಪೆಟ್ರೋಲ್ ಬಂಕ್‌ಗಳಲ್ಲಿಯೂ ಸೀಮೆಎಣ್ಣೆ ಮಾರಾಟಕ್ಕೆ ಅವಕಾಶ ಮಾಡಿಕೊಟ್ಟಿದೆ. ಮಾ.29ರ ಭಾನುವಾರ ಕೇಂದ್ರ ಸರಕಾರ ಹೊರಡಿಸಿದ ಗೆಜೆಟ್ ಅಧಿಸೂಚನೆ ಪ್ರಕಾರ, ದೆಹಲಿ, ಹರಿಯಾಣ, ಉತ್ತರಪ್ರದೇಶ, ಗುಜರಾತ್ ಸೇರಿದಂತೆ 21 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಸೀಮೆಎಣ್ಣೆ ವಿತರಣೆಗೆ ಕೇಂದ್ರ ಸರಕಾರ ಅನುಮತಿ ನೀಡಿದೆ.



→ 4

ರುಪಾಯಿ ಮೌಲ್ಯ 95 ರು.ಗೆ ಕುಸಿತ

ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದಿಂದ ದಿನೇದಿನೇ ಡಾಲರ್ ಮುಂದೆ ರುಪಾಯಿ ಮೌಲ್ಯ ಕುಸಿಯುತ್ತಿದೆ. ಮೌಲ್ಯ ವೃದ್ಧಿಸಲು ಆರ್‌ಬಿಐ ಕ್ರಮವೂ ಉಪಯೋಗವಾಗಿಲ್ಲ. ಇದೇ ಮೊದಲ ಬಾರಿಗೆ 1 ಡಾಲರ್ ಎದುರು ರುಪಾಯಿ ಮೌಲ್ಯ 95 ರು.ಗಳ ಗಡಿಯನ್ನು 95.13 ರು.ಗೆ ಕುಸಿದಿತ್ತು. ಅಂತಿಮವಾಗಿ ಮೌಲ್ಯ 94.78 ರು.ಗೆ ನಿಂತಿತು. ಕಳೆದ ಶುಕ್ರವಾರ ಎಲ್ಲಾ ಬ್ಯಾಂಕುಗಳು ಪ್ರತಿ ದಿನದ ಅಂತ್ಯಕ್ಕೆ ತಮ್ಮಲ್ಲಿನ ವಿದೇಶಿ ಕರೆನ್ಸಿ ಸಂಗ್ರಹ ಮೌಲ್ಯ 946 ಕೋಟಿ ರು. ದಾಟುವಂತಿಲ್ಲ ಎಂದು ಹೇಳಿದೆ. ಇದರಿಂದಾಗಿ ಹೆಚ್ಚುವರಿ ವಿದೇಶಿ ಕರೆನ್ಸಿಯನ್ನು ಬ್ಯಾಂಕ್‌ಗಳು ಮಾರಬೇಕಾಗುತ್ತದೆ. ಆಗ ಡಾಲರ್ ಮೌಲ್ಯ ಇಳಿಯುತ್ತದೆ ಎನ್ನುವುದು ಲೆಕ್ಕಾಚಾರ.

ನಂಜುಂಡೇಶ್ವರ ಜಾತ್ರೆಯಲ್ಲಿ ಲಕ್ಷಾಂತರ ಜನ

ಮೈಸೂರು ಜಿಲ್ಲೆ ನಂಜನಗೂಡಿನಲ್ಲಿ ಶ್ರೀಕಂಠೇಶ್ವರ ಪಂಚ ಮಹಾರಥೋತ್ಸವವು ಸೋಮವಾರ ಆರಂಭವಾಯಿತು. ಲಕ್ಷಾಂತರ ಭಕ್ತರು ರಥೋತ್ಸವಕ್ಕೆ ಸಾಕ್ಷಿಯಾದರು. ಶಾಸಕ ದರ್ಶನ್ ಧ್ರುವನಾರಾಯಣ ರಥಗಳಿಗೆ ಪೂಜೆ ಸಲ್ಲಿಸಿ ಜಾತ್ರೆಗೆ ಚಾಲನೆ ನೀಡಿದರು.

ನಾಳೆ ರಾಷ್ಟ್ರಪತಿ ಮುರ್ಮು ಸಿದ್ದಗಂಗಾ ಮಠಕ್ಕೆ ಭೇಟಿ

ತುಮಕೂರು: ಏಪ್ರಿಲ್ 1ರಂದು ತ್ರಿವಿಧ ದಾಸೋಹಿ, ಶತಾಯುಷಿ ಸಿದ್ದಗಂಗಾ ಮಠದ ಶಿವೈಕ್ಯ ಶಿವಕುಮಾರ ಮಹಾಶಿವಯೋಗಿಗಳ 119ನೇ ಜನ್ಮದಿನೋತ್ಸವ ಅದ್ದೂರಿಯಾಗಿ ನಡೆಯಲಿದೆ. ಈ ಮಹತ್ವದ ಕ್ಷಣಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಸಾಕ್ಷಿಯಾಗಲಿದ್ದಾರೆ. ಶ್ರೀಗಳ ಪುಣ್ಯಸ್ಮರಣೆ ದಿನವನ್ನು ದಾಸೋಹ ದಿನವನ್ನಾಗಿ ಘೋಷಿಸುವಂತೆ ಒತ್ತಾಯ ಕೇಳಿಬಂದಿದೆ. ಏ.1ರಂದು ಪ್ರಾತಃಕಾಲದಲ್ಲಿ ಶಿವಕುಮಾರ ಶ್ರೀಗಳ ಗದ್ದುಗೆಗೆ ವಿಶೇಷ ಪೂಜೆ ನಡೆಯಲಿದೆ. ರಾಷ್ಟ್ರಪತಿಗಳು ಅಂದು ಬೆಳಗ್ಗೆ 10:30ಕ್ಕೆ ಸಿದ್ದಗಂಗಾ ಮಠಕ್ಕೆ ಆಗಮಿಸಲಿದ್ದಾರೆ. ಆರಂಭದಲ್ಲಿ ಶಿವಕುಮಾರ ಶ್ರೀಗಳ ಗದ್ದುಗೆಗೆ ಆರತಿ ಪೂಜೆ ಸಲ್ಲಿಸಲಿದ್ದಾರೆ. ಬಳಿಕ ಶ್ರೀಮಠದ 10 ಸಾವಿರ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಲಿದ್ದಾರೆ.

ಬಾಗಲಕೋಟದಲ್ಲಿ ಸಿದ್ದು, ಬಿವೈವಿ ಸಂಚಾರ

ಉಪಸಮರ: ಬಿಸಿಲ ನಡುವೆ ನಾಯಕರ ಬಿರುಸಿನ ಪ್ರಚಾರ

ಬಾಗಲಕೋಟೆ: ಭಾರೀ ಬಿಸಿಲ ತಾಪದ ನಡುವೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಬಾಗಲಕೋಟೆಯಲ್ಲಿ ಬಿರುಸಿನ ಪ್ರಚಾರ ನಡೆಸಿದರು. ಎಚ್.ವೈ.ಮೇಟಿ ಆತ್ಮಕ್ಕೆ ಶಾಂತಿ ಸಿಗಬೇಕಾದರೆ ಅವರ ಪುತ್ರ ಉಮೇಶ್ ಮೇಟಿಯನ್ನು ಗೆಲ್ಲಿಸಲೇಬೇಕು. ಬಾಗಲಕೋಟೆಗೆ ಮೆಡಿಕಲ್ ಕಾಲೇಜು ಬರುತ್ತಿರುವುದು ಮೇಟಿಯ ಶ್ರಮದ ಫಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಬಾಗಲಕೋಟೆ ಉಪ ಚುನಾವಣಾ ಪ್ರಚಾರ ಕಾರ್ಯದಲ್ಲಿ ಪಾಲ್ಗೊಂಡು ಸುತಗುಂಡಾರ, ನಾಯನೇಗಲಿ ಸೇರಿ ಸುತ್ತಮುತ್ತಲ ಗ್ರಾಮಗಳಲ್ಲಿ ಪ್ರಚಾರ ನಡೆಸಿದರು. ಇನ್ನೊಂದು ಕಡೆ ಬಿಜೆಪಿ ರಾಜಾಧ್ಯಕ್ಷ ಬಿ.ವೈ.ವಿಜಯೇಂದ್ರ, ತಮ್ಮ ಅಭ್ಯರ್ಥಿ ವೀರಣ್ಣ ಚರಂತಿಮಠ ಪರ ತೀವ್ರ ಪ್ರಚಾರ ನಡೆಸಿದರು. ಮುಖ್ಯಮಂತ್ರಿಯಾದಿಯಾಗಿ ಯಾರೇ ಇಲ್ಲಿ ಬಂದು ಬೀಡುಬಿಟ್ಟರೂ ಮತದಾರರು ಬಿಜೆಪಿ ಅಭ್ಯರ್ಥಿಯನ್ನೇ ಗೆಲ್ಲಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

> ನಾವು ಪ್ರತೀ ವರ್ಷ 52 ಸಾವಿರ ಕೋಟಿ ರುಪಾಯಿಯನ್ನು ರಾಜ್ಯದ ಜನರ ಜೇಬಿಗೆ ಹಾಕುತ್ತಲೇ ಅಭಿವೃದ್ಧಿ ಕೆಲಸವನ್ನೂ ಮಾಡುತ್ತಿದ್ದೇವೆ. ಬಿಜೆಪಿಯವರು ಕಳ್ಳೆತ್ತುಗಳು. ಗೇಯುವ ಎತ್ತಿಗೆ ತಾನೆ ಮೇವು ಹಾಕೋದು, ನಮಗೆ ಕೂಲಿ ಕೊಡಿ.
>
> -ಸಿದ್ದರಾಮಯ್ಯ, ಮುಖ್ಯಮಂತ್ರಿ

ಅಂತಾರಾಷ್ಟ್ರೀಯ ಪಂದ್ಯಗಳಿಗೆ ಎರಡು ಟಿಕೆಟ್‌ಗಳನ್ನು ನೀಡಲು ಕೆಎಸ್‌ಸಿಎ ಒಪ್ಪಿಗೆ

ಶಾಸಕರು, ಐಪಿಎಲ್ ಫ್ರಾಂಚೈಸಿಗಳೊಂದಿಗೆ ಡಿಸಿಎಂ ಶಿವಕುಮಾರ್ ಯಶಸ್ವಿ ಸಂಧಾನ

ಶಾಸಕರಿಗೆ 3 ಉಚಿತ ಟಿಕೆಟ್‌ಗೆ ಆರ್‌ಸಿಬಿ ಸಮ್ಮತಿ!

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ಭಾರಿ ಚರ್ಚೆಗೆ ಗ್ರಾಸವಾಗಿದ್ದ ಶಾಸಕರಿಗೆ ಉಚಿತ ಟಿಕೆಟ್ ವಿಷಯಕ್ಕೆ ಸಂಬಂಧಿಸಿದಂತೆ ಸರಕಾರ, ಕೆಎಸ್‌ಸಿಎ ಹಾಗೂ ಆರ್‌ಸಿಬಿ ಕೊನೆಗೂ ಪರಿಹಾರ ಕಂಡುಕೊಂಡಿವೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಿವಾಸದಲ್ಲಿ ಸೋಮವಾರ ಕೆಎಸ್‌ಸಿಎ ಪದಾಧಿಕಾರಿಗಳು, ಆರ್‌ಸಿಬಿ ಹಾಗೂ ಡಿಎನ್‌ಎ ಸಂಸ್ಥೆಯ ಪ್ರತಿನಿಧಿಗಳೊಂದಿಗಿನ ಸಭೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಲಾಗಿದೆ. ಈ ವೇಳೆ ಆರ್‌ಸಿಬಿ ಆಡಳಿತ ಮಂಡಳಿ ಮೂರು ಉಚಿತ ಟಿಕೆಟ್ ನೀಡಲು ಒಪ್ಪಿಗೆ ನೀಡಿದೆ. ಆದರೆ ಅಂತಾರಾಷ್ಟ್ರೀಯ ಪಂದ್ಯಾವಳಿ ವೇಳೆ ಎರಡು ಟಿಕೆಟ್ ಮಾತ್ರ ನೀಡಲಾಗುವುದು ಎಂದು ಕೆಎಸ್‌ಸಿಎ ತಿಳಿಸಿದೆ.

ಸಭೆಯ ಬಳಿಕ ಈ ಬಗ್ಗೆ ಮಾತನಾಡಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಶಾಸಕರಿಗೆ ಐಪಿಎಲ್ ಪಂದ್ಯಗಳ ವೇಳೆ ಮೂರು ಟಿಕೆಟ್ ಹಾಗೂ ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ ಎರಡು ಟಿಕೆಟ್ ಉಚಿತವಾಗಿ ನೀಡಲು ಒಪ್ಪಿದ್ದಾರೆ. ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ ಎರಡು ಹೆಚ್ಚುವರಿ ಟಿಕೆಟ್ ಅನ್ನು ಖರೀದಿಸಲು ಅವಕಾಶ ನೀಡಲಾಗಿದೆ ಎಂದು ಸ್ಪಷ್ಟಪಡಿಸಿದರು.

→ 4

20000 ಆಸನ ಹೆಚ್ಚಳಕ್ಕೆ ಚಿಂತನೆ: ಶಿವಕುಮಾರ್

ಕ್ರೀಡಾಂಗಣದ ಬಗ್ಗೆಯೂ ಚರ್ಚೆ ಮಾಡಲಾಗಿದ್ದು, ಯಾವ ರೀತಿಯಲ್ಲಿ ಆಸನಗಳ ಸಂಖ್ಯೆ ಹೆಚ್ಚಿಸಬೇಕು ಎಂದು ಮಾತನಾಡಿದ್ದೇವೆ. ಬೇರೆ ಕಡೆ ಕ್ರೀಡಾಂಗಣ ನಿರ್ಮಾಣಕ್ಕೆ ಜಾಗ ಗುರುತಿಸಲು ಜಿಬಿಎ ಆಯುಕ್ತರ ಜತೆ ಚರ್ಚೆ ಮಾಡಲಾಗಿದೆ. ಈ ಕುರಿತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿದ್ದೇವೆ. ಅವರು ಪ್ರಸ್ತಾವನೆ ಸಲ್ಲಿಸಿದ ಬಳಿಕ ಸರ್ಕಾರ ಮಟ್ಟದಲ್ಲಿ ಚರ್ಚೆ ಮಾಡಿ ಅಗತ್ಯ ಅನುಮತಿ ನೀಡಲಾಗುವುದು. 20 ಸಾವಿರ ಆಸನಗಳ ಸಂಖ್ಯೆ ಹೆಚ್ಚಳ ಮಾಡಿದರೆ ಜನರಿಗೂ ಅನುಕೂಲವಾಗಲಿದೆ ಎಂದು ತಿಳಿಸಿದರು. ನಾವು ಈಗಾಗಲೇ ಕೆಎಸ್‌ಸಿಎಗೆ 25 ಎಕರೆ ಜಾಗ ನೀಡಿದ್ದೇವೆ. ಸೂರ್ಯನಗರದಲ್ಲಿ ಮೈದಾನ ನಿರ್ಮಾಣ ಮಾಡುತ್ತಿರುವುದು ಎಲ್ಲರಿಗೂ ಅನುಕೂಲವಾಗಲಿ ಎಂದು ಹೇಳಿದ್ದಾರೆ.

> ಐಪಿಎಲ್ ಪಂದ್ಯಾವಳಿಯಲ್ಲಿ ಶಾಸಕರು ಹಾಗೂ ಸಚಿವರಿಗೆ ಪ್ರತ್ಯೇಕ ಗ್ಯಾಲರಿ ಮಾಡಬೇಕು ಎಂಬ ವಿಚಾರಕ್ಕೆಲ್ಲಾ ನಾನು ಹೋಗುವುದಿಲ್ಲ. ಇದು ಕೆಎಸ್‌ಸಿಎ ಪದಾಧಿಕಾರಿಗಳಿಗೆ ಬಿಟ್ಟ ವಿಚಾರ. ಇಲ್ಲಿ ಅತಿಯಾಗಿ ಹಸ್ತಕ್ಷೇಪ ಮಾಡುವುದಿಲ್ಲ.
>
> -ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಏನಿದು ವಿವಾದ?

- ಬೆಂಗಳೂರಿನ ಐಪಿಎಲ್ ಪಂದ್ಯಗಳ ವೇಳೆ ಶಾಸಕರರಿಗೆ ಬರೀ 1 ಟಿಕೆಟ್ ನೀಡುತ್ತಿದ್ದಾರೆಂದು ವಿಧಾನಸಭೆಯಲ್ಲಿ ಪಕ್ಷಾತೀತವಾಗಿ ಶಾಸಕರ ಬೇಸರ
- ಕೆಎಸ್‌ಸಿಎಯನ್ನು ಟೈಟ್ ಮಾಡಿ ಎಂದು ಸಲಹೆ ನೀಡಿದ್ದ ಪ್ರತಿಪಕ್ಷ ನಾಯಕ ಆರ್. ಅಶೋಕ, ಕನಿಷ್ಠ 5 ಟಿಕೆಟ್ ಬೇಕು ಎಂದಿದ್ದ ವಿಜಯಾನಂದ ಕಾಶಪ್ಪನವರ್
- ಶಾಸಕರ ಈ ನಡೆಗೆ ಪಕ್ಷಾತೀತವಾಗಿ ಭಾರೀ ವಿರೋಧ, ಈ ನಡುವೆಯೇ ಕೆಎಸ್‌ಸಿಎ ಜೊತೆಗೆ ಡಿಸಿಎಂ ಡಿ.ಕೆ.ಶಿವಕುಮಾರ್ ಮಾತುಕತೆ, ಯಶಸ್ವಿ ಸಂಧಾನ

ಸಾರ್ವಜನಿಕ ಪ್ರಕಟಣೆ
ನಮೂನೆ–ಎ
(ನಿಯಂತ್ರಣ 14 ರ ಇನ್‌ಸಾಲ್ವೆನ್ಸಿ ಮತ್ತು ಬ್ಯಾಂಕ್‌ರಪ್ಸಿ ಬೋರ್ಡ್ ಆಫ್ ಇಂಡಿಯಾ
(ಸ್ವಯಂ ದಿವಾಳಿತನ ಪ್ರಕ್ರಿಯೆ) ನಿಯಮಗಳು, 2017)

ಎಂಟರ್‌ಪ್ರೈಸ್ ಫ್ಲೀಟ್ ಮ್ಯಾನೇಜ್‌ಮೆಂಟ್ ಇಂಡಿಯ ಪ್ರೈವೇಟ್ ಲಿಮಿಟೆಡ್ ಇದರ ಸ್ಟೇಕ್‌ಹೋಲ್ಡರ್‌ಗಳ ಗಮನಕ್ಕೆ

	ಸೂಕ್ತ ವಿವರಗಳು	
1.	ಕಾರ್ಪೋರೇಟ್ ವ್ಯಕ್ತಿಯ ಹೆಸರು	ಎಂಟರ್‌ಪ್ರೈಸ್ ಫ್ಲೀಟ್ ಮ್ಯಾನೇಜ್‌ಮೆಂಟ್ ಇಂಡಿಯ ಪ್ರೈವೇಟ್ ಲಿಮಿಟೆಡ್
2.	ಕಾರ್ಪೋರೇಟ್ ವ್ಯಕ್ತಿಯ ಸಂಯೋಜನೆಯ ದಿನಾಂಕ	ಜೂನ್ 10, 2004
3.	ಯಾವ ಅಥಾರಿಟಿಯ ಕೆಳಗೆ ಕಾರ್ಪೋರೇಟ್ ವ್ಯಕ್ತಿಯ ನೊಂದಣೆ ಆಗಿರುವುದು	ಕಂಪನಿಗಳ ಕಾಯಿದೆ, 1956 ರ ಅಡಿ ರಿಜಿಸ್ಟ್ರಾರ್ ಆಫ್ ಕಂಪನೀಸ್ – ಬೆಂಗಳೂರು
4.	ಕಾರ್ಪೋರೇಟ್ ವ್ಯಕ್ತಿಯ ಕಾರ್ಪೋರೇಟ್ ಗುರುತು ಸಂಖ್ಯೆ/ಸೀಮಿತ ಬಾಧ್ಯತಾ ಗುರುತು ಸಂಖ್ಯೆ	U72200KA2004FTC034100
5.	ಕಾರ್ಪೋರೇಟ್ ವ್ಯಕ್ತಿಯ ನೋಂದಾಯಿತ ಕಛೇರಿ ಮತ್ತು ಮುಖ್ಯ ಕಛೇರಿ (ಯಾವುದಾದರೂ ಇದ್ದಲ್ಲಿ) ಅದರ ವಿಳಾಸ	ಹೆಚ್‌ಡಿ–103, ವಿವರ್ಕ್, ಪ್ರೆಸ್ಟೀಜ್ ಸೆಂಟ್ರಲ್, 36, ಇನ್ಫೆಂಟ್ರಿ ರಸ್ತೆ, ಬೆಂಗಳೂರು 560001, ಕರ್ನಾಟಕ
6.	ಕಾರ್ಪೋರೇಟ್ ವ್ಯಕ್ತಿಯ ದಿವಾಳಿತನ ಪ್ರಕ್ರಿಯೆ ಆರಂಭದ ದಿನಾಂಕ	ಮಾರ್ಚ್ 27, 2006
7.	ಲಿಕ್ವಿಡೇಟರ್‌ರವರ ಹೆಸರು, ವಿಳಾಸ, ಇ–ಮೇಲ್ ವಿಳಾಸ, ದೂರವಾಣಿ ಸಂಖ್ಯೆ ಮತ್ತು ನೋಂದಣಿ ಸಂ.	ವಿನೋದ್ ಸುಂದರ್ ರಾಮನ್ ಬಿ–703, ಅರವಿಂದ್ ಸ್ಕೈಲ್ಯಾಂಡ್ಸ್ ಅಪಾರ್ಟ್‌ಮೆಂಟ್ಸ್ ಶಿವನಹಳ್ಳಿ, ಜಕ್ಕೂರು ಮುಖ್ಯ ರಸ್ತೆ, ಯಲಹಂಕ ಬೆಂಗಳೂರು – 560064 ಇ–ಮೇಲ್ : vinod@vrconsulting.biz ದೂರವಾಣಿ ಸಂಖ್ಯೆ : +91–9845884410 ನೋಂ. ಸಂ.: IBBI/IPA-002/IP-N00075 / 2017-2018/ 10206
8.	ಕ್ಲೈಮುಗಳನ್ನು ಸಲ್ಲಿಸಲು ಕೊನೆಯ ದಿನಾಂಕ	ಎಪ್ರಿಲ್ 26, 2026

ಎಂಟರ್‌ಪ್ರೈಸ್ ಫ್ಲೀಟ್ ಮ್ಯಾನೇಜ್‌ಮೆಂಟ್ ಇಂಡಿಯ ಪ್ರೈವೇಟ್ ಲಿಮಿಟೆಡ್ ತನ್ನ ಸ್ವಯಂ ದಿವಾಳಿತನ ಪ್ರಕ್ರಿಯೆಯನ್ನು **27ನೇ ಮಾರ್ಚ್ 2026**ರಂದು ಪ್ರಾರಂಭಿಸಿದೆ ಎಂದು ಈ ಮೂಲಕ ಸೂಚನೆ ನೀಡಲಾಗಿದೆ.

ಎಂಟರ್‌ಪ್ರೈಸ್ ಫ್ಲೀಟ್ ಮ್ಯಾನೇಜ್‌ಮೆಂಟ್ ಇಂಡಿಯ ಪ್ರೈವೇಟ್ ಲಿಮಿಟೆಡ್ ನ ಎಲ್ಲ ಸ್ಟೇಕ್ ಹೋಲ್ಡರ್‌ಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, **26ನೇ ಎಪ್ರಿಲ್ 2026** ರಂದು ಅಥವಾ ಅದಕ್ಕೂ ಮೊದಲು ತಮ್ಮ ಹಕ್ಕುಗಳನ್ನು ಪುರಾವೆಗಳೊಂದಿಗೆ ವಸ್ತು ಸಂಖ್ಯೆ 7ರಲ್ಲಿ ನೀಡಿರುವ ವಿಳಾಸಕ್ಕೆ ಸಲ್ಲಿಸಲು ಸೂಚಿಸಲಾಗಿದೆ.

ಹಣಕಾಸು ಸಾಲದಾತರರು ತಮ್ಮ ಹಕ್ಕುಗಳನ್ನು ಎಲೆಕ್ಟ್ರಾನಿಕ್ ವಿಧಾನದಿಂದ ಮಾತ್ರ ಪುರಾವೆಯೊಂದಿಗೆ ಸಲ್ಲಿಸಬೇಕು. ಉಳಿದೆಲ್ಲಾ ಸಾಲದಾತರು ತಮ್ಮ ಕ್ಲೈಮುಗಳನ್ನು ಖುದ್ದಾಗಿ, ಅಂಚೆ ಮೂಲಕ ಅಥವಾ ಎಲೆಕ್ಟ್ರಾನಿಕ್ ಮಾದರಿಯಲ್ಲಿ ದಾಖಲೆಗಳೊಂದಿಗೆ ಸಲ್ಲಿಸಬಹುದಾಗಿದೆ.

ಹಕ್ಕಿನ ಸುಳ್ಳು ಅಥವಾ ದಾರಿ ತಪ್ಪಿಸುವ ಪುರಾವೆಗಳನ್ನು ಸಲ್ಲಿಸಿದಲ್ಲಿ ದಂಡ ತೆರಬೇಕಾಗುವುದು

ದಿನಾಂಕ: ಮಾರ್ಚ್ 31, 2026
ಸ್ಥಳ: ಬೆಂಗಳೂರು

ವಿನೋದ್ ಸುಂದರ್ ರಾಮನ್
ಲಿಕ್ವಿಡೇಟರ್, ಎಂಟರ್‌ಪ್ರೈಸ್ ಫ್ಲೀಟ್ ಮ್ಯಾನೇಜ್‌ಮೆಂಟ್ ಇಂಡಿಯ ಪ್ರೈವೇಟ್ ಲಿಮಿಟೆಡ್
ನೋಂದಣಿ ಸಂ. IBBI/IPA-002/IP-N00075/2017-2018/10206

ನಮೂನೆ–ಎ
ಸಾರ್ವಜನಿಕ ಪ್ರಕಟಣೆ
(ನಿಯಂತ್ರಣ 14 ರ ಇನ್‌ಸಾಲ್ವೆನ್ಸಿ ಮತ್ತು ಬ್ಯಾಂಕ್‌ರಪ್ಸಿ ಬೋರ್ಡ್ ಆಫ್ ಇಂಡಿಯಾ
(ಸ್ವಯಂ ಲಿಕ್ವಿಡೇಶನ್ ಪ್ರಕ್ರಿಯೆ) ನಿಯಮಗಳು, 2017)

ಮರೆಲ್ ಇಂಡಿಯ ಪ್ರೈವೇಟ್ ಲಿಮಿಟೆಡ್ ಇದರ ಸ್ಟೇಕ್‌ಹೋಲ್ಡರ್‌ಗಳ ಗಮನಕ್ಕೆ

1.	ಕಾರ್ಪೋರೇಟ್ ವ್ಯಕ್ತಿಯ ಹೆಸರು	ಮರೇಲ್ ಇಂಡಿಯ ಪ್ರೈವೇಟ್ ಲಿಮಿಟೆಡ್
2.	ಕಾರ್ಪೋರೇಟ್ ವ್ಯಕ್ತಿಯ ಪ್ರಾರಂಭದ ದಿನ	09.07.2012
3.	ಯಾವ ಅಥಾರಿಟಿಯ ಕೆಳಗೆ ಕಾರ್ಪೋರೇಟ್ ವ್ಯಕ್ತಿಯ ನೊಂದಣೆ ಆಗಿರುವುದು	ರಿಜಿಸ್ಟ್ರಾರ್ ಆಫ್ ಕಂಪನೀಸ್ – ಬೆಂಗಳೂರು
4.	ಕಾರ್ಪೋರೇಟ್ ವ್ಯಕ್ತಿಯ ಕಾರ್ಪೋರೇಟ್ ಗುರುತು ಸಂಖ್ಯೆ/ಸೀಮಿತ ಬಾಧ್ಯತಾ ಗುರುತು ಸಂಖ್ಯೆ	U29253KA2012FTC064781
5.	ಕಾರ್ಪೋರೇಟ್ ವ್ಯಕ್ತಿಯ ನೋಂದಾಯಿತ ಕಛೇರಿ ಮತ್ತು ಮುಖ್ಯ ಕಛೇರಿ (ಯಾವುದಾದರೂ ಇದ್ದಲ್ಲಿ) ಅದರ ವಿಳಾಸ	**ನೋಂದಾಯಿತ ವಿಳಾಸ :** ಜೆ ಪಿ ಕ್ಲಾಸಿಕ್, ನಂ. 157/1, ಮೂರನೇ ಮಹಡಿ, ಇಪಿಐಪಿ ವಲಯ, ಸೊನ್ನೇನಹಳ್ಳಿ, ಕೆ ಆರ್ ಪುರಂ ಹೋಬಳಿ, ಬೆಂಗಳೂರು–560066
6.	ಕಾರ್ಪೋರೇಟ್ ವ್ಯಕ್ತಿಯ ಇನ್‌ಸಾಲ್ವೆನ್ಸಿ ಪ್ರಕ್ರಿಯೆ ಆರಂಭದ ದಿನಾಂಕ	**26 ಮಾರ್ಚ್ 2026**
7.	ಲಿಕ್ವಿಡೇಟರ್‌ರವರ ಹೆಸರು, ವಿಳಾಸ, ಇ–ಮೇಲ್ ವಿಳಾಸ, ದೂರವಾಣಿ ಸಂಖ್ಯೆ ಮತ್ತು ನೋಂದಣಿ ಸಂ.	**ಹೆಸರು :** ಅನಘ ಅನಸಿಂಗರಾಜು **ವಿಳಾಸ :** 1–2 ಐಶ್ವರ್ಯ ಸಂಕುಲ್, 17 ಜಿ.ಎ. ಕುಲಕರ್ಣಿ ಪಾತ್, ಜೋಶಿ ರೈಲ್ವೆ ಮ್ಯೂಸಿಯಂ ಎದುರು, ಕೊತ್ರುಡ್, ಪುಣೆ – 411038 **ಇ–ಮೇಲ್ :** rp.anagha@kanjcs.com **ದೂ:** 020 – 25466265/25461561 **ನೋಂದಣಿ ಸಂ.** IBBI/IPA-002/IP-N00247/2017-18/10732 **ಎಎಫ್ಎ ಮಾನ್ಯತೆ :** 30.06.2027
8.	ಕ್ಲೈಮುಗಳನ್ನು ಸಲ್ಲಿಸಲು ಕೊನೆಯ ದಿನಾಂಕ	**24 ಎಪ್ರಿಲ್ 2026**

ಮರೆಲ್ ಇಂಡಿಯ ಪ್ರೈವೇಟ್ ಲಿಮಿಟೆಡ್ ತನ್ನ ಸ್ವಯಂ ದಿವಾಳಿತನ ಪ್ರಕ್ರಿಯೆಯನ್ನು **26ನೇ ಮಾರ್ಚ್ 2026**ರಂದು ಪ್ರಾರಂಭಿಸಿದೆ ಎಂದು ಈ ಮೂಲಕ ಸೂಚನೆ ನೀಡಲಾಗಿದೆ.

ಮರೆಲ್ ಇಂಡಿಯ ಪ್ರೈವೇಟ್ ಲಿಮಿಟೆಡ್ ನ ಎಲ್ಲ ಸ್ಟೇಕ್ ಹೋಲ್ಡರ್‌ಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, **25ನೇ ಎಪ್ರಿಲ್ 2026** ರಂದು ಅಥವಾ ಅದಕ್ಕೂ ಮೊದಲು ತಮ್ಮ ಹಕ್ಕುಗಳನ್ನು ಪುರಾವೆಗಳೊಂದಿಗೆ ವಸ್ತು ಸಂಖ್ಯೆ 7ರಲ್ಲಿ ನೀಡಿರುವ ವಿಳಾಸಕ್ಕೆ ಸಲ್ಲಿಸಲು ಸೂಚಿಸಲಾಗಿದೆ.

ಹಣಕಾಸು ಸಾಲದಾತರರು ತಮ್ಮ ಹಕ್ಕುಗಳನ್ನು ಎಲೆಕ್ಟ್ರಾನಿಕ್ ವಿಧಾನದಿಂದ ಮಾತ್ರ ಪುರಾವೆಯೊಂದಿಗೆ ಸಲ್ಲಿಸಬೇಕು. ಉಳಿದೆಲ್ಲಾ ಸಾಲದಾತರು ತಮ್ಮ ಕ್ಲೈಮುಗಳನ್ನು ಖುದ್ದಾಗಿ, ಅಂಚೆ ಮೂಲಕ ಅಥವಾ ಎಲೆಕ್ಟ್ರಾನಿಕ್ ಮಾದರಿಯಲ್ಲಿ ದಾಖಲೆಗಳೊಂದಿಗೆ ಸಲ್ಲಿಸಬಹುದಾಗಿದೆ.

ಹಕ್ಕಿನ ಸುಳ್ಳು ಅಥವಾ ದಾರಿ ತಪ್ಪಿಸುವ ಪುರಾವೆಗಳನ್ನು ಸಲ್ಲಿಸಿದಲ್ಲಿ ದಂಡ ತೆರಬೇಕಾಗುವುದು

ಸಹಿ/–
ಅನಘ ಅನಸಿಂಗರಾಜು
ಲಿಕ್ವಿಡೇಟರ್, ಮರೆಲ್ ಇಂಡಿಯ ಪ್ರೈವೇಟ್ ಲಿಮಿಟೆಡ್
ದಿನಾಂಕ: 30.03.2026
ಸ್ಥಳ: ಪುಣೆ
ನೋಂದಣಿ ಸಂ. IBBI/IPA-002/IP-N00247/2017-18/10732

ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿಮಿಟೆಡ್ (ಎಸಿಆರ್‌ಇ)
CIN: U65993DL2002PLC115769
ACRE MAKING ASSETS WORK
ನೋಂದಾಯಿತ ಕಚೇರಿ: 14 ನೇ ಮಹಡಿ, ಎರೋಸ್ ಕಾರ್ಪೊರೇಟ್ ಟವರ್, ನೆಹರು ಪ್ಲೇಸ್, ನವದೆಹಲಿ–110019
ಇ–ಮೇಲ್: acre.arc@acreindia.in, ಜಾಲತಾಣ: www.acreindia.in
ಕಾರ್ಪೊರೇಟ್ ಕಚೇರಿ: ಘಟಕ ಸಂಖ್ಯೆ. 502, ಸಿ ವಿಂಗ್, ಒಂದು ಬಿಕೆಸಿ, ಪ್ಲಾಟ್ ನಂ. ಸಿ–66, ಜಿ–ಬ್ಲಾಕ್ ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಮುಂಬೈ – 400051 ದೂರವಾಣಿ: 022 68643101

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ:

ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್) (ಐಹೆಚ್‌ಎಫ್‌ಎಲ್))**ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್ ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಅಫ್ ಸೆಕ್ಯೂರಿಟಿಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **14.12.2018** ರಂದು ಕರೆದು ಸಾಲಗಾರ **ಮನೋಜ್ ಕುಮಾರ್ ಗುಪ್ತಾ, ಪುಷ್ಪ ಗುಪ್ತಾ, ರಾಮಾನಂದ ಪ್ರಸಾದ್ ಮತ್ತು ಉಷಾ ಗುಪ್ತಾ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 21,33,706/- (ಇಪ್ಪತ್ತೊಂದು ಲಕ್ಷ ಮೂವತ್ತಮೂರು ಸಾವಿರದ ಏಳುನೂರಾ ಆರು ರೂಪಾಯಿಗಳು ಮಾತ್ರ)** ಜೊತೆಗೆ **13.12.2018** ರಂದು ಸಾಲದ ಅಕೌಂಟ್ ನಂ. **M005OXVI** ರ (ಮುಂಚಿನ ಲೋನ್ ಅಕೌಂಟ್ ನಂ. **ಐಎಚ್‌ಎಫ್‌ಎಲ್**–ನ **HHLBGL00314853**) ಮತ್ತು ಸದರಿ ನೋಟೀಸನ್ನು ಪಡೆದ ದಿನಾಂಕದಿಂದ 60 ದಿನಗಳೊಳಗಿನ ಬಡ್ಡಿ, ಅಲ್ಲದೆಯೆ, ಈ ಹಿಂದೆ **ಐಎಚ್‌ಎಫ್‌ಎಲ್** ಮೇಲಿನ ಸಾಲ ಖಾತೆಯ ಎಲ್ಲಾ ಹಕ್ಕುಗಳು, ಶೀರ್ಷಿಕೆ ಮತ್ತು ಬಡ್ಡಿಯನ್ನು **ಇಂಡಿಯಾಬುಲ್ಸ್ ಅಸೆಟ್ ರೀಕನ್ಸ್ಟ್ರಕ್ಷನ್ ಕಂಪನಿ ಲಿಮಿಟೆಡ್**ಗೆ ವಹಿಸಿಕೊಟ್ಟಿತ್ತು. ಶೀರ್ಷಿಕೆ ಮತ್ತು ಬಡ್ಡಿಯನ್ನು **ಇಂಡಿಯಾಬುಲ್ಸ್ ಎಆರ್‌ಸಿ –XVI** ಟ್ರಸ್ಟ್‌ಗೆ **30.09.2020** ದಿನಾಂಕದ ನಿಯೋಜನೆ ಒಪ್ಪಂದದ ಮೂಲಕ ನೀಡಿದೆ. ಇದಲ್ಲದೆ, **ಇಂಡಿಯಾಬುಲ್ಸ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿ., ಇಂಡಿಯಾಬುಲ್ಸ್ ಎಆರ್‌ಸಿ – XVI** ಟ್ರಸ್ಟಿಯಾಗಿ, ಟ್ರಸ್ಟ್ ಮೇಲಿನ ಸಾಲ ಖಾತೆಯ ಎಲ್ಲಾ ಹಕ್ಕುಗಳು, ಶೀರ್ಷಿಕೆ ಮತ್ತು ಬಡ್ಡಿಯನ್ನು **26.08.2021** ದಿನಾಂಕದ ನಿಯೋಜನೆ ಒಪ್ಪಂದದ ಮೂಲಕ ಕೇರ್ **ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ.–ನ (''ಎಸಿಆರ್‌ಇ'')** ಗೆ ಮತ್ತು ಎ ಸಿ ಆರ್ ಇ ಪುಸ್ತಕಗಳಲ್ಲಿ ತಿದ್ದುಪಡಿ ಒಪ್ಪಂದದೊಂದಿಗೆ **ಎಸಿಆರ್‌ಇ** ಪುಸ್ತಕಗಳಲ್ಲಿ ಸಾಲ ಖಾತೆ ಸಂಖ್ಯೆ **M005OXVI**ಎಂದು ಓದಲಾಗಿದೆ. ಎಂದು ಮರುಸಂಖ್ಯೆ ಮಾಡಲಾದ ಸಾಲ ಖಾತೆಗೆ ನಿಯೋಜಿಸಿದೆ. **ಎಸಿಆರ್‌ಇ 102 ಟ್ರಸ್ಟ್ ನ ಟ್ರಸ್ಟಿಯಾಗಿ ಕಾರ್ಯನಿರ್ವಹಿಸುತ್ತಿರುವ ಅಸೆಟ್ಸ್ ಕೇರ್ ಮತ್ತು ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ. (''ಎಸಿಆರ್‌ಇ'')** ತನ್ನ ಎಲ್ಲಾ ಹಕ್ಕುಗಳು, ಶೀರ್ಷಿಕೆ ಮತ್ತು ಮೇಲಿನ ಸಾಲ ಖಾತೆಯ ಬಡ್ಡಿಯನ್ನು **ಎಸಿಆರ್‌ಇ 180 ಟ್ರಸ್ಟ್ ನ ಟ್ರಸ್ಟಿಯಾಗಿ ಕಾರ್ಯನಿರ್ವಹಿಸುತ್ತಿರುವ ಅಸೆಟ್ಸ್ ಕೇರ್ ಮತ್ತು ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ. (''ಎಸಿಆರ್‌ಇ'')** ಗೆ ದಿನಾಂಕ **23.06.2025** ರ ನಿಯೋಜನೆ ಒಪ್ಪಂದದ ಮೂಲಕ ನಿಯೋಜಿಸಿದೆ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ- ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **25.03.2026** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ. ನ ಬಾಕಿ ಇರುವ ಮೊತ್ತ ರೂ. 21,33,706/-** (ಇಪ್ಪತ್ತೊಂದು **ಲಕ್ಷ ಮೂವತ್ತಮೂರು ಸಾವಿರದ ಏಳುನೂರಾ ಆರು ರೂಪಾಯಿಗಳು ಮಾತ್ರ) 13.12.2018** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ ಅಲ್ಲಿಂದ ಸಂಗ್ರಹಗೊಂಡ ಬಡ್ಡಿ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ದವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಫ್ಲಾಟ್ ಬೇರಿಂಗ್ ಸಂಖ್ಯೆ. ಸಿ - 3, 2ನೇ ಮಹಡಿಯಲ್ಲಿ ಸುಮಾರು 1283 ಚದರ ಅಡಿ ಸೂಪರ್ ಬಿಲ್ಟ್ ಅಪ್ ಪ್ರದೇಶವನ್ನು ಅಳೆಯುತ್ತದೆ, ''ಸಾಯಿ ಶ್ರೀನಿವಾಸ ಗೋಕುಲ್ ಅಪಾರ್ಟ್‌ಮೆಂಟ್ಸ್' ನಲ್ಲಿ 328 ಚದರ ಅಡಿ ಅವಿಭಜಿತ ಪಾಲು ಭೂಮಿಯೊಂದಿಗೆ, ಆ ಎಲ್ಲಾ ಭಾಗ ಮತ್ತು ಪಾರ್ಸೆಲ್‌ನಲ್ಲಿ ಪ್ರಸ್ತುತ ಸಾಮಾನ್ಯ ಕ್ಲಬ್ / ಸಂಯೋಜಿತ ಬಿ.ಎಂ.ಪಿ. ಕಥಾ ಸಂಖ್ಯೆ. 50, 4ನೇ ಅಡ್ಡ ರಸ್ತೆ, ಶ್ರೀ ರಾಮಪುರಂ, ಬೆಂಗಳೂರು ಗ್ರಾಮಾಂತರ, ಬೆಂಗಳೂರು, ಕರ್ನಾಟಕದಲ್ಲಿದೆ. ಪೂರ್ವದಿಂದ ಪಶ್ಚಿಮಕ್ಕೆ ಒಟ್ಟು 60 ಅಡಿ, ಉತ್ತರದಿಂದ ದಕ್ಷಿಣಕ್ಕೆ 100 ಅಡಿ, ಒಟ್ಟು 6000 ಚದರ ಅಡಿ ಅಳತೆ, ಎಲ್ಲಾ ಹಕ್ಕುಗಳು, ಮೇಲ್ಮೈ ಅಡಿಯಲ್ಲಿ ಅಥವಾ ಮೇಲೆ ಯಾವುದೇ ಪೂರಕಗಳೊಂದಿಗೆ, ಒಂದು ಮುಚ್ಚಿದ ಕಾರು ಪಾರ್ಕಿಂಗ್ ಸ್ಥಳದೊಂದಿಗೆ. ಹೇಳಲಾದ ಭೂಮಿಯನ್ನು ಈ ಕೆಳಗಿನಂತೆ ಬಂಧಿಸಲಾಗಿದೆ ಮತ್ತು ಮುಚ್ಚಲಾಗಿದೆ:

ಪೂರ್ವ ಭಾಗ : ಖಾಸಗಿ ಆಸ್ತಿ ಹಿಂದಿನ ವೆಂಕಟೇಶ ಮುದಲಿಯಾರ್ ಅವರಿಗೆ ಸೇರಿದ್ದು
ಪಶ್ಚಿಮ ಭಾಗ : ಖಾಸಗಿ ಆಸ್ತಿ ಹಿಂದಿನ ವರದಪ್ಪನಾಯ್ಡು ಅವರಿಗೆ ಸೇರಿದ್ದು
ಉತ್ತರ ಭಾಗ : ಕನ್ಸರ್ವೆನ್ಸಿ ಲೇನ್
ದಕ್ಷಿಣ ಭಾಗ : ರಸ್ತೆ

ಅಧಿಕಾರವಿರುವ ಅಧಿಕಾರಿ
ದಿನಾಂಕ: 25.03.2026
ಸ್ಥಳ : ಬೆಂಗಳೂರು
ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ.
(180 ಟ್ರಸ್ಟ್)

ಯಾವುದೇ ಕುಂದುಕೊರತೆಗಾಗಿ ನೀವು ಶ್ರೀ ಮೊಹದ್ ಶಾರಿಕ್ ಮಲಿಕ್, ಕುಂದುಕೊರತೆ ನಿವಾರಣಾ ಅಧಿಕಾರಿ, ದೂರವಾಣಿ ಸಂಖ್ಯೆ. 011–66115609, ಇಮೇಲ್: complaint@acreindia.in. ಅನ್ನು ಸಂಪರ್ಕಿಸಬಹುದು. ಸಂಸ್ಥೆಯೊಳಗಿನ ಕುಂದುಕೊರತೆ ಪರಿಹಾರ ಕಾರ್ಯವಿಧಾನದ ವಿವರವಾದ ನೀತಿಯನ್ನು https://www.acreindia.in/compliance ನಲ್ಲಿ ಪ್ರವೇಶಿಸಬಹುದು.

3,348 ಕೋಟಿ ರು. ಟೆಂಡರ್ ಆಹ್ವಾನ | ಶೀಘ್ರವೇ ಸಿವಿಲ್ ಕೆಲಸಗಳು ಆರಂಭ

ಬಿಸಿನೆಸ್ ಕಾರಿಡಾರ್‌ಗೆ ವೇಗ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬೆಂಗಳೂರು ಪೆರಿಫೆರಲ್ ರಿಂಗ್ ರಸ್ತೆ ಯೋಜನೆಯನ್ನು ಕೈಗೆತ್ತಿಕೊಂಡಿರುವ ಬಿಡಿಎಯು ಇದೀಗ ಬಹುಕೋಟಿ ವೆಚ್ಚದಲ್ಲಿ ಮೊದಲ ಹಂತದ ಪ್ಯಾಕೇಜ್‌ಗಾಗಿ ಟೆಂಡರ್ ಆಹ್ವಾನಿಸಿದ್ದು, ಬೆಂಗಳೂರು ಬಿಸಿನೆಸ್ ಕಾರಿಡಾರ್ ಯೋಜನೆಗೆ ವೇಗ ಸಿಕ್ಕಂತಾಗಿದೆ.

ದೀರ್ಘಕಾಲದಿಂದ ಬಾಕಿ ಉಳಿದಿದ್ದ ಬೆಂಗಳೂರು ಬಿಸಿನೆಸ್ ಕಾರಿಡಾರ್ ಪಿಆರ್‌ಆರ್ ಒಟ್ಟು ಯೋಜನೆ ಪೈಕಿ ಮೊದಲ ಹಂತದಲ್ಲಿ ಸುಮಾರು 20 ಕಿ.ಮೀ. ಉದ್ದದ ರಸ್ತೆಯಲ್ಲಿ ಮೊದಲ ಪ್ಯಾಕೇಜ್ ನಲ್ಲಿ ಆರಂಭಿಸಲು ತೀರ್ಮಾನಿಸಲಾಗಿದ್ದು, ಈ ಸಂಬಂಧ ಆರಂಭಿಸಬೇಕಿರುವ ಸಿವಿಲ್ ಕೆಲಸಗಳಿಗಾಗಿ ಬಿಡಿಎ ಅಂದಾಜು ವೆಚ್ಚ 3,348 ಕೋಟಿ ರು.ಗಳ ಟೆಂಡರ್‌ನ್ನು ಕರೆದಿದೆ ಎಂದು ಮೂಲಗಳು ತಿಳಿಸಿದೆ.

ಪ್ಯಾಕೇಜ್ 1ರ ಕಾಮಗಾರಿ ಆರಂಭ ಶೀಘ್ರ: ಮೊದಲ ಹಂತದ ಪ್ಯಾಕೇಜ್‌ನಲ್ಲಿ ತುಮಕೂರು ರಸ್ತೆಯಿಂದ ಬಳ್ಳಾರಿ ರಸ್ತೆಯವರೆಗೆ ಬೆಂಗಳೂರು ಸುತ್ತುರಿದ ರಸ್ತೆ ಬಿಬಿಸಿ (ಪಿಆರ್ ಆರ್1) ಪ್ಯಾಕೇಜ್ ನಿರ್ಮಾಣಗೊಳ್ಳಲಿದೆ. ಬೆಂಗಳೂರಿನ ಸಂಚಾರ ದಟ್ಟಣೆಗೆ ತನ್ನದೇ ಆದ ರೀತಿಯಲ್ಲಿ ಕೊಡುಗೆ ನೀಡಲಿದೆ. ಈ ಯೋಜನೆಯನ್ನು ವಿನ್ಯಾಸ, ನಿರ್ಮಾಣ, ಕಾರ್ಯಾಚರಣೆ ಮತ್ತು ವರ್ಗಾವಣೆ (ಡಿಬಿಒಟಿ) ಮಾದರಿಯಲ್ಲಿ ಕಾರ್ಯಗತಗೊಳಿಸಲು ಬಿಡಿಎ ಯೋಜಿಸಿದೆ. ಟೆಂಡರ್ ಪ್ರಕ್ರಿಯೆ ಬಳಿಕ ಶೀಘ್ರವೇ ಸಿವಿಲ್ ಕೆಲಸಗಳು ಆರಂಭವಾಗಲಿವೆ.

ಹೆಚ್ಚಾದ ಅಂದಾಜು ವೆಚ್ಚ: ಪೆರಿಫೆರಲ್ ರಿಂಗ್ ರಸ್ತೆ ಯೋಜನೆಯ ಸದರಿ ಪ್ಯಾಕೇಜ್‌ಗಾಗಿ ಭೂಸ್ವಾಧೀನ ಶೇ.

83 ರಷ್ಟು ಪೂರ್ಣಗೊಂಡಿದೆ ಬಿಡಿಎ ವಸತಿ ಮತ್ತು ನಗರಾಭಿವೃದ್ಧಿ ನಿಗಮ (ಹಡ್ಕೊ) ದಿದ ಸಾಲವಾಗಿ ಅಂದಾಜು 27,000 ಕೋಟಿ ರು. ಒದಗಿಸುತ್ತಿದೆ. ಭೂಸ್ವಾಧೀನಕ್ಕೆ ಸುಮಾರು 21,000 ಕೋಟಿ ಹಂಚಿಕೆ ಆಗಿದೆ. ಬಾಕಿ ಹಂತ ಹಂತವಾಗಿ ನೀಡಲಾಗುತ್ತದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ವಿಳಂಬ, ವಿನ್ಯಾಸ ಬದಲಾವಣೆ, ಇನ್ನಿತರ ಕಾರಣಗಳಿಂದಾಗಿ ಅಂದಾಜು ವೆಚ್ಚವು ಏರಿಕೆ ಆಗಿದೆ. ಯೋಜನೆಯಲ್ಲಿ ಒಂದಷ್ಟು ಪ್ರಮುಖ ಮಾರ್ಪಾಡುಗಳನ್ನು ಮಾಡಲಾಗಿವೆ. ಮಾದವರದಲ್ಲಿ ನೈಸ್ ರಸ್ತೆ ಇದ್ದು, ಅದರೊಂದಿಗೆ ಏಕೀಕರಣ ಮಾಡಲು ಪ್ಲಾನ್ ಮಾಡಲಿದ್ದು, ಅಲ್ಲಿ ಎರಡು ದೊಡ್ಡ ಲೂಪ್‌ಗಳನ್ನು ನಿರ್ಮಿಸುವುದು ಯೋಜನೆಯಲ್ಲಿ ಸೇರಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಯೋಜನೆಯಲ್ಲಿ ಸರ್ವೀಸ್ (ಸೇವಾ) ರಸ್ತೆ ಲೈನ್‌ಗಳ ಅಗಲವನ್ನು 50 ಮೀ.ಗಳಿಂದ 65 ಮೀ.ಗೆ ವಿಸ್ತರಿಸಲಾಗಿದೆ. ದೊಡ್ಡಬಳ್ಳಾಪುರ ರಸ್ತೆಯಲ್ಲಿ ಕ್ಲೋವರ್ ಲೀಫ್ ಇಂಟರ್ ಚೇಂಜ್ ಪರಿಚಯಿಸಲಾಗುವುದು. ಮೂರು ವರ್ಷಗಳ

ಮೂರು ವರ್ಷಗಳಲ್ಲಿ ಟೆಂಡರ್ ಮುಗಿಸಬೇಕು

ಈ ಟೆಂಡರ್ ಕುರಿತು ಬೆಂಗಳೂರು ಬಿಸಿನೆಸ್ ಕಾರಿಡಾರ್ ಲಿಮಿಟೆಡ್ ಚೇರ್ಮನ್ ಎಲ್.ಕೆ. ಅತೀಕ್ ಮಾಹಿತಿ ನೀಡಿದ್ದು, ಆಹ್ವಾನಿಸಲಾದ ಟೆಂಡರ್ ದಾಖಲೆಯಲ್ಲಿ ನೀಡಿದ ಮಾಹಿತಿ ಪ್ರಕಾರ, ಯಾವುದೇ ಕಂಪನಿ ಟೆಂಡರ್ ಪಡೆದರೂ ಸಹಿತ ಒಟ್ಟು ಮೂರು ವರ್ಷಗಳಲ್ಲಿ (36 ತಿಂಗಳು) ಯೋಜನೆ ಮುಗಿಸಬೇಕು. ಸದರಿ ಟೆಂಡರ್ ಮುಂದಿನ ಮೇ ತಿಂಗಳು ಅಂತಿಮವಾಗುವ ಸಾಧ್ಯತೆ ಇದೆ. ಈ ರಸ್ತೆ ಮೂಲಸೌಕರ್ಯ ಯೋಜನೆಯು ಪ್ರಮುಖ ಮೈಲಿಗಲ್ಲು ಹಂತ ತಲುಪಿದೆ ಎಂದು ಪ್ರತಿಕ್ರಿಯಿಸಿದ್ದಾರೆ. ಮೊದಲ ಹಂತದ ಪ್ಯಾಕೇಜ್‌ನಡಿ ನಾವು ಬೆಂಗಳೂರು ಅಂತಾರಾಷ್ಟ್ರೀಯ ವಸ್ತುಪ್ರದರ್ಶನ ಕೇಂದ್ರ (ಬಿಐಇಸಿ) ಮಾದವರ (ನೆಲಮಂಗಲ ಬಳಿ) ದಿಂದ ವಿಮಾನ ನಿಲ್ದಾಣ/ಬಳ್ಳಾರಿ ರಸ್ತೆ ಸ್ಥಾಪನೆಗೆ ಟೆಂಡರ್ ಆಹ್ವಾನಿಸಿದ್ದೇವೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಹಿಂದೆ (2023–24 ರಲ್ಲಿ) ಯೋಜನೆ ಶುರುವಾಗಿದ್ದರೆ ಅಂದಾಜು ವೆಚ್ಚ ಕಡಿಮೆ ಆಗಿರುತ್ತಿತ್ತು. ಆದರೆ ಎರಡರಿಂದ ಮೂರು ವರ್ಷಗಳ ವಿಳಂಬದಿಂದಾಗಿ ಅಂದಾಜಿ ವೆಚ್ಚ ಗಮನಾರ್ಹವಾಗಿ ಏರಿಕೆ ಆಗಿದೆ. ಈ ವೆಚ್ಚದಲ್ಲಿ 10 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಸಹ ಒಳಗೊಂಡಿದೆ ಎಂದು ಅವರು ಮಾಹಿತಿ ನೀಡಿದರು.

ಕುಡಿದು ವಾಹನ ಚಾಲನೆ 616 ಪ್ರಕರಣ ದಾಖಲು

ಬೆಂಗಳೂರು: ನಗರದಲ್ಲಿ ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವವರ ವಿರುದ್ಧ ಸಂಚಾರ ಪೊಲೀಸರು ಕಠಿಣ ಕ್ರಮ ಕೈಗೊಂಡಿದ್ದು, ಕಳೆದ ಒಂದು ವಾರದಲ್ಲಿ ವಿಶೇಷ ಕಾರ್ಯಾಚರಣೆಯಲ್ಲಿ 616 ಡ್ರಂಕ್ ಅಂಡ್ ಡ್ರೈವ್ ಪ್ರಕರಣಗಳನ್ನು ದಾಖಲಿಸಿದ್ದಾರೆ.ನಗರದ 53 ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ ಮಾ. 23ರಿಂದ 29ರವರೆಗೆ ಈ ವಿಶೇಷ ತಪಾಸಣೆ ನಡೆಸಲಾಗಿತ್ತು. ಈ ಅವಧಿಯಲ್ಲಿ ಒಟ್ಟು 42,642 ವಾಹನಗಳನ್ನು ಪರಿಶೀಲನೆಗೊಳಪಡಿಸ ಲಾಗಿದ್ದು, ಅದರಲ್ಲಿ 616 ಚಾಲಕರು ಮದ್ಯಪಾನ ಮಾಡಿ ವಾಹನ ಚಲಾಯಿಸಿ ರುವುದು ಪತ್ತೆಯಾಗಿದೆ. ನಿಯಮ ಉಲ್ಲಂಘಿಸಿದವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಜತೆಗೆ ಅತಿವೇಗದಲ್ಲಿ ವಾಹನ ಚಾಲನೆ ಮಾಡುವವರ ಮೇಲೂ ಪೊಲೀಸರು ಕ್ರಮ ಕೈಗೊಂಡಿದ್ದಾರೆ. ಅತಿವೇಗ ಚಾಲನೆ ಸಂಬಂಧ 279 ಪ್ರಕರಣಗಳನ್ನು ದಾಖಲಿಸಿ, ಸುಮಾರು 2.80 ಲಕ್ಷ ರು. ದಂಡ ವಸೂಲಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ನಗರದಲ್ಲಿ ರಸ್ತೆ ಸುರಕ್ಷತೆ ಕಾಪಾಡುವ ಉದ್ದೇಶದಿಂದ ಮದ್ಯಪಾನ ಮಾಡಿ ವಾಹನ ಚಾಲನೆ ಹಾಗೂ ಅತಿವೇಗ ಚಾಲನೆ ವಿರುದ್ಧ ಮುಂದಿನ ದಿನಗಳಲ್ಲಿಯೂ ಇಂತಹ ಕಟ್ಟುನಿಟ್ಟಿನ ಕಾರ್ಯಾಚರಣೆ ಮುಂದುವರಿಯಲಿದೆ ಎಂದು ಸಂಚಾರ ಪೊಲೀಸರು ಎಚ್ಚರಿಕೆ ನೀಡಿದ್ದಾರೆ.

ಜೈಲಿಗೆ ನಿಷೇಧಿತ ವಸ್ತು ಸಾಗಣೆ ಮಾಡಲು ಯತ್ನ: ಮಹಿಳೆ ಸೆರೆ

ಬೆಂಗಳೂರು: ನಗರದ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನಿಷೇಧಿತ ವಸ್ತುಗಳನ್ನು ಒಳಗೆ ಸಾಗಿಸಲು ಯತ್ನಿಸಿದ ಮಹಿಳೆಯನ್ನು ಜೈಲು ಅಧಿಕಾರಿಗಳು ಬಂಧಿಸಿ ಪೊಲೀಸರಿಗೆ ಒಪ್ಪಿಸಿದ್ದಾರೆ. ಮಾ.26ರಂದು ಸಂಜೆ ಸುಮಾರು 4 ಗಂಟೆ ವೇಳೆಗೆ ಜೈಲಿನ ಸಾಮಾನ್ಯ ಭೇಟಿ ವಿಭಾಗದಲ್ಲಿ ಈ ಘಟನೆ ನಡೆದಿದೆ. ವಿಚಾರಣಾಧೀನ ಕೈದಿ ಫರ್ಹಾನ್ ಖಾನ್ ಅವರನ್ನು ಭೇಟಿ ಮಾಡಲು ರಿತಿಕಾ ರೈ ಎಂಬ ಮಹಿಳೆ ಪಾಸ್ ಪಡೆದು ಬಂದಿದ್ದರು. ಭೇಟಿ ಮುನ್ನ ಮಹಿಳಾ ಪೊಲೀಸ್ ಸಿಬ್ಬಂದಿ ತಪಾಸಣೆ ನಡೆಸಿದ ವೇಳೆ ಆಕೆಯ ನಡೆಗೆ ಅನುಮಾನ ವ್ಯಕ್ತವಾಗಿತ್ತು.ಸೂಕ್ಷ್ಮವಾಗಿ ಪರಿಶೀಲನೆ ನಡೆಸಿದಾಗ ಮಹಿಳೆ ತನ್ನ ದೇಹದ ಖಾಸಗಿ ಭಾಗದಲ್ಲಿ ಮೂರು ಪ್ಯಾಕೆಟ್ ತಂಬಾಕು ಪದಾರ್ಥಗಳು ಹಾಗೂ ಐದು ಸಿಮ್ ಕಾರ್ಡ್‌ಗಳನ್ನು ಅಡಗಿಸಿಕೊಂಡಿರುವುದು ಪತ್ತೆಯಾಗಿದೆ. ತಕ್ಷಣವೇ ಅಧಿಕಾರಿಗಳು ಆಕೆಯನ್ನು ವಶಕ್ಕೆ ಪಡೆದು, ವಸ್ತುಗಳನ್ನು ಜಪ್ತಿ ಮಾಡಿ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಗೆ ಒಪ್ಪಿಸಿದ್ದಾರೆ. ಈ ಸಂಬಂಧ ಜೈಲು ಅಧಿಕಾರಿಗಳ ದೂರಿನ ಮೇರೆಗೆ ರಿತಿಕಾ ರೈ ಹಾಗೂ ಕೈದಿ ಫರ್ಹಾನ್ ಖಾನ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಜೈಲಿನಲ್ಲಿ ನಿಷೇಧಿತ ವಸ್ತುಗಳ ಸಾಗಣೆ ತಡೆಯಲು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿದ್ದರೂ ಇಂತಹ ಘಟನೆಗಳು ಮುಂದುವರಿಯುತ್ತಿರುವುದು ಅಧಿಕಾರಿಗಳಿಗೆ ಸವಾಲಾಗಿ ಪರಿಣಮಿಸಿದೆ.

50 ಲಕ್ಷ ಮೌಲ್ಯದ ನಕಲಿ ಸಿಗರೇಟ್ ಜಪ್ತಿ: ಐವರು ಬಂಧನ

ಬೆಂಗಳೂರು: ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸುಮಾರು 50 ಲಕ್ಷ ರು. ಮೌಲ್ಯದ ನಕಲಿ ಸಿಗರೇಟ್‌ಗಳನ್ನು ಪೊಲೀಸರು ಜಪ್ತಿ ಮಾಡಿದ್ದು, ಐವರನ್ನು ಬಂಧಿಸಿದ್ದಾರೆ. ಬಂಧಿತರನ್ನು ಅಬ್ದುಲ್ ಬಷೀದ್, ಅವರ ಪುತ್ರ ಮೊಹಮದ್ ಅಶೀಕ್, ಮಹಮದ್ ಅನ್ಸಾರಿ ಹಾಗೂ ಗುಲಾಮ್ ಹುಸೇನ್ ಖಾನ್ ಎಂದು ಗುರುತಿಸಲಾಗಿದೆ. ಇವರು ವಿದೇಶಗಳಿಂದ ನಕಲಿ ಸಿಗರೇಟ್‌ಗಳನ್ನು ಸಾಗಣೆ ಮಾಡಿ ಬೆಂಗಳೂರಿನಲ್ಲಿ ಅಕ್ರಮವಾಗಿ ಮಾರಾಟ ಮಾಡುತ್ತಿದ್ದರು ಎಂಬುದು ಬೆಳಕಿಗೆ ಬಂದಿದೆ. ನಕಲಿ ಸಿಗರೇಟ್ ಜಾಲದ ಬಗ್ಗೆ ಅನ್ವೇಷ್ ಐಪಿಆರ್ ಸಂಸ್ಥೆ ನೀಡಿದ ದೂರಿನ ಮೇರೆಗೆ ಪೊಲೀಸರು ಕಾರ್ಯಾಚರಣೆ ನಡೆಸಿದರು. ವಿಶೇಷ ಮಾಹಿತಿಯ ಆಧಾರದಲ್ಲಿ ವಿಮಾನ ನಿಲ್ದಾಣದಲ್ಲಿ ಪರಿಶೀಲನೆ ನಡೆಸಿದ ವೇಳೆ ಆರೋಪಿಗಳು ಕಳ್ಳಸಾಗಣೆ ಮಾಡುತ್ತಿದ್ದ ನಕಲಿ ಸಿಗರೇಟ್‌ಗಳನ್ನು ವಶಕ್ಕೆ ಪಡೆಯಲಾಯಿತು. ಬಂಧಿತರು ಪ್ರಸಿದ್ಧ ಕಂಪನಿಗಳಾದ ಐಟಿಸಿ ಹಾಗೂ ಎಸ್ಸೆ ಬ್ರ್ಯಾಂಡ್ ಹೆಸರಿನಲ್ಲಿ ನಕಲಿ ಸಿಗರೇಟ್‌ಗಳನ್ನು ತಯಾರಿಸಿ ಮಾರಾಟ ಮಾಡುತ್ತಿದ್ದರೆಂದು ತಿಳಿದುಬಂದಿದೆ. ಈ ಮೂಲಕ ಗ್ರಾಹಕರಿಗೆ ಮೋಸ ಮಾಡುವುದರ ಜತೆಗೆ ಸರಕಾರಕ್ಕೆ ಭಾರೀ ಪ್ರಮಾಣದ ತೆರಿಗೆ ನಷ್ಟ ಉಂಟು ಮಾಡುತ್ತಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಈ ಜಾಲದ ಹಿಂದಿರುವ ಇನ್ನಿತರ ವ್ಯಕ್ತಿಗಳ ಬಗ್ಗೆ ತನಿಖೆ ಮುಂದುವರೆಸಿದ್ದಾರೆ.

ಐಪಿಎಲ್ ಪಂದ್ಯದ ದಿನ 22 ಸಾವಿರ ಮಂದಿ ಪ್ರಯಾಣ

ಮೆಟ್ರೋದಿಂದ ಮತ್ತೊಂದು ದಾಖಲೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್ ಉದ್ಘಾಟನಾ ಪಂದ್ಯಕ್ಕೆ ಆಗಮಿಸಿದ ಅಭಿಮಾನಿಗಳು ಮೆಟ್ರೋದಲ್ಲಿ ಸಾಮಾನ್ಯ ದಿನಗಳಿಗಿಂತ ದುಪ್ಪಟ್ಟು ಪ್ರಮಾಣದಲ್ಲಿ ಸಂಚಾರ ನಡೆಸಿದ್ದು, ಮತ್ತೊಂದು ದಾಖಲೆ ನಿರ್ಮಾಣವಾಗಿದೆ ಎಂದು ಮೆಟ್ರೋ ತಿಳಿಸಿದೆ.

ಪಂದ್ಯ ಮುಗಿದ ಕೇವಲ 50 ನಿಮಿಷಗಳ ಅವಧಿಯಲ್ಲಿ ಸುಮಾರು 22,000 ಜನರು ಕಬ್ಬನ್ ಪಾರ್ಕ್ ಮತ್ತು ಎಂಜಿ ರಸ್ತೆ ನಿಲ್ದಾಣಗಳಿಂದ ಸುರಕ್ಷಿತವಾಗಿ ಪ್ರಯಾಣ ನಡೆಸಿದ್ದು, ಈ ಬಾರಿ ಸಂಚಾರ ದಟ್ಟಣೆ ಹಾಗೂ ಪಾರ್ಕಿಂಗ್ ಸಮಸ್ಯೆ ತಪ್ಪಿಸಲು ನಮ್ಮ ಮೆಟ್ರೋ ವಿಶೇಷ ರೈಲುಗಳ ವ್ಯವಸ್ಥೆ ಮಾಡಿತ್ತು. ಮೆಜೆಸ್ಟಿಕ್ ಕಡೆಗೆ 13 ಹಾಗೂ ವೈಟ್‌ಫೀಲ್ಡ್ ಕಡೆಗೆ 9 ರೈಲುಗಳು ಸೇರಿದಂತೆ ಒಟ್ಟು 39 ರೌಂಡ್ ಟ್ರಿಪ್‌ಗಳನ್ನು ಕಾರ್ಯಾಚರಣೆ ಮಾಡಲಾಗಿದೆ.

ಹೆಚ್ಚುವರಿ ರೈಲುಗಳ ಸಂಚಾರ: ನೇರಳೆ ಮಾರ್ಗದಲ್ಲಿ 18, ಹಸಿರು ಮಾರ್ಗದಲ್ಲಿ 15 ಮತ್ತು ಹಳದಿ ಮಾರ್ಗದಲ್ಲಿ 6 ಹೆಚ್ಚುವರಿ ಸಂಚಾರಗಳನ್ನು ನಡೆಸುವ ಮೂಲಕ ಪ್ರಯಾಣಿಕರ ದಟ್ಟಣೆಯನ್ನು ಯಶಸ್ವಿಯಾಗಿ ನಿಭಾಯಿಸಲಾಗಿದೆ. ಪ್ರತಿ ಮೂರು ನಿಮಿಷಕ್ಕೊಮ್ಮೆ ರೈಲು ಸಂಚರಿಸುವಂತೆ ವ್ಯವಸ್ಥೆ ಮಾಡಲಾಗಿತ್ತು. ಈ ಯಶಸ್ಸಿನ ಹಿನ್ನೆಲೆಯಲ್ಲಿ ಮುಂದಿನ ಪಂದ್ಯಗಳಿಗೂ ಇನ್ನಷ್ಟು ಸೌಲಭ್ಯಗಳನ್ನು ಹೆಚ್ಚಿಸಲು ಮೆಟ್ರೋ ನಿರ್ಧರಿಸಿದೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಐಪಿಎಲ್ ಪಂದ್ಯಗಳು ನಡೆಯುವ ದಿನಗಳಲ್ಲಿ ಕ್ರಿಕೆಟ್ ಅಭಿಮಾನಿಗಳ ಅನುಕೂಲಕ್ಕಾಗಿ ಬಿಎಂಆರ್‌ಸಿಎಲ್ ಮೆಟ್ರೋ ರೈಲು ಸಂಚಾರದ ಅವಧಿಯನ್ನು ತಡರಾತ್ರಿ ವರೆಗೆ ವಿಸ್ತರಿಸಿದ್ದು, ರಾತ್ರಿ 11 ಗಂಟೆಗೆ ಕೊನೆಗೊಳ್ಳುತ್ತಿದ್ದ ರೈಲು ಸಂಚಾರವನ್ನು ಪಂದ್ಯ ಮುಗಿದ ನಂತರ ಸಾವಿರಾರು ಅಭಿಮಾನಿಗಳು ಏಕಕಾಲಕ್ಕೆ ನಿಲ್ದಾಣಕ್ಕೆ ಬರುವ ಹಿನ್ನೆಲೆಯಲ್ಲಿ ವಿಸ್ತರಿಸಲಾಗುತ್ತಿದೆ. ಐಪಿಎಲ್ ಉದ್ಘಾಟನಾ ಪಂದ್ಯದ ದಿನ ರಾತ್ರಿ 2 ಗಂಟೆ ವರೆಗೆ ಮೆಟ್ರೋ ಸಂಚಾರ ವಿಸ್ತರಣೆ ಮಾಡಲಾಗಿತ್ತು.

ಪಂದ್ಯ ಮುಗಿದ ಬಳಿಕ ಒಟ್ಟು 39 ರೌಂಡ್ ಟ್ರಿಪ್‌ಗಳನ್ನು ನಡೆಸಲಾಗಿದ್ದು, ಮೆಜೆಸ್ಟಿಕ್‌ನಿಂದ ಕೊನೆಯ ರೈಲು ರಾತ್ರಿ 1:45ಕ್ಕೆ

ಮತ್ತು ಆರ್.ವಿ ರಸ್ತೆಯಿಂದ 2:05ಕ್ಕೆ ಹೊರಡುವಂತೆ ವ್ಯವಸ್ಥೆ ಕಲ್ಪಿಸಲಾಗಿತ್ತು. ಪ್ರೇಕ್ಷಕರು ತಮ್ಮ ಮನೆಯ ಹತ್ತಿರದ ಮೆಟ್ರೋ ನಿಲ್ದಾಣಗಳಲ್ಲಿ ವಾಹನ ನಿಲ್ಲಿಸಲು ದ್ವಿಚಕ್ರ ವಾಹನಗಳಿಗೆ 30 ರು. ಮತ್ತು ನಾಲ್ಕು ಚಕ್ರದ ವಾಹನಗಳಿಗೆ 60 ರು. ದರ ನಿಗದಿಪಡಿಸಲಾಗಿತ್ತು.

ಈ ಬಾರಿಯ ಐಪಿಎಲ್ ಪಂದ್ಯದ ಟಿಕೆಟ್ ಗಳನ್ನು ಖರೀದಿಸುವವರಿಗೆ ಅದರ ಜತೆಗೆ ಮೆಟ್ರೋ ಪ್ರಯಾಣದ ಕ್ಯೂಆರ್ ಕೋಡ್‌ಗಳನ್ನು ಅಳವಡಿಸಲಾಗಿತ್ತು. ಇದರಿಂದಾಗಿ ಪ್ರೇಕ್ಷಕರು ಯಾವುದೇ ಮೆಟ್ರೋ ನಿಲ್ದಾಣದಿಂದ ಕಬ್ಬನ್ ಪಾರ್ಕ್ ಅಥವಾ ಎಂಜಿ ರಸ್ತೆ ನಿಲ್ದಾಣಗಳವರೆಗೆ ಉಚಿತವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿತ್ತು. ಪಂದ್ಯ ಮುಗಿದ ನಂತರವೂ ಅದೇ ಟಿಕೆಟ್ ಬಳಸಿ ಮರಳಿ ಪ್ರಯಾಣಿಸುವ ಸೌಲಭ್ಯವನ್ನು ನೀಡಲಾಗಿತ್ತು. ಬಿಎಂಆರ್‌ಸಿಎಲ್ ಮತ್ತು ಆರ್‌ಸಿಬಿ ಫ್ರಾಂಚೈಸಿಯ ಸಹಯೋಗದೊಂದಿಗೆ ನೀಡಲಾಗಿದ್ದ ಈ ಅವಕಾಶದ ಸದುಪಯೋಗವನ್ನ ಬಹುತೇಕ ಪ್ರೇಕ್ಷಕರು ಬಳಸಿಕೊಂಡಿದ್ದರು.

ಈ ಮಾರ್ಗದಲ್ಲಿ 8 ಸಾವಿರದಿಂದ 10 ಸಾವಿರ ಪ್ರಯಾಣಿಕರು ಸಂಚರಿಸುತ್ತಿದ್ದರು. ಆದರೆ ಐಪಿಎಲ್ ಮೊದಲ ಪಂದ್ಯದ ದಿನ ಪ್ರಯಾಣಿಕರ ಸಂಖ್ಯೆ ದ್ವಿಗುಣಗೊಂಡಿದ್ದು, ಪಂದ್ಯ ಮುಗಿದ ಕೇವಲ 50 ನಿಮಿಷಗಳಲ್ಲಿ ಅಷ್ಟೂ ಪ್ರಯಾಣಿಕರನ್ನು ಕರೆದೊಯ್ಯಲಾಗಿದೆ ಎಂದು ಮೆಟ್ರೋ ಅಧಿಕಾರಿಗಳು ತಿಳಿಸಿದ್ದಾರೆ.

ಬಾಡಿ ಕ್ಯಾಮೆರಾ ದುರುಪಯೋಗ: ಅಮಾನತು

ಬೆಂಗಳೂರು: ಸಾರ್ವಜನಿಕರಿಂದ ಹಣ ವಸೂಲಿ ಮಾಡುವ ಉದ್ದೇಶದಿಂದ ಬಾಡಿ ಕ್ಯಾಮೆರಾ ನಿಯಮ ಉಲ್ಲಂಘನೆ ಮಾಡಿದ ಆರೋಪದ ಮೇರೆಗೆ ಟ್ರಾಫಿಕ್ ಪೊಲೀಸ್ ಠಾಣೆಯ ಮೂವರು ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ. ಹೈಗ್ರೌಂಡ್ಸ್ ಸಂಚಾರ ಪೊಲೀಸ್ ಠಾಣೆಯ ಎಎಸ್‌ಐ ಸುರೇಶ್ ಹಾಗೂ ಕಾನ್‌ಸ್ಟೇಬಲ್‌ಗಳಾದ ಪ್ರಶಾಂತ್ ಮತ್ತು ಸಾಧಿಕ್ ಅಮಾನತುಗೊಂಡವರು. ಈ ಸಂಬಂಧ ಪಶ್ಚಿಮ ವಿಭಾಗದ ಡಿಸಿಪಿ ಅನುಪ್ ಶೆಟ್ಟಿ ಆದೇಶ ಹೊರಡಿಸಿದ್ದಾರೆ.

ಸಾರ್ವಜನಿಕರಿಂದ ಬಂದ ದೂರಿನ ಆಧಾರದ ಮೇಲೆ ಈ ಕ್ರಮ ಕೈಗೊಳ್ಳಲಾಗಿದೆ. ಕರ್ತವ್ಯ ನಿರ್ವಹಣೆ ವೇಳೆ ಈ ಸಿಬ್ಬಂದಿ ಸರಕಾರ ನೀಡಿದ ಬಾಡಿ ಕ್ಯಾಮೆರಾಗಳನ್ನು ಉದ್ದೇಶಪೂರ್ವಕವಾಗಿ ಆಫ್ ಮಾಡಿ, ವಾಹನ ಸವಾರರನ್ನು ತಡೆದು ಹಣ ವಸೂಲಿ ಮಾಡುತ್ತಿದ್ದರೆಂಬ ಆರೋಪ ಕೇಳಿಬಂದಿತ್ತು. ಈ ಕುರಿತು ಇಲಾಖೆಯಿಂದ ಆಂತರಿಕ ತನಿಖೆ ನಡೆಸಲಾಗಿದ್ದು, ತನಿಖೆಯಲ್ಲಿ ಆರೋಪಗಳು ಸಾಬೀತಾದ ಹಿನ್ನೆಲೆ ಮೂವರ ವಿರುದ್ಧ ಶಿಸ್ತು ಕ್ರಮವಾಗಿ ಅಮಾನತು ಮಾಡಲಾಗಿದೆ.

ಟ್ರಾಫಿಕ್ ಪೊಲೀಸರ ಕಾರ್ಯಪದ್ಧತಿಯಲ್ಲಿ ಪಾರದರ್ಶಕತೆ ತರಲು ಮತ್ತು ಭ್ರಷ್ಟಾಚಾರ ತಡೆಗಟ್ಟಲು ಬಾಡಿ ಕ್ಯಾಮೆರಾ ಬಳಕೆ ಕಡ್ಡಾಯಗೊಳಿಸಲಾಗಿದೆ. ಆದರೆ, ಈ ನಿಯಮ ಉಲ್ಲಂಘನೆ ನಡೆದಿರುವುದು ಇಲಾಖೆಗೆ ಕಳವಳ ಉಂಟುಮಾಡಿದೆ. ಸಾರ್ವಜನಿಕ ರೊಂದಿಗೆ ನಡೆಯುವ ಸಂವಹನವನ್ನು ದಾಖಲಿಸಲು ನೀಡಲಾದ ಬಾಡಿ ಕ್ಯಾಮೆರಾಗಳ ದುರುಪಯೋಗ ಮಾಡಿರುವುದು ಗಂಭೀರ ತಪ್ಪು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆಟೋ ಪಲ್ಟಿ, ಚಾಲಕ ಸಾವು

ಬೆಂಗಳೂರು: ಆಟೋ ಚಲಾಯಿಸುತ್ತಿದ್ದಾಗ ದಿಢೀರ್ ಆಗಿ ಬೈಕ್ ಅಡ್ಡ ಬಂದ ಕಾರಣ ಏಕಾಏಕಿ ಬ್ರೇಕ್ ಹಾಕಿದ ಪರಿಣಾಮ ಆಟೋ ಉರುಳಿ ಬಿದ್ದು ಚಾಲಕ ಮೃತಪಟ್ಟಿರುವ ಘಟನೆ ಜ್ಞಾನಭಾರತಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಮೃತ ಆಟೋ ಚಾಲಕನನ್ನು ರಾಜೇಶ್ (45) ಎಂದು ಗುರುತಿಸಲಾಗಿದೆ. ಇವರು ಚಿಕ್ಕಬಸ್ತಿಯ ನಿವಾಸಿಯಾಗಿದ್ದರು. ಭಾನುವಾರ ರಾತ್ರಿ ಸುಮಾರು 8 ಗಂಟೆ ವೇಳೆಯಲ್ಲಿ ರಾಜೇಶ್ ತಮ್ಮ ಆಟೋದಲ್ಲಿ ಸ್ನೇಹಿತ ದೇವರಾಜು (50) ಎಂಬವರನ್ನು ಕರೆದುಕೊಂಡು ವಿಶ್ವೇಶ್ವರಯ್ಯ ಲೇಔಟ್‌ನ 100 ಅಡಿ ರಸ್ತೆಯ ದೊಡ್ಡಬಸ್ತಿ ಬಳಿ ಹೋಗುತ್ತಿದ್ದರು. ಆಟೋ ಚಲಿಸುತ್ತಿದ್ದ ವೇಳೆ ಬೈಕ್ ಸವಾರನೊಬ್ಬ ದಿಢೀರ್ ಆಗಿ ಅಡ್ಡ ಬಂದಿದ್ದಾನೆ. ಬೈಕ್‌ಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ರಾಜೇಶ್ ಅವರು ಏಕಾಏಕಿ ಬ್ರೇಕ್ ಹಾಕಿದ್ದಾರೆ. ಇದರಿಂದ ನಿಯಂತ್ರಣ ತಪ್ಪಿದ ಆಟೋ ರಸ್ತೆಯಲ್ಲೇ ಪಲ್ಟಿಯಾಗಿದೆ. ಈ ಸಂದರ್ಭದಲ್ಲಿ ಚಾಲಕ ರಾಜೇಶ್ ಹಾಗೂ ಅವರ ಸ್ನೇಹಿತ ದೇವರಾಜು ರಸ್ತೆಗೆ ಉರುಳಿ ಬಿದ್ದಿದ್ದಾರೆ.

ಚಿಕಿತ್ಸೆ ಫಲಿಸದೆ ಸಾವು: ಅಪಘಾತದ ತೀವ್ರತೆಗೆ ರಾಜೇಶ್ ಅವರ ತಲೆಗೆ ಗಂಭೀರ ಪೆಟ್ಟಾಗಿ ರಕ್ತಸ್ರಾವವಾಗಿತ್ತು. ತಕ್ಷಣವೇ ಅವರನ್ನು ಸಮೀಪದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಚಿಕಿತ್ಸೆ ಫಲಿಸದೆ ರಾತ್ರಿ 10 ಗಂಟೆ ಸುಮಾರಿಗೆ ಅವರು ಮೃತಪಟ್ಟಿದ್ದಾರೆ. ಘಟನಾ ಸ್ಥಳಕ್ಕೆ ಜ್ಞಾನಭಾರತಿ ಸಂಚಾರ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಪ್ರಕರಣ ದಾಖಲಿಸಿಕೊಂಡು ಕ್ರಮ ಕೈಗೊಂಡಿದ್ದಾರೆ.

ಶಂಭುಲಿಂಗಗೆ ಅನಾರೋಗ್ಯ ಸಿಎಂ ಐದು ಲಕ್ಷ ಪರಿಹಾರ

ಬೆಂಗಳೂರು: ಅಪರೂಪದ ಕಾಯಿಲೆಯಿಂದ ಬಳಲುತ್ತಿರುವ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ರಾಜ್ಯಾಧ್ಯಕ್ಷ ಕೆ. ಶಂಭುಲಿಂಗ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವೈಯಕ್ತಿಕವಾಗಿ ಐದು ಲಕ್ಷ ರು. ಪರಿಹಾರ ನೀಡಿದ್ದಾರೆ.

ಶಂಭುಲಿಂಗ ಅವರ ತುರ್ತು ಚಿಕಿತ್ಸೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೆರವಿನ ಹಸ್ತ ಚಾಚಿದ್ದಾರೆ. ಪತ್ರಿಕಾ ವಿತರಕರ ಸಂಘಟನೆಗಾಗಿ ಅವಿರತವಾಗಿ ದುಡಿದ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ಅಧ್ಯಕ್ಷ ಕೆ.ಶಂಭುಲಿಂಗ ಅವರು ತೀವ್ರ ಅನಾರೋಗ್ಯದಿಂದ ಆಸ್ಪತ್ರೆಯ ಲ್ಲಿದ್ದಾರೆ. ಈಗಾಗಲೇ 16ಲಕ್ಷಕ್ಕೂ ಹೆಚ್ಚು ವೆಚ್ಚವಾಗಿದ್ದು, ಇನ್ನೂ 20 ಲಕ್ಷ ಅಗತ್ಯವಿದೆ. ಈ ಸಂಕಷ್ಟದ ಹೊತ್ತಿನಲ್ಲಿ ಚಿಕಿತ್ಸಾ ವೆಚ್ಚಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವೈಯುಕ್ತಿಕವಾಗಿ ಐದು ಲಕ್ಷ ರು. ನೆರವು ನೀಡಿದ್ದು, ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಅವರು ಶಂಭುಲಿಂಗ ಅವರನ್ನು ಭೇಟಿ ಮಾಡಿ ವಿಚಾರಿಸಿದರು. ಬಳಿಕ ಚೆಕ್ ಅನ್ನು ಆಸ್ಪತ್ರೆಗೆ ಹಸ್ತಾಂತರಿಸಿದರು.



ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಆಸ್ಪತ್ರೆಗೆ ಭೇಟಿ ನೀಡಿ ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ರಾಜ್ಯಾಧ್ಯಕ್ಷ ಕೆ. ಶಂಭುಲಿಂಗ ಆರೋಗ್ಯ ವಿಚಾರಿಸಿದರು.

ಸಹಾಯ ಮಾಡಲು ಸಾರ್ವಜನಿಕರಿಗೆ ಮನವಿ

ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ರಾಜ್ಯಾಧ್ಯಕ್ಷ ಕೆ. ಶಂಭುಲಿಂಗ ಅವರು ಅಪರೂಪದ ಜಿ.ಬಿ.ಸಿಂಡ್ರೋಮ್ ಕಾಯಿಲೆಗೆ ತುತ್ತಾಗಿ ಕಳೆದ ಹನ್ನೆರಡು ದಿನಗಳಿಂದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕೈ ಹಾಗೂ ಕಾಲುಗಳಲ್ಲಿ ಸ್ವಾಧೀನ ಕಳೆದುಕೊಂಡಿರುವ ಶಂಭುಲಿಂಗ ಅವರ ಆರೋಗ್ಯ ಸ್ಥಿತಿ ಗಂಭೀರವಾಗಿದ್ದು, ವೈದ್ಯರು ಇಂಟ್ರಾವೀನಸ್ ಇಮ್ಯುನೊ ಗ್ಲೋಬ್ಯುಲಿನ್ (ಐವಿಐಜಿ) ಚಿಕಿತ್ಸೆ ನೀಡುತ್ತಿದ್ದಾರೆ. ಈ ಚಿಕಿತ್ಸೆಗೆ ದಿನಕ್ಕೆ ಸುಮಾರು 1.53 ಲಕ್ಷ ರು. ವೆಚ್ಚವಾಗುತ್ತಿದ್ದು, ಇದುವರೆಗೆ ಸುಮಾರು 15.50 ಲಕ್ಷ ರು. ಖರ್ಚಾಗಿದೆ. ಮುಂದಿನ ದಿನಗಳಲ್ಲಿ ಫಿಸಿಯೋಥೆರಪಿ ಚಿಕಿತ್ಸೆಗೆ ಬೇರೆ ಆಸ್ಪತ್ರೆಗೆ ಸ್ಥಳಾಂತರಿಸುವ ಅಗತ್ಯವಿದ್ದು, ಅದಕ್ಕೂ ತಿಂಗಳಿಗೆ 5 ಲಕ್ಷ ರು. ಕ್ಕಿಂತ ಹೆಚ್ಚು ವೆಚ್ಚವಾಗುವ ಸಾಧ್ಯತೆ ಇದೆ ಎಂದು ವೈದ್ಯರು ತಿಳಿಸಿದ್ದಾರೆ. ಕುಟುಂಬದ ಆರ್ಥಿಕ ಪರಿಸ್ಥಿತಿ ದುರ್ಬಲವಾಗಿರುವುದರಿಂದ, ಶಂಭುಲಿಂಗ ಅವರ ಚಿಕಿತ್ಸೆಗೆ ಸಾರ್ವಜನಿಕರಿಂದ ಆರ್ಥಿಕ ನೆರವು ಅಗತ್ಯವಿದೆ. ನೆರವಿಗಾಗಿ 99863 27778, 98444 04563 ಸಂಪರ್ಕಿಸಿ ಎಂದು ಒಕ್ಕೂಟದ ರಾಜ್ಯ ಉಪಾಧ್ಯಕ್ಷ ಪ್ರಶಾಂತ್ ಕುಮಾರ್ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ನಮ್ಮ ಮನವಿಗೆ ಸ್ಪಂದಿಸಿ ನೆರವು ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಎಲ್ಲ ರೀತಿಯ ಸಹಕಾರ ನೀಡಿದ ಕೆ.ವಿ.ಪ್ರಭಾಕರ್ ಅವರಿಗೆ ವಿತರಕರು ಮತ್ತು ಪತ್ರಕರ್ತರ ಪರವಾಗಿ ಧನ್ಯವಾದಗಳು.
– ಶಿವಾನಂದ ತಗಡೂರು
ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ

This is a public announcement for information purposes only and is not a prospectus announcement and does not constitute an invitation or offer to acquire, purchase or subscribe to securities.
Not for release, publication or distribution, directly or indirectly, outside India.

INTIMATION OF FILING OF THE PRE-FILED DRAFT RED HERRING PROSPECTUS DATED MARCH 29, 2026 ("PRE-FILED DRAFT RED HERRING PROSPECTUS") OF ZETWERK MANUFACTURING BUSINESSES LIMITED *(FORMERLY KNOWN AS ZETWERK MANUFACTURING BUSINESSES PRIVATE LIMITED)* ("COMPANY") UNDER CHAPTER IIA OF THE SECURITIES AND EXCHANGE BOARD OF INDIA (ISSUE OF CAPITAL AND DISCLOSURE REQUIREMENTS) REGULATIONS, 2018, AS AMENDED, ("SEBI ICDR REGULATIONS") WITH THE SECURITIES AND EXCHANGE BOARD OF INDIA ("SEBI"), BSE LIMITED AND THE NATIONAL STOCK EXCHANGE OF INDIA LIMITED (COLLECTIVELY, THE "STOCK EXCHANGES") IN RELATION TO THE PROPOSED INITIAL PUBLIC OFFERING OF ITS EQUITY SHARES OF FACE VALUE OF ₹1 EACH ("EQUITY SHARES") ON THE MAIN BOARD OF THE STOCK EXCHANGES (THE "OFFER").

PUBLIC ANNOUNCEMENT

ZETWERK

ZETWERK MANUFACTURING BUSINESSES LIMITED
(formerly known as Zetwerk Manufacturing Businesses Private Limited)
Registered and Corporate Office: #84/1, Ground & 1st Floor, Vaishnavi Sovereign, Green Glen Layout, Bellandur, Bengaluru South, Bengaluru - 560 103, Karnataka, India. **Tel:** +91 7624 9748 90; **Website:** www.zetwerk.com;
Contact person: Mania Sarkar, Company Secretary and Compliance Officer; **E-mail:** cs@zetwerk.com;
Corporate Identity Number: U74999KA2017PLC128777

This public announcement is being made pursuant to Regulation 59C(5) of the SEBI ICDR Regulations to inform the public that the Company has filed the Pre-filed Draft Red Herring Prospectus with SEBI and the Stock Exchanges, under Chapter IIA of the SEBI ICDR Regulations in relation to the proposed initial public offering of its Equity Shares on the main board of the Stock Exchanges. The filing of the Pre-filed Draft Red Herring Prospectus shall not necessarily mean that the Company will undertake the Offer.

This announcement is not an offer of securities for sale in the United States or elsewhere. This announcement has been prepared for publication in India only and is not for publication or distribution, directly or indirectly, in or into the United States. The Equity Shares offered in the Offer have not been and will not be registered under the U.S. Securities Act of 1933, as amended ("**U.S. Securities Act**") or any state securities laws in the United States, and unless so registered, may not be offered or sold within the United States, except pursuant to an exemption from, or in a transaction not subject to, the registration requirements of the U.S. Securities Act and applicable state securities laws in the United States. Accordingly, the Equity Shares are being offered and sold (i) in the United States solely to "qualified institutional buyers" (as defined in Rule 144A under the U.S. Securities Act) in transactions exempt from, or not subject to, the registration requirements of the U.S. Securities Act, and (ii) outside the United States in "offshore transactions," as defined in, and in reliance on Regulation S under the U.S. Securities Act and the applicable laws of the jurisdictions where such offers and sales occur. There will be no public offering of Equity Shares in the United States.

For **ZETWERK MANUFACTURING BUSINESSES LIMITED**
(formerly known as Zetwerk Manufacturing Businesses Private Limited)
On behalf of the Board of Directors
Sd/-
Mania Sarkar
Company Secretary and Compliance Officer

Place: Bengaluru, Karnataka
Date: March 30, 2026

ಸಮಾಚಾರ ಸಣ್ಣದಲ್ಲ

ಏ.3ಕ್ಕೆ ವಸುಧಾ ರಂಗಪ್ರವೇಶ

ಬೆಂಗಳೂರು: ಎಂ.ವಸುಧಾ ಅವರು ತಾವು ಕಲಿತಿರುವ ನೃತ್ಯ ಆಯಾಮಗಳ ಪ್ರದರ್ಶನಕ್ಕಾಗಿ ಏಪ್ರಿಲ್ 3ರಂದು ಬೆಳಗ್ಗೆ 10 ಗಂಟೆಗೆ ಮಲ್ಲೇಶ್ವರದ ಸೇವಾ ಸದನದಲ್ಲಿ ವಿಧ್ಯುಕ್ತವಾಗಿ ರಂಗಪ್ರವೇಶ ಮಾಡಲಿದ್ದಾರೆ. ನೃತ್ಯರಂಗದಲ್ಲಿ ಹಿರಿಯ ಗುರುಗಳಾಗಿ ಹೆಸರು ಮಾಡಿರುವ ನೃತ್ಯಜ್ಞೆ ಡಾ. ವೀಣಾ ಮೂರ್ತಿ ವಿಜಯ ಅವರ ನುರಿತ ಗರಡಿಯಲ್ಲಿ ಹೊರಹೊಮ್ಮಿರುವ ನೃತ್ಯಶಿಲ್ಪ ವಸುಧಾ ಕೂಡ ಬಹುಮುಖ ಪ್ರತಿಭೆ. ತಾಯಿ ಕೆ.ಬಿ.ಲೀಲಾವತಿ ಗೌಡ ಅವರ ನಿರಂತರ ಪ್ರೋತ್ಸಾಹದಿಂದ ವಸುಧಾ, ಎಂಜಿನಿಯರಿಂಗ್ ಪದವೀಧರೆಯಾಗಿದ್ದು ಕಳೆದ 17 ವರ್ಷಗಳಿಂದ ನಿರಂತರ ನೃತ್ಯಾಭ್ಯಾಸ ಮಾಡುತ್ತಿದ್ದು, ನಾಡಿನ ಅನೇಕ ವೇದಿಕೆಗಳಲ್ಲಿ ತನ್ನ ಪ್ರತಿಭಾ ಪ್ರದರ್ಶನ ನೀಡಿದ್ದಾರೆ. ಜತೆಗೆ ನೃತ್ಯ ಸಂಯೋಜನೆಯಲ್ಲಿ ಅನುಭವವುಳ್ಳ ವಸುಧಾ, ತನ್ನದೇ ಆದ ತನ್ನದೇ ಆದ ತದ್ರೂಪ ನಾಟ್ಯ ಕಲಾ ಅಕಾಡೆಮಿಯ ಮೂಲಕ ಅನೇಕ ನೃತ್ಯಾಕಾಂಕ್ಷಿಗಳಿಗೆ ಮಾರ್ಗದರ್ಶನ ಮಾಡುತ್ತಿದ್ದಾಳೆ. ಕರ್ನಾಟಕ ಸರಕಾರದ ಸೀನಿಯರ್ ನೃತ್ಯ ಪರೀಕ್ಷೆಯಲ್ಲಿ ಮತ್ತು ಅಖಿಲ ಭಾರತೀಯ ಗಂಧರ್ವ ಮಹಾವಿದ್ಯಾಲಯ ಮಂಡಲದ ಮಾಧ್ಯಮ ಪೂರ್ಣ ಪರೀಕ್ಷೆಯಲ್ಲೂ ಜಯಶೀಲಳಾಗಿ ಪ್ರಸ್ತುತ ಡಾ. ವೀಣಾ ಅವರ ಮಾರ್ಗದರ್ಶನದಲ್ಲಿ ಭರತನಾಟ್ಯದಲ್ಲಿ ಸ್ನಾತಕೋತ್ತರ ಪದವಿಗಾಗಿ ಉನ್ನತ ಅಭ್ಯಾಸದಲ್ಲಿ ತೊಡಗಿದ್ದಾರೆ. ಇದೀಗ ವಸುಧಾ ಅವರು ಏಪ್ರಿಲ್ 3 ರಂದು ಬೆಳಗ್ಗೆ 10 ಗಂಟೆಗೆ ಮಲ್ಲೇಶ್ವರದ ಸೇವಾಸದನದಲ್ಲಿ ವಿಧ್ಯುಕ್ತವಾಗಿ ತನ್ನ ರಂಗಪ್ರವೇಶ ನೆರವೇರಿಸಿಕೊಳ್ಳಲಿದ್ದಾರೆ.

ಏ.4ಕ್ಕೆ ಮಿಥಿಲೆ ಮಾವಿನ ಮರ ಪುಸ್ತಕ ಬಿಡುಗಡೆ

ಬೆಂಗಳೂರು: ಆಕೃತಿ ಪುಸ್ತಕ ವತಿಯಿಂದ ಏ.4ರಂದು ಸಂಜೆ 4.30ಕ್ಕೆ ನಗರದ ಬಸವನಗುಡಿಯ ನ್ಯಾಷನಲ್ ಕಾಲೇಜಿನ ಡಾ.ಎಚ್.ಎನ್ ಮಲ್ಟಿ ಮೀಡಿಯಾ ಹಾಲ್‌ನಲ್ಲಿ ಸಾಹಿತಿ ನೆಲ್ಲುಕುಂಟೆ ವೆಂಕಟೇಶ್ ಅವರ ಮಿಥಿಲೆಯ ಮಾವಿನ ಮರ ಎಂಬ ಪುಸ್ತಕ ಬಿಡುಗಡೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ. ಈ ವೇಳೆ ಕವಿ ನೆಲ್ಲುಕುಂಟೆ ವೆಂಕಟೇಶ್, ಚಿಂತಕ ಕೆ.ವಿ. ನಾರಾಯಣ, ಕವಯತ್ರಿ ವಿನಯಾ ಒಕ್ಕುಂದ, ಅನುವಾದಕ ಕೆ.ಪಿ. ಸುರೇಶ, ಸಾಹಿತಿ ಬಂಜಗೆರೆ ಜಯಪ್ರಕಾಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿರಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಏ.5ಕ್ಕೆ ಮೂರು ಧ್ವನಿ ಪುಸ್ತಕ ಬಿಡುಗಡೆ

ಬೆಂಗಳೂರು: ಬೆರಗು ಪ್ರಕಾಶನ ವತಿಯಿಂದ ಏ.5 ರಂದು ಬೆ.10.30ಕ್ಕೆ ನಗರದ ಗಾಂಧಿನಗರದಲ್ಲಿರುವ ಕೊಂಡಜ್ಜಿ ಬಸಪ್ಪ ಸಭಾಭವನದಲ್ಲಿ ಬದುಕುಬನಿ ಮೂರು ಧ್ವನಿ ಪುಸ್ತಕ ಬಿಡುಗಡೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಂಸ್ಥೆ ಪ್ರಕಟಣೆಗೆ ತಿಳಿಸಿದೆ. ಈ ವೇಳೆ ಭಾರತಿ ವಸ್ತ್ರದ ಅವರ ಚೇತನ ಭಾರತಿ, ರಶ್ಮಿ ಎಸ್ ಅವರ ಮಿದು ಮಾತು, ಅರ್ನಿ ಸಿ ನವೀನ್ ಅವರ ಎಚೋಸ್ ಫ್ರಮ್ ಮೈ ಜಾರ್ ಎಂಬ ಪುಸ್ತಕ ಬಿಡುಗಡೆಯಾಗಲಿವೆ. ಈ ವೇಳೆ ಪ್ರಜಾವಾಣಿ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಅಂಕಣಕಾರ ಎನ್. ರವಿಶಂಕರ್ ಸೇರಿದಂತೆ ಇನ್ನಿತರರು ಉಪಸ್ಥಿತರಿರಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏ.15ರಿಂದ ನವಪಲ್ಲವ ತರಬೇತಿ ಶಿಬಿರ

ಬೆಂಗಳೂರು: ಸಮನ್ವಿತ ಸಂಸ್ಥೆಯ 15ನೇ ವಾರ್ಷಿಕೋತ್ಸವದ ಅಂಗವಾಗಿ ನಗರದ ಅರಕೆರೆ ಮೈಕೋ ಲೇಔಟ್‌ನಲ್ಲಿ ಏ. 15ರಿಂದ 30ರವರೆಗೆ ಬೆಳಗ್ಗೆ 10 ರಿಂದ ಸಂಜೆ 4ರವರೆಗೆ 'ನವಪಲ್ಲವ' ಎನ್ನುವ ಹದಿನೈದು ದಿನಗಳ ಕಲೆ-ಸಂಸ್ಕೃತಿ ಹಾಗೂ ಕೌಶಲ್ಯ ತರಬೇತಿ ಶಿಬಿರವನ್ನು ಆಯೋಜಿಸಲಾಗಿದೆ ಎಂದು ಸಮನ್ವಿತ ತಂಡದ ರಾಧಾಕೃಷ್ಣ ಕೌಂಡಿನ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಶಿಬಿರದಲ್ಲಿ 10 ರಿಂದ 16 ವರ್ಷ ವಯಸ್ಸಿನ ಮಕ್ಕಳಿಗೆ ಭಾಗವಹಿಸುವ ಅವಕಾಶ ಕಲ್ಪಿಸಲಾಗಿದೆ. ಈ ಶಿಬಿರದಲ್ಲಿ ವಿವಿಧ ಕ್ಷೇತ್ರಗಳ ತಜ್ಞರು ಭಾಗಿಯಾಗಿ ವ್ಯಾಯಾಮ, ಯೋಗ-ಧ್ಯಾನ, ಪ್ರಾರ್ಥನೆ, ಗೀತಗಾಯನ, ಚಿತ್ರಕಲೆ, ಕ್ರಾಫ್ಟ್, ನೃತ್ಯ, ನಾಟಕ, ಪುಸ್ತಕ ವಾಚನ, ಸಂವಹನ ಕಲೆ, ಮೌಲ್ಯ ಶಿಕ್ಷಣ ಸೇರಿದಂತೆ ಅನೇಕ ಕೌಶಲ್ಯಗಳ ಪರಿಚಯ ಹಾಗೂ ತರಬೇತಿಯನ್ನು ನೀಡಲಿದ್ದಾರೆ. ಜತೆಗೆ ಪ್ರಾಣಿ-ಪಕ್ಷಿಗಳ ಅರಿವು, ಪರಿಸರ ಜಾಗೃತಿ, ವಿಜ್ಞಾನ ಮತ್ತು ಗಣಿತದ ತಿಳುವಳಿಕೆ ಸೇರಿದಂತೆ ವೈವಿಧ್ಯಮಯ ಚಟುವಟಿಕೆಗಳನ್ನು ಒಳಗೊಂಡಿದೆ. ಶಿಬಿರಾರ್ಥಿಗಳಿಗೆ ಅಗತ್ಯ ಸಾಮಗ್ರಿಗಳನ್ನು ಸಮನ್ವಿತ ಸಂಸ್ಥೆಯೇ ಒದಗಿಸಲಿದೆ. ವನಚಾರಣ ಮತ್ತು ಹೊಸ ಅನುಭವಗಳ ಮೂಲಕ ಮಕ್ಕಳಿಗೆ ರಜೆಯನ್ನು ಸಾರ್ಥಕವಾಗಿ ಕಳೆಯುವ ವೇದಿಕೆಯನ್ನು ಕಲ್ಪಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ 98441 92952 ಸಂಖ್ಯೆಗೆ ವಾಟ್ಸಾಪ್ ಮೂಲಕ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

83ನೇ ವರ್ಷದ ಹವ್ಯಕ ಸಂಸ್ಥಾಪನೋತ್ಸವ, ಹವ್ಯಕ ವಿಶೇಷ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಡಾ.ಗಿರಿಧರ ಕಜೆ ಅಭಿಮತ

ಪ್ರಶಸ್ತಿಗಳು ಸಾಧಕರಿಗೆ ಗೌರವ, ಇತರರಿಗೆ ಸ್ಫೂರ್ತಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸಾಧಕರ ಸಾಧನೆಯನ್ನು ಗೌರವಿಸುವುದರ ಜತೆಗೆ ಮುಂದಿನ ಪೀಳಿಗೆಗೆ ಪ್ರೇರಣೆಯಾಗುವುದು ಪ್ರಶಸ್ತಿಗಳ ಮುಖ್ಯ ಉದ್ದೇಶ ಎಂದು ಹವ್ಯಕ ಮಹಾಸಭೆಯ ಅಧ್ಯಕ್ಷ ಡಾ. ಗಿರಿಧರ ಕಜೆ ತಿಳಿಸಿದರು.

ಮಲ್ಲೇಶ್ವರದ ಹವ್ಯಕ ಭವನದಲ್ಲಿ ನಡೆದ 83ನೇ ವರ್ಷದ ಹವ್ಯಕ ಸಂಸ್ಥಾಪನೋತ್ಸವ, ಹವ್ಯಕ ವಿಶೇಷ ಪ್ರಶಸ್ತಿ ಪ್ರದಾನ ಹಾಗೂ ಹವ್ಯಕ ಮಾಸಪತ್ರಿಕೆಯ ವಜ್ರಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹವ್ಯಕ ಪತ್ರಿಕೆ ಕಳೆದ 60 ವರ್ಷಗಳಿಂದ ನಿರಂತರವಾಗಿ ಪ್ರಕಟವಾಗುತ್ತಿದ್ದು, ಪ್ರತಿ ತಿಂಗಳು ಸುಮಾರು 30,000 ಕುಟುಂಬಗಳನ್ನು ತಲುಪುವ ಮೂಲಕ ಸಮಾಜ ಮತ್ತು ಸಂಘಟನೆಯ ನಡುವಿನ ಬಲವಾದ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತಿದೆ. ಪತ್ರಿಕೆಯ ಬೆಳವಣಿಗೆಯಲ್ಲಿ ಸಂಪಾದಕರು ಮತ್ತು ಸಂಚಾಲಕರ ಪಾತ್ರ ಶ್ಲಾಘನೀಯ ಎಂದರು.

ರಾಜ್ಯ ಸರಕಾರ ಈ ಸಾಲಿನ ಬಜೆಟ್‌ನಲ್ಲಿ ಹವ್ಯಕ ಭಾಷಾ ಅಕಾಡೆಮಿಯನ್ನು ಸ್ಥಾಪಿಸಿರುವುದು ಸ್ವಾಗತಾರ್ಹ. ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರಿಗೆ ಚಿರಋಣಿ. ಈ ಕಾರ್ಯ ಹವಿಗನ್ನಡದಂತಹ ಸಮೃದ್ಧ ಭಾಷೆಯ ಸಂರಕ್ಷಣೆ ಮತ್ತು ಅಭಿವೃದ್ಧಿಗೆ ಇದು ಮಹತ್ವದ ಹೆಜ್ಜೆ ಎಂದರು.

ಹಿರಿಯ ಸಾಹಿತಿ ಚಿಂತಾಮಣಿ ಕೊಡ್ಲೆಕೆರೆ ಮಾತನಾಡಿ, ಹವ್ಯಕ ಸಮುದಾಯವು ಕೃಷಿ, ಯಕ್ಷಗಾನ, ಸಾಹಿತ್ಯ, ಅಡುಗೆ ಹಾಗೂ ಕ್ರೀಡೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ತನ್ನದೇ ಆದ ಗುರುತನ್ನು ಮೂಡಿಸಿಕೊಂಡಿದೆ. ಕಡಿಮೆ ಜನಸಂಖ್ಯೆಯ ಸಮುದಾಯವಾಗಿದ್ದರೂ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಉಳಿಸಿಕೊಂಡಿರುವುದು ಶ್ಲಾಘನೀಯ ಎಂದರು. ಬ್ರಾಹ್ಮಣ ಮುಖಂಡ ರಾಘವೇಂದ್ರ ಭಟ್ ಮಾತನಾಡಿ, ಹವ್ಯಕ ಸಮುದಾಯವು ದೊಡ್ಡ ಮಟ್ಟದ ಸಮ್ಮೇಳನಗಳನ್ನು ಯಶಸ್ವಿಯಾಗಿ ನಡೆಸುವ ಮೂಲಕ ಮಾದರಿಯಾಗಿದ್ದು, ಯುವಕರ ಸಕ್ರಿಯ ಭಾಗವಹಿಸುವಿಕೆ ವಿಶೇಷವಾಗಿದೆ. ನಮ್ಮ ಸಂಸ್ಕೃತಿ ಮತ್ತು ಸಂಸ್ಕಾರಗಳನ್ನು ಉಳಿಸಿಕೊಂಡು ಸಮಾಜದ ಅಭಿವೃದ್ಧಿಗೆ ಎಲ್ಲರೂ ಕೈಜೋಡಿಸಬೇಕು ಎಂದರು. ಕಾರ್ಯಕ್ರಮದಲ್ಲಿ ಸಭೆಯ ಉಪಾಧ್ಯಕ್ಷ ಶ್ರೀಧರ ಜೆ. ಭಟ್, ಆರ್.ಎಂ. ಹೆಗಡೆ ಬಾಳೆಸರ, ಪ್ರಧಾನ ಕಾರ್ಯದರ್ಶಿ ಸಿಎ. ವೇಣುವಿಘ್ನೇಶ ಸಂಪ್, ಕಾರ್ಯದರ್ಶಿ ಪ್ರಶಾಂತ್ ಭಟ್ ಮಲವಳ್ಳಿ, ಕೋಶಾಧಿಕಾರಿ ಕೃಷ್ಣಮೂರ್ತಿ ಭಟ್ ಯಲಹಂಕ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಹವ್ಯಕ ಸಂಸ್ಥಾಪನೋತ್ಸವ, ಹವ್ಯಕ ವಿಶೇಷ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಹವ್ಯಕ ಮಹಾಸಭೆಯ ಅಧ್ಯಕ್ಷ ಡಾ. ಗಿರಿಧರ ಕಜೆ ಉದ್ಘಾಟಿಸಿದರು. ಈ ವೇಳೆ ಹಿರಿಯ ಸಾಹಿತಿ ಚಿಂತಾಮಣಿ ಕೊಡ್ಲೆಕೆರೆ, ಬ್ರಾಹ್ಮಣ ಮುಖಂಡ ರಾಘವೇಂದ್ರ ಭಟ್, ಕರ್ನಾಟಕ ಬ್ಯಾಂಕ್ ಸಿಒಒ ಬಿ.ಎಸ್. ರಾಜ್, ಆರ್ಥಿಕ ತಜ್ಞ ಗೋಪಾಲಕೃಷ್ಣ ಹೆಗಡೆ ಹುಕ್ಕುಮಕ್ಕಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಹವ್ಯಕ ವಿಭೂಷಣ, ಭೂಷಣ, ಶ್ರೀ, ಸೇವಾಶ್ರೀ ಪ್ರಶಸ್ತಿ ಪ್ರದಾನ

2025-26 ಸಾಲಿನ ಹವ್ಯಕ ವಿಶೇಷ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು. ಹವ್ಯಕ ವಿಭೂಷಣ ಪ್ರಶಸ್ತಿಯನ್ನು ಮೂಡಂಬೈಲು ಗೋಪಾಲಕೃಷ್ಣ ಶಾಸ್ತ್ರಿ ಹಾಗೂ ಎಸ್. ಶಂಭು ಭಟ್ ಕಡತೋಕ ಅವರಿಗೆ ನೀಡಲಾಯಿತು. ಹವ್ಯಕ ಭೂಷಣ ಪ್ರಶಸ್ತಿಗೆ ನೀರ್ನಳ್ಳಿ ಗಣಪತಿ, ಡಾ.ವೈ.ವಿ.ಕೃಷ್ಣಮೂರ್ತಿ ಮತ್ತು ಉಮೇಶ ಬಂದಗದ್ದೆ ಅವರಿಗೆ. ಹವ್ಯಕ ಶ್ರೀ ಪ್ರಶಸ್ತಿಯನ್ನು ಪೂರ್ಣಿಮಾ ಕೆ. ಭಟ್, ವೇ.ಮೂ. ಸುಚೇತನ ಭಟ್ ಘನಪಾಠಿ, ಆನಂದ ಹೆಗಡೆ ಶೀಗೇಹಳ್ಳಿ ಹಾಗೂ ಕು. ಪ್ರತ್ಯೂಷ ಕುಮಾರ್ ಅವರಿಗೆ ನೀಡಲಾಯಿತು. ಹವ್ಯಕ ಸೇವಾಶ್ರೀ ಪ್ರಶಸ್ತಿಯನ್ನು ಡಾ. ಬಿ.ವಿ. ನರಹರಿ ರಾವ್, ಬೋನಂತಾಯ ಶಿವಶಂಕರ ಭಟ್ ಹಾಗೂ ಕೃಷ್ಣಮೂರ್ತಿ ಹೆಗಡೆ ತ್ಯಾಗಲಿ ಅವರಿಗೆ ಪ್ರದಾನಿಸಲಾಯಿತು.

> ನನ್ನ ವಿದ್ಯಾಭ್ಯಾಸದ ದಿನಗಳಲ್ಲಿ ಹವ್ಯಕ ಮಹಾಸಭೆ ವಿದ್ಯಾರ್ಥಿ ವೇತನವು ಪ್ರಗತಿಗೆ ನೆರವಾಯಿತು. ಮಹಾಸಭೆಯ ಸಾಮಾಜಿಕ ಕಾರ್ಯಗಳಲ್ಲಿ ಸಂಸ್ಥೆಯೊಂದಿಗೆ ಬ್ಯಾಂಕ್ ಕೈಜೋಡಿಸಲಿದೆ.
> -ಬಿ.ಎಸ್.ರಾಜ್,
> ಸಿಒಒ ಕರ್ನಾಟಕ ಬ್ಯಾಂಕ್

> ಪ್ರಶಸ್ತಿಗಳು ವ್ಯಕ್ತಿಗಿಂತ ಪರಿಶ್ರಮ, ಪ್ರತಿಭೆ ಮತ್ತು ಸೇವೆಯನ್ನು ಗೌರವಿಸುವುದಾಗಿದೆ. ಸಾಧಕರ ಸಾಧನೆ ಸಮಾಜದ ಹೆಮ್ಮೆಯಾಗಿದ್ದು, ಇತರರಿಗೆ ಪ್ರೇರಣೆಯಾಗುತ್ತದೆ.
> -ಗೋಪಾಲಕೃಷ್ಣ ಹೆಗಡೆ ಹುಕ್ಕುಮಕ್ಕಿ,
> ಆರ್ಥಿಕ ತಜ್ಞ

ಸಮಾಜಮುಖಿ ಕಥಾಸ್ಪರ್ಧೆಯ ಫಲಿತಾಂಶ ಪ್ರಕಟ

ಬೆಂಗಳೂರು: ಸಮಾಜಮುಖಿ ಪ್ರಕಾಶನ 2025ನೇ ಸಾಲಿನ ವಾರ್ಷಿಕ ಕಥಾಸ್ಪರ್ಧೆಯ ಫಲಿತಾಂಶವನ್ನು ಪ್ರಕಟಿಸಿದೆ. ಈ ವರ್ಷದ ಸ್ಪರ್ಧೆಯಲ್ಲಿ ಆಯ್ಕೆಯಾದ ಐದು ಅತ್ಯುತ್ತಮ ಕಥೆಗಳಿಗೆ ತಲಾ ಐದು ಸಾವಿರ ನಗದು ಬಹುಮಾನ ಘೋಷಿಸಲಾಗಿದೆ ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ. ಗ್ಲೋರಿಯೊಸಾ ಸುಪರ್ಬ (ಶೀಲಾ ಪೈ, ಉಡುಪಿ), ದೊಡ್ಡೈರೆ ಬೇಟೆ (ಎಂ.ಎಸ್. ಶೇಖರ್, ಮೈಸೂರು), ಸಾಕವ್ವಳ ರಸ್ತೆ ಪುರಾಣ (ಜಯರಾಮಾಚಾರಿ, ಬೆಂಗಳೂರು), ಕಾಫಿತೋಟದ ಆ ಕಾರ್ಮಿಕನೂ ಕಬ್ಬೆಕ್ಕಿನ ಕಬಾಬೂ (ಮಂಜುನಾಥ ನಾಯ್, ಬೆಂಗಳೂರು) ಹಾಗೂ ಮೋರ್ಸ್ ಕೋಡ್ (ದೇವೇಂದ್ರ ಅಬ್ಬಿಗೇರಿ, ಮುಂಬೈ) ಬಹುಮಾನಕ್ಕೆ ಆಯ್ಕೆಯಾದ ಕಥೆಗಳು. ಇದಲ್ಲದೆ, ರಮ್ಯ ಎಸ್., ಸ. ಹರೀಶ್, ರಮೇಶ್ ಟಿ.ಎಂ.,ಸೇರಿದಂತೆ ಇತರ 8 ಜನರ ಕಥೆಗಳು ಮೆಚ್ಚುಗೆ ಪಡೆದು ಸಮಾಜಮುಖಿ ವಾರ್ಷಿಕ ಕಥಾಸಂಕಲನಕ್ಕೆ ಆಯ್ಕೆಯಾಗಿವೆ. ಈ ಬಾರಿ ಒಟ್ಟು 357 ಕಥೆಗಾರರು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಸಾಹಿತಿ ಶರೀಫ್ ಕಾಡುಮಠ ತೀರ್ಪುಗಾರರಾಗಿ ಕಾರ್ಯನಿರ್ವಹಿಸಿದರು. ಆಯ್ಕೆಯಾದ ಕಥೆಗಳು ಸಾಹಿತ್ಯ ವಲಯದಲ್ಲಿ ಗಮನ ಸೆಳೆದಿದ್ದು, ಲೇಖಕರ ಸೃಜನಶೀಲತೆಗೆ ಮೆಚ್ಚುಗೆ ವ್ಯಕ್ತವಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ

ಸಿಲಿಂಡರ್ ಸಮಸ್ಯೆ: ಹೋಟೆಲ್‌ಗಳ ಮಾರಾಟ

ಬೆಂಗಳೂರು: ಇರಾನ್ ಇಸ್ರೇಲ್ ಯುದ್ಧದಿಂದಾಗಿ ಕಮರ್ಷಿಯಲ್ ಸಿಲಿಂಡರ್‌ಗಳ ಅಭಾವವುಂಟಾಗಿದ್ದು, ರಾಜ್ಯಗಳು ಹೆಚ್ಚಿನ ಪ್ರಮಾಣದ ಸಮಸ್ಯೆಯನ್ನು ಅನುಭವಿಸುತ್ತಿವೆ. ರಾಜ್ಯದ ಹೋಟೆಲ್ ಉದ್ಯಮಗಳ ಮೇಲೆ ಇದರ ನೇರ ಪರಿಣಾಮವುಂಟಾಗಿದ್ದು, ಬಹುತೇಕ ಹೋಟೆಲ್ ಮಾಲೀಕರು ನಷ್ಟ ಅನುಭವಿಸುತ್ತಿರುವುದರಿಂದ ಹೋಟೆಲ್ ಬಂದ್ ಮಾಡಿದ್ದರೆ,ಇನ್ನು ಕೆಲವು ಹೋಟೆಲ್‌ಗಳು ಮೆನು ಕಡಿತಗೊಳಿಸಿ ಗ್ರಾಹಕರಿಗೆ ಸೇವೆ ನೀಡುತ್ತಿದ್ದಾರೆ. ಸಿಲಿಂಡರ್ ಸಮಸ್ಯೆ ಬಗೆಯರಿಯಬಹುದೆಂಬ ನಿರೀಕ್ಷೆಯು ಹುಸಿಯಾಗಿದ್ದರಿಂದ ಕೆಲ ಮಾಲಿಕರು ಅನ್ನ ನೀಡುತ್ತಿದ್ದ ಹೋಟೆಲ್‌ಗಳನ್ನೇ ಮಾರಲು ಮುಂದಾಗಿದ್ದಾರೆ.

ಹೋಟೆಲ್ ಮಾಲೀಕರ ಸಂಘದ ಗೌರವಾಧ್ಯಕ್ಷ ಪಿ.ಸಿ. ರಾವ್ ಮಾತನಾಡಿ, ಎಲ್‌ಪಿಜಿ ಕಮರ್ಷಿಯಲ್ ಗ್ಯಾಸ್ ಸಿಲಿಂಡರ್ ಕೊರತೆ ಹಿನ್ನೆಲೆ ಹೋಟೆಲ್ ನಡೆಸಲು ಸಾಧ್ಯವಾಗದ ಕಾರಣ ಬೆಂಗಳೂರಿನ 20ರಿಂದ 25 ಹೋಟೆಲ್‌ಗಳ ಮಾಲೀಕರು ಅವುಗಳನ್ನು ಮಾರಲು ಮುಂದಾಗಿದ್ದಾರೆ. ಸಣ್ಣ ಮತ್ತು ಮಧ್ಯಮ ಹೋಟೆಲ್ ಮಾಲೀಕರಿಗೆ ಭಾರಿ ಸಂಕಷ್ಟಕ್ಕೆ ಸಿಲುಕಿದ್ದು, ಬೆಂಗಳೂರಲ್ಲೇ ಶೇ.25ರಷ್ಟು ಹೋಟೆಲ್‌ಗಳ ಮಾರಾಟಕ್ಕೆ ಚಿಂತನೆ ನಡೆದಿದೆ. ಸಿಲಿಂಡರ್ ಸಿಗದೆ ಹೋಟೆಲ್ ಮಾಲೀಕರು ಮೆನು ಕಡಿತಗೊಳಿಸಿದ ಕಾರಣಕ್ಕೆ ಗ್ರಾಹಕರ ಸಂಖ್ಯೆ ಇಳಿಕೆಯಾಗಿದೆ. ದೋಸೆ ಕೌಂಟರ್ ಕೂಡ ಬಂದ್ ಆಗಿದ್ದರಿಂದ ಗ್ರಾಹಕರು ಬರುತ್ತಿಲ್ಲ. ಮತ್ತೊಂದೆಡೆ ಹೋಟೆಲ್ ಉದ್ಯಮ ಕುಸಿತ ಹಾಗೂ ಕೆಲಸ ಕಡಿಮೆ ಇರುವ ಹಿನ್ನೆಲೆ ಸಿಬ್ಬಂದಿಯೂ ತಮ್ಮ ಊರುಗಳಿಗೆ ತೆರಳಿದ್ದಾರೆ. ಈ ಎಲ್ಲ ಕಾರಣಗಳಿಂದ ಕೆಲವರು ಹೋಟೆಲ್ ಮುಚ್ಚುವ ನಿರ್ಧಾರ ಮಾಡಿದ್ದಾರೆ ಎಂದರು.

ಕಾಳ ಸಂತೆಯಲಿ ಸಿಲಿಂಡರ್ ಮಾರಾಟಕ್ಕೆ ಕಿಡಿ

ಸಿಲಿಂಡರ್‌ಗಳ ಅಭಾವದಿಂದಾಗಿ ಕಲಬುರಗಿಯಲ್ಲಿ ಹೋಟೆಲ್ ನಡೆಸುವುದು ಕಷ್ಟ ಎನ್ನುವ ಸ್ಥಿತಿ ನಿರ್ಮಾಣವಾಗಿದ್ದು, ಗ್ಯಾಸ್ ಏಜೆನ್ಸಿಗಳು ದುಬಾರಿ ಹಣ ಪಡೆದುಕೊಂಡು ಕಾಳ ಸಂತೆಯಲ್ಲಿ ಅವುಗಳನ್ನು ಮಾರುತ್ತಿದ್ದಾರೆ ಎಂದು ಹೋಟೆಲ್, ಬೇಕರಿ ಮತ್ತು ವಸತಿಗೃಹ ಮಾಲೀಕರ ಸಂಘ ಅಲವತ್ತುಕೊಂಡಿದೆ. ಹೋಟೆಲ್‌ಗಳಿಗೆ ಮೀಸಲಿಟ್ಟ ಸಿಲಿಂಡರ್‌ಗಳನ್ನು ಈ ರೀತಿ ಮಾರಾಟ ಮಾಡಿದರೆ ನಮ್ಮ ಕತೆ ಏನು ಎಂದು ಪ್ರಶ್ನಿಸಿರುವ ಸಂಘ, ಜಿಲ್ಲಾಡಳಿತ ಕೂಡಲೇ ಸಮಸ್ಯೆ ಪರಿಹರಿಸಲು ಮುಂದಾಗಬೇಕು ಎಂದು ಆಗ್ರಹಿಸಿದೆ.

ಪರಿಣಿತಾ ಪುಸ್ತಕ ಸಾಹಿತ್ಯಲೋಕದ ಹೊಸ ಅಧ್ಯಾಯ

ಬೆಂಗಳೂರು: ಕೃತಕ ಬುದ್ಧಿಮತ್ತೆಯ ಕಾಲಮಾನದಲ್ಲಿ ಒಂದು ಪುಟ ಓದಿ-ಬರೆಯುವುದೇ ಸವಾಲಾಗಿರುವಾಗ ಬೆಂಗಳೂರಿನ ಬಾಲಕಿ ಪರಿಣಿತಾ ತನ್ನ 11ನೇ ವಯಸ್ಸಿನಲ್ಲಿ ಎರಡನೇ ಕೃತಿ ರಚನೆ ಮಾಡಿರುವುದು ಗಮನಾರ್ಹ ಸಾಧನೆ ಎಂದು ಸಾಹಿತಿ ಜೋಗಿ ತಿಳಿಸಿದರು.

ಟೇಲ್ಸ್ ಬೈ ಪರಿ-ಇಫ್ ಐ ಹ್ಯಾಡ್ ವಿಂಗ್ಸ್ ಅಂಡ್ ಅದರ್ ಸ್ಟೋರಿಸ್ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿ, ಮೊಬೈಲ್‌ನಲ್ಲಿ ಮುಳುಗಿರುವ ಮಕ್ಕಳ ನಡುವೆ ಪರಿಣಿತಾ ಪುಸ್ತಕ ಬರೆದಿರುವುದು ಸಾಹಿತ್ಯ ಲೋಕಕ್ಕೆ ಭರವಸೆಯ ಸಂಗತಿ. ಪರಿಣಿತಾ ಅವರ ಪುಸ್ತಕ ಗಳು ಕಲ್ಪನೆ, ವಿಜ್ಞಾನ ಮತ್ತು ಪರಿಸರ ಪ್ರಜ್ಞೆ ಯನ್ನು ಸುಂದರವಾಗಿ ಬೆಸೆದು ಮಕ್ಕಳಿಗೆ ಮಾತ್ರವಲ್ಲದೆ ದೊಡ್ಡವರಿಗೂ ಆಕರ್ಷಣೀಯ ವಾಗಿವೆ. ಎಐ ಯುಗದಲ್ಲಿ ಓದುವಿಕೆ ಮತ್ತು ಕಲ್ಪನಾಶಕ್ತಿಯನ್ನು ಪ್ರೋತ್ಸಾಹಿಸುವ ಈ ಸಾಧನೆ ಎಲ್ಲರಿಗೂ ಪ್ರೇರಣೆಯಾಗಿದೆ ಎಂದರು.

ನನ್ನ ಮಗಳು ಕನ್ನಡದಲ್ಲಿ ಬರೆದ ಪುಸ್ತಕವನ್ನು ಇಂಗ್ಲಿಷ್‌ಗೆ ಅನುವಾದಿಸುವಂತೆ ಕೇಳಿದಳು. ಆದರೆ ಪರಿಣಿತಾ ಈಗಾಗಲೇ ಇಂಗ್ಲಿಷ್‌ನಲ್ಲಿ ಬರೆಯುತ್ತಿದ್ದಾಳೆ. ವಿಜ್ಞಾನ, ಕಲ್ಪನೆ ಮತ್ತು ಪರಿಸರದ ಬಗ್ಗೆಯೂ ಆಕೆಯ ಕಥೆಗಳಲ್ಲಿ ಸುಂದರವಾಗಿ ಬಂದಿದೆ. ಓಝೋನ್ ರಂಧ್ರ ಗಳ ಬಗ್ಗೆಯ ಸಂಭಾಷಣೆ ಭೂಮಿಯ ರಕ್ಷಣೆಯ ಕುರಿತು ಆಕೆಯ ಕಾಳಜಿಯನ್ನು ತೋರಿಸುತ್ತದೆ. ಮುಂದಿನ ವರ್ಷಗಳಲ್ಲಿ ಮನುಷ್ಯರು ಯಾಂತ್ರಿಕರಾಗುವುದನ್ನು ತಡೆಯು ವುದು ಕೇವಲ ಕಲೆ ಮತ್ತು ಸಾಹಿತ್ಯ ಮಾತ್ರ ಎಂದರು.

ಈ ವೇಳೆ ವಿಧಾನ ಪರಿಷತ್ ಸದಸ್ಯ ಟಿ.ಎ. ಶರವಣ ಮಾತನಾಡಿ, ಮೊಬೈಲ್ ಕೈಯಲ್ಲಿಟ್ಟುಕೊಂಡು ಎಲ್ಲವನ್ನೂ ಮರೆಯುವ ಡಿಜಿಟಲ್ ಯುಗದಲ್ಲಿ ಪರಿಣಿತಾಳ ಸಾಧನೆ ಅದ್ಭುತವಾಗಿದೆ. ಆಕೆಯ ಪುಸ್ತಕಗಳನ್ನು ಓದ ಬೇಕೆಂಬ ಹಂಬಲ ನನ್ನಲ್ಲೂ ಮೂಡಿದೆ. ಸರಸ್ವತಿ ದೇವಿಯ ಕೃಪೆಯಿಂದ ಪರಿಣಿತಾ ಮತ್ತಷ್ಟು ಪುಸ್ತಕಗಳನ್ನು ಬರೆಯುವಂತಾಗಲಿ. ಪರಿಣಿತಾಳ ಮೊದಲ ಪುಸ್ತಕ ಟೇಲ್ಸ್ ಬೈ ಪರಿ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ದಾಖಲೆ ಮಾಡಿರುವುದು ಗಮನಾರ್ಹ.

ಪುಸ್ತಕ ಬಿಡುಗಡೆ ಕಾರ್ಯಕ್ರಮವನ್ನುವಿಧಾನ ಪರಿಷತ್ ಸದಸ್ಯ ಟಿ.ಎ.ಶರವಣ ಉದ್ಘಾಟಿಸಿದರು. ಈ ವೇಳೆ ಸಾಹಿತಿ ಜೋಗಿ, ಪರಿಣಿತಾ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಸ್ವಯಂ-ಗಣತಿಗೆ ಹೆಚ್ಚಿನ ಒತ್ತು: ಕೆ.ಎನ್.ರಮೇಶ್

ಬೆಂಗಳೂರು: ಭಾರತದ ಇತಿಹಾಸದಲ್ಲೇ ಮೊದಲ ಬಾರಿಗೆ ನಡೆಯಲಿರುವ ಸಂಪೂರ್ಣ ಡಿಜಿಟಲ್ ಜನಗಣತಿಯ ಮೊದಲ ಹಂತವಾದ ಮನೆಪಟ್ಟಿ ಮತ್ತು ವಸತಿ ಗಣತಿ 2027 ಕ್ಕೆ ಬೆಂಗಳೂರು ದಕ್ಷಿಣ ನಗರ ಪಾಲಿಕೆಯು ಸರ್ವ ಸನ್ನದ್ಧವಾಗಿದ್ದು, ಸಾರ್ವಜನಿಕರು ತಮ್ಮ ಮಾಹಿತಿಯನ್ನು ತಾವೇ ದಾಖಲಿಸಲು ಅನುವಾಗುವಂತೆ ವಿನ್ಯಾಸಗೊಳಿಸಲಾದ ವಿಶೇಷ ಸ್ವಯಂ-ಗಣತಿ ಪೋರ್ಟಲ್‌ನ್ನು ಪರಿಚಯಿಸಲಾ ಗಿದೆ ಪಾಲಿಕೆ ಆಯುಕ್ತ ಕೆ.ಎನ್.ರಮೇಶ್ ಅವರು ತಿಳಿಸಿದ್ದಾರೆ.

ಸಂಪ್ರದಾಯದಂತೆ, ಈ ಬೃಹತ್ ಕಾರ್ಯಕ್ರಮಕ್ಕೆ ರಾಜ್ಯದ ಸಾಂವಿಧಾನಿಕ ಗಣ್ಯರು ಮತ್ತು ಪ್ರಮುಖ ವ್ಯಕ್ತಿಗಳ ಗಣತಿಯ ಮೂಲಕ ಚಾಲನೆ ನೀಡಲಾಗು ವುದು. ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿ ವಾಸವಾಗಿರುವ ಗಣ್ಯ ವ್ಯಕ್ತಿಗಳು ಈ ವಿಶೇಷ ಪೋರ್ಟಲ್ ಬಳಸಿ ತಮ್ಮ ಮಾಹಿತಿ ದಾಖಲಿಸುವ ಮೂಲಕ ಸಾರ್ವಜನಿಕರಿಗೆ ಮಾದರಿಯಾಗಲಿದ್ದಾರೆ.

ಗಣ್ಯ ವ್ಯಕ್ತಿಗಳ ಪಾಲ್ಗೊಳ್ಳುವಿಕೆಯು ಈ ಡಿಜಿಟಲ್ ಅಭಿಯಾನಕ್ಕೆ ಹೆಚ್ಚಿನ ಶಕ್ತಿ ನೀಡಲಿದೆ. ಇದು ಜನಗಣತಿ ಪ್ರಕ್ರಿಯೆಯ ಸುಲಭತೆ ಮತ್ತು ಭದ್ರತೆಯ ಬಗ್ಗೆ ಜನ ಸಾಮಾನ್ಯರಲ್ಲಿ ಆತ್ಮವಿಶ್ವಾಸ ಮೂಡಿಸಲಿದೆ ಎಂದು ಪ್ರಧಾನ ಜನಗಣತಿ ಅಧಿಕಾರಿಗಳು ತಿಳಿಸಿದ್ದಾರೆ.

ಸಾರ್ವಜನಿಕರಲ್ಲಿ ಮನವಿ

ನಗರದ ಯೋಜನೆಗಳು, ಮೂಲಸೌಕರ್ಯ ಅಭಿವೃದ್ಧಿ ಮತ್ತು ಜನಕಲ್ಯಾಣ ಯೋಜನೆಗಳ ರೂಪಿಸುವಲ್ಲಿ ಜನಗಣತಿಯು ಪ್ರಮುಖ ಪಾತ್ರ ವಹಿಸುತ್ತದೆ. ಆದ್ದರಿಂದ, ಬೆಂಗಳೂರು ದಕ್ಷಿಣದ ಪ್ರತಿಯೊಬ್ಬ ನಾಗರಿಕರು ಈ ರಾಷ್ಟ್ರೀಯ ಕಾರ್ಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂದು ಕೋರಲಾಗಿದೆ. ಡಿಜಿಟಲ್ ಜನಗಣತಿಯು ಕೇವಲ ಅಂಕಿ-ಅಂಶಗಳ ಸಂಗ್ರಹವಲ್ಲ, ಇದು ನಮ್ಮ ನಗರದ ಭವಿಷ್ಯದ ಅಭಿವೃದ್ಧಿಗೆ ಬರೆಯುವ ಮುನ್ನುಡಿ. ನಾಗರಿಕರು ಸ್ವಯಂ-ಗಣತಿ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಆಶಿಸುತ್ತೇವೆ. ಎಂದು ಪ್ರಧಾನ ಜನಗಣತಿ ಅಧಿಕಾರಿ ಹಾಗೂ ಆಯುಕ್ತರು, ಬೆಂಗಳೂರು ದಕ್ಷಿಣ ನಗರ ಪಾಲಿಕೆ ಅಧಿಕಾರಿಗಳ ತಿಳಿಸಿದ್ದಾರೆ.

ಹೋಟೆಲ್ ಬಿಲ್‌ನಲ್ಲಿ ಗ್ಯಾಸ್ ಶುಲ್ಕ ಹಾಕುವಂತಿಲ್ಲ

ಬೆಂಗಳೂರು: ಕೇಂದ್ರ ಗ್ರಾಹಕ ಸಂರಕ್ಷಣಾ ಪ್ರಾಧಿಕಾರವು ಬೆಂಗಳೂರು ಹೋಟೆಲ್‌ಗಳಲ್ಲಿ ವಿಧಿಸಲಾಗುತ್ತಿದ್ದ ಎಲ್‌ಪಿಜಿ/ಫ್ಯೂಯಲ್ ಸರ್ ಚಾರ್ಜ್‌ಗೆ ನಿರ್ಬಂಧ ಹೇರಿದೆ.

ಗ್ರಾಹಕ ಸಂರಕ್ಷಣಾ ಕಾಯಿದೆಯಲ್ಲಿ ಅನ್ಯಾಯದ ವ್ಯಾಪಾರ ಪದ್ಧತಿಯಾಗಿದೆ ಎಂದು ಘೋಷಿಸಿದ್ದು, ಹೋಟೆಲ್‌ಗಳ ಸಂಘ ಈ ಆದೇಶವನ್ನು ಬೆಂಬಲಿಸಿ ಸದಸ್ಯರಿಗೆ ಸುತ್ತೋಲೆ ಕಳುಹಿಸಿದೆ. ಕೆಲವು ಹೋಟೆಲ್ ಮಾಲೀಕರು ಅನಿಲ ಬೆಲೆ ಏರಿಕೆಯ ಸವಾಲುಗಳನ್ನು ಎದುರಿಸುತ್ತಿದ್ದು, ಮೆನು ಬೆಲೆ ಹೆಚ್ಚಳ ಅನಿವಾರ್ಯ ಎನ್ನುತ್ತಿದ್ದಾರೆ. ಅಡುಗೆ ಅನಿಲದ ಬಿಕ್ಕಟ್ಟಿನ ನೆಪವೊಡ್ಡಿ ಗ್ರಾಹಕರಿಂದ ಅನಗತ್ಯವಾಗಿ ಹೆಚ್ಚಿನ ಹಣ ವಸೂಲಿ ಮಾಡುತ್ತಿದ್ದ ಹೋಟೆಲ್‌ಗಳ ವಿರುದ್ಧ ಕಟ್ಟುನಿಟ್ಟಿನ ಮಾರ್ಗಸೂಚಿಗಳನ್ನು ಹೊರಡಿಸಿದೆ.

ಬೆಂಗಳೂರಿನ ಹಲವು ಹೋಟೆಲ್‌ಗಳು ಮೆನು ಬೆಲೆ ಮತ್ತು ತೆರಿಗೆಗಳ ಹೊರತಾಗಿ, ಎಲ್‌ಪಿಜಿ ಚಾರ್ಜ್ ಹೆಸರಿನಲ್ಲಿ ಪ್ರತ್ಯೇಕ ಶುಲ್ಕವನ್ನು ಬಿಲ್‌ನಲ್ಲಿ ಸೇರಿಸುತ್ತಿದ್ದವು. ಈ ಬಗ್ಗೆ ವ್ಯಾಪಕ ದೂರುಗಳು ಬಂದ ಹಿನ್ನೆಲೆಯಲ್ಲಿ ಕ್ರಮ ಕೈಗೊಂಡಿರುವ ಸಿಸಿಪಿಎ, ಗ್ಯಾಸ್, ಇಂಧನ ಅಥವಾ ವಿದ್ಯುತ್ ವೆಚ್ಚಗಳು ವ್ಯವಹಾರದ ಕಾರ್ಯಾಚರಣೆಯ ಭಾಗವಾಗಿವೆ. ಇವುಗಳನ್ನು ಬಿಲ್‌ನಲ್ಲಿ ಪ್ರತ್ಯೇಕವಾಗಿ ತೋರಿಸಿ ಗ್ರಾಹಕರಿಂದ ವಸೂಲಿ ಮಾಡುವುದು ಗ್ರಾಹಕ ಸಂರಕ್ಷಣಾ ಕಾಯಿದೆ -2019ರ ಅಡಿಯಲ್ಲಿ ಅನ್ಯಾಯದ ವ್ಯಾಪಾರ ಪದ್ಧತಿ' ಎಂದು ಪರಿಗಣಿಸಲಾಗುತ್ತದೆ ಎಂದು ಸ್ಪಷ್ಟಪಡಿಸಿದೆ.

ಎಲ್‌ಪಿಜಿ ಶುಲ್ಕ ಕಾನೂನುಬಾಹಿರ: ಬಿಲ್‌ನಲ್ಲಿ ಪ್ರತ್ಯೇಕವಾಗಿ ಎಲ್‌ಪಿಜಿ ಶುಲ್ಕ ವಿಧಿಸುವುದು ಕಾನೂನುಬಾಹಿರ. ಈ ಬಗ್ಗೆ ನಮ್ಮ ಸದಸ್ಯ ಹೋಟೆಲ್‌ಗಳಿಗೆ ಸುತ್ತೋಲೆ ಕಳುಹಿಸುತ್ತೇವೆ. ಅಡುಗೆ ಅನಿಲದ ದರ ಹೆಚ್ಚಳದಿಂದ ನಷ್ಟವಾಗುತ್ತಿದ್ದರೆ, ಹೋಟೆಲ್‌ಗಳು ಮೆನು ಬೆಲೆಯನ್ನು ಶೇ. 5 ರಿಂದ 10 ರಷ್ಟು ಹೆಚ್ಚಿಸಲು ಆಲೋಚಿಸಬಹುದು, ಆದರೆ ಪ್ರತ್ಯೇಕವಾಗಿ ಶುಲ್ಕ ವಿಧಿಸುವುದನ್ನು ನಾವು ಬೆಂಬಲಿಸುವುದಿಲ್ಲ ಎಂದು ಬೆಂಗಳೂರು ಹೋಟೆಲ್‌ಗಳ ಸಂಘದ ಜಿ.ಕೆ. ಶೆಟ್ಟಿ ತಿಳಿಸಿದ್ದಾರೆ.

ತೆರಿಗೆ ಬಾಕಿ: 158 ಆಸ್ತಿಗಳ ಮುಟ್ಟುಗೋಲಿಗೆ ನಿರ್ಧಾರ

ಬೆಂಗಳೂರು: ಜಿಬಿಎಯು ನಗರದಲ್ಲಿ ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಮುಂದಾಗಿದ್ದು, ಒಟ್ಟು 158 ಆಸ್ತಿಗಳನ್ನು ಖರೀದಿಸುವ ಪ್ರಕ್ರಿಯೆಯನ್ನು ಆರಂಭಿಸಿದೆ. ಜಿಬಿಎಯು ಹಿಂದಿನಿಂದಲೂ ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡವರಿಗೆ ತೆರಿಗೆ ಪಾವತಿಸಲು ಹಲವು ಅವಕಾಶಗಳನ್ನು ನೀಡಿದ್ದರೂ, ಹಣ ಪಾವತಿಸದ ಕಾರಣ ಪಾಲಿಕೆಗಳು ಈ ನಿರ್ಧಾರಕ್ಕೆ ಬರಲಾಗಿದೆ ಎಂದು ತಿಳಿದು ಬಂದಿದ್ದು, ದಕ್ಷಿಣ, ಪಶ್ಚಿಮ ಮತ್ತು ಪೂರ್ವ ಪಾಲಿಕೆ ವ್ಯಾಪ್ತಿಗಳಲ್ಲಿ ಕ್ರಮವಾಗಿ 52, 55 ಮತ್ತು 51 ಆಸ್ತಿಗಳು ಗುರುತಿಸಲಾಗಿದೆ. ಹರಾಜಿನಲ್ಲಿ ಯಾರೂ ಮುಂದೆ ಬರದ ಆಸ್ತಿಗಳನ್ನು ನಿಗದಿತ ಕನಿಷ್ಠ ದರದಲ್ಲಿ ಪಾಲಿಕೆಗಳೇ ಸ್ವತಃ ಖರೀದಿಗೆ ಮುಂದಾಗಿವೆ.

ಅಧಿಕಾರಿಗಳ ಪ್ರಕಾರ, ಬಾಕಿದಾರರಿಗೆ ಹಲವು ಬಾರಿ ನೋಟಿಸ್‌ಗಳು, ಆಸ್ತಿ ಜಪ್ತಿ ಎಚ್ಚರಿಕೆಗಳು ಮತ್ತು ಸಾರ್ವ ಜನಿಕ ಹರಾಜು ಸೂಚನೆಗಳನ್ನು ನೀಡಲಾಗಿತ್ತು. ಆದರೂ ಯಾವುದೇ ಪ್ರತಿಕ್ರಿಯೆ ಸಿಗದ ಹಿನ್ನೆಲೆಯಲ್ಲಿ ಈ ಅಂತಿಮ ಕ್ರಮ ಕೈಗೊಳ್ಳಲಾಗಿದೆ. ಈ ಆಸ್ತಿಗಳನ್ನು ಖರೀದಿಸಿದ ಬಳಿಕ, ಬಾಕಿ ತೆರಿಗೆ, ದಂಡ, ಬಡ್ಡಿ ಮತ್ತು ಆಡಳಿತ ವೆಚ್ಚಗಳನ್ನು ಕಡಿತಗೊಳಿಸಿ ಉಳಿದ ಹಣವನ್ನು ಮೂಲ ಮಾಲೀಕರಿಗೆ ಹಿಂತಿರುಗಿಸಲಾಗುತ್ತದೆ. ನಂತರ ಆಸ್ತಿಗಳ ಮಾಲೀಕತ್ವ ಸಂಪೂರ್ಣವಾಗಿ ಪಾಲಿಕೆಗಳಿಗೆ ವರ್ಗಾವಣೆಯಾಗುತ್ತದೆ ಮತ್ತು ದಾಖಲೆಗಳನ್ನು ನವೀಕರಿಸಲಾಗುತ್ತದೆ ಎಂದು ಹೇಳಿದ್ದಾರೆ. ಹರಾಜಿನಲ್ಲಿ ಬಿಡ್ಡುದಾರರು ಭಾಗವಹಿಸದ ಹಿನ್ನೆಲೆಯಲ್ಲಿ ಈಗ ಪಾಲಿಕೆಯೇ ಆ ಸ್ವತ್ತುಗಳನ್ನು ಖರೀದಿಸಿ ತನ್ನ ಹೆಸರಿಗೆ ವರ್ಗಾಯಿಸಿ ಕೊಳ್ಳಲು ಮುಂದಾಗಿವೆ. ಮೊದಲ ಹಂತದಲ್ಲಿ ಬೊಮ್ಮನಹಳ್ಳಿ ವಲಯದ 22 ಹಾಗೂ ಜಯನಗರ ವಲಯದ 30 ಸ್ವತ್ತುಗಳನ್ನು ಪಾಲಿಕೆ ವಶಕ್ಕೆ ಪಡೆಯುವ ಪ್ರಕ್ರಿಯೆ ಆರಂಭವಾಗಿದೆ. ಪಾಲಿಕೆ ತನ್ನ ನಿಧಿಯಿಂದ ಮೊತ್ತ ಪಾವತಿಸಿ, ಬಾಕಿ ತೆರಿಗೆ ಕಡಿತಗೊಳಿಸಿದ ನಂತರ ಉಳಿದ ಹಣವನ್ನು ಮೂಲ ಮಾಲೀಕರ ಖಾತೆಗೆ ಜಮಾ ಮಾಡಲಿದೆ. ಒಂದು ತಿಂಗಳೊಳಗೆ ಬಾಕಿ ತೆರಿಗೆ ಪಾವತಿಸಿದ್ದಾರೆ.

ಕರಂದ್ಲಾಜೆ ಹೇಳಿಕೆಗೆ ಖಂಡನೆ

ಬೆಂಗಳೂರು: ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ತೃತೀಯ ಭಾಷೆಗೆ ಗ್ರೇಡಿಂಗ್ ವ್ಯವಸ್ಥೆ ಜಾರಿಗೆ ತಂದಿರುವ ರಾಜ್ಯ ಸರಕಾರದ ಕ್ರಮದ ವಿರುದ್ಧ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ನೀಡಿರುವ ಹೇಳಿಕೆ ಖಂಡಿಸಿ ಕರ್ನಾಟಕ ರಕ್ಷಣಾ ವೇದಿಕೆ ಸದಸ್ಯರು ನಗರದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು. ಆನಂದರಾವ್ ವೃತ್ತದಲ್ಲಿ ಜಮಾವಣೆಗೊಂಡ ಕರ್ನಾಟಕ ರಕ್ಷಣಾ ವೇದಿಕೆ ನಗರ ಜಿಲ್ಲಾ ಘಟಕದ ಮಹಿಳಾ ಕಾರ್ಯಕರ್ತರು ಶೋಭಾ ಕರಂದ್ಲಾಜೆ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಶೋಭಾ ಅವರ ಪ್ರತಿಕೃತಿ ದಹಿಸಲು ಯತ್ನಿಸಿದರು. ಪ್ರತಿಭಟನಕಾರರನ್ನು ಸ್ಥಳದಲ್ಲಿದ್ದ ಪೊಲೀಸರು ವಶಕ್ಕೆ ಪಡೆದುಕೊಂಡು ಬಳಿಕ ಬಿಡುಗಡೆ ಮಾಡಿದರು.

ವಿದ್ಯಾರ್ಥಿಗಳು ಸೇವಾ ಮನೋಭಾವ ರೂಢಿಸಿಕೊಳ್ಳಬೇಕು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಇಂದು ವಿದ್ಯಾರ್ಥಿ ವೇತನ ಪಡೆದು ವ್ಯಾಸಂಗ ಮಾಡುವ ವಿದ್ಯಾರ್ಥಿಗಳು ಭವಿಷ್ಯದಲ್ಲಿ ಉನ್ನತ ಸ್ಥಾನಗಳಿಗೆ ಏರಿದ ಮೇಲೆ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯ ಮಾಡಬೇಕು ಎಂದು ದೇವತಾ ಶ್ರೀರಾಮಯ್ಯ ಚೆಟ್ಟಿ ಚಾರಿಟಿ ಟ್ರಸ್ಟ್‌ನ ಹಿರಿಯ ಟ್ರಸ್ಟಿ ಸಕಲ ಶರತ್ ಕುಮಾರ್ ಹೇಳಿದರು.

ಬಸವನಗುಡಿಯ ನ್ಯಾಷನಲ್ ಕಾಲೇಜು, ದೇವತಾ ಶ್ರೀರಾಮಯ್ಯ ಚೆಟ್ಟಿ ಚಾರಿಟೇಬಲ್ ಟ್ರಸ್ಟ್‌ನಿಂದ ಆಯೋಜಿಸಿದ್ದ ವಿದ್ಯಾರ್ಥಿ ವೇತನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾವು ಬಡ ವಿದ್ಯಾರ್ಥಿಗಳನ್ನು ಗುರು ತಿಸಿ ಈ ವಿದ್ಯಾರ್ಥಿ ವೇತನ ನೀಡುತ್ತಿದ್ದೇವೆ. ಇದು ಸದ್ಬಳಕೆಯಾಗಬೇಕು. ಯಾವುದೇ ಕಾರಣಕ್ಕೂ ವ್ಯರ್ಥ ಮಾಡಿಕೊಳ್ಳಬೇಡಿ. ಈ ಧನಸಹಾಯದಿಂದ ಓದಿದ ವಿದ್ಯಾರ್ಥಿಗಳು ಮುಂದೆ ಉನ್ನತ ಸ್ಥಾನಕ್ಕೆ ಹೋದ ಮೇಲೆ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯ ಮಾಡುವ ಮನೋಭಾವ ರೂಢಿಸಿಕೊಳ್ಳಬೇಕು ಎಂದರು.

ದೇವತಾ ಫ್ಯಾಬ್ರಿಕ್ಸ್‌ನ ಸಹಮಾಲೀಕ ದೇವತಾ ಪ್ರದೀಪ್ ಮಾತನಾಡಿ, ದೂರದ ಊರುಗಳಿಂದ ಬರುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ದೇವತಾ ಶ್ರೀರಾಮಯ್ಯ ಚೆಟ್ಟಿ ಚಾರಿಟಿ ವತಿಯಿಂದ ಹಾಸ್ಟೆಲ್ ನಿರ್ಮಾಣ ಮಾಡಿದ್ದಾರೆ. ನಾವು ಪದವಿಗೆ ಮಾತ್ರ ವಿದ್ಯಾರ್ಥಿ ವೇತನ ನೀಡುವುದಿಲ್ಲ, ನೀವು ಇದನ್ನು ಸದ್ಬಳಕೆ ಮಾಡಿಕೊಂಡು ಓದಿ, ಹೆಚ್ಚಿನ ಅಂಕಗಳಿಸಿದರೆ, ಮುಂದಿನ ವ್ಯಾಸಂಗಕ್ಕೂ ನಾವು ಧನ ಸಹಾಯ ಮಾಡುತ್ತೇವೆ. ನಿಮ್ಮ ಫೋಕಸ್ ಓದಿನ ಕಡೆ ಇರಬೇಕು ಎಂದರು.

ನ್ಯಾಷನಲ್ ಎಜುಕೇಷನ್ ಸೊಸೈಟಿ (ಎನ್ ಇಎಸ್) ಗೌರವ ಕಾರ್ಯದರ್ಶಿ ವಿ.ವೆಂಕಟ ಶಿವರೆಡ್ಡಿ ಮಾತನಾಡಿ, ನಮ್ಮಲ್ಲಿ ಪ್ರವೇಶ ಪಡೆಯುವ ಬಹುತೇಕ ವಿದ್ಯಾರ್ಥಿಗಳು ಬಡ ಕುಟುಂಬದ ಹಿನ್ನೆಲೆಯಿಂದ ಬಂದಿದವರಾಗಿದ್ದಾರೆ. ಆರ್ಥಿಕ ಸಹಾಯ ಇರುವ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಈ ವಿದ್ಯಾರ್ಥಿ ವೇತನಕ್ಕೆ ಆಯ್ಕೆ ಮಾಡಿದ್ದೇವೆ. ಇದರಿಂದ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅನುಕೂಲವಾಗಲಿದೆ. ದೇವತಾ ಕುಟುಂಬ ಸದಸ್ಯರು ನಮ್ಮ ಕಾಲೇಜಿನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುತ್ತಿರುವುದು ಬಹಳ ಖುಷಿ ತಂದಿದೆ ಎಂದರು.

ಈ ವೇಳೆ 44 ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿ ವೇತನ ನೀಡಲಾಯಿತು. ನ್ಯಾಷನಲ್ ಎಜುಕೇಷನ್ ಸೊಸೈಟಿಅಧ್ಯಕ್ಷ ಎಚ್.ಎನ್.ಸುಬ್ರಹ್ಮಣ್ಯ, ಎನ್‌ಇಎಸ್ ಟ್ರಸ್ಟಿ ತಲ್ಲಂ ಆರ್.ದ್ವಾರಕನಾಥ್, ಸಹಾಯಕ ಉಪಾಧ್ಯಕ್ಷ ವಿ.ಮಂಜುನಾಥ್, ಜಂಟಿ ಕಾರ್ಯದರ್ಶಿ ಸುಧಾಕರ್ ಇಸ್ತೂರಿ, ಎನ್‌ಇಎಸ್‌ನ ಕಾರ್ಯಕಾರಿ ಸಮಿತಿ ಅಧ್ಯಕ್ಷ ಜಿ.ಎಂ.ರವೀಂದ್ರ, ಕಾಲೇಜಿನ ಪ್ರಾಂಶುಪಾಲ ಡಾ.ಪಿ.ಎಲ್.ರಮೇಶ್, ಉಪ ಪ್ರಾಂಶುಪಾಲ ಪ್ರೊ.ಅಲಕನಂದ ಇದ್ದರು.



ದೇವತಾ ರಾಮಯ್ಯ ಚಾರಿಟಿಯಿಂದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಿಸಲಾಯಿತು.

> ಮಾನಸಿಕ ಆರೋಗ್ಯದ ಕಡೆಗೆ ಗಮನ ನೀಡಬೇಕು. ಕೇವಲ ಶೈಕ್ಷಣಿಕ ಪ್ರಗತಿ ಒಂದೇ ಉದ್ಯೋಗಗಿಟ್ಟಿಕೊಡುವುದಿಲ್ಲ. ಇದರ ಜತೆಗೆ ಕೌಶಲ ಕೂಡ ಬಹಳ ಮುಖ್ಯ. ಕಾಲೇಜು ಆಡಳಿತ ಮಂಡಳಿಯು ಕೌಶಲ ಶಿಕ್ಷಣ ನೀಡಬೇಕು.
> -ದೇವತಾ ನರೇಶ್,
> ಟ್ರಸ್ಟಿ, ದೇವತಾ ಶ್ರೀರಾಮಯ್ಯ ಚೆಟ್ಟಿ ಚಾರಿಟಿ

ಸಮಾಚಾರ ಸಣ್ಣದಲ್ಲ

ಬೆಂಗಳೂರು-ಬೆಳಗಾವಿ ನಡುವೆ ವಿಶೇಷ ರೈಲು

ಬೆಳಗಾವಿ: ಗುಡ್ ಫ್ರೈಡೇ ಹಾಗೂ ಈಸ್ಟರ್ ಹಬ್ಬದ ಹಿನ್ನೆಲೆ ಪ್ರಯಾಣಿಕರ ದಟ್ಟಣೆ ನಿಯಂತ್ರಿಸಲು ನೈಋತ್ಯ ರೈಲ್ವೆಯು ಬೆಂಗಳೂರು ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಮತ್ತು ಬೆಳಗಾವಿ ನಡುವೆ ವಿಶೇಷ ಎಕ್ಸ್‌ಪ್ರೆಸ್ ರೈಲು ಓಡಿಸಲು ನಿರ್ಧರಿಸಿದೆ. ರೈಲು ಸಂಖ್ಯೆ 06503, ಏಪ್ರಿಲ್ 2ರ ಗುರುವಾರ ಸಂಜೆ 7 ಗಂಟೆಗೆ ಬೆಂಗಳೂರಿನ ಎಸ್‌ಎಂವಿಟಿ ನಿಲ್ದಾಣದಿಂದ ಹೊರಟು, ಮರುದಿನ ಶುಕ್ರವಾರ ಬೆಳಗ್ಗೆ 7:35ಕ್ಕೆ ಬೆಳಗಾವಿಗೆ ತಲುಪಲಿದೆ (ಏಕಮುಖ ಸಂಚಾರ). ರೈಲು ಸಂಖ್ಯೆ 06504, ಏಪ್ರಿಲ್ 5ರ ಭಾನುವಾರ ಸಂಜೆ 5:30ಕ್ಕೆ ಬೆಳಗಾವಿ ನಿಲ್ದಾಣದಿಂದ ಹೊರಟು, ಮರುದಿನ ಸೋಮವಾರ ಬೆಳಿಗ್ಗೆ 5 ಗಂಟೆಗೆ ಬೆಂಗಳೂರು ಎಸ್‌ಎಂವಿಟಿ ನಿಲ್ದಾಣಕ್ಕೆ ಆಗಮಿಸಲಿದೆ (ಏಕಮುಖ ಸಂಚಾರ). ಈ ವಿಶೇಷ ರೈಲುಗಳು ಒಟ್ಟು 19 ಐಸಿಎಫ್ ಬೋಗಿಗಳನ್ನು ಹೊಂದಿದ್ದು , ತನ್ನ ಮಾರ್ಗ ಮಧ್ಯದ ಸಂಚಾರದಲ್ಲಿ ಚಿಕ್ಕಬಾಣಾವರ, ತುಮಕೂರು, ಅರಸೀಕೆರೆ, ಬೀರೂರು, ದಾವಣಗೆರೆ, ಹರಿಹರ, ಹಾವೇರಿ, ಹುಬ್ಬಳ್ಳಿ, ಧಾರವಾಡ, ಅಳ್ನಾವರ , ಲೋಂಡಾ ಹಾಗೂ ಖಾನಾಪುರ ರೈಲು ನಿಲ್ದಾಣಗಳ ಮೂಲಕ ಸಂಚರಿಸಲಿವೆ.

ಕೌಟುಂಬಿಕ ಕಲಹ: ಯುವಕ ಆತ್ಮಹತ್ಯೆ

ಚಿಕ್ಕಮಗಳೂರು: ಯುವಕನೊಬ್ಬ ಭದ್ರಾ ಬಲ ದಂಡೆ ನಾಲೆ ಸೇತುವೆಯಿಂದ ಹಾರಿ ಆತ್ಮಹತ್ಯೆಗೆ ಶರಣಾದ ಘಟನೆ ತರೀಕೆರೆ ತಾಲೂಕಿನ ಬಾವಿಕೆರೆ ಗ್ರಾಮದಲ್ಲಿ ನಡೆದಿದೆ. ಆತ್ಮಹತ್ಯೆಗೆ ಶರಣಾದ ಯುವಕನನ್ನು ಆಂಧ್ರ ಪ್ರದೇಶ ಮೂಲದ ವಿನಯ್ ರೆಡ್ಡಿ (26) ಎಂದು ಗುರುತಿಸಲಾಗಿದೆ. ಆತ್ಮಹತ್ಯೆಗೆ ಕೌಟುಂಬಿಕ ಕಲಹ ಕಾರಣ ಇರಬಹುದು ಎಂಬ ಶಂಕೆ ವ್ಯಕ್ತವಾಗಿದೆ. ಭದ್ರಾ ಡ್ಯಾಂನಿಂದ ಚಿತ್ರದುರ್ಗಕ್ಕೆ ನೀರು ಸರಬರಾಜು ಮಾಡುವ ಭೋಪಾಲ್ ಮೂಲದ ಕಂಪನಿಯಲ್ಲಿ ಮೇಲ್ವಿಚಾರಕನಾಗಿ ಅವರು ಕೆಲಸ ಮಾಡುತ್ತಿದ್ದರು. ಅಗ್ನಿಶಾಮಕ ಸಿಬ್ಬಂದಿ, ಮುಳುಗು ತಜ್ಞ ಮಲ್ಪೆ ಈಶ್ವರ್, ಯುವಕನ ಶವ ಪತ್ತೆ ಮಾಡಿದ್ದಾರೆ. ಈ ಸಂಬಂಧ ಲಕ್ಕವಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವರದಕ್ಷಿಣೆ ಕಿರುಕುಳ: ಗೃಹಿಣಿ ಆತ್ಮಹತ್ಯೆ

ರಾಯಚೂರು: ಗಂಡನ ಮನೆಯವರ ವರದಕ್ಷಿಣೆ ಕಿರುಕುಳದಿಂದ ಗೃಹಿಣಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾದ ಪ್ರಕರಣ ಇಲ್ಲಿನ ಮಹಿಳಾ ಠಾಣೆ ಯಲ್ಲಿ ದಾಖಲಾಗಿದೆ. ನಗರದ ವಿಜ್ಞಾನ ಕೇಂದ್ರದಲ್ಲಿ ಕಂಪ್ಯೂಟರ್ ಆಪರೇಟರ್ ಆಗಿ ವಿದ್ಯಾ ಕಾರ್ಯ ನಿರ್ವಹಿಸುತ್ತಿದ್ದ ವಿದ್ಯಾ (30) ವರದಕ್ಷಿಣೆ ಕಿರುಕುಳ ತಾಳದೇ ನೇಣು ಬಿಗಿದುಕೊಂಡು ಸಾವನ್ನಪ್ಪಿದ್ದಾರೆ ಎಂದು ಆರೋಪಿಸಲಾಗಿದೆ. ಮೃತಳ ತಂದೆ ಮೃತ್ಯುಂಜಯ ಸ್ವಾಮಿ ಈ ಸಂಬಂಧ ಠಾಣೆಗೆ ದೂರು ನೀಡಿದ್ದಾರೆ. ನಗರದ ಜ್ಯೋತಿ ಕಾಲೋನಿಯ ನಿವಾಸಿ ಮಂಜುನಾಥ ಜತೆ ಎರಡು ವರ್ಷಗಳ ಹಿಂದೆ ಮದುವೆಯಾಗಿತ್ತು. ಕಳೆದ ಆರು ತಿಂಗಳಿನಿಂದ ನಿತ್ಯ ಕುಡಿದು ಬಂದು ವರದಕ್ಷಿಣೆಗಾಗಿ ಪತಿ ಮಂಜುನಾಥ ಕಿರುಕುಳ ನೀಡುತ್ತಿದ್ದರು. ಇದಕ್ಕೆ ಮೃತಳ ಅತ್ತೆ ಸಾಥ್ ನೀಡುತ್ತಿದ್ದರು ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಈ ಸಂಬಂಧ ಪೊಲೀಸರು ತನಿಖೆ ಕೈಗೊಂಡಿದ್ದಾರೆ.



ಹಿಂದಿ ಭಾಷೆ ರದ್ದು ಮಾಡುವ ಮೂಲಕ ಮಕ್ಕಳ ಬದುಕಿಗೆ ಕಲ್ಲು ಹಾಕಿದ ಸರಕಾರ: ಆರ್.ಅಶೋಕ

ಹಿಂದಿ ರದ್ದು: ಸರಕಾರದ ಮೇಲೆ ಬಿಜೆಪಿ ಕೆಂಡ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ತೃತೀಯ ಭಾಷೆ ಹಿಂದಿಯನ್ನು ರದ್ದು ಮಾಡುವ ಮೂಲಕ ಕಾಂಗ್ರೆಸ್ ಸರಕಾರ ಮಕ್ಕಳ ಬದುಕಿಗೆ ಕಲ್ಲು ಹಾಕಿದೆ. ಕನ್ನಡದ ಮೇಲಿನ ಪ್ರೀತಿಯಿಂದ ಸರಕಾರ ಈ ತೀರ್ಮಾನ ಮಾಡಿಲ್ಲ. ಇದು ಕೇವಲ ರಾಜಕಾರಣ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಟೀಕಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಿಕ್ಷಣ ಇಲಾಖೆಯಿಂದ ಏಕಾಏಕಿ ತೃತೀಯ ಭಾಷೆ ಹಿಂದಿ ತೆಗೆದುಹಾಕಲಾಗಿದೆ. ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಿರುವ ಸಮಯದಲ್ಲೇ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಲಕ್ಷಾಂತರ ವಿದ್ಯಾರ್ಥಿಗಳು ಹಿಂದಿ ಪಾಠ ಓದಿ ಅಭ್ಯಾಸ ಮಾಡಿದ್ದಾರೆ. ಈಗ ದಿಢೀರನೆ ಈ ತೀರ್ಮಾನ ಕೈಗೊಂಡಿರುವುದು ದೊಡ್ಡ ಸಮಸ್ಯೆಯಾಗಿದೆ. 1918 ರಲ್ಲಿ ಮಹಾತ್ಮ ಗಾಂಧೀಜಿ ಹಿಂದಿ ಪ್ರಚಾರ ಸಮಿತಿಯ ಅಧ್ಯಕ್ಷರಾಗಿದ್ದರು. ದಕ್ಷಿಣ ಭಾರತದಲ್ಲೂ ಅವರೇ ಈ ಸಮಿತಿ ಆರಂಭಿಸಿದರು. ಈ ಇತಿಹಾಸ ಗೊತ್ತಿಲ್ಲದ ಕಾಂಗ್ರೆಸ್ ನಾಯಕರು ಏಕಾಏಕಿ ಹಿಂದಿ ರದ್ದು ಮಾಡಿದ್ದಾರೆ. ಮಕ್ಕಳ ವಿಚಾರದಲ್ಲಿ ನಾವು ಸೂಕ್ಷ್ಮವಾಗಿರಬೇಕು ಎಂದರು.

ಇಂಗ್ಲಿಷ್ ಸಂವಹನ ಭಾಷೆಯಾಗಿದ್ದು, ಎಲ್ಲ ದೇಶಗಳಲ್ಲಿ ಬಳಕೆಯಲ್ಲಿದೆ. ಉರ್ದು ಕೂಡ ನಮ್ಮ ದೇಶದ್ದಲ್ಲವಾದರೂ ಅದನ್ನು ನಾವು ಕಲಿಯಬೇಕಿದೆ. ತಮಿಳು, ಮಲಯಾಳಂ, ತೆಲುಗು ಎಲ್ಲವೂ ನಮ್ಮ ದೇಶದ ಭಾಷೆಯಾಗಿದೆ. ಹಿಂದಿ ಓದಿ ಅದರಲ್ಲಿ ಹೆಚ್ಚು ಅಂಕ ಗಳಿಸಬೇಕೆಂಬ ನಿರೀಕ್ಷೆಯಲ್ಲಿದ್ದವರಿಗೆ ಸರ್ಕಾರದ ನಿರ್ಧಾರದಿಂದ ನಿರಾಸೆಯಾಗಿದೆ. ಇದು ಕಾಂಗ್ರೆಸ್ ತೋರಿದ ಹೇಡಿತನ ಹಾಗೂ ಮಹಾತ್ಮ ಗಾಂಧೀಜಿಗೆ ಮಾಡಿರುವ ಅಪಮಾನ ಎಂದರು.

ನರೇಗಾದಲ್ಲಿ ಮಹಾತ್ಮ ಗಾಂಧೀಜಿ ಹೆಸರು ತೆಗೆದಾಕ್ಷಣ ಏನೋ ಅನಾಹುತವಾಗಿದೆ ಎಂದು ಕಾಂಗ್ರೆಸ್ ನಾಯಕರು ಬಾಯಿ ಬಡಿದುಕೊಂಡರು. ಆದರೆ ಈಗ ಯಾರೂ ಮಾತಾಡುತ್ತಿಲ್ಲ. ದೇಶದ ಮೊದಲ ಪ್ರಧಾನಿ ಜವಹರಲಾಲ್ ನೆಹರು ತ್ರಿಭಾಷಾ ಸೂತ್ರ ತಂದಿದ್ದರು. ಮುಂದೆ ಇಂದಿರಾಗಾಂಧಿ ಅದಕ್ಕೆ ಇನ್ನಷ್ಟು ಒತ್ತು ನೀಡಿದ್ದರು. ತಮಿಳುನಾಡಿನಲ್ಲಿ ಹೀಗೆ ಮಾಡಿದ್ದಾರೆ ಎಂದಾಕ್ಷಣ ಇಲ್ಲೂ ಅದನ್ನೇ ಜಾರಿ ಮಾಡುತ್ತೇವೆ ಎಂದಿದ್ದಾರೆ. ತಮಿಳುನಾಡು ಮುಸ್ಲಿಮರು ಶುದ್ಧ ತಮಿಳು ಮಾತಾಡುತ್ತಾರೆ ಹಾಗೂ ಕೇರಳದಲ್ಲಿ ಮುಸ್ಲಿಮರು ಶುದ್ಧ ಮಲಯಾಳಂ ಮಾತಾಡುತ್ತಾರೆ. ಆದರೆ ಕರ್ನಾಟಕದ ಮುಸ್ಲಿಮರು ಸ್ವಚ್ಛವಾಗಿ ಕನ್ನಡ ಮಾತಾಡುವುದಿಲ್ಲ. ಇನ್ನು ನಮ್ಮೂಕೆ ನಿಮ್ಮೂಕೆ ಎಂದೇ ಅವರು ಹೇಳುತ್ತಾರೆ. ಇಂತಹವರು ಶುದ್ಧ ಕನ್ನಡ ಮಾತಾಡಲಿ ಎಂಬ ಉದ್ದೇಶ ಕಾಂಗ್ರೆಸ್ ಸರಕಾರಕ್ಕೆ ಇಲ್ಲ ಎಂದರು. ಕನ್ನಡದ ಮಕ್ಕಳು ಐಎಎಸ್, ಐಪಿಎಸ್ ಓದಿ ಹಿಂದಿ ರಾಜ್ಯಗಳಿಗೆ ಹೋದರೆ ಅಲ್ಲಿ ಯಾವ ಭಾಷೆ ಮಾತಾಡುತ್ತಾರೆ? ಕೇವಲ ಪ್ರಧಾನಿ ಮೋದಿಯವರ ಮೇಲಿನ ಸಿಟ್ಟಿಗೆ ಹೀಗೆ ಮಾಡಿದ್ದಾರೆ. ಇದು ಕೇವಲ ಮತ ರಾಜಕಾರಣ ಹಾಗೂ ಮಕ್ಕಳ ಬದುಕಿಗೆ ಕಲ್ಲು ಹಾಕುವ ಕೆಲಸ. ಮುಂದೆ ರಾಷ್ಟ್ರೀಯ ಶಿಕ್ಷಣ ನೀತಿ ಬಿಜೆಪಿ ಜಾರಿ ಮಾಡಲಿದೆ. ಇದರಲ್ಲಿ ಭಾಷೆಯ ಆಯ್ಕೆಗಳಿವೆ ಎಂದರು.

ಹಿಂದಿ ವಿಚಾರದಲ್ಲಿ ಕಾಂಗ್ರೆಸ್‌ನಿಂದ ದೇಶದ್ರೋಹ

ಕಾಂಗ್ರೆಸ್‌ನವರೇ ತ್ರಿಭಾಷಾ ನೀತಿ ಜಾರಿಗೆ ತಂದಿದ್ದರು. ಹಿಂದಿ ಯಾಕೆ ಬೇಡ? ಹಿಂದಿ ವಿಚಾರದಲ್ಲಿ ಕಾಂಗ್ರೆಸ್ ಸರಕಾರ ದೇಶ ದ್ರೋಹ ಮಾಡುತ್ತಿದೆ ಎಂದು ಬಿಜೆಪಿ ಶಾಸಕ ಅಶ್ವತ್ಥ ನಾರಾಯಣ್ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಗ್ರೆಸ್‌ನವರು ಈಗ ತ್ರಿಭಾಷಾ ಬೇಡ, ದ್ವಿಭಾಷಾ ಬೇಕು ಅಂತಿದ್ದಾರೆ. ತ್ರಿಭಾಷಾ ನೀತಿಯಲ್ಲಿ ಹಿಂದಿನೇ ಓದಬೇಕು ಅಂತೇನೂ ಇಲ್ಲ. ರಾಜ್ಯ ಸರಕಾರ ಸಣ್ಣತನ ತೋರಿದೆ. ಇಂಥ ನಿರ್ಧಾರಗಳಿಂದಾಗಿ ಶಿಕ್ಷಣದಲ್ಲಿ ಗುಣಮಟ್ಟ ಹೋಗಿದೆ. 72 ಕೋಟಿ ಅನುದಾನ ಶಿಕ್ಷಣಕ್ಕೆ ಬಳಸ್ತಾರೆ, ಯಾವ ಗುಣಮಟ್ಟದ ಶಿಕ್ಷಣ ಕೊಡ್ತಿದ್ದಾರೆ?. ರಾಜ್ಯ ಅಧೋಗತಿಗೆ ತರ್ತಿದ್ದಾರೆ. ಹಿಂದಿ ತೆಗೆದು ದೇಶ ಹೇಗೆ ಕಟ್ಟುತ್ತಾರೆ ಎಂದು ಪ್ರಶ್ನಿಸಿದ ಅವರು, ದೇಶದಲ್ಲಿ ಸಂಪರ್ಕ ಸಾಧಿಸಲು ಹಿಂದಿ ಬೇಕು. ಕಾಂಗ್ರೆಸ್ ಸಣ್ಣತನದ ರಾಜಕೀಯ ಮಾಡ್ತಿದೆ. ತಮ್ಮ ಸ್ವಾರ್ಥಕ್ಕಾಗಿ ಕಾಂಗ್ರೆಸ್ ಏನು ಬೇಕಾದರೂ ಮಾಡುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕುಕ್ಕರ್ ಬಾಂಬ್ ಬ್ಲಾಸ್ಟ್ ಆರೋಪಿ ಶಾರೀಖ್ ತಪ್ಪೊಪ್ಪಿಗೆ ವಿಚಾರವಾಗಿ ಪ್ರತಿಕ್ರಿಯಿಸಿ, ಕುಕ್ಕರ್ ಬಾಂಬ್ ಬ್ಲಾಸ್ಟ್ ಆದಾಗ ಕಾಂಗ್ರೆಸ್‌ನವರು ಸಮರ್ಥನೆ ಮಾಡಿಕೊಳ್ಳುವ ಪ್ರಯತ್ನಪಟ್ಟಿದ್ರು. ಕಾಂಗ್ರೆಸ್ ಓಲೈಕೆ, ತುಷ್ಟೀಕರಣಕ್ಕೆ ಬೆಲೆ ಕೊಡುತ್ತದೆ. ಈಗ ಶಾರೀಖ್ ತಪ್ಪೊಪ್ಪಿಕೊಂಡಿರೋ ಹಿನ್ನೆಲೆಯಲ್ಲಿ ಕಾಂಗ್ರೆಸ್‌ನವರು ಏನು ಹೇಳ್ತಾರೋ ನೋಡಬೇಕು. ಕಾಂಗ್ರೆಸ್‌ನ ಬಂಡವಾಳ ಈಗ ಬಯಲಾಗಿದೆ. ಕಾಂಗ್ರೆಸ್‌ನವರು ಬ್ರದರ್ಸ್ ಅಂದಿದ್ರು. ಈಗ ಏನು ಹೇಳ್ತಾರೆ ಎಂದು ಪ್ರಶ್ನಿಸಿದರು.

ಬಿಜೆಪಿ ಗೆಲುವು

ದಾವಣಗೆರೆ ಹಾಗೂ ಬಾಗಲಕೋಟೆ ಉಪ ಚುನಾವಣೆಯಲ್ಲಿ ಬಿಜೆಪಿ ಗೆಲ್ಲಲಿದೆ. ದಾವಣಗೆರೆಯಲ್ಲಿ ಮುಸ್ಲಿಮರು ಕಾಂಗ್ರೆಸ್‌ಗೆ ವಿರುದ್ಧವಾಗಿದ್ದಾರೆ. ಬಾಗಲಕೋಟೆಯಲ್ಲೂ ಜನರು ಕಾಂಗ್ರೆಸ್‌ಗೆ ವಿರುದ್ಧ ಇದ್ದಾರೆ. ಸಿಎಂ ಸಿದ್ದರಾಮಯ್ಯ ಅವರಿಗೆ ಕುರ್ಚಿ ಭಯ ಇರುವುದರಿಂದ ಪ್ರಚಾರಕ್ಕೆ ಖುದ್ದಾಗಿ ಹೋಗುತ್ತಿದ್ದಾರೆ. ಸಚಿವ ಜಮೀರ್ ಪ್ರಚಾರದಲ್ಲಿ ಭಾಗವಹಿಸುತ್ತಿಲ್ಲ. ಡಿ.ಕೆ.ಶಿವಕುಮಾರ್ ಕೂಡ ಭಯದಲ್ಲಿದ್ದಾರೆ. ಶಾಮನೂರು ಶಿವಶಂಕರಪ್ಪ ಮುಸ್ಲಿಮರಿಗೆ ಟಿಕೆಟ್ ನೀಡುತ್ತೇನೆಂದು ಹೇಳಿದ್ದರು. ಆದರೆ ಈಗ ಕುಟುಂಬದವರಿಗೆ ಟಿಕೆಟ್ ನೀಡಲಾಗಿದೆ. ಸರಕಾರ ಪ್ರತಿ ವರ್ಷ ಸಾಲ ಮಾಡುತ್ತಿದೆ. ಬಡವರಿಗೆ ಯಾವುದೇ ಯೋಜನೆ ಸಿಗುತ್ತಿಲ್ಲ ಎಂದು ಆರ್.ಅಶೋಕ ಹೇಳಿದರು.

> ಧರ್ಮಸ್ಥಳ ಹಾಗೂ ಕದ್ರಿ ದೇವಸ್ಥಾನದಲ್ಲಿ ಕುಕ್ಕರ್ ಬಾಂಬ್ ಸ್ಫೋಟ ಮಾಡಲು ಪ್ಲಾನ್ ಮಾಡಿದ್ದ ಭಯೋತ್ಪಾದಕ ತಪ್ಪನ್ನು ಒಪ್ಪಿಕೊಂಡಿದ್ದಾನೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಈತನನ್ನು ಹೀ ಈಸ್ ಮೈ ಬ್ರದರ್ ಎಂದಿದ್ದರು. ಮಂಜುನಾಥನನ್ನು ಕಂಡರೆ ಕಾಂಗ್ರೆಸ್‌ಗೆ ಆಗಲ್ಲ. ಆದ್ದರಿಂದ ಈಗ ಕಾಂಗ್ರೆಸ್ ಸ್ಪಷ್ಟನೆ ನೀಡಬೇಕಿದೆ. ಮತಕ್ಕಾಗಿ ದೇಶದ ವಿರುದ್ಧ ಹೋದರೂ ಅವರನ್ನು ಬ್ರದರ್ ಎನ್ನುತ್ತಾರೆ.
>
> **- ಆರ್.ಅಶೋಕ,** ಪ್ರತಿಪಕ್ಷ ನಾಯಕ

ಬಿಜೆಪಿ ಅಭ್ಯರ್ಥಿಗಳನ್ನು ಯತ್ನಾಳ್ ಸೋಲಿಸಲಿ

ವಿಜಯಪುರ: ಬಿಜೆಪಿಯಿಂದ ಉಚ್ಚಾಟಿತರಾಗಿರುವ ಶಾಸಕ ಯತ್ನಾಳ್ ಅವರು ಸ್ವಾಭಿಮಾನ, ಮರ್ಯಾದೆ ಇದ್ದರೆ ಬಿಜೆಪಿ ಅಭ್ಯರ್ಥಿಗಳನ್ನು ಸೋಲಿಸಲಿ ಎಂದು ಸಚಿವ ಡಾ.ಎಂ.ಬಿ. ಪಾಟೀಲ್, ಶಾಸಕ ಯತ್ನಾಳ್ ಅವರಿಗೆ ಸವಾಲು ಹಾಕಿದರು.

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿಜಯೇಂದ್ರ ನೇತೃತ್ವದಲ್ಲಿ ಬಿಜೆಪಿ ಚುನಾವಣೆ ಎದುರಿಸುತ್ತಿದೆ, ಅವರ ವಿರುದ್ಧ ಟೀಕಾ ಪ್ರಹಾರ ನಡೆಸುವ ಯತ್ನಾಳ್ ಅವರು ಈಗ ಅವರ ನೇತೃತ್ವದಲ್ಲಿ ನಡೆಯುವ ಚುನಾವಣೆಗೆ ಬಿಜೆಪಿ ಅಭ್ಯರ್ಥಿಗಳ ಪರವಾಗಿ ಪ್ರಚಾರ ನಡೆಸುತ್ತಾರೆಯೇ? ಅಥವಾ ಬಿಜೆಪಿ ಪರ ಪ್ರಚಾರ ನಡೆಸಿದ್ದೇನೆ ಮರಳಿ ಪಕ್ಷಕ್ಕೆ ತೆಗೆದುಕೊಳ್ಳಿ ಎಂದು ಬಿಜೆಪಿ ನಾಯಕರಿಗೆ ಕೈವೊಡ್ಡುವ ಪ್ರಯತ್ನ ಮಾಡುತ್ತಿದ್ದಾರೆ. ಮಾತು ಎತ್ತಿದರೆ ಸಾಕು ಯಡಿಯೂರಪ್ಪ ಕುಟುಂಬ, ವಿಜಯೇಂದ್ರ ಎಂದು ವಾಗ್ದಾಳಿ ನಡೆಸುವ ಅವರು ಈಗ ವಿಜಯೇಂದ್ರ ನೇತೃತ್ವದಲ್ಲಿ ಬಿಜೆಪಿ ಚುನಾವಣೆಗೆ ಹೇಗೆ ಬೆಂಬಲ ನೀಡುತ್ತಾರೆ? ಈ ಯತ್ನಾಳರಿಗೆ ಸ್ವಾಭಿಮಾನ, ಮಾನ ಮರ್ಯಾದೆ ಇದ್ದರೆ ಬಿಜೆಪಿ ಅಭ್ಯರ್ಥಿಗಳನ್ನು ಸೋಲಿಸಲಿ ಎಂದರು.

'ವಿಜಯೇಂದ್ರ ನೇತೃತ್ವದಲ್ಲಿ ಚುನಾವಣೆ ನಡೆಯುತ್ತಿದೆ, ವಿಜಯೇಂದ್ರ ಉಳಿಸೋ ಕೆಲಸ ಮಾಡುತ್ತಾರೆಂದರೆ ಮಾಡಲಿ, ಆದರೆ ಯತ್ನಾಳ ಏನೇ ಮಾಡಿದರೂ ನಾವೇ ಗೆಲ್ಲುತ್ತೇವೆ, ದಾವಣಗೆರೆ ಹಾಗೂ ಬಾಗಲಕೋಟೆ ಉಪ ಚುನಾವಣೆಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಸೋತರೆ ವಿಜಯೇಂದ್ರ ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನದಿಂದ ನಿಶ್ಚಿತವಾಗಿ ಬದಲಾಗುತ್ತಾರೆ, ವಿಜಯೇಂದ್ರ ಬದಲಾವಣೆ ಆಗೋದು ಯತ್ನಾಳಗೆ ಬೇಕಾಗಿದೆಯೋ, ಇಲ್ಲವೋ? ಅವರು ಅರ್ಥ ಮಾಡಿಕೊಳ್ಳಲಿ ಯತ್ನಾಳ್ ಉದ್ದೇಶ ವಿಜಯೇಂದ್ರ ಉಳಿಸುವುದೇ ಆಗಿದ್ದರೆ ಮಾತು ಮಾತಿಗೆ ಯಡಿಯೂರಪ್ಪ ಮಗ ಎಂದು ಹೇಳುವುದೇಕೆ ಎಂದು ಪ್ರಶ್ನಿಸಿದರು.

> ಉಪಚುನಾವಣೆಯಲ್ಲಿ ಪ್ರಚಾರ ಮಾಡಿ ವಾಪಸ್ ಬಿಜೆಪಿಗೆ ಹೋಗುವ ಯೋಚನೆಯಲ್ಲಿ ಯತ್ನಾಳ್ ಇದ್ದಾರೆ. ಈ ಉಪ ಚುನಾವಣೆಯಲ್ಲಿ ಬಿಜೆಪಿ ಪರವಾಗಿ ಪ್ರಚಾರ ಮಾಡಿದ್ದೇನೆ ಎಂದು ಹೇಳಿ ಪುನ: ಬಿಜೆಪಿ ನಾಯಕರಿಗೆ ಕೈವೊಡ್ಡಿ ಪಕ್ಷಕ್ಕೆ ಮರಳುವ ಪ್ಲಾನ್ ಮಡುತ್ತಿದ್ದಾರೆ.
>
> **-ಎಂ.ಬಿ.ಪಾಟೀಲ್,** ಸಚಿವ

ಮೇಲುಕೋಟೆ ವೈರಮುಡಿ ಜಾತ್ರಾ ಮಹೋತ್ಸವ

ಗಜೇಂದ್ರಮೋಕ್ಷ ಉತ್ಸವ ವೈಭವ

ಮೇಲುಕೋಟೆ: ವೈರಮುಡಿ ಜಾತ್ರಾ ಮಹೋತ್ಸವದ ಅಂಗವಾಗಿ 6ನೇ ತಿರುನಾಳ್ ನಿಮಿತ್ತ ಸೋಮವಾರ ಚೆಲುವನಾರಾಯಣ ಸ್ವಾಮಿಯ ಗಜೇಂದ್ರ ಮೋಕ್ಷ ಉತ್ಸವ ವೈಭವದಿಂದ ನಡೆಯಿತು.

ಪ್ರತಿ ವರ್ಷದಂತೆ ಇಲ್ಲಿನ ಪಂಚ ಕಲ್ಯಾಣಿಯ ಗಜೇಂದ್ರ ವರದಾ ಸನ್ನಿಧಿಯಲ್ಲಿ ರಾಜಮುಡಿ ಕಿರೀಟಧಾರಿಯಾದ ಚೆಲುವ ನಾರಾಯಣ ಸ್ವಾಮಿಯನ್ನು ಭಕ್ತರು ಕಣ್ತುಂಬಿಕೊಂಡರು. ಗಜೇಂದ್ರ ಮೋಕ್ಷ ಅಲಂಕಾರದಲ್ಲಿ ಕಂಗೊಳಿಸುತ್ತಿದ್ದ ಸ್ವಾಮಿಗೆ ವಿಶೇಷ ಪೂಜಾ ಕೈಂಕರ್ಯ ನೆರವೇರಿಸಲಾಯಿತು.

ಪಂಚ ಕಲ್ಯಾಣಿಯಿಂದ ಪಂಚ ನಾದಸ್ವರ ಮತ್ತು ಗೋಷ್ಠಿಯ ಹಿಮ್ಮೇಳದೊಂದಿಗೆ ಹೊರಟ ಭವ್ಯ ಮೆರವಣಿಗೆಯು ರಾಜ ಬೀದಿಯ ಮೂಲಕ ಸ್ವಾಮಿಯ ಸನ್ನಿಧಿಯಾದ ದೇವಾಲಯವನ್ನು ತಲುಪಿತು. ರಾತ್ರಿ ದೇವಾಲಯದ ಒಳಾಂಗಣದಲ್ಲಿ ಆನೆ ವಸಂತ ಉತ್ಸವ ಹಾಗೂ ರಾಜಬೀದಿಯಲ್ಲಿ ನೂರಾರು ಭಕ್ತರ ಸಮ್ಮುಖದಲ್ಲಿ ಕುದುರೆ ವಾಹನ, ಆನೆ ವಾಹನ ಉತ್ಸವ ಹಾಗೂ ವಿಶೇಷ ಪಡಿಯೇತ್ತ ವೈಭವದಿಂದ ನಡೆಯಿತು.

ಚೆಲುವನಾರಾಯಣ ಸ್ವಾಮಿಯ ಗಜೇಂದ್ರ ಮೋಕ್ಷ ಉತ್ಸವ'

ಇಂದು ಚೆಲುವನಾರಾಯಣ ಸ್ವಾಮಿಯ ಮಹಾರಥೋತ್ಸವ

ಮಾರ್ಚ್ 31ರಂದು ಚೆಲುವನಾರಾಯಣ ಸ್ವಾಮಿಯ ಮಹಾರಥೋತ್ಸವ (ಹರಿಜನೋತ್ಸವ) ಬೆಳಗ್ಗೆ 9ರಿಂದ ಮಧ್ಯಾಹ್ನ 3 ಗಂಟೆಯವರೆಗೆ ನಡೆಯಲಿದೆ. ಸಂಜೆ 7.30ಕ್ಕೆ ಮೈಸೂರಿನ ಅಶೋಕಪುರಂ ನಿವಾಸಿಗಳ ನೇತೃತ್ವದಲ್ಲಿ ಬಂಗಾರ ಪಲ್ಲಕ್ಕಿ ಉತ್ಸವ ನಡೆಯಲಿದೆ. ಏಪ್ರಿಲ್ 1ರಂದು ಸಂಜೆ 6ರಿಂದ 9ರವರೆಗೆ ಪಂಚಕಲ್ಯಾಣಿಯಲ್ಲಿ ತೆಪ್ಪೋತ್ಸವ ನಡೆಯಲಿದೆ.

ಮನೆಯಲ್ಲಿ ಪೆಟ್ರೋಲ್ ಸ್ಫೋಟ: ಮಹಿಳೆ ಗಂಭೀರ

ಧಾರವಾಡ: ಪೆಟ್ರೋಲ್ ಸಂಗ್ರಹ ಮಾಡಿದ್ದ ಮನೆಗೆ ಬೆಂಕಿ ಹೊತ್ತಿಕೊಂಡ ಪರಿಣಾಮ ಗೃಹಿಣಿ ತೀವ್ರವಾಗಿ ಗಾಯಗೊಂಡ ಘಟನೆ ತಾಲೂಕಿನ ತಡಕೋಡ ಗ್ರಾಮದ ಹರಿಜನ ಕೇರಿ ಓಣಿಯಲ್ಲಿ ಸೋಮವಾರ ರಾತ್ರಿ ನಡೆದಿದೆ. ಪೂರ್ಣಿಮಾ ಕಲ್ಲಪ್ಪ ಹಾದಿಮನಿ(32) ತೀವ್ರವಾಗಿ ಗಾಯಗೊಂಡಿದ್ದು, ಶೇ.80 ರಷ್ಟು ದೇಹ ಸುಟ್ಟಿರುವ ಕಾರಣ ಸ್ಥಿತಿ ಚಿಂತಾಜನಕವಾಗಿದೆ. ಗ್ರಾಮದಿಂದ ಜಿಲ್ಲಾಸ್ಪತ್ರೆಗೆ ಕರೆ ತಂದು ಪ್ರಾಥಮಿಕ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗಾಗಿ ಕಿಮ್ಸ್‌ಗೆ ರವಾನಿಸಲಾಗಿದೆ. ಪೆಟ್ರೋಲ್ ಅಭಾವ ಹಿನ್ನೆಲೆ ಪೆಟ್ರೋಲ್ ಕ್ಯಾನ್‌ನಲ್ಲಿ ಸಂಗ್ರಹಿಸಿ, ಮನೆಯಲ್ಲಿ ಫ್ರಿಡ್ಜ್ ಬಳಿ ಇಡಲಾಗಿತ್ತು. ಪೂರ್ಣಿಮಾ ಅಡುಗೆ ಮನೆಯಲ್ಲಿದ್ದಾಗ ಏಕಾಏಕಿ ಕ್ಯಾನ್‌ಗೆ ಬೆಂಕಿ ಹೊತ್ತಿಕೊಂಡು ಇದು ಸ್ಫೋಟಗೊಂಡಿದ್ದು, ಇಡೀ ಮನೆಗೆ ಬೆಂಕಿ ಆವರಿಸಿದೆ. ಅಡುಗೆ ಮನೆಯಲ್ಲಿ ಸಿಲುಕಿದ್ದ ಅತ್ತಿಗೆಯನ್ನು ಮೈದುನ ಯಲ್ಲಪ್ಪ ಕಾಪಾಡಿದ್ದು, ಈ ವೇಳೆ ಅವನಿಗೂ ಗಾಯಗಳಾಗಿವೆ.

ಮೆಡಿಕಲ್ ವಿದ್ಯಾರ್ಥಿ ಆತ್ಮಹತ್ಯೆ

ಮಂಗಳೂರು: ಅಪಾರ್ಟ್‌ಮೆಂಟ್‌ನ 12ನೇ ಮಹಡಿಯಿಂದ ಜಿಗಿದು ಮೆಡಿಕಲ್ ವಿದ್ಯಾರ್ಥಿ ಆತ್ಮಹತ್ಯೆಗೆ ಶರಣಾದ ಘಟನೆ ಮಂಗಳೂರಿನ ಅತ್ತಾವರದಲ್ಲಿ ನಡೆದಿದೆ. ಆತ್ಮಹತ್ಯೆಗೆ ಶರಣಾದ ಯುವಕನನ್ನು ಉತ್ತರ ಭಾರತ ಮೂಲದ ಸಾರ್ಥಕ್ ಮೌರ್ಯ (23) ಎಂದು ಗುರುತಿಸಲಾಗಿದೆ. ಗೆಳತಿಯೊಬ್ಬಳು ವಾಸವಾಗಿದ್ದ ಅಪಾರ್ಟ್‌ಮೆಂಟ್‌ಗೆ ಬಂದಿದ್ದ ಯುವಕ, 12ನೇ ಮಹಡಿ ತೆರಳಿ ಅಲ್ಲಿಂದ ಜಿಗಿದಿದ್ದಾನೆ. ಈತ ಅತ್ತಾವರದ ಪಿಜಿಯೊಂದರಲ್ಲಿ ವಾಸವಾಗಿದ್ದ. ಮಾ.31ರಂದು ಮೆಡಿಕಲ್ ಪರೀಕ್ಷೆ ಇತ್ತು. ಈಗ ಆತ್ಮಹತ್ಯೆಗೆ ಪರೀಕ್ಷೆ ಭಯವೋ? ಪ್ರೇಮ ವೈಫಲ್ಯವೋ ಎಂಬ ಶಂಕೆ ವ್ಯಕ್ತವಾಗುತ್ತಿದೆ. ಸ್ಥಳಕ್ಕೆ ಪಾಂಡೇಶ್ವರ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ತಪಾಸಣೆ ನಡೆಸಿದ್ದಾರೆ.

ಪೆಟ್ರೋಲ್ ಬಂಕ್‌ಗಳಲ್ಲಿ ಸೀಮೆಎಣ್ಣೆ ಮಾರಾಟ

← ಮೊದಲಪುಟದಿಂದ

ರಾಜ್ಯ ಸರಕಾರ, ಕೇಂದ್ರಾಡಳಿತ ಪ್ರದೇಶಗಳ ಆಡಳಿತ ಪ್ರತಿ ಜಿಲ್ಲೆಗಳಲ್ಲಿ 2 ಸೇವಾ ಕೇಂದ್ರಗಳನ್ನ ಗುರುತಿಸಿ, ಪ್ರತಿ ಘಟಕದಲ್ಲಿ ಗರಿಷ್ಠ 5,000 ಲೀ. ಸೀಮೆಎಣ್ಣೆ ಸಂಗ್ರಹಿಸಬಹುದು ಎಂದು ಹೇಳಲಾಗಿದೆ.

ನಾಳೆ ಮಂಗಳೂರಿಗೆ ಬರಲಿದೆ ಹಡಗು: ಸುಮಾರು 94,000 ಟನ್ ಎಲ್‌ಪಿಜಿ ಸರಕು ಹೊತ್ತ ಎರಡು ಭಾರತೀಯ ಹಡಗು ಯುದ್ಧಪೀಡಿತ ಹೊರ್ಮುಜ್ ಜಲಸಂಧಿಯನ್ನು ಸುರಕ್ಷಿತವಾಗಿ ದಾಟಿವೆ. ಬಿಡಬ್ಲ್ಯೂ ಟಿವೈರ್ ಟ್ಯಾಂಕರ್ ಮಾ.31ರಂದು ಮುಂಬೈ ಬಂದರಿಗೆ ಬರುವ ನಿರೀಕ್ಷೆಯಿದೆ. ಇನ್ನೊಂದು ಟ್ಯಾಂಕರ್ ಬಿಡಬ್ಲ್ಯೂ ಇಎಲ್‌ಎಂ ಏಪ್ರಿಲ್ 1ರಂದು ನವ ಮಂಗಳೂರು ಬಂದರಿಗೆ ಬರುವ ನಿರೀಕ್ಷೆಯಿದೆ.

ಶಾಸಕರಿಗೆ 3 ಉಚಿತ ಟಿಕೆಟ್‌ಗೆ ಆರ್‌ಸಿಬಿ ಸಮ್ಮತಿ!

← ಮೊದಲಪುಟದಿಂದ

ಕಳೆದ ವಾರ ಮೊದಲ ಪಂದ್ಯದ ಟಿಕೆಟ್ ಮಾರಾಟವಾಗಿದ್ದ ಹಿನ್ನೆಲೆಯಲ್ಲಿ ಎರಡು ಟಿಕೆಟ್ ನೀಡಲು ಒಪ್ಪಿದ್ದರು. ಇಂದು ಮತ್ತೆ ಸಭೆ ಮಾಡಿದ್ದೇವೆ. ಕ್ರಿಕೆಟ್ ಸಂಸ್ಥೆಯವರು ಅನೇಕ ಒಪ್ಪಂದಗಳನ್ನು ಮಾಡಿಕೊಂಡಿರುತ್ತಾರೆ. ಹೀಗಾಗಿ ಈ ತೀರ್ಮಾನಕ್ಕೆ ಬರಲಾಗಿದೆ. ಇದರೊಂದಿಗೆ ಈ ವಿಚಾರ ಇಲ್ಲಿಗೆ ಅಂತ್ಯಗೊಳಿಸಲಾಗುತ್ತಿದೆ. ಯಾರಿಗಾದರೂ ಐಪಿಎಲ್ ಟಿಕೆಟ್ ಬಗ್ಗೆ ಆಸಕ್ತಿ ಇಲ್ಲವಾದರೆ, ಅವರು ಈ ಬಗ್ಗೆ ನಮಗೆ ಲಿಖಿತ ರೂಪದಲ್ಲಿ ನೀಡಲಿ, ನಾವು ಅವರಿಗೆ ಟಿಕೆಟ್ ನೀಡುವುದಿಲ್ಲ. ಇಲ್ಲಿ ಯಾರಿಗೂ ಬಲವಂತವಿಲ್ಲ ಎಂದರು.

ಶಾಸಕರು ಹೆಚ್ಚಿನ ಟಿಕೆಟ್‌ಗಳಿಗೆ ಬೇಡಿಕೆಯಿಟ್ಟಿರುವ ಬಗ್ಗೆ ಪ್ರಸ್ತಾಪಿಸಿದಾಗ, ಅನೇಕ ಬೇಡಿಕೆಗಳು ಬರುತ್ತವೆ. ಎಲ್ಲವನ್ನು ಈಡೇರಿಸಲು ಆಗುವುದಿಲ್ಲ. ಅವರ ಬೇಡಿಕೆಗಳ ಆಧಾರದ ಮೇಲೆ ಚರ್ಚೆ ಮಾಡಿದ್ದು, ಪರಿಸ್ಥಿತಿಗೆ ಅನುಗುಣವಾಗಿ ಈ ತೀರ್ಮಾನ ಮಾಡಲಾಗಿದೆ. ನಾನು ರಾಜಸ್ಥಾನ, ಮುಂಬೈ, ದೆಹಲಿ, ಕೋಲ್ಕತಾ ಹಾಗೂ ಗುಜರಾತ್ ಅಧಿಕಾರಿಗಳ ಜತೆಗೂ ಚರ್ಚಿಸಿದ್ದು, ಅಲ್ಲಿ ಸುಮಾರು ಶೇ.50-60ರಷ್ಟು ಟಿಕೆಟ್‌ಗಳನ್ನು ಸರಕಾರಿ ಅಧಿಕಾರಿಗಳು ಹಾಗೂ ಸಂಬಂಧಪಟ್ಟ ವರ್ಗದವರಿಗೆ ವಿತರಣೆ ಮಾಡಲಾಗುತ್ತಿದೆ. ಅವರಿಗೆ ಹೋಲಿಕೆ ಮಾಡಿದರೆ ನಮ್ಮಲ್ಲಿ ಹಸ್ತಕ್ಷೇಪ ಕಡಿಮೆ ಇದೆ ಎಂದರು.

ಶಾಸಕರು ಟಿಕೆಟ್ ಕೇಳೋದು ತಪ್ಪು

ಶಾಸಕರು ಐಪಿಎಲ್ ಟಿಕೆಟ್ ಕೇಳಿರುವುದಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿರುವ ಮಾಜಿ ಸಂಸದ ಡಿ.ಕೆ.ಸುರೇಶ್, ಶಾಸಕರು ಐಪಿಎಲ್ ಟಿಕೆಟ್ ಕೇಳಿರುವುದು ತಪ್ಪು. ಆಸಕ್ತಿ ಇದ್ದರೆ ಕಾಸು ಕೊಟ್ಟು ನೋಡಲಿ. ಈಗ ಯಾರು ಮಾತ ನಾಡಿದರೂ ಸರಿಯಲ್ಲ. ಹಿಂದೆ ಕಾಲ್ತುಳಿತ ಪ್ರಕರಣ ವಾಯಿತು. ಆಗ ಯಾರಾರು ಏನೇನು ಮಾತನಾಡಿದ್ದರು? ಟಿಕೆಟ್ ಇಚ್ಛೆ ಇದ್ದೋರು ತೆಗೆದು ಕೊಳ್ಳಲಿ. ಆಸಕ್ತಿ ಇದ್ದರೆ ಕಾಸು ಕೊಟ್ಟು ನೋಡಲಿ. ಟಿಕೆಟ್ ಕೇಳಿದ್ದು ಒಳ್ಳೆಯ ಬೆಳವಣಿಗೆ ಅಲ್ಲ. ಅದು ರಾಷ್ಟ್ರೀಯ ಕ್ರೀಡೆಯೂ ಅಲ್ಲ. ಅದು ಕಮರ್ಷಿಯಲ್ ಗೇಮ್ ಅಷ್ಟೇ ಎಂದು ತಿಳಿಸಿದರು. ಸರಕಾರ ಸ್ಟೇಡಿಯಂ ಮಾಡುತ್ತಿದೆ. ಯುವಕರಿಗೆ, ಕ್ರೀಡೆಗೆ ಪ್ರೋತ್ಸಾಹ ಕೊಡಬೇಕು. ಬೆಂಗಳೂರಿನ ನಾಲ್ಕು ಕಡೆ ಸ್ಟೇಡಿಯಂ ಬೇಕು. ಸೂರ್ಯನಗರದಲ್ಲಿ ಸ್ಟೇಡಿಯಂ ಮಾಡೋಕೆ ಸಿದ್ಧತೆ ಸಾಗಿದೆ. ಬಿಡದಿಯಲ್ಲೂ ಸ್ಟೇಡಿಯಂ ಮಾಡಬೇಕು. ಶಿವರಾಮ ಕಾರಂತ ಬಡಾವಣೆಯಲ್ಲಿ ಜಾಗವಿದೆ. 40 ಎಕರೆ ಜಾಗ ಇದೆ, ಅಲ್ಲಿಯೂ ಮಾಡಲಿ ಎಂದರು.

ಹೊರಗುತ್ತಿಗೆ ನೌಕರರ ಅವಧಿ ಮುಗಿದ ಕೂಡಲೇ ಕಿತ್ತುಹಾಕಿ

← ಮೊದಲಪುಟದಿಂದ

ಹಳಬರನ್ನೇ ಮುಂದುವರಿಸಿದರೆ ವೇತನ ಕಡಿತ!: ಹೊರಗುತ್ತಿಗೆ ನೌಕರರನ್ನು ಅವಧಿ ಬಳಿಕ ತೆಗೆಯಬೇಕು ಎನ್ನುವ ಆದೇಶವಿತ್ತು. ಆದರೆ ಹೊಸಬರನ್ನು ಕರೆದುಕೊಂಡು ಬರುವುದು, ಅವರಿಗೆ ಕೆಲಸ ಕಲಿಸುವುದು ಕಷ್ಟ ಎನ್ನುವ ಕಾರಣಕ್ಕೆ ಹಾಗೂ ಸ್ಥಳೀಯ ರಾಜಕಾರಣಿಗಳ ಒತ್ತಡಕ್ಕೆ ಮಣಿದು ಹಳಬರನ್ನೇ ಮುಂದುವರಿಸಲಾಗುತ್ತಿತ್ತು. ಆದರೀಗ ಈ ರೀತಿ ಅವಧಿ ಬಳಿಕವೂ ಮುಂದುವರಿಸಿದರೆ ಇಲಾಖೆ ಅಥವಾ ಕಚೇರಿಯ ಮುಖ್ಯಸ್ಥರನ್ನು ಹೊಣೆಯನ್ನಾಗಿಸಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ.

ಅವಧಿ ಮುಗಿದ ಸಿಬ್ಬಂದಿಯ ಕಾರ್ಯವನ್ನು ಅನಧಿಕೃತವೆಂದು ಪರಿಗಣಿಸಿ, ಆ ಅವಧಿಯಲ್ಲಿ ಪಾವತಿಸಲಾದ ವೇತನ ಅಥವಾ ಪರಿಹಾರವನ್ನು ಅಧಿಕಾರಿಗಳಿಂದ ವೇತನದಿಂದಲೇ ವಸೂಲಿ ಮಾಡಲಾಗುವುದು. ವಸೂಲಿ ಮಾತ್ರವಲ್ಲದೇ, ಅಧಿಕಾರಿ ಗಳ ವಿರುದ್ಧ ಕರ್ನಾಟಕ ನಾಗರಿಕ ಸೇವಾ ನಿಯಮ ಗಳ ಅನ್ವಯ ಶಿಸ್ತು ಕ್ರಮ, ಸೇವಾ ದಾಖಲೆಯಲ್ಲಿ ನಕಾರಾತ್ಮಕ ಅಂಶವನ್ನು ದಾಖಲಿಸಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ

ಕೃಷಿ, ಪಶುಸಂಗೋಪನೆ, ಹಿಂದುಳಿದ ವರ್ಗಗಳ ಇಲಾಖೆ ಭಾರೀ ಆತಂಕ

ರಾಜ್ಯಾದ್ಯಂತ ವಿವಿಧ ಇಲಾಖೆಯಲ್ಲಿ 96 ಸಾವಿರಕ್ಕೂ ಹೆಚ್ಚು ಮಂದಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಒಳ ಮೀಸಲು ಗೊಂದಲಕ್ಕೆ ಕಾಯಂ ನೌಕರರನ್ನು ನೇಮಿಸಿಕೊಳ್ಳಲು ಸಾಧ್ಯವಾಗದೇ ಇಲಾಖೆಗಳು ಹೈರಾಣಾಗಿರುವ ಸಮಯ ದಲ್ಲಿಯೇ ಈ ರೀತಿಯ ಆದೇಶವನ್ನು ಆರ್ಥಿಕ ಇಲಾಖೆ ಹೊರಡಿ ಸಿರುವುದು ಹಲವರ ಅಚ್ಚರಿಕೆ ಕಾರಣವಾಗಿದೆ. ಗುತ್ತಿಗೆ ಅವಧಿ ಮುಗಿದು ಹೊಸಬರ ನೇಮಕಕ್ಕೆ ಟೆಂಡರ್ ಪ್ರಕ್ರಿಯೆ ಪೂರ್ಣ ಗೊಂಡು, ಏಜೆನ್ಸಿಗಳಿಂದ ನೇಮಕವಾಗಿ ಕಾರ್ಯ ಆರಂಭಿಸಲು ಹಲವು ತಿಂಗಳು ಬೇಕಾಗುತ್ತದೆ. ಈ ಅಂತರದಲ್ಲಿ ಇಲಾಖಾ ಕೆಲಸಗಳನ್ನು ನಿರ್ವಹಿಸುವುದು ಹೇಗೆ? ಎನ್ನುವ ಗೊಂದಲ ಹಲವರಲ್ಲಿ ಶುರುವಾಗಿದೆ. ಅದರಲ್ಲಿಯೂ 15 ಸಾವಿರಕ್ಕೂ ಹೆಚ್ಚು ಹೊರಗುತ್ತಿಗೆ ನೌಕರರನ್ನು ಹೊಂದಿರುವ ಕೃಷಿ, 15376 ಹೊರಗುತ್ತಿಗೆ ನೌಕರರನ್ನು ಹೊಂದಿರುವ ಪಶುಸಂಗೋಪನಾ ಇಲಾಖೆ, 11420 ಹೊರಗುತ್ತಿಗೆ ನೌಕರರಿರುವ ಹಿಂದುಳಿದ ವರ್ಗ, ಆರೂವರೆ ಸಾವಿರ ಹೊರಗುತ್ತಿಗೆ ನೌಕರರನ್ನು ಹೊಂದಿ ರುವ ಸಹಕಾರ ಇಲಾಖೆಗಳಲ್ಲಿ ಸಿಬ್ಬಂದಿ ಅವಧಿ ಮುಗಿಯುತ್ತಿದ್ದಂತೆ ಹೊಸಬರು ಬಾರದಿದ್ದರೆ ಯಾವ ರೀತಿ ಕಾರ್ಯನಿರ್ವಹಿಸಬೇಕು ಎನ್ನುವ ಆತಂಕ ಅಧಿಕಾರಿಗಳಲ್ಲಿದೆ.

ಸಂತ್ರಸ್ತೆಗೆ ಜೈಲಿಂದ ಪೋಕ್ಸೊ ಆರೋಪಿ ಜೀವ ಬೆದರಿಕೆ

ಧಾರಾವಾಡ: ಜೈಲುಗಳಲ್ಲಿ ಕೈದಿಗಳು ಐಶಾರಾಮಿ ಜೀವನ ನಡೆಸುತ್ತಿರುವ ಕುರಿತು ವ್ಯಾಪಕ ಸುದ್ದಿಗಳು ಹರಿದಾಡುತ್ತಿರುವ ಬೆನ್ನಲ್ಲೇ ಇದೀಗ ಪೋಕ್ಸೊ ಪ್ರಕರಣ ಆರೋಪಿ ಜೈಲಿನಿಂದಲೇ ಅಪ್ರಾಪ್ತ ಸಂತ್ರಸ್ತೆಗೆ ವಿಡಿಯೋ ಕರೆ ಮಾಡಿ ಬೆದರಿಕೆ ಹಾಕಿದ್ದಾನೆ. ಧಾರವಾಡ ಕೇಂದ್ರ ಕಾರಾಗೃಹದಲ್ಲಿ ಪೋಕ್ಸೊ ಪ್ರಕರಣದ ಫರ್ವೇಜ್ ಎಂಬ ಆರೋಪಿ ಜೈಲಿನಿಂದಲೇ ಅಪ್ರಾಪ್ತೆಗೆ ವಿಡಿಯೊ ಕರೆ ಮಾಡಿ ನಿರಂತರ ಕಿರುಕುಳ ನೀಡಿರುವ ಘಟನೆ ವರದಿಯಾಗಿದೆ. ಈ ಆರೋಪಿಯು ಬಾಲಕಿಗೆ ಬೆದರಿಕೆ ಹಾಕುತ್ತಾ, ನ್ಯಾಯಾಲಯದಲ್ಲಿ ತನ್ನ ಪರವಾಗಿ ಸಾಕ್ಷಿ ಹೇಳಲು ಒತ್ತಾಯಿಸಿದ್ದಾನೆ ಎಂದು ವರದಿಯಾಗಿದೆ. ಮೂಲಗಳ ಪ್ರಕಾರ ಆರೋಪಿಯು ತನ್ನ ಕೈ ಮೇಲೆ ಸಂತ್ರಸ್ತೆಯ ಹೆಸರನ್ನು ಬರೆದುಕೊಂಡು ವಿಡಿಯೊ ಕರೆ ಮಾಡಿದ್ದಾನೆ ಎಂದು ತಿಳಿದುಬಂದಿದೆ.

ನೇಹಾಳಂತೆ ಕೊಲೆ ಬೆದರಿಕೆ: ವಿಡಿಯೊ ಕಾಲ್ ಮಾಡಿದಾಗ ರಿಸೀವ್ ಮಾಡದೇ ಇದ್ದರೆ ನೇಹಾ ಹಿರೇಮಠ್‌ಗೆ ಕೊಲೆಯಾದಂತೆ ನಿನ್ನನ್ನು ಕೊಲೆ ಮಾಡುವೆ ಎಂದು ಸಂತ್ರಸ್ತೆಗೆ ಜೀವ ಬೆದರಿಕೆ ಹಾಕಿದ್ದಾನೆ ಎನ್ನುವ ಆರೋಪ ಕೇಳಿ ಬಂದಿದೆ.

ಅಧಿಕಾರಿಗಳ ಕೈವಾಡದ ಶಂಕೆ

ಆರೋಪಿ ಕೈಗೆ ಮೊಬೈಲ್ ಸಿಕ್ಕಿರುವುದು ಜೈಲು ಅಧಿಕಾರಿಗಳ ಮೇಲೆ ಅನು ಮಾನ ಮೂಡಿಸಿದೆ. ಜೈಲಿನ ಒಳಗೆ ಜೈಲು ಅಧಿಕಾರಿಗಳ ಸಹಕಾರದಿಂದಲೇ ಜೈಲಿಗೆ ಮೊಬೈಲ್ ರವಾನೆ ಮಾಡಲಾಗಿದೆ ಎನ್ನುವ ಆರೋಪ ಕೇಳಿ ಬಂದಿದೆ. ಆದರೆ, ಈ ಪ್ರಕರಣವು ಇದಕ್ಕೆ ವ್ಯತಿರಿಕ್ತವಾದ ಚಿತ್ರಣವನ್ನು ನೀಡಿದೆ. ಇದರ ನಡುವೆ ವಿಡಿಯೊ ಕಾಲ್ ಮಾಡಿ ಬೆದರಿಕೆ ಹಾಕುತ್ತಿರುವ ವಿಷಯ ಗೊತ್ತಿದ್ದರೂ ಕೂಡ ಧಾರವಾಡ ಜೈಲಾಧಿಕಾರಿಗಳು ಸುಮ್ಮನೆ ಇದ್ದಾರಾ ಎಂಬ ಅನುಮಾನ ಮೂಡಿಬಂದಿದೆ.

ಸಮಾಚಾರ ಸಣ್ಣದಲ್ಲ

ಈಜಲು ಹೋಗಿದ್ದ ಬಾಲಕರಿಬ್ಬರು ಸಾವು

ಚಿಕ್ಕೋಡಿ: ಹಿಡಕಲ್ ಜಲಾಶಯದ ಹಿನ್ನೀರಿನಲ್ಲಿ ಮುಳುಗಿ ಇಬ್ಬರು ಬಾಲಕರು ಸಾವನ್ನಪ್ಪಿದ ಘಟನೆ ಹುಕ್ಕೇರಿ ತಾಲೂಕಿನ ಹಳೆ ಗುಡಗನಟ್ಟಿ ಗ್ರಾಮದ ಹಿನ್ನೀರಿನಲ್ಲಿ ನಡೆದಿದೆ. ಘಟಪ್ರಭಾ ನದಿಗೆ ಅಡ್ಡಲಾಗಿ ಕಟ್ಟಿರುವ ಹಿಡಕಲ್ ಜಲಾಶಯದ ಹಿನ್ನೀರಿನಲ್ಲಿ ಐದು ಜನ ಸ್ನೇಹಿತರು ಈಜಲು ತೆರಳಿದ್ದರು. ಐವರ ಪೈಕಿ ಈಗ ಇಬ್ಬರು ಮೃತಪಟ್ಟಿದ್ದಾರೆ. ಕೃಷ್ಣಾ ವಿಠ್ಠಲ ಖಾನಾಪೂರಿ(14), ಪ್ರಜ್ವಲ್ ಮುತ್ತೆಪ್ಪಾ ಗೋಕಾರ(14) ಮೃತ ಬಾಲಕರು. ಮೃತ ಬಾಲಕರು ಹುಕ್ಕೇರಿ ತಾಲೂಕಿನ ಯಮಕನಮರಡಿ ಗ್ರಾಮದ ನಿವಾಸಿಗಳು. ಶಾಲೆ ರಜೆ ಹಿನ್ನೆಲೆಯಲ್ಲಿ ಸ್ನೇಹಿತರು ಈಜಲು ತೆರಳಿದ್ದರು. ಯಮಕನಮರಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದ್ದಾರೆ.

ಕಾಡಾನೆ ದಾಳಿಗೆ ಆಟೋ ಜಖಂ

ಹಾಸನ: ಮನೆಯ ಮುಂದೆ ನಿಲ್ಲಿಸಿದ್ದ ಆಟೋ ಮೇಲೆ ಒಂಟಿಸಲಗ ದಾಳಿ ಮಾಡಿ ಜಖಂಗೊಳಿಸಿದ ಘಟನೆ ಬೇಲೂರು ತಾಲೂಕಿನ ಕುಪ್ಪಗೋಡು ಗ್ರಾಮದಲ್ಲಿ ನಡೆದಿದೆ. ಕಾಡಾನೆ ದಾಳಿಯ ವಿಡಿಯೊ ಆಟೋ ಮಾಲೀಕನ ಮೊಬೈಲ್‌ನಲ್ಲಿ ಸೆರೆಯಾಗಿದೆ. ಗ್ರಾಮದ ಕೃಷ್ಣಪ್ಪ ಅವರಿಗೆ ಸೇರಿದ ಆಟೋ ಮೇಲೆ ಕಾಡಾನೆ ದಾಳಿ ನಡೆಸಿದೆ. ಮಾ.30 ರಂದು ಬೆಳಗ್ಗೆ ಮನೆಯ ಬಳಿ ಬಂದ ಒಂಟಿಸಲಗ ನಿಂತಿದ್ದ ಆಟೋ ಮೇಲೆ ಏಕಾಏಕಿ ದಾಳಿ ಮಾಡಿ ಕಾಫಿ ತೋಟದೊಳಗೆ ಓಡಿ ಹೋಗಿದೆ. ಕಳೆದ ಒಂದು ವಾರದಿಂದ ಕುಪ್ಪಗೋಡು ಗ್ರಾಮದಲ್ಲಿ ಕಾಡಾನೆಗಳ ಹಿಂಡು ಉಳಿದುಕೊಂಡಿವೆ. ಕಾಡಾನೆಗಳ ಹಾವಳಿಯಿಂದ ಗ್ರಾಮಸ್ಥರು ಆತಂಕ ಕ್ಕೊಳಗಾಗಿದ್ದಾರೆ. ಅರಣ್ಯ ಇಲಾಖೆ ಸಿಬ್ಬಂದಿ ಸೂಕ್ತ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಕಾಂಗ್ರೆಸ್ ಉನ್ನತ ಮಟ್ಟದ ಸಭೆ ಇಂದು

ದಾವಣಗೆರೆ: ದಕ್ಷಿಣ ವಿಧಾನಸಭಾ ಕ್ಷೇತ್ರ ಉಪಚುನಾವಣೆ ನಿಮಿತ್ತ ಮಾ. 31ರಂದು ದಾವಣಗೆರೆಯ ಬಾಪೂಜಿ ಎಂಬಿಎ ಕಾಲೇಜಿನ ಕೆಪಿಸಿಸಿ ಚುನಾವಣಾ ಕಚೇರಿಯಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ನೇತೃತ್ವದಲ್ಲಿ ಉನ್ನತ ಮಟ್ಟದ ಸಭೆ ಆಯೋಜಿಸಲಾಗಿದೆ ಎಂದು ಪರಿಷತ್ ಮುಖ್ಯ ಸಚೇತಕ ಸಲೀಂ ಅಹಮದ್ ತಿಳಿಸಿದರು. ಮಧ್ಯಾಹ್ನ 12 ಗಂಟೆಗೆ ಮಹತ್ವದ ಸಭೆ ನಡೆಯಲಿದ್ದು, ಶಾಸಕರು ಹಾಗೂ ಮುಖಂಡರಿಗೆ ಚುನಾವಣಾ ಗೆಲುವಿನ ಜವಾಬ್ದಾರಿ ಹಂಚಿಕೆ ಮಾಡಲಾಗುವುದು. ಏ. 1 ಮತ್ತು 2 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಬಿರುಸಿನ ಪ್ರಚಾರ ನಡೆಸಲಿದ್ದಾರೆ.

ಲೋಕಾ ಬಲೆಗೆ ಬಿದ್ದ ವಾಣಿಜ್ಯ ತೆರಿಗೆ ಡಿಸಿ

ಹುಬ್ಬಳ್ಳಿ: 6 ಲಕ್ಷ ರು. ಲಂಚ ಪಡೆಯುವಾಗಲೇ ಲೋಕಾ ಬಲೆಗೆ ಕಮರ್ಷಿಯಲ್ ಟ್ಯಾಕ್ಸ್ ಡಿಸಿ ಬಿದ್ದ ಘಟನೆ ಹುಬ್ಬಳ್ಳಿಯಲ್ಲಿ ನಡೆದಿದೆ.ಅಂಕೋಲಾ ಮೂಲದ ಉದ್ಯಮಿ ವಿಶ್ವಜಿತ್ ನಾಯಕ್ ಎಂಬುವವರಿಂದ 6

ಲಕ್ಷ ಲಂಚ ರು. ಪಡೆಯುವಾಗಲೇ ಕಮರ್ಷಿಯಲ್ ಟ್ಯಾಕ್ಸ್ ಡೆಪ್ಯುಟಿ ಕಮಿಷನರ್ ಭರತ್ ಹೆಗ್ಡೆ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ. 2019ರಲ್ಲಿ 8 ಹೆವಿ ಟಿಪ್ಪರ್ ವಾಹನಗಳನ್ನು ವಿಶ್ವಜೀತ್ ನಾಯಕ್ ಅವರು ಖರೀದಿ ಮಾಡಿದ್ದರು. ಇದಕ್ಕೆ 60 ಲಕ್ಷ ರು. ಇನ್ಪುಟ್ ಟ್ಯಾಕ್ಸ್ ಕಟ್ ಆಗಿತ್ತು. ಇದರಲ್ಲಿ 34 ಲಕ್ಷ ರು.ಇನ್ಪುಟ್ ಟ್ಯಾಕ್ಸ್ ಮರು ಕ್ರೆಡಿಟ್ ಆಗಿತ್ತು. ಈ ಇನ್ಪುಟ್ ಟ್ಯಾಕ್ಸ್ ಕಾನೂನು ಬಾಹಿರ, ಸುಳ್ಳು ದಾಖಲೆ ನೀಡಿ ಟ್ಯಾಕ್ಸ್ ಮರುಪಾವತಿ ಮಾಡಿಕೊಂಡಿದ್ದಾರೆ ಎಂದು ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳು ದೂರು ದಾಖಲಿಸಿದ್ದರು. ಈ ಬಗ್ಗೆ ವಿಶ್ವಜಿತ್ ನಾಯಕ್ ಅವರನ್ನು ತೀವ್ರ ವಿಚಾರಣೆ ನಡೆಸಲಾಗಿತ್ತು. 4 ಬಾರಿ ಅಧಿಕಾರಿ ಭರತ್ ಹೆಗ್ಡೆ ಅವರಿಂದ ವಿಶ್ವಜೀತ್ ನಾಯಕ್ ವಿಚಾರಣೆ ಎದುರಿಸಿದ್ದರು. 5ನೇ ಬಾರಿ ವಿಚಾರಣೆಗೆ ಕರೆದ ವೇಳೆ ಕೇಸ್ ಕ್ಲೋಸ್ ಮಾಡಲು 6 ಲಕ್ಷ ರು. ಲಂಚ ಕೇಳಿದ್ದರು ಎನ್ನಲಾಗಿದೆ. ಮಾ.30 ರಂದು ಲಂಚ ಪಡೆಯುವ ವೇಳೆ ವಾಣಿಜ್ಯ ತೆರಿಗೆ ಅಧಿಕಾರಿ ಭರತ್ ಹೆಗ್ಡೆ ಅವರನ್ನು ಲೋಕಾಯುಕ್ತರು ಟ್ರ್ಯಾಕ್ ಮಾಡಿದ್ದಾರೆ.

ದಿನ ವಿಶೇಷ

31 ಮಾರ್ಚ್ 2026 ಮಂಗಳವಾರ

» ಸೂರ್ಯೋದಯ	6-22
» ಸೂರ್ಯಾಸ್ತ	6-40
» ತಿಥಿ	ತ್ರಯೋದಶಿ
» ನಕ್ಷತ್ರ	ಪುಷ್ಯ
» ಸಂವತ್ಸರ	ಪರಾಭವ
» ಆಯನ	ಉತ್ತರಾಯಣ
» ಋತು	ವಸಂತ
» ಮಾಸ	ಚೈತ್ರ
» ಪಕ್ಷ	ಶುಕ್ಲಪಕ್ಷ

ಜಿಲ್ಲೆಗೆ ಮೆಡಿಕಲ್ ಕಾಲೇಜು ಎಚ್.ವೈ.ಮೇಟಿ ಶ್ರಮದ ಫಲ | ಲೂಟಿ ಮಾಡಿದ್ದ ಬಿಜೆಪಿ, ನುಡಿದಂತೆ ನಡೆಯುವ ಸರಕಾರ ನಮ್ಮದು

ಉಮೇಶ್ ಪರ ಬಾಗಲಕೋಟೆಯಲ್ಲಿ ಸಿಎಂ ಮತಬೇಟೆ

ಬಾಗಲಕೋಟೆ : ಎಚ್.ವೈ.ಮೇಟಿ ಅವರ ಆತ್ಮಕ್ಕೆ ಶಾಂತಿ ಸಿಗಬೇಕಾದರೆ ಉಮೇಶ್ ಮೇಟಿ ಅವರನ್ನು ಗೆಲ್ಲಿಸಲೇಬೇಕು. ಬಾಗಲಕೋಟೆಗೆ ಮೆಡಿಕಲ್ ಕಾಲೇಜು ಬರುತ್ತಿರುವುದು ಮೇಟಿಯವರ ಶ್ರಮದ ಫಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕರೆ ನೀಡಿದರು.

ಬಾಗಲಕೋಟೆ ಉಪ ಚುನಾವಣಾ ಪ್ರಚಾರ ಕಾರ್ಯದಲ್ಲಿ ಪಾಲ್ಗೊಂಡು ಸುತಗುಂಡಾರ, ನಾಯನೇಗಲಿ ಸೇರಿ ಸುತ್ತ ಮುತ್ತಲ ಗ್ರಾಮಗಳಲ್ಲಿ ಪ್ರಚಾರ ನಡೆಸಿ ಮಾತನಾಡಿ, ಮೇಟಿ ಅವರ ನಾಲ್ವರೂ ಮಕ್ಕಳು ಟಿಕೆಟ್ ಕೇಳಿದ್ದರು. ಆದರೆ, ಯಾರಿಗೇ ಕೊಟ್ಟರೂ ಒಟ್ಟಿಗೇ ಕೆಲಸ ಮಾಡುವ ಭರವಸೆ ನೀಡಿದರು. ಕಾಂಗ್ರೆಸ್ ಪದ್ಧತಿಯಂತೆ ಉಮೇಶ್ ಮೇಟಿ ಅವರಿಗೆ ಟಿಕೆಟ್ ಕೊಟ್ಟಿದ್ದೇವೆ. ಆದ್ದರಿಂದ ಇವರನ್ನು ಬೆಂಬಲಿಸಿ, ಗೆಲ್ಲಿಸಿ ಕಳುಹಿಸಿ ಎಂದರು.

ಕೇಂದ್ರದಲ್ಲಿರುವ ಬಿಜೆಪಿ ಸರಕಾರ ಆಲಮಟ್ಟಿ ವಿಚಾರದಲ್ಲಿ ಜನವಿರೋಧಿ ನಿಲುವು ಹೊಂದಿದೆ. ಹದಿಮೂರು ವರ್ಷಗಳಿಂದ ಗೆಜೆಟ್ ನೋಟಿಫಿಕೇಶನ್ ಕೂಡ ಮಾಡಲಿಲ್ಲ. ನಾಲ್ಕು ವರ್ಷ ಅಧಿಕಾರದಲ್ಲಿದ್ದಾಗಲೂ ಭೂ ಪರಿಹಾರ ಘೋಷಿಸಿದರೂ ಹಣ ನೀಡಲಿಲ್ಲ. ನಾನು ಮುಖ್ಯಮಂತ್ರಿಯಾಗಿ ಎಕರೆ



ಬಾಗಲಕೋಟೆಯ ವಿವಿಧೆಡೆ ತೆರಳಿದ ಸಿಎಂ ಸಿದ್ದರಾಮಯ್ಯ ಅವರು, ಕಾಂಗ್ರೆಸ್ ಅಭ್ಯರ್ಥಿ ಉಮೇಶ್ ಮೇಟಿ ಅವರ ಪರ ಮತ ಯಾಚಿಸಿದರು.

ನೀರಾವರಿ ಜಮೀನಿಗೆ 40ಲಕ್ಷ, ಒಣ ಭೂಮಿಗೆ 30 ಲಕ್ಷ ರು. ಪರಿಹಾರ ಕೊಡುವ ತೀರ್ಮಾನ ಮಾಡಿ ಕೆಲಸ ಪ್ರಾರಂಭ ಮಾಡಿದ್ದು ಮೂರು ವರ್ಷದಲ್ಲಿ ಪರಿಹಾರ ಕೊಡುತ್ತೇವೆ ಎಂದು ಭರವಸೆ ನೀಡಿದರು.

ಯಡಿಯೂರಪ್ಪ, ಬೊಮ್ಮಾಯಿ ಸರಕಾರ ಬರೀ ಲೂಟಿ ಮಾಡಿದ್ದು ಬಿಟ್ಟರೆ ಅಭಿವೃದ್ಧಿ ಕಾರ್ಯ ಮಾಡಲಿಲ್ಲ. ಎಚ್.ವೈ.ಮೇಟಿಯವರ ಒತ್ತಾಯದಂತೆ ಬಾಗಲಕೋಟೆಗೆ ಮೆಡಿಕಲ್ ಕಾಲೇಜು ತರಲು ಶಂಕುಸ್ಥಾಪನೆ ಮಾಡಿದ್ದೇವೆ. ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಮತ್ತು ಟ್ರಾಮಾ ಸೆಂಟರನ್ನೂ ನಾವು ಮಾಡುತ್ತೇವೆ. ನುಡಿದಂತೆ ಮಾಡುವ ಸರಕಾರ ನಮ್ಮದು. ಬಿಜೆಪಿಯವರು ನುಡಿದಂತೆ ನಡೆಯಲಿಲ್ಲ. ಒಂದೇ ಒಂದು ರು.ರೈತರ ಸಾಲ ಮನ್ನಾ ಮಾಡಲಿಲ್ಲ. ಕೋವಿಡ್‌ನಿಂದ ಬಳಲಿದ್ದ ರಾಜ್ಯದ ಜನತೆಗೆ ಅನುಕೂಲ ಮಾಡಿಕೊಡಲು ಐದು ಗ್ಯಾರಂಟಿಗಳನ್ನು ತಂದು ಜನರಿಗೆ ನೆರವಾಗಿದ್ದು ನಮ್ಮ ಸರಕಾರ ಎಂದರು.

ಕೇಂದ್ರದ ಬಿಜೆಪಿ ಸರಕಾರ ಕಬ್ಬು ಬಳೆಗೆ ರೈತರ ಬೇಡಿಕೆಯಷ್ಟು ಬೆಂಬಲ ಬೆಲೆ ನೀಡದಿದ್ದಾಗ ನಾನು ರೈತ ಸಂಘಟನೆಗಳು ಮತ್ತು ಸಕ್ಕರೆ ಕಾರ್ಖಾನೆ ಮಾಲೀಕರ ಜೊತೆ ಸಭೆ ನಡೆಸಿ 200 ರೂ ಹೆಚ್ಚು ಮಾಡಿದೆವು. ಎಚ್.ವೈ.ಮೇಟಿಯವರು ಜನರ ಕೈಗೆ ಸಿಗುತ್ತಿದ್ದರು. ಅಹಿಂದ ಸಮುದಾಯದ ಬೇಡಿಕೆಗಳಿಗೆ ಸ್ಪಂದಿಸುತ್ತಿದ್ದರು. ಆದರೆ ಅಧಿಕಾರದಲ್ಲಿದ್ದಾಗ ಜನರಿಗೆ ಸ್ಪಂದಿಸದೆ, ಈಗ ನಮ್ಮ ಗ್ಯಾರಂಟಿಗಳ ಬಗ್ಗೆ ಅಪಪ್ರಚಾರ ಮಾಡುತ್ತಿರುವ ಬಿಜೆಪಿಯವರಿಗೆ ಮತ ಕೇಳುವ ಯಾವ ನೈತಿಕತೆ ಇದೆ ಎಂದು ಪ್ರಶ್ನಿಸಿದರು.

ಇಂದು ಎಲ್ಲೆಲ್ಲಿ ಪ್ರಚಾರ?

ಸಿಎಂ ಸಿದ್ದರಾಮಯ್ಯ ಮಂಗಳವಾರ ಬೆಳಗ್ಗೆ 10.50ಕ್ಕೆ ಬಾಗಲಕೋಟೆಯ ಮುಗೊಳ್ಳಿಯಲ್ಲಿ ಪ್ರಚಾರ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಮಧ್ಯಾಹ್ನ 1 ಗಂಟೆಗೆ ನೀಲಾನಗರ ಗ್ರಾಮ, ಸಂಜೆ 4 ಗಂಟೆಗೆ ಐಹೊಳೆ, 6 ಗಂಟೆಗೆ ಅಮೀನಗಡ ಗ್ರಾಮಗಳಲ್ಲಿ ಪ್ರಚಾರ ನಡೆಸಿ ಮಂಗಳವಾರ ರಾತ್ರಿ ಬಾಗಲಕೋಟೆಯಲ್ಲೇ ವಾಸ್ತವ್ಯ ಹೂಡಲಿದ್ದಾರೆ.

> ನಾವು ಪ್ರತೀ ವರ್ಷ 52 ಸಾವಿರ ಕೋಟಿ ರು.ಪಾಯಿಯನ್ನು ರಾಜ್ಯದ ಜನರ ಜೇಬಿಗೆ ಹಾಕುತ್ತಲೇ ಅಭಿವೃದ್ಧಿ ಕೆಲಸವನ್ನೂ ಮಾಡುತ್ತಿದ್ದೇವೆ. ಬಿಜೆಪಿಯವರು ಕಳ್ಳೆತ್ತುಗಳು. ಗೇಯುವ ಎತ್ತಿಗೆ ತಾನೆ ಮೇವು ಹಾಕೋದು, ಹಾಗೆಯೇ ಕೆಲಸ ಮಾಡಿದ ನಮಗೆ ಕೂಲಿ ಕೊಡಿ. ಎಚ್.ವೈ.ಮೇಟಿ ಅವರ ಆತ್ಮಕ್ಕೆ ಶಾಂತಿ ಸಿಗಬೇಕಾದರೆ ಉಮೇಶ್ ಮೇಟಿ ಅವರನ್ನು ಗೆಲ್ಲಿಸಲೇಬೇಕು.
>
> -ಸಿದ್ದರಾಮಯ್ಯ, ಮುಖ್ಯಮಂತ್ರಿ

ವೀರಣ್ಣ ಚರಂತಿಮಠ ಪರ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಪ್ರಚಾರ

ತಂತ್ರ, ಕುತಂತ್ರ ಯಾವುದೂ ನಡೆಯುವುದಿಲ್ಲ

ಬಾಗಲಕೋಟೆ: ಮುಖ್ಯ ಮಂತ್ರಿಯಾದಿಯಾಗಿ ಯಾರೇ ಇಲ್ಲಿ ಬಂದು ಬೀಡು ಬಿಟ್ಟರೂ ಮತದಾರರು ಬಿಜೆಪಿಗೆ ಆಶೀರ್ವಾದ ನೀಡಿ ಚರಂತಿಮಠ ಅವರನ್ನು ಗೆಲ್ಲಿಸಲಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಬಾಗಲಕೋಟೆ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಪರ ಮತಯಾಚಿಸಿದರು. ಈ ವೇಳೆ ಸುದ್ದಿಗಾರರ ಜತೆ ಮಾತನಾಡಿದ ಅವರು, ಕಾಂಗ್ರೆಸ್ಸಿನ ತಂತ್ರ, ಕುತಂತ್ರ ಯಾವುದೂ ನಡೆಯುವುದಿಲ್ಲ. ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಮತದಾರರ ಒಲವು ಬಿಜೆಪಿ ಪರವಾಗಿ ಹೆಚ್ಚಾಗುತ್ತಿದೆ. ಕಾರ್ಯಕರ್ತರು ಉತ್ಸಾಹದಲ್ಲಿದ್ದಾರೆ. ಬಾಗಲಕೋಟೆ ಮುಖ್ಯಮಂತ್ರಿಗಳಿಗೆ ರಾಜಕೀಯ ಪುನರ್ ಜನ್ಮ ಕೊಟ್ಟ ಜಿಲ್ಲೆ, ಅಂಥ ಜಿಲ್ಲೆಯನ್ನು ಮುಖ್ಯಮಂತ್ರಿಗಳು ಮತ್ತು ಕಾಂಗ್ರೆಸ್ಸಿನವರು ಸಂಪೂರ್ಣವಾಗಿ ನಿರ್ಲಕ್ಷಿಸಿದ್ದಾರೆ.

ಹಾಗಾಗಿ ಅವರು ಇಲ್ಲಿ ಏನೇ ಭಾಷಣ ಮಾಡಿದರೂ ಜನರಿಗೆ ವಾಸ್ತವಿಕ ಸತ್ಯ ಅರ್ಥವಾಗಿದೆ. ವೀರಣ್ಣ ಚರಂತಿಮಠ್ ಅವರು ದೊಡ್ಡ ಅಂತರದಲ್ಲಿ ವಿಜಯಶಾಲಿಯಾಗುತ್ತಾರೆ. ಹಣಬಲ, ತೋಳ್ಬಲ ಬಳಸಿ ಅಧಿಕಾರ ದುರ್ಬಳಕೆ ಮಾಡಿಕೊಂಡು ದಬ್ಬಾಳಿಕೆ ಮಾಡಲು ಕಾಂಗ್ರೆಸ್ ಪಕ್ಷ ಹುನ್ನಾರ ನಡೆಸುತ್ತಿದೆ. ಆದರೆ, ಇಲ್ಲಿನ ಪ್ರಜ್ಞಾವಂತ ಮತದಾರರು ಬಿಜೆಪಿ ಗೆಲ್ಲಿಸಲು ನಿರ್ಧರಿಸಿದ್ದಾರೆ ಎಂದರು.

ನಾನು ಕಳೆದ 20 ವರ್ಷಗಳಿಂದ ಬಿಜೆಪಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಬೆಂಗಳೂರು ಮಹಾನಗರ ಯುವ ಮೋರ್ಚಾ ಕಾರ್ಯದರ್ಶಿಯಾಗಿ, ನಂತರ ರಾಜ್ಯ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿಯಾಗಿ, ರಾಜ್ಯ ಉಪಾಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಇದೀಗ ಪಕ್ಷದ ವರಿಷ್ಠರು ಅಪೇಕ್ಷೆಪಟ್ಟ ಕಾರಣ ಈ ಜವಾಬ್ದಾರಿ ಕೊಟ್ಟಿದ್ದಾರೆ. ಸಂಘಟನೆ ಕೆಲಸ ಹುಡುಗಾಟಿಕೆಯಲ್ಲ, ಪ್ರಾಮಾಣಿಕವಾಗಿ ಮಾಡುತ್ತಿದ್ದೇನೆ. ಕಾಂಗ್ರೆಸ್ಸಿನ ವಂಶ ರಾಜಕಾರಣವನ್ನು ಜನರು ನೋಡುತ್ತಿದ್ದಾರೆ ಎಂದರು.

ಬಾಗಲಕೋಟೆ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಪರ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರು ಸೋಮವಾರ ಮತಯಾಚಿಸಿದರು.

> ಬಾಗಲಕೋಟೆ-ದಾವಣಗೆರೆ ದಕ್ಷಿಣದಲ್ಲಿ ಕಾಂಗ್ರೆಸ್ ಪಕ್ಷದವರು ನಮಗೆ ಒಳಗೊಳಗೆ ಸಹಕಾರ ನೀಡುತ್ತಿದ್ದಾರೆ. ಬಿಜೆಪಿ ಅಭ್ಯರ್ಥಿ ಗೆಲ್ಲಿಸಬೇಕೆಂದು ಯಾರೇ ಕೆಲಸ ಮಾಡಿದರೂ ಅದನ್ನು ಸ್ವಾಗತಿಸುವೆ. ಚುನಾವಣಾ ಫಲಿತಾಂಶ ಬರಲಿ. ಕಾಂಗ್ರೆಸ್ಸಿನಲ್ಲಿ ಎಷ್ಟು ಬಾಗಿಲು ಇದೆ. ಬಿಜೆಪಿಯಲ್ಲಿ ಎಷ್ಟು ಬಾಗಿಲುಗಳಿವೆ ಎಂಬುದು ಎಂ.ಬಿ.ಪಾಟೀಲರಿಗೆ ಗೊತ್ತಾಗಲಿದೆ.
>
> -ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಶಿಕ್ಷಣ ಇಲಾಖೆ ವಿರುದ್ಧ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಆಕ್ರೋಶ

ಹಿಂದಿಗೆ ಗ್ರೇಸ್: ಅವಿವೇಕದ ಪ್ರಯೋಗ

ಶಿರಸಿ: ರಾಜ್ಯ ಶಿಕ್ಷಣ ಇಲಾಖೆಯು ಎಸ್‌ಎಸ್‌ಎಲ್‌ಸಿ ಪರೀಕ್ಷಾ ಪದ್ಧತಿಯಲ್ಲಿ ತಂದಿರುವ ಬದಲಾವಣೆಗಳು ದುರದೃಷ್ಟಕರ ಮತ್ತು ವಿದ್ಯಾರ್ಥಿ ವಿರೋಧಿಯಾಗಿವೆ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ

ಖಂಡಿಸಿದ್ದಾರೆ.ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ದಶಕಗಳಿಂದ ಯಶಸ್ವಿಯಾಗಿ ಜಾರಿಯಲ್ಲಿದ್ದ ತ್ರಿಭಾಷಾ ಸೂತ್ರಕ್ಕೆ ಶಿಕ್ಷಣ ಸಚಿವ ಮಧು ಬಂಗಾರಪ್ಪನವರು ಕೊಡಲಿ ಪೆಟ್ಟು ನೀಡುತ್ತಿದ್ದಾರೆ. ತೃತೀಯ ಭಾಷೆಯ ಅಂಕಗಳನ್ನು ಕೈಬಿಟ್ಟು ಕೇವಲ ಗ್ರೇಡ್ ಪದ್ಧತಿಗೆ ಸೀಮಿತಗೊಳಿಸಿರುವುದು ಶಿಕ್ಷಣ ಕ್ಷೇತ್ರದಲ್ಲಿ ಅರಾಜಕತೆ ಸೃಷ್ಟಿಸಲಿದೆ. ಸಚಿವರ ಈ ಅಪ್ರಬುದ್ಧ ನಿರ್ಧಾರವು ರಾಜ್ಯದ ಶೈಕ್ಷಣಿಕ ಘನತೆಗೆ ಧಕ್ಕೆ ತಂದಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ವಿದ್ಯಾರ್ಥಿಗಳು ಕನ್ನಡವನ್ನು ಅಸ್ಮಿತೆಯಾಗಿ, ಇಂಗ್ಲಿಷ್ ಅನ್ನು ಸಂವಹನಕ್ಕಾಗಿ ಹಾಗೂ ಹಿಂದಿ ಅಥವಾ ಸಂಸ್ಕೃತವನ್ನು ರಾಷ್ಟ್ರೀಯ ಮತ್ತು ಸಾಂಸ್ಕೃತಿಕ ದೃಷ್ಟಿಕೋನದಿಂದ ಕಲಿಯುತ್ತಿದ್ದರು. ಆದರೆ ಈಗ ತೃತೀಯ ಭಾಷೆಯು ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಾಗಿದೆ. ಇದರಿಂದ ಮಕ್ಕಳ ಭಾಷಾ ಸಾಮರ್ಥ್ಯ ಕುಂಠಿತಗೊಳ್ಳಲಿದೆ. ಶಿಕ್ಷಣ ತಜ್ಞರ ಜತೆ ಯಾವುದೇ ಪೂರ್ವಭಾವಿ ಚರ್ಚೆ ನಡೆಸದೆ ಏಕಾಏಕಿ ಇಂತಹ ಬದಲಾವಣೆ ಜಾರಿಗೊಳಿಸಿರುವುದು ಸಚಿವರ ಸರ್ವಾಧಿಕಾರಿ ಧೋರಣೆಯನ್ನು ಎತ್ತಿ ತೋರಿಸುತ್ತದೆ ಎಂದು ಟೀಕಿಸಿದ್ದಾರೆ.

ಶಿಕ್ಷಣ ಕ್ಷೇತ್ರವು ರಾಜಕೀಯ ಪ್ರಯೋಗ ಶಾಲೆಯಲ್ಲ. ಈ ನಿರ್ಧಾರದಿಂದ ನಮ್ಮ ವಿದ್ಯಾರ್ಥಿಗಳು ರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ಹಿನ್ನಡೆ ಅನುಭವಿಸುವಂತಾಗುತ್ತದೆ. ಸರಕಾರ ಈ ಆದೇಶವನ್ನು ರದ್ದುಗೊಳಿಸಿ, ಭಾಷಾ ತಜ್ಞರು ಹಾಗೂ ಸಾಹಿತಿಗಳ ಸಮ್ಮುಖದಲ್ಲಿ ಚರ್ಚೆ ನಡೆಸಿ ಮುಂದಿನ ತೀರ್ಮಾನ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಪಕ್ಷೇತರ ಅಭ್ಯರ್ಥಿ ಮನವೊಲಿಕೆಗೆ 'ಕೈ' ಕಸರತ್ತು

ದಾವಣಗೆರೆ: ಉಪಚುನಾವಣಾ ಕದನದಿಂದ ಸಾದಿಕ್ ಪೈಲ್ವಾನ್ ಅವರನ್ನು ಮನವೊಲಿಸಿ ನಾಮಪತ್ರ ವಾಪಸ್ ಪಡೆದಿದ್ದ ಕಾಂಗ್ರೆಸ್ ಈಗ ಮತ್ತೊಬ್ಬ ಪಕ್ಷೇತರ ಅಭ್ಯರ್ಥಿ ಮನವೊಲಿಕೆಗೆ ಮುಂದಾಗಿದೆ. ಮತ ವಿಭಜನೆ ಆತಂಕದಲ್ಲಿ ಅಲ್ಪಸಂಖ್ಯಾತ ಯುವ ಮುಖಂಡ ಖಾದರ್ ಆದಿಲ್ ಬಾಷಾ ಮನವೊಲಿಕೆ ಯತ್ನ ನಡೆದಿದೆ. ಭದ್ರಾವತಿ ಶಾಸಕ ಸಂಗಮೇಶ್ ಅವರನ್ನು ಆದಿಲ್ ಬಾಷ ಅವರ ಮನೆಗೆ ಹೈಕಮಾಂಡ್ ಕಳುಹಿಸಿತ್ತು. ಒಂದು ಗಂಟೆಗಳ ಕಾಲ ಮನವೊಲಿಕೆಗೆ ಯತ್ನಿಸಿದ್ದಾರೆ. ಆದಿಲ್ ಪರ ಸಿಎಂ ಇಬ್ರಾಹಿಂ, ಕೋಡಿಹಳ್ಳಿ ಚಂದ್ರಶೇಖರ್ ಸೇರಿ ಹಲವರು ಪ್ರಚಾರ ನಡೆಸಿದ್ದಾರೆ.

ಚಿಕ್ಕಬಳ್ಳಾಪುರದಲ್ಲಿ ಬಂಕ್ ಕ್ಲೋಸ್ ಮಾಡಿಸಿದ ರೈತರು

ಬಾಟಲಿಗೆ ಪೆಟ್ರೋಲ್ ಹಾಕದ್ದಕ್ಕೆ ಕಿಡಿ

ಚಿಕ್ಕಬಳ್ಳಾಪುರ: ಪ್ಲಾಸ್ಟಿಕ್ ಬಾಟಲಿ, ಕ್ಯಾನ್‌ಗಳಿಗೆ ಪೆಟ್ರೋಲ್ ಡೀಸೆಲ್ ಹಾಕದ ಹಿನ್ನೆಲೆ ಪೆಟ್ರೋಲ್ ಬಂಕ್ ಬಂದ್ ಮಾಡಿಸಿ ರೈತರು ಆಕ್ರೋಶ ಹೊರಹಾಕಿರುವ ಘಟನೆ ಚಿಕ್ಕಬಳ್ಳಾಪುರ ಜಿಲ್ಲಾಡಳಿತ ಭವನದ ಭಾರತ್ ಪೆಟ್ರೋಲ್ ಬಂಕ್‌ನಲ್ಲಿ ನಡೆದಿದೆ.

ಪ್ಲಾಸ್ಟಿಕ್ ಬಾಟಲಿ, ಕ್ಯಾನ್‌ಗಳಿಗೆ ಪೆಟ್ರೋಲ್ ಡೀಸೆಲ್ ಹಾಕದಂತೆ ಕೇಂದ್ರ ಪೆಟ್ರೋಲಿಯಂ ಸಚಿವಾಲಯ ಬಂಕ್ ಮಾಲೀಕರಿಗೆ ಖಡನ್ ಸೂಚನೆ ಕೊಟ್ಟಿದೆ. ಹೀಗಾಗಿ ಬಂಕ್‌ನವರು ಪ್ಲಾಸ್ಟಿಕ್ ಬಾಟಲಿ, ಕ್ಯಾನ್‌ಗಳಿಗೆ ಪೆಟ್ರೋಲ್ ಡೀಸೆಲ್ ಹಾಕುತ್ತಿಲ್ಲ. ಇದರಿಂದ ರೋಸಿ ಹೋದ ರೈತರು, ಬೆಳೆಗಳಿಗೆ ಮದ್ದು ಹೊಡೆಯುವ ಮಿನಿ ಟ್ರ್ಯಾಕ್ಟರ್‌ನಿಂದ ಮದ್ದು ಹೊಡೆಯಲು ಪೆಟ್ರೋಲ್ ಡೀಸೆಲ್ ಬೇಕೇ ಬೇಕು. ಇಷ್ಟು ದಿನ ಪ್ಲಾಸ್ಟಿಕ್ ಬಾಟಲಿಗಳಿಗೆ ಪೆಟ್ರೋಲ್-ಡೀಸೆಲ್ ಹಾಕುತ್ತಿದ್ದ ಬಂಕ್‌ನವರು ಈಗ ಹಾಕಲ್ಲ ಅಂತಿದ್ದಾರೆ. ನಮಗೆ ಪೆಟ್ರೋಲ್ ಡೀಸೆಲ್ ಬೇಕು ಅಂತ ಆಕ್ರೋಶ ಹೊರ ಹಾಕಿದರು. ರೈತರಿಗೆ ಹಾಕಲ್ಲ ಅಂದರೆ ಯಾರಿಗೂ ಪೆಟ್ರೋಲ್ ಡೀಸೆಲ್ ಹಾಕಬೇಡಿ ಎಂದು ಗಲಾಟೆ ಮಾಡಿ ಪೆಟ್ರೋಲ್ ಬಂಕ್ ಬಂದ್ ಮಾಡಿಸಿ ಆಕ್ರೋಶ ವ್ಯಕ್ತಪಡಿಸಿದರು.



ಪರಿಶಿಷ್ಟ ಜಾತಿಯವರನ್ನು ವಿಂಗಡಿಸಿದ ಕೈ ನಾಯಕರು

ದಾವಣಗೆರೆ: ರಾಜ್ಯ ಸರಕಾರ ಪ.ಜಾತಿಗಳಿಗೆ ಮೂರು ಗುಂಪುಗಳನ್ನಾಗಿ ವಿಂಗಡಿಸಿ, ನಮ್ಮನಮ್ಮಲ್ಲೇ ಒಡಕು ಮೂಡಿಸಿದ್ದಾರೆ ಎಂದು ವಿಧಾನ ಪರಿಷತ್ ಪ್ರತಿಪಕ್ಷ ಉಪ ನಾಯಕ ಸುನೀಲ್ ವಲ್ಯಾಪುರೆ ಆರೋಪಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಒಳ ಮೀಸಲಾತಿ ಹಂಚಿಕೆ

ಮಾಡಿರುವ ವಿಚಾರದಲ್ಲಿ ಎಲ್ಲಾ 101 ಜಾತಿಗಳ ಜನರು ಅಸಮಾಧಾನಗೊಂಡಿದ್ದಾರೆ. ಬೋವಿ, ಲಂಬಾಣಿ, ಕೊರಚ, ಕೊರಮ ಸೇರಿದಂತೆ ನಾನಾ ಜಾತಿಗಳನ್ನು 'ಸಿ' ಗುಂಪಿಗೆ ಸೇರಿಸಿ ಅನ್ಯಾಯ ಮಾಡಿದೆ ಎಂದು ಕಿಡಿಕಾರಿದರು.

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆ ಹಿನ್ನೆಲೆ ಕ್ಷೇತ್ರದಲ್ಲಿರುವ ವಡ್ಡರ, ಬೋವಿ ಸಮುದಾಯದ ಬಂಧುಗಳನ್ನು ಭೇಟಿಯಾಗಿ ಮಾತನಾಡಿಸಿದಾಗ, ಕಾಂಗ್ರೆಸ್ ರಾಜ್ಯ ಸರಕಾರದಿಂದ ಸಮುದಾಯಕ್ಕೆ ಆಗಿರುವ ಅನ್ಯಾಯ, ಕಾಂಗ್ರೆಸ್ ವೈಫಲ್ಯ ಮತ್ತು ದಕ್ಷಿಣ ಕ್ಷೇತ್ರದಲ್ಲಿ ಅಭಿವೃದ್ಧಿಯಾಗದಿರುವ ಬಗ್ಗೆ ಆಕ್ರೋಶಕ್ಕೊಳಗಾಗಿದ್ದಾರೆ ಎಂದರು.

ಜಿಲ್ಲೆಗೆ ಶಾಮನೂರು ಶಿವಶಂಕರಪ್ಪ ಮತ್ತು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಕೊಡುಗೆ ಶೂನ್ಯವಾಗಿದೆ ಎಂದು ದೂರಿದರು.

ತಳ ಹಂತದಿಂದ ಬಂದಿರುವ ಬಿಜೆಪಿ ಅಭ್ಯರ್ಥಿ ಶ್ರೀನಿವಾಸ್ ದಾಸಕರಿಯಪ್ಪ ಮತ್ತು ಶ್ರೀಮಂತ ಕುಟುಂಬದ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ಮಧ್ಯೆ, ಅಜಗಜಾಂತರ ವ್ಯತ್ಯಾಸವಿದೆ. ಶ್ರೀನಿವಾಸ್ ಜನಸಾಮಾನ್ಯರಲ್ಲಿ ಬೆರೆಯುವ ಗುಣ ಹೊಂದಿದ್ದಾರೆ. ಶಾಸಕರು, ಸಂಸದರು ಅಂದರೆ ರಾಜರಲ್ಲ, ಜನರ ಸೇವಕರು ಮತ್ತು ಅವರ ಕೂಲಿ ಆಳುಗಳು. ಬಿಜೆಪಿಯಿಂದ ಯೋಗ್ಯ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದು, ಮತದಾರರು ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ಲಕ್ಷಾಂತರ ಭಕ್ತರ ನಡುವೆ ಶ್ರದ್ಧಾಭಕ್ತಿಯಿಂದ ನೆರವೇರಿದ ಶ್ರೀಕಂಠೇಶ್ವರಸ್ವಾಮಿ ರಥೋತ್ಸವ

ನಂಜನಗೂಡಿನಲ್ಲಿ ಅದ್ಧೂರಿ ಪಂಚಮಹಾರಥೋತ್ಸವ

ಪ್ರತಾಪ್ ಟಿ.ಕೋಡಿನರಸೀಪುರ ನಂಜನಗೂಡು

ಗರಳಪುರಿ ಕ್ಷೇತ್ರಾಧಿಪತಿ ಶ್ರೀಕಂಠೇಶ್ವರಸ್ವಾಮಿ ದೇವಾಲಯದಲ್ಲಿ ದೊಡ್ಡಜಾತ್ರಾ ಮಹೋತ್ಸವ ಅಂಗವಾಗಿ ಸೋಮವಾರ ಗೌತಮ ಪಂಚ ಮಹಾರಥೋತ್ಸವ ಲಕ್ಷಾಂತರ ಭಕ್ತರ ನಡುವೆ ಶ್ರದ್ಧಾಭಕ್ತಿಯಿಂದ ನೆರವೇರಿತು.ದೇಗುಲದಲ್ಲಿ ಮಧ್ಯರಾತ್ರಿಯಿಂದಲೇ ಧಾರ್ಮಿಕ ಪೂಜಾ ಕಾರ್ಯವನ್ನು ಪ್ರಧಾನ ಆಗಮಿಕ ಜೆ.ನಾಗಚಂದ್ರ ದೀಕ್ಷಿತ್ ನೇತೃತ್ವದಲ್ಲಿ ಸಾಂಗವಾಗಿ ನೆರವೇರಿಸಿ ಪ್ರಾತಃಕಾಲ 5:50 ರಿಂದ 6:30ರೊಳಗೆ ಸಲ್ಲುವ ಶುಭ ಮೀನಾ ಲಗ್ನದಲ್ಲಿ ಶ್ರೀಮನ್ಮಹಾಗೌತಮ ರಥಾರೋಹಣ ನೆರವೇರಿಸಲಾಯಿತು. ಶಾಸಕ ದರ್ಶನ್ ಧ್ರುವನಾರಾಯಣ ರಥಗಳಿಗೆ ಪೂಜೆ ಸಲ್ಲಿಸಿ ಚಕ್ರಗಳಿಗೆ ಈಡುಗಾಯಿ ಹೊಡೆಯುವ ಮೂಲಕ ಚಾಲನೆ ಕೊಟ್ಟರು. ಬಹಳ ಆಸ್ಥೆಯಿಂದ ಕಾದು ನಿಂತಿದ್ದ ಭಕ್ತರು ಜಯಘೋಷದೊಂದಿಗೆ ರಥವನ್ನು ಎಳೆಯುವ ಮೂಲಕ ಸಂಭ್ರಮಪಟ್ಟರು. ಯುವಕರು ತಮಟೆ ಸದ್ದಿಗೆ ಕುಣಿದು ಕುಪ್ಪಳಿಸುವ ಮೂಲಕ ಜಾತ್ರೆಗೆ ಕಳೆಗಟ್ಟಿಸಿದರು.

ಅಲಂಕೃತ ಗೌತಮ ರಥವನ್ನು ಕಣ್ತುಂಬಿಕೊಳ್ಳಲು ರಥಬೀದಿಯ ಎರಡು ಇಕ್ಕೆಲಗಳಲ್ಲಿ ಹಾಗೂ ಕಟ್ಟಡಗಳ ಮೇಲೇರಿ ಕುಳಿತಿದ್ದ ಭಕ್ತರು ಹತ್ತಿರದಲ್ಲೇ ಶ್ರೀಕಂಠೇಶ್ವರಸ್ವಾಮಿ ಉತ್ಸವಮೂರ್ತಿ ಕಂಡು ಭಾವಪರವಶರಾದರು. ವಿವಿಧ ವರ್ಣಾಲಂಕಾರಿಕ ಬಟ್ಟೆಗಳಿಂದ ಸಿಂಗರಿಸಲಾಗಿದ್ದ ರಥದಲ್ಲಿ ಹೂವಿನಿಂದ ಬಿಡಿಸಲಾಗಿದ್ದ ನಂಜುಂಡೇಶ್ವರ ರಥೋತ್ಸವ ಭಕ್ತರನ್ನು ಸೆಳೆಯಿತು.

ರಥೋತ್ಸವದಲ್ಲಿ ಮೊದಲು ಗಣಪತಿ ರಥ, ನಂತರ ಶ್ರೀಕಂಠೇಶ್ವರಸ್ವಾಮಿ ಉತ್ಸವಮೂರ್ತಿ ಹೊತ್ತ ಗೌತಮ ರಥ ಸಾಗಿತು. ಬಳಿಕ ಸುಬ್ರಹ್ಮಣ್ಯೇಶ್ವರ ಹಾಗೂ ಚಂಡಿಕೇಶ್ವರ ರಥ ತೆರಳಿದವು. ಕೊನೆಯಲ್ಲಿ ಪಾರ್ವತಿದೇವಿ ರಥ ಸಾಗಿತು. ಗೌತಮ ರಥ ಸುಮಾರು ಒಂದೂವರೆ ತಾಸಿನಲ್ಲಿ ಸ್ವಸ್ಥಾನಕ್ಕೆ ಮರಳಿದರೆ, ಪಾರ್ವತಿದೇವಿ ರಥ ಒಂದೂವರೆ ತಾಸಿನಲ್ಲಿ ಸ್ವಸ್ಥಾನಕ್ಕೆ ತಲುಪಿತು. ಸುಮಾರು ನಾಲ್ಕು ತಾಸುಗಳ ಕಾಲ ರಥಬೀದಿಯಲ್ಲಿ ಪಂಚ ರಥಗಳು ವಿರಾಜಮಾನವಾಗಿ ಸಾಗಿ ಭಕ್ತರ ಮನಸೂರೆಗೊಂಡವು.

ಲಕ್ಷಾಂತರ ಭಕ್ತರ ಜಯಘೋಷಗಳ ನಡುವೆ ಮೈಸೂರು ಜಿಲ್ಲೆಯ ನಂಜನಗೂಡಿನಲ್ಲಿ ಶ್ರೀಕಂಠೇಶ್ವರಸ್ವಾಮಿ ರಥೋತ್ಸವ ಅದ್ಧೂರಿಯಾಗಿ ಸೋಮವಾರ ನೆರವೇರಿತು.

ಮುನ್ನಚ್ಚರಿಕೆ ಕ್ರಮವಾಗಿ ರಥದ ಹಿಂದೆ ಜೆಸಿಬಿ, ತುರ್ತು ವಾಹನ, ಅಗ್ನಿ ಶಾಮಕ ವಾಹನ ಹಾಗೂ ಒಂದು ಕ್ರೇನ್, ಹೈಡ್ರಾಲಿಕ್ ವೈರ್ ವಾಹನ ಸಾಗಿದವು. ಯಾವುದೇ ಅಹಿತಕರ ಘಟನೆ ನಡೆಯದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿತ್ತು. ಡ್ರೋನ್ ಕ್ಯಾಮರಾ ಕಣ್ಗಾವಲಿನಲ್ಲಿ ಜಾತ್ರೆ ನಡೆಯಿತು.

ಪ್ರಸಾದ ವಿನಿಯೋಗ: ಜಾತ್ರೆಗೆ ಆಗಮಿಸಿದ ಭಕ್ತರಿಗೆ ವಿವಿಧ ಸೇವಾ ಸಂಘ ಸಂಸ್ಥೆ ಹಾಗೂ ಸೇವಾರ್ಥದಾರರು ಅನ್ನ ಸಂತರ್ಪಣೆ, ತಂಪು ಪಾನೀಯ ವಿತರಿಸಿದರು. ದೇವಾಲಯದ ಆವರಣ, ರಥಬೀದಿ, ರಾಷ್ಟ್ರಪತಿ ರಸ್ತೆ, ಬಜಾರ್ ರಸ್ತೆ, ಎಂಜಿಎಸ್ ರಸ್ತೆಗಳಲ್ಲಿ ಸೇವಾ ಸಂಸ್ಥೆಗಳ ಸ್ವಯಂ ಸೇವಕರು ಉಪಹಾರ, ಹಣ್ಣುಹಂಪಲು, ಶುದ್ಧ ಕುಡಿಯುವ ನೀರು, ಐಸ್‌ಕ್ರೀಮ್, ಮಜ್ಜಿಗೆ, ಪಾನಕ ನೀಡಿದರು. ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ನಂಜನಗೂಡು ಶ್ರೀಕಂಠೇಶ್ವರ ಸೇವಾ ಸಂಘದ ವತಿಯಿಂದ ನಾಲ್ಕು ಕಡೆ ಪ್ರಸಾದ ಕೌಂಟರ್ ತೆರೆದು ಸಿಹಿಖಾದ್ಯ ಹಾಗೂ ಉಪಹಾರ ವಿತರಿಸಲಾಯಿತು.

ಹೃದಯಾಘಾತದಿಂದ ಸಾವು

ದಕ್ಷಿಣ ಕಾಶಿ ಖ್ಯಾತಿಯ ಶ್ರೀಕಂಠೇಶ್ವರ ಸ್ವಾಮಿ ದೊಡ್ಡ ಜಾತ್ರೆಗೆ ಬಂದಿದ್ದ ಭಕ್ತ ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ. ಬೆಂಗಳೂರು ಸಮೀಪದ ಮಾಗಡಿಯಿಂದ ಆಗಮಿಸಿದ್ದ ನಂಜುಂಡಸ್ವಾಮಿ ಎಂಬವರೇ ಮೃತಪಟ್ಟವರು. ದೇವಸ್ಥಾನದ ಮುಂಭಾಗದಲ್ಲಿ ಕುಸಿದು ಬಿದ್ದಿದ್ದ ಅವರನ್ನು ಆಸ್ಪತ್ರೆಗೆ ಸಾಗಿಸು ಮಾರ್ಗ ಮಧ್ಯೆ ಸಾವನ್ನಪ್ಪಿದ್ದಾರೆ. ಪ್ರತಿವರ್ಷ ಜಾತ್ರೆಯನ್ನು ನೋಡಲು ಆಗಮಿಸುತ್ತಿದ್ದ ನಂಜುಂಡಸ್ವಾಮಿ ಕಿಡ್ನಿ ಸಮಸ್ಯೆ ಕಾಯಿಲೆಯಿಂದ ಬಳಲುತ್ತಿದ್ದರು ಎನ್ನಲಾಗಿದೆ. ನಂಜನಗೂಡು ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಲ್ತುಳಿತ: ತಂದೆ, ಮಗನಿಗೆ ಗಾಯ

ನಂಜುಂಡೇಶ್ವರನ ದೊಡ್ಡ ಜಾತ್ರೆಯಲ್ಲಿ ಕಾಲ್ತುಳಿತಕ್ಕೆ ತಂದೆ ಮಗ ಗಾಯಗೊಂಡಿದ್ದಾರೆ. ಪಂಚ ಮಹಾರಥೋತ್ಸವ ಸಾಗುವ ಸಂದರ್ಭದಲ್ಲಿ ಘಟನೆ ನಡೆದಿದೆ. ಬಾರಿ ಭಕ್ತ ಸಮೂಹದ ಮಧ್ಯೆ ಸಿಲುಕಿ ಮಗನಿಗೆ ಕಾಲು ಮುರಿದಿದೆ. ತಂದೆ ಗಾಯಗೊಂಡಿದ್ದಾರೆ. ಹೆಚ್ಚಿನ ಚಿಕಿತ್ಸೆಗಾಗಿ ಇಬ್ಬರನ್ನು ಮೈಸೂರಿನ ಆಸ್ಪತ್ರೆಗೆ ರವಾನಿಸಲಾಗಿದೆ.

ಸಂಪಾದಕೀಯ

ತಡವಾಗಿ ದಕ್ಕಿದ ಅರಿವು

ಮೊದಲ ಅವಧಿಗೆ ಅಮೆರಿಕದ ಅಧ್ಯಕ್ಷರಾಗಿದ್ದಾಗಲೇ ಡೊನಾಲ್ಡ್ ಟ್ರಂಪ್ ಮಹಾಶಯರು ತಮ್ಮ ವಿಲಕ್ಷಣ ಮಾತು ಹಾಗೂ ವರ್ತನೆಗಳಿಗೆ ಹೆಸರಾಗಿದ್ದರು. ಈಗ ಎರಡನೇ ಅವಧಿಗೆ ಗದ್ದುಗೆ ಏರುತ್ತಿದ್ದಂತೆ, ಈ ವಿಲಕ್ಷಣತೆಗೆ ಹೊಸತೊಂದು ಆಯಾಮವನ್ನೇ ನೀಡಿಬಿಟ್ಟ ಅವರು 'ಅಮೆರಿಕವನ್ನು ಮತ್ತೊಮ್ಮೆ ಮಹತ್ತರವಾಗಿಸುವ' ನೆಪವನ್ನು ಮುಂದಿಟ್ಟುಕೊಂಡು ಅನ್ಯದೇಶಗಳ ವಲಸಿಗ ಉದ್ಯೋಗಿಗಳಿಗೆ ಲಗಾಮು ಹಾಕುವ, ವೀಸಾದ ವಾರ್ಷಿಕ ಶುಲ್ಕದ ಪ್ರಮಾಣವನ್ನು ಮುಗಿಲು ಮುಟ್ಟಿಸುವ ಹಾಗೂ ತಮ್ಮ ಕಣ್ಣಿನ ಇಶಾರೆಗೆ ತಕ್ಕಂತೆ ನರ್ತಿಸದ ದೇಶಗಳ ವಿರುದ್ಧ ಆಮದು ಸುಂಕವನ್ನು ಯದ್ವಾತದ್ವಾ ಹೆಚ್ಚಿಸುವ ಹುಚ್ಚಾಟಗಳಿಗೆ ಇಳಿದುಬಿಟ್ಟರು. ಇಷ್ಟು ಸಂದರ್ಭದಲ್ಲಿ, ಟ್ರಂಪ್‌ರ ಇಂಥ ನಡೆಗಳಿಂದ ಅಸಮಾಧಾನಗೊಂಡಿದ್ದ ಒಂದಷ್ಟು ದೇಶಗಳು 'ಆಡಲೂ ಆಗದೆ, ಅನುಭವಿಸಲೂ ಆಗದೆ' ಬಿಸಿತುಪ್ಪವನ್ನು ಬಾಯಲ್ಲೇ ಇಟ್ಟುಕೊಂಡಿದ್ದವು (ಆದರೆ ಟ್ರಂಪಣ್ಣನ ಇಂಥ ಗೊಡ್ಡು ಬೆದರಿಕೆಗಳಿಗೆ ಜಗ್ಗದ ದೇಶಗಳಲ್ಲಿ ಭಾರತವೂ ಸೇರಿತ್ತು ಎನ್ನಿ!). ಇಷ್ಟು ಸಾಲದೆಂಬಂತೆ, ಗ್ರೀನ್‌ಲ್ಯಾಂಡ್ ಅನ್ನು ವಶಕ್ಕೆ ತೆಗೆದುಕೊಳ್ಳುವ ಹರಸಾಹಸಕ್ಕೂ ಕೈಹಾಕಿದ ಟ್ರಂಪ್, ತರುವಾಯದಲ್ಲಿ 'ಪರಮಾಣು ಶಸ್ತ್ರಾಸ್ತ್ರಗಳನ್ನು ಇಟ್ಟುಕೊಂಡಿದೆ' ಎಂಬ ನೆಪವನ್ನು ಮುಂದುಮಾಡಿಕೊಂಡು ಇಸ್ರೇಲ್‌ನ ಜತೆಗೂಡಿ ಇರಾನ್ ಮೇಲೆ ಹಣಾಹಣಿಗೆ ಇಳಿದರು. ಅದೀಗ ಜಗತ್ತಿನಲ್ಲಿ ಯಾವ ತೆರನಾದ ಸಾಮಾಜಿಕ ಮತ್ತು ಆರ್ಥಿಕ ಅಸ್ತವ್ಯಸ್ತತೆಯನ್ನು ಹುಟ್ಟುಹಾಕಿದೆ ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ. ಪ್ರಾಯಶಃ ಇಷ್ಟು ಹುಚ್ಚಾಟಗಳನ್ನು ಮೌನದಿಂದಲೇ ಸಹಿಸಿಕೊಂಡಿದ್ದ ಅಮೆರಿಕನ್ನರು ಈಗ ಟ್ರಂಪ್‌ರ ವಿರುದ್ಧವೇ ಭುಗಿಲೆದ್ದಿದ್ದಾರೆ. ಇರಾನ್ ವಿರುದ್ಧದ ಯುದ್ಧವನ್ನು ಖಂಡಿಸಿ ಭಾರಿ ಸಂಖ್ಯೆಯಲ್ಲಿ ಬೀದಿಗಿಳಿದಿರುವ ಅಮೆರಿಕನ್ನರು 'ನೋ ಕಿಂಗ್ಸ್' (ರಾಜರು ಬೇಡ) ಹಣೆಪಟ್ಟಿಯ ಚಳವಳಿಯ ಭಾಗವಾಗಿ ದೇಶದ ಉದ್ದಗಲಕ್ಕೂ ರ್‍ಯಾಲಿ ನಡೆಸಿದ್ದಾರೆ. ಪ್ರಾಯಶಃ ಟ್ರಂಪ್ ಮಹಾಶಯರು ಇದನ್ನು ನಿರೀಕ್ಷಿಸಿರಲಿಲ್ಲ ಎನಿಸುತ್ತದೆ. ಪರರು ತಿರುಗಿಬಿದ್ದಾಗ ಅದನ್ನು ಎಡಗಾಲಿನಿಂದ ತಳ್ಳಿಹಾಕಬಹುದೇನೋ? ಆದರೆ ಮನೆಯ ಜನರೇ ಕನಲಿ ಕೆಂಡವಾದಾಗ ಅದನ್ನು 'ಎಚ್ಚರಿಕೆಯ ಗಂಟೆ' ಎಂದೇ ಪರಿಗಣಿಸಬೇಕಾಗುತ್ತದೆ. ಟ್ರಂಪಣ್ಣ ಈ ಪರಿಸ್ಥಿತಿಯನ್ನು ಇನ್ನಾದರೂ ಗಂಭೀರವಾಗಿ ಪರಿಗಣಿಸಲಿ..!

ಸೊಂಪಾದಕೀಯ

ಕೂಲ್ ಕಸ್ಟಮರ್?

ಸಾಮಾನ್ಯವಾಗಿ ಬ್ಯುಸಿನೆಸ್ ಮಾಡುವವರು ನಂಬುವ ತತ್ವ ಅಂದ್ರೆ 'ಕಸ್ಟಮರ್ ಈಸ್ ದ ಕಿಂಗ್' – 'ಗ್ರಾಹಕ ಅಂದ್ರೆ ದೇವರು' ಅಂತ. ಆದರೆ ಕೆಲವು ಗ್ರಾಹಕರು ಮೈಮೇಲೆ ದೆವ್ವ ಬಂದಂತೆ ಆಡಿದಾಗ ಇಂಥ ಮಾತುಗಳಿಗೆ ಬೆಲೆ ಇಲ್ಲ ಅಂತ ಅನ್ನಿಸೋದು ಸಹಜ. ಕೂಲ್ ಆಗಿರುವ ಕಸ್ಟಮರ್‌ಗಳು ಬಂದಾಗ ಅಂಗಡಿ ಮಾಲೀಕರಿಗೆ ಖುಷಿ ಆಗುತ್ತದೆ. ಆದರೆ 'ಕಸ್ಟಮರ್ ಲಾಸ್ಟ್ ಹಿಸ್ ಕೂಲ್' ಅನ್ನುವಂಥ ಘಟನೆಯೊಂದು ಸುಮಾರು 1 ವರ್ಷದ ಹಿಂದೆ ಬೆಂಗಳೂರಿನ ವಿಜಯನಗರದ ಎಂಸಿ ಲೇಔಟ್‌ನಲ್ಲಿ ನಡೆದಿತ್ತು. ಅದು ಕೂಡ ಕೂಲ್ ಆಗಿರುವ ಐಸ್ ಕ್ರೀಂ ಮಾರುವ ಅಂಗಡಿಯಲ್ಲಿ. ತಣ್ಣಗೆ ಕೂತು ಐಸ್ ಕ್ರೀಂ ತಿನ್ನುವ ಅಂಗಡಿಯಲ್ಲಿ ಜಗಳದ ಬಿಸಿ ಏರಿತು. ಆದರೆ ತಣ್ಣನೆಯ ಐಸ್ ಕ್ರೀಂ ಮಾರುವ ಅಂಗಡಿಯಲ್ಲಿ ನಡೆದ ಈ ಜಗಳ ತಣ್ಣಗಾಗುವುದರೊಳಗೆ ಸಾಕಷ್ಟು ಅನಾಹುತಗಳು ನಡೆದವು ಅನ್ನೋದು ವಿಪರ್ಯಾಸ. ಮಧ್ಯರಾತ್ರಿ ಈ ಅಂಗಡಿಗೆ ಬಂದ ಕೆಲವು ಗ್ರಾಹಕರು ಐಸ್ ಕ್ರೀಂ ಕೇಳಿದರಂತೆ. ಆದರೆ ರಾತ್ರಿ 1 ಗಂಟೆ ಆದ್ದರಿಂದ 'ಇದು ಅಂಗಡಿ ಮುಚ್ಚುವ ಸಮಯ. ಹಾಗಾಗಿ ಐಸ್ ಕ್ರೀಂ ಸರ್ವ್ ಮಾಡೋಕೆ ಆಗಲ್ಲ, ಬೇಕಿದ್ರೆ ಪಾರ್ಸಲ್ ಕೊಡ್ತೀವಿ' ಅಂದರಂತೆ ಅಂಗಡಿಯವರು. ಆದರೆ 'ನಾವು ಇಲ್ಲೇ ದುಂಡು ಟೇಬಲ್‌ನಲ್ಲಿ ಕುಂತು ತಿನ್ನಬೇಕು' ಅಂತ ವರಾತ ತೆಗೆದ ಗ್ರಾಹಕರು ನಂತರ ದುಂಡಾವರ್ತಿ ನಡೆಸಿದರಂತೆ. ಅಲ್ಲಿನ ಸಿಬ್ಬಂದಿ ಜತೆ ವಾಗ್ವಾದ ಮಾಡಿ ಅಲ್ಲಿದ್ದ ಕಂಪ್ಯೂಟರ್ ಅನ್ನು ತಳ್ಳಿದ್ದಲ್ಲದೆ ಅಲ್ಲಿದ್ದ ಕೂಲ್ ಐಸ್ ಕ್ರೀಂ ಅಂಗಡಿಯ ಗ್ರಾಹಕರ ಮೇಲೂ ಗರಂ ಆದರಂತೆ. ಐಸ್ ಮೆಲ್ಲುತ್ತಿದ್ದ ಗ್ರಾಹಕರನ್ನು 'ಇಲ್ಲಿಂದ ಎದ್ದು ಹೊರಡಿ' ಅಂತ ಬಲವಂತವಾಗಿ ಹೊರಗೆ ಕಳಿಸಿದರಂತೆ. ಜತೆಗೆ ಸಿಬ್ಬಂದಿಗೆ ಬೆದರಿಕೆ ಹಾಕಿ ಹಲ್ಲೆ ನಡೆಸಲು ಪ್ರಯತ್ನ ಪಟ್ಟರಂತೆ. ಇದೆಲ್ಲದರ ಪರಿಣಾಮವಾಗಿ, ಕೂಲ್ ಆಗಿದ್ದ ಐಸ್ ಕ್ರೀಂ ಅಂಗಡಿ ರಣಾಂಗಣವಾಗಿ ಜಗಳದ ಬಿಸಿ ಜೋರಾಯಿತು. ಪ್ರಕರಣ ಪೊಲೀಸರವರೆಗೂ ಹೋಯಿತು. 'ಕೂಲ್' ಆಗಿರಬೇಕಿದ್ದ ಕಸ್ಟಮರ್‌ಗಳು 'ಹಾಟ್' ಆದ್ರೆ ಹೀಗೇನೇ ಆಗೋದು..!!

ಸಂಪಾದಕರ ಸದ್ಯಶೋಧನೆ

'ಗ್ರೇ ಎಮರ್ಜೆನ್ಸಿ' ಎಂದರೇನು?

ಇತ್ತೀಚಿನ ದಿನಗಳಲ್ಲಿ, 'ಗ್ರೇ ಎಮರ್ಜೆನ್ಸಿ' (Grey Emergency) ಎಂಬ ಪದಬಳಕೆಯನ್ನು ನೀವು ಗಮನಿಸಿರಬಹುದು. ಇದು ಇಂದಿನ ಜಗತ್ತು ಎದುರಿಸುತ್ತಿರುವ ಒಂದು ಗಂಭೀರವಾದ, ಆದರೆ ಅಷ್ಟಾಗಿ ಚರ್ಚೆಯಾಗದ ಸಾಮಾಜಿಕ ಮತ್ತು ಆರ್ಥಿಕ ಸವಾಲಾಗಿದೆ. ಹಾಗಾದರೆ ಏನಿದು ಗ್ರೇ ಎಮರ್ಜೆನ್ಸಿ? ಯಾವುದೇ ಒಂದು ದೇಶದ ಅಥವಾ ಜಗತ್ತಿನ ಜನಸಂಖ್ಯೆಯಲ್ಲಿ ಯುವಜನರಿಗಿಂತ ವಯಸ್ಸಾದವರ (ಹಿರಿಯ ನಾಗರಿಕರ) ಸಂಖ್ಯೆ ವೇಗವಾಗಿ ಹೆಚ್ಚಾಗುವುದನ್ನು 'ಗ್ರೇ ಎಮರ್ಜೆನ್ಸಿ' ಎಂದು ಕರೆಯಲಾಗುತ್ತದೆ. ತಲೆಗೂದಲು ಬೆಳ್ಳಗಾಗುವ ವಯಸ್ಸಿನವರು ಹೆಚ್ಚಾಗುತ್ತಿರುವುದರಿಂದ ಇದಕ್ಕೆ 'ಗ್ರೇ' (Grey) ಎಂಬ ಹೆಸರಿಡಲಾಗಿದೆ. ವೈದ್ಯಕೀಯ ವಿಜ್ಞಾನದ ಪ್ರಗತಿಯಿಂದಾಗಿ ಮನುಷ್ಯನ ಸರಾಸರಿ ಆಯಸ್ಸು ಹೆಚ್ಚಾಗಿದೆ. ಆಧುನಿಕ ಜೀವನಶೈಲಿ ಮತ್ತು ಆರ್ಥಿಕ ಕಾರಣಗಳಿಂದಾಗಿ ದಂಪತಿಗಳು ಕಡಿಮೆ ಮಕ್ಕಳನ್ನು ಹೊಂದುತ್ತಿದ್ದಾರೆ ಅಥವಾ ಮಕ್ಕಳೇ ಬೇಡ ಎನ್ನುತ್ತಿದ್ದಾರೆ. ಗ್ರೇ ಎಮರ್ಜೆನ್ಸಿಯು ಕೇವಲ ಆರೋಗ್ಯಕ್ಕೆ ಸಂಬಂಧಿಸಿದ್ದಲ್ಲ, ಇದು ದೇಶದ ಬೆನ್ನೆಲುಬನ್ನೇ ನಡುಗಿಸಬಲ್ಲದು. ಯುವಜನರ ಸಂಖ್ಯೆ ಕಡಿಮೆಯಾದಾಗ ಕಾರ್ಖಾನೆಗಳು, ಐಟಿ ಕಂಪನಿಗಳು ಮತ್ತು ಕೃಷಿ ಕ್ಷೇತ್ರದಲ್ಲಿ ಕೆಲಸ ಮಾಡುವವರ ಕೊರತೆ ಉಂಟಾಗುತ್ತದೆ. ನಿವೃತ್ತರಾದವರಿಗೆ ಪೆನ್ಷನ್ (ನಿವೃತ್ತಿ ವೇತನ) ನೀಡಲು ಸರಕಾರಕ್ಕೆ ಹೆಚ್ಚಿನ ಹಣದ ಅಗತ್ಯವಿರುತ್ತದೆ. ಆದರೆ ತೆರಿಗೆ ಕಟ್ಟುವ ಯುವಜನರ ಸಂಖ್ಯೆ ಕಡಿಮೆಯಿರುವುದರಿಂದ ಬೊಕ್ಕಸಕ್ಕೆ ಹೊರೆಯಾಗುತ್ತದೆ. ವಯಸ್ಸಾದವರಿಗೆ ದೀರ್ಘಕಾಲದ ಕಾಯಿಲೆಗಳು (ಬಿಪಿ, ಮಧುಮೇಹ, ಮರೆವು) ಹೆಚ್ಚಿರುವುದರಿಂದ ಆಸ್ಪತ್ರೆ ಮತ್ತು ನರ್ಸಿಂಗ್ ಹೋಮ್‌ಗಳ ಅಗತ್ಯತೆ ವಿಪರೀತವಾಗಿ ಹೆಚ್ಚುತ್ತದೆ. ಅವಿಭಕ್ತ ಕುಟುಂಬಗಳು ಮಾಯವಾಗಿರುವುದರಿಂದ ಹಿರಿಯ ನಾಗರಿಕರು ಒಂಟಿತನ ಮತ್ತು ಖಿನ್ನತೆಗೆ ಒಳಗಾಗುತ್ತಿದ್ದಾರೆ. ಜಪಾನ್, ಇಟಲಿ ಮತ್ತು ಜರ್ಮನಿಯಂಥ ದೇಶಗಳು ಈಗಾಗಲೇ ಈ ಸಮಸ್ಯೆಯ ಸುಳಿಯಲ್ಲಿವೆ. ಭಾರತವು ಸದ್ಯಕ್ಕೆ 'ಯುವ ದೇಶ'ವಾಗಿದ್ದರೂ, ಮುಂದಿನ 20-30 ವರ್ಷಗಳಲ್ಲಿ ನಮ್ಮಲ್ಲೂ ಹಿರಿಯ ನಾಗರಿಕರ ಸಂಖ್ಯೆ ಗಣನೀಯವಾಗಿ ಏರಲಿದೆ ಎಂದು ಅಂಕಿ-ಅಂಶಗಳು ಹೇಳುತ್ತವೆ. ಈ ಪರಿಸ್ಥಿತಿಯನ್ನು ನಿಭಾಯಿಸಲು ಸರಕಾರ ಮತ್ತು ಸಮಾಜ ಸಿದ್ಧವಾಗಬೇಕಿದೆ. ಅನುಭವವಿರುವ ಹಿರಿಯರನ್ನು ಹೆಚ್ಚು ಕಾಲ ಕೆಲಸದಲ್ಲಿ ತೊಡಗಿಸಿಕೊಳ್ಳುವ, ಹಿರಿಯ ನಾಗರಿಕರಿಗೆ ಸುಲಭವಾಗಿ ಸಿಗುವ ಆರೋಗ್ಯ ವಿಮೆ ಯೋಜನೆಗಳನ್ನು ರೂಪಿಸುವ ಅಗತ್ಯವಿದೆ. ಹಿರಿಯ ನಾಗರಿಕರು ಸಮಾಜದ ಹೊರೆಯಲ್ಲ, ಅವರು ಜ್ಞಾನದ ಭಂಡಾರ. ಆದರೆ ಬದಲಾಗುತ್ತಿರುವ ಜನಸಂಖ್ಯೆಯ ಅನುಪಾತಕ್ಕೆ ತಕ್ಕಂತೆ ನಾವು ನಮ್ಮ ಆರ್ಥಿಕ ಮತ್ತು ಸಾಮಾಜಿಕ ನೀತಿಗಳನ್ನು ಬದಲಿಸಿಕೊಳ್ಳದಿದ್ದರೆ, 'ಗ್ರೇ ಎಮರ್ಜೆನ್ಸಿ' ಮುಂದೊಂದು ದಿನ ದೊಡ್ಡ ಬಿಕ್ಕಟ್ಟಾಗಿ ಪರಿಣಮಿಸಬಹುದು. ಹಿರಿಯರ ಸಂಖ್ಯೆ ಹೆಚ್ಚಾದಾಗ ದೇಶದ ಆರ್ಥಿಕತೆಯ ಮೇಲೆ ಪ್ರಭಾವ ಬೀರುತ್ತವೆ. ದುಡಿಯುವ ಯುವಜನರ ಸಂಖ್ಯೆ ಕಡಿಮೆಯಾದಂತೆ ಸರಕಾರಕ್ಕೆ ಬರುವ ಆದಾಯ ತೆರಿಗೆ ಕಡಿಮೆಯಾಗುತ್ತದೆ. ಹಿರಿಯರು ಸಾಮಾನ್ಯವಾಗಿ ತಮ್ಮ ಉಳಿತಾಯದ ಹಣವನ್ನು ಖರ್ಚು ಮಾಡುತ್ತಾರೆಯೇ ಹೊರತು ಹೊಸ ಹೂಡಿಕೆಗಳನ್ನು ಮಾಡುವುದು ಕಡಿಮೆ. ಇದು ಮಾರುಕಟ್ಟೆಯಲ್ಲಿ ಹಣದ ಚಲಾವಣೆಯನ್ನು ನಿಧಾನಗೊಳಿಸಬಹುದು. ಕೆಲಸಗಾರರ ಕೊರತೆಯಿಂದಾಗಿ ಕಂಪನಿಗಳು ಇರುವ ಅಲ್ಪಸ್ವಲ್ಪ ಯುವಜನರಿಗೆ ಅನಿವಾರ್ಯವಾಗಿ ಹೆಚ್ಚಿನ ವೇತನ ನೀಡಬೇಕಾಗುತ್ತದೆ, ಇದು ವಸ್ತುಗಳ ಬೆಲೆ ಏರಿಕೆಗೆ ಕಾರಣವಾಗಬಹುದು. ಜಪಾನ್‌ನಲ್ಲಿ ಶೇ. 28ಕ್ಕಿಂತ ಹೆಚ್ಚು ಜನ 65 ವರ್ಷ ಮೇಲ್ಪಟ್ಟವರು. ಅಲ್ಲಿ 'ವಯಸ್ಸಾದವರು ವಯಸ್ಸಾದವರನ್ನು ನೋಡಿಕೊಳ್ಳುವ' (Old-old care) ಪರಿಸ್ಥಿತಿ ಬಂದಿದೆ. ಮನೆಗೆಲಸಕ್ಕೆ ಮತ್ತು ಹಿರಿಯರ ಆರೈಕೆಗೆ ರೋಬೋಟ್‌ಗಳನ್ನು ಬಳಸಲಾಗುತ್ತಿದೆ. ಚೀನಾ ದಶಕಗಳ ಕಾಲ 'ಒಂದೇ ಮಗು' ನೀತಿ ಅನುಸರಿಸಿದ ಪರಿಣಾಮವಾಗಿ ಈಗ ಅಲ್ಲಿ ಹಿರಿಯರ ಸಂಖ್ಯೆ ಹೆಚ್ಚಾಗಿದೆ. ಇದನ್ನು ಸರಿಪಡಿಸಲು ಚೀನಾ ಈಗ ಮೂರು ಮಕ್ಕಳನ್ನು ಹೊಂದಲು ಪ್ರೋತ್ಸಾಹಿಸುತ್ತಿದೆ. ಇಟಲಿ ಮತ್ತು ಜರ್ಮನಿಯಂಥ ದೇಶಗಳಲ್ಲಿ ಹಳ್ಳಿಗಳಿಗೆ ಹಳ್ಳಿಗಳೇ ಖಾಲಿಯಾಗುತ್ತಿವೆ, ಏಕೆಂದರೆ ಅಲ್ಲಿ ವಯಸ್ಸಾದವರು ಮಾತ್ರ ಉಳಿದಿದ್ದಾರೆ. ಗ್ರೇ ಎಮರ್ಜೆನ್ಸಿಯನ್ನು ಕೇವಲ ಸಮಸ್ಯೆಯಾಗಿ ನೋಡದೆ ಒಂದು ಅವಕಾಶವಾಗಿಯೂ ನೋಡಬಹುದು. ಹಿರಿಯ ನಾಗರಿಕರಿಗೆ ಬೇಕಾದ ಪೌಷ್ಟಿಕ ಆಹಾರ, ಆರೋಗ್ಯ ಸೇವೆಗಳು, ಆರಾಮದಾಯಕ ಪೀಠೋಪಕರಣಗಳು ಮತ್ತು ವಿರಾಮದ ಪ್ರವಾಸೋದ್ಯಮಕ್ಕೆ ದೊಡ್ಡ ಮಾರುಕಟ್ಟೆ ಸೃಷ್ಟಿಯಾಗುತ್ತಿದೆ. ಯುವಜನರಿಗೆ ಮಾರ್ಗದರ್ಶನ ನೀಡಲು (Mentorship) ಹಿರಿಯರ ಅನುಭವವನ್ನು ಬಳಸಿಕೊಳ್ಳಬಹುದು. ಅನೇಕ ಕಂಪನಿಗಳು ಈಗ 'ರಿಟೈರ್' ಆದವರನ್ನು ಸಲಹೆಗಾರರನ್ನಾಗಿ ನೇಮಿಸಿಕೊಳ್ಳುತ್ತಿವೆ.

ತರಾತುರಿಯಲ್ಲಿ ತೃತೀಯ ಭಾಷೆ ಕೈಬಿಟ್ಟಿದ್ದೇಕೆ?

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ
vveditoped@gmail.com

ದೇಶ ಅಥವಾ ರಾಜ್ಯದ ಅಭಿವೃದ್ಧಿಯ ಸೂಚಕವಾಗಿ ಆ ಭಾಗದ ರಸ್ತೆ, ಆರೋಗ್ಯ, ನೀರಾವರಿ, ಮೂಲಸೌಕರ್ಯ ಸೇರಿದಂತೆ ವಿವಿಧ ಅಂಶಗಳಿರುತ್ತವೆ. ಆದರೆ ಆ ದೇಶ ಅಥವಾ ರಾಜ್ಯದ ಭವಿಷ್ಯವನ್ನು ಶಿಕ್ಷಣ ಕ್ಷೇತ್ರದಿಂದ ಮಾತ್ರ ಕಾಣಲು ಸಾಧ್ಯ. ಆ ಕಾರಣಕ್ಕೆ, ಯಾವ ಸರಕಾರಗಳು ಶಿಕ್ಷಣಕ್ಕೆ ಒತ್ತು ನೀಡುವವೋ ಆ ಪ್ರದೇಶದ ಭವಿಷ್ಯ ಉಜ್ವಲವಾಗಿರುತ್ತದೆ ಎನ್ನುವುದು ಬಹುಜನರ ನಂಬಿಕೆ. ಈ ಕಾರಣಕ್ಕೆ, ಶಿಕ್ಷಣ ಕ್ಷೇತ್ರದಲ್ಲಿ ಯಾವುದೇ ಬದಲಾವಣೆ ಮಾಡುವ ಮೊದಲು ಹತ್ತಾರು ಆಯಾಮದಲ್ಲಿ ಆಲೋಚಿಸುವುದುಂಟು. ಆದರೆ ಕಳೆದ ಕೆಲ ದಿನಗಳಿಂದ ಕರ್ನಾಟಕದಲ್ಲಿ ಶಿಕ್ಷಣ ಇಲಾಖೆಯ ತೀರ್ಮಾನಗಳು ವಿದ್ಯಾರ್ಥಿಗಳನ್ನಷ್ಟೇ ಅಲ್ಲದೇ ಇಡೀ ರಾಜ್ಯವನ್ನು ಗೊಂದಲಕ್ಕೀಡು ಮಾಡಿವೆ.

ಕಳೆದ ಒಂದು ವಾರದ ಅವಧಿಯಲ್ಲಿ ಶಿಕ್ಷಣ ಇಲಾಖೆಯು ಎರಡು ತೀರ್ಮಾನಗಳನ್ನು ಕೈಗೊಂಡಿದೆ. ಅದರಲ್ಲಿ ಒಂದು, ಒಂದನೇ ತರಗತಿಗೆ ಸೇರಿಸಲು ಮಗುವಿಗೆ ಕಡ್ಡಾಯವಾಗಿ ಆರು ವರ್ಷವಾಗಿರಬೇಕು ಎನ್ನುವ ನಿಯಮದ ಬದಲು 60 ದಿನಗಳ ವಿನಾಯಿತಿಯನ್ನು ಪ್ರಸಕ್ತ ಶೈಕ್ಷಣಿಕ ವರ್ಷಕ್ಕೆ ಸೀಮಿತಗೊಳಿಸಿ ತೀರ್ಮಾನಿಸಿದ್ದು, ಮುಂದಿನ ವರ್ಷದ ವೇಳೆಗೆ ಇದಕ್ಕೆ ಕಾಯಿದೆಯ ಮೂಲಕ ಶಾಶ್ವತ ಪರಿಹಾರ ಕಂಡುಕೊಳ್ಳುವುದಾಗಿ ಸಚಿವ ಮಧು ಬಂಗಾರಪ್ಪ ಹೇಳಿದ್ದಾರೆ. ವಿನಾಯಿತಿಯ ಅವಧಿಯನ್ನು ಎರಡು ತಿಂಗಳ ಬದಲು ಮೂರು ಅಥವಾ ನಾಲ್ಕು ತಿಂಗಳಿಗೆ ಏರಿಸಬಹುದು ಎನ್ನುವ ವಾದವಿದೆ. ಮುಂದಿನ ವರ್ಷದ ವೇಳೆಗೆ ಈ ಸಮಸ್ಯೆ ಬಗೆಹರಿಯಬಹುದು.

ಈ ತೀರ್ಮಾನದ ಪರ-ವಿರೋಧ ಚರ್ಚೆ ಮುಗಿಯುವ ಮೊದಲೇ, 'ತುರ್ತು' ಸುದ್ದಿಗೋಷ್ಠಿಯ ನೆಪದಲ್ಲಿ ಮಧು ಬಂಗಾರಪ್ಪ ಅವರು ಘೋಷಿಸಿದ 'ತೃತೀಯ ಭಾಷೆ ಆಟಕ್ಕುಂಟು-ಲೆಕ್ಕಕ್ಕಿಲ್ಲ' ಎನ್ನುವ ತೀರ್ಮಾನ ಇದೀಗ ತೀವ್ರ ಚರ್ಚೆ, ವಿರೋಧಕ್ಕೆ ಕಾರಣವಾಗಿದೆ. ವಿದ್ಯಾರ್ಥಿಗಳ ಮೇಲಿನ ಹೊರೆಯನ್ನು ತಗ್ಗಿಸಬೇಕು ಎನ್ನುವ ಕಾರಣಕ್ಕೆ ಹಾಗೂ ಕರ್ನಾಟಕದಲ್ಲಿ ಹಿಂದಿ ಹೇರಿಕೆಯನ್ನು ಸಹಿಸುವುದಿಲ್ಲ ಎನ್ನುವ ಸಂದೇಶ ರವಾನಿಸಬೇಕು ಎನ್ನುವ ಕಾರಣಕ್ಕೆ ತೃತೀಯ ಭಾಷೆಯ ಅಂಕವನ್ನು ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶದಲ್ಲಿ ಪರಿಗಣಿಸುವ ಬದಲು ಗ್ರೇಡಿಂಗ್ ಕೊಟ್ಟು ಕೈತೊಳೆದುಕೊಳ್ಳುವುದಾಗಿ ಇಲಾಖೆ ಹೇಳಿದೆ. ಈ ತೀರ್ಮಾನಕ್ಕೆ ಬೆಂಬಲವಾಗಿ ತೃತೀಯ ಭಾಷೆ ಹಿಂದಿಯ ಕಾರಣಕ್ಕಾಗಿಯೇ ಕರ್ನಾಟಕದಲ್ಲಿ 90 ಸಾವಿರ ವಿದ್ಯಾರ್ಥಿಗಳು ಫೇಲಾಗಿದ್ದಾರೆ. ಆದ್ದರಿಂದ ಇಂಥ ಹೇರಿಕೆಯ ಅಗತ್ಯವೇನು ಎನ್ನುವ ಮಾತುಗಳು ಕೇಳಿಬರುತ್ತಿದೆ.

ಸರಕಾರದ ಈ ತೀರ್ಮಾನದಿಂದ ವಿದ್ಯಾರ್ಥಿಗಳ ಮೇಲಿನ ಹೆಚ್ಚುವರಿ ಹೊರೆ ತಗ್ಗಲಿದ್ದು, ಆಸಕ್ತಿ ಇದ್ದವರು ಹಿಂದಿಯನ್ನು ಕಲಿತುಕೊಳ್ಳಲಿದ್ದಾರೆ ಎನ್ನುವುದು ಕನ್ನಡ ಹೋರಾಟಗಾರರ, ಕನ್ನಡಾಭಿಮಾನಿಗಳ, ಸರಕಾರದ ನಿಲುವಾಗಿದೆ. ಇಲಾಖೆ ತೆಗೆದುಕೊಂಡಿರುವ ಈ ತೀರ್ಮಾನದ ಸಾಧಕ-ಬಾಧಕದ ಬಗ್ಗೆ ಚರ್ಚಿಸುವುದಕ್ಕಿಂತ ತೆಗೆದುಕೊಂಡ ಸಮಯದ ಬಗ್ಗೆ ಈಗ ವಿರೋಧ ವ್ಯಕ್ತವಾಗುತ್ತಿದೆ. ಒಂದು ವೇಳೆ ಕರ್ನಾಟಕದಲ್ಲಿ ದ್ವಿಭಾಷಾ ಸೂತ್ರದಲ್ಲಿಯೇ ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ನಡೆಸಬೇಕು ಎನ್ನುವ ಆಲೋಚನೆ ಇದ್ದಿದ್ದರೆ ಅದನ್ನು ಪರೀಕ್ಷೆ ಘೋಷಿಸುವ ಮೊದಲೇ ಸ್ಪಷ್ಟಪಡಿಸಬೇಕಿತ್ತು. ಇಲ್ಲವಾದರೆ, ಈ ಶೈಕ್ಷಣಿಕ ವರ್ಷದ ಬಳಿಕ ತೀರ್ಮಾನಿಸಬಹುದಾಗಿತ್ತು. ಆದರೆ ಅದನ್ನು ಮಾಡದೇ ಪರೀಕ್ಷೆ ನಡೆಯುತ್ತಿರುವ ಸಮಯದಲ್ಲಿಯೇ ಈ ರೀತಿಯ ಗ್ರೇಡಿಂಗ್ ವ್ಯವಸ್ಥೆ ಪರಿಚಯಿಸುವ ಅವಸರವೇನಿತ್ತು? ಎನ್ನುವ ಪ್ರಶ್ನೆಗೆ ಈವರೆಗೆ ಸರಕಾರದಿಂದ ಯಾವುದೇ ಉತ್ತರ ಬಂದಿಲ್ಲ.

ಇನ್ನು ಶಿಕ್ಷಣ ಇಲಾಖೆ ತೃತೀಯ ಭಾಷೆಯ ವಿಷಯದಲ್ಲಿ ತೆಗೆದುಕೊಂಡಿರುವ ಏಕಾಏಕಿ ತೀರ್ಮಾನಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಪ್ರತಿಪಕ್ಷ ಬಿಜೆಪಿ ನಾಯಕರು ಸೇರಿದಂತೆ ಬಹುತೇಕರು 'ಹಿಂದಿ' ಭಾಷೆಗೆ ಸೀಮಿತಗೊಳಿಸಿ ಮಾತನಾಡುತ್ತಿದ್ದಾರೆ. ಕರ್ನಾಟಕದಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ಅನೇಕ ವಿದ್ಯಾರ್ಥಿಗಳು ತೃತೀಯ ಭಾಷೆಯಾಗಿ ಕೇವಲ ಹಿಂದಿಯನ್ನಲ್ಲ, ಕನ್ನಡವನ್ನೂ ತೆಗೆದುಕೊಂಡಿದ್ದಾರೆ ಎನ್ನುವ ಬಗ್ಗೆ ಬಹುತೇಕರು ಆಲೋಚಿಸದಿರುವುದು ಮಾತ್ರ ದುರಂತ!

ರಾಜ್ಯದ ಎಲ್ಲ ಕಡೆಯೂ ಹಿಂದಿಯೇ ತೃತೀಯ ಭಾಷೆಯಲ್ಲ, ಕೆಲವು ನಗರ ಪ್ರದೇಶಗಳಲ್ಲಿ ಕನ್ನಡವೂ ಸೇರಿ ಹಲವು ಭಾಷೆಗಳು ತೃತೀಯ ಭಾಷೆಯಾಗಿವೆ. ಹಿಂದಿಯೂ ಸೇರಿದಂತೆ ಕನ್ನಡ, ಇಂಗ್ಲಿಷ್, ಅರಬ್ಬಿ, ಉರ್ದು, ಸಂಸ್ಕೃತ, ಕೊಂಕಣಿ, ತುಳು, ಮರಾಠಿ ಭಾಷೆಗಳನ್ನೂ ತೃತೀಯ ಭಾಷೆಯಾಗಿ ಲಕ್ಷಾಂತರ ಮಕ್ಕಳು ಕಲಿಯುತ್ತಿದ್ದಾರೆ. ಮೊದಲ ಭಾಷೆಯಾಗಿ ಉರ್ದು, ಸಂಸ್ಕೃತವನ್ನು ತೆಗೆದುಕೊಂಡಿರುವ ವಿದ್ಯಾರ್ಥಿಗಳಿಗೆ ಕನ್ನಡವೇ ತೃತೀಯ ಭಾಷೆಯಾಗಿರಲಿದೆ. ಹೀಗಿರುವಾಗ, ಹಿಂದಿ ಹೇರಿಕೆಯನ್ನು ತಗ್ಗಿಸುವ ನೆಪದಲ್ಲಿ ಕನ್ನಡವನ್ನು ಭವಿಷ್ಯದಲ್ಲಿ ನೇಪಥ್ಯಕ್ಕೆ ಸರಿಸುವುದು ಕೆಟ್ಟ ತೀರ್ಮಾನವಾಗುವುದಿಲ್ಲವೇ? ಸರಕಾರ ಈಗ ತೆಗೆದುಕೊಂಡಿರುವ ತೀರ್ಮಾನವನ್ನು ಕೇವಲ ಹಿಂದಿಗೆ ಸೀಮಿತಗೊಳಿಸಲು ಕಾನೂನಾತ್ಮಕವಾಗಿ ಸಾಧ್ಯವಿಲ್ಲ, ಆದ್ದರಿಂದ ಹಿಂದಿ ಹೇರಿಕೆಯನ್ನು ತಗ್ಗಿಸಲು ಹೋಗಿ, ಅನಿವಾರ್ಯವಾಗಿ ಮೂರನೇ ಭಾಷೆಯಾಗಿ ಆದರೂ ಕನ್ನಡವನ್ನು ಕಲಿಯುತ್ತಿದ್ದ ಅನೇಕರಿಗೆ ಸರಕಾರವೇ, ಕನ್ನಡ ಕಲಿಕೆ ಅನಿವಾರ್ಯವಲ್ಲ ಎನ್ನುವ ಸ್ಥಿತಿ ನಿರ್ಮಿಸಿದಂತೆ ಆಗಲಿಲ್ಲವೇ? ಹೋಗಲಿ, ಈ ತೀರ್ಮಾನ ಘೋಷಿಸುವ ಮೊದಲು ಸಚಿವ ಸಂಪುಟ ಸಭೆಯಲ್ಲಿ ಕನಿಷ್ಠ ಚರ್ಚೆ, ತಜ್ಞರ ಸಮಿತಿಯಿಂದ ಸಲಹೆಗಳನ್ನು ಪಡೆಯದೇ ಅಥವಾ ಶಿಕ್ಷಣ ಕ್ಷೇತ್ರದ ಪ್ರಮುಖರೊಂದಿಗೆ ಈ ರೀತಿಯ ನಿರ್ಧಾರದಿಂದ ಆಗುವ ಪರಿಣಾಮಗಳೇನು ಎನ್ನುವ ಬಗ್ಗೆ ಚರ್ಚಿಸದೇ ಘೋಷಿಸುವಷ್ಟು ತರಾತುರಿ ಮಾಡಿದ್ದೇಕೆ?

ಈ ಪ್ರಮಾಣದ ತರಾತುರಿಯಲ್ಲಿ ಎಸ್‌ಎಸ್‌ಎಲ್‌ಸಿ ತೃತೀಯ ಭಾಷಾ ಪರೀಕ್ಷೆಯನ್ನು ಆಟಕ್ಕುಂಟು ಲೆಕ್ಕಕ್ಕಿಲ್ಲ ಎನ್ನುವಂತೆ ಮಾಡಿದ ರಾಜ್ಯ ಸರಕಾರ, ಒಂದನೇ ತರಗತಿ ಸೇರ್ಪಡೆಗೆ ವಯಸ್ಸನ್ನು ನಿಗದಿಪಡಿಸುವ ವಿಷಯದಲ್ಲಿ ಕಳೆದ ಮೂರು ವರ್ಷಗಳಿಂದ ಪ್ರತಿವರ್ಷ ವಿವಾದ, ಗೊಂದಲ ಸೃಷ್ಟಿಸಿಕೊಂಡು ಕೊನೆಗೆ ತಾತ್ಕಾಲಿಕ ರಿಲೀಫ್ ನೀಡುತ್ತಾ ಬಂದಿದೆ. ಅಧಿಕಾರಕ್ಕೆ ಬರುವ ಮೊದಲು, ಬಂದ ಬಳಿಕ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಒಪ್ಪುವುದಿಲ್ಲ ಎಂದೇ ಹೇಳುತ್ತಿರುವ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು, ಒಂದನೇ ತರಗತಿಯ ಸೇರ್ಪಡೆಯ ವಿಷಯದಲ್ಲಿ ಮಾತ್ರ ಎನ್‌ಇಪಿ ಮಾರ್ಗಸೂಚಿಯನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದಾರೆ.

ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಒಂದನೇ ತರಗತಿ ಸೇರಲು ಜೂನ್ 1ಕ್ಕೆ ಮಗುವಿನ ವಯಸ್ಸು ಕಡ್ಡಾಯವಾಗಿ ಆರು ವರ್ಷ ಪೂರೈಸಿರಬೇಕು ಎನ್ನುವ ನಿಯಮವಿದೆ. ಇದರಿಂದ ಜೂನ್ 1ರ ಬಳಿಕ ಬಹುತೇಕ ಮಕ್ಕಳಿಗೆ ಒಂದು ವರ್ಷ ನಷ್ಟವಾಗುತ್ತದೆ. ಉದಾಹರಣೆಗೆ ಜೂನ್ 10ಕ್ಕೆ ಜನಿಸುವ ಮಗುವು 2026ರ ಜೂನ್ 10ಕ್ಕೆ ಆರು ವರ್ಷ ಪೂರೈಸಿದರೆ, ಆ ಮಗು 2027ರ ಜೂನ್ ತನಕ ಕಾಯಬೇಕಾದ ಕಠಿಣ ನಿಲುವಿತ್ತು. ಈ 'ಕಟ್ ಆಫ್'ನಿಂದಾಗಿ ಪ್ರತಿವರ್ಷ ಲಕ್ಷಾಂತರ ಮಕ್ಕಳಿಗೆ ಒಂದೆರಡು ತಿಂಗಳ ಅಂತರಕ್ಕೆ ಇಡೀ ವರ್ಷ ಮನೆಯಲ್ಲಿಯೇ ಕಳೆಯಬೇಕಾದ ಅನಿವಾರ್ಯತೆ ಸೃಷ್ಟಿಯಾಗುತ್ತದೆ. ಆದ್ದರಿಂದ ಐದು ವರ್ಷ 10 ತಿಂಗಳಾದ ಮಗುವಿಗೂ ಒಂದನೇ ತರಗತಿ ಸೇರ್ಪಡೆಗೆ ಅವಕಾಶ ನೀಡಬೇಕು ಎನ್ನುವ ಆಗ್ರಹಗಳು ಕಳೆದ ಎರಡು ವರ್ಷಗಳಿಂದ ಕೇಳಿಬರುತ್ತಿವೆ. ಹಾಗೆ ನೋಡಿದರೆ, ಐದು ವರ್ಷ 10 ತಿಂಗಳ ನಿಯಮ ಹಲವು ದಶಕಗಳಿಂದ ಕರ್ನಾಟಕದಲ್ಲಿ ಜಾರಿಯಲ್ಲಿದೆ. ಆದರೆ ಎನ್‌ಇಪಿ ಜಾರಿಯಾದ ಬಳಿಕ ಆರು ವರ್ಷವೆಂದು ಕಡ್ಡಾಯಗೊಳಿಸಲಾಯಿತು. ಕಳೆದ ವರ್ಷ ತೀವ್ರ ವಿವಾದವಾದ ಬಳಿಕ ಎರಡು ತಿಂಗಳ ವಿನಾಯಿತಿ ನೀಡಲಾಗಿತ್ತು. ಈ ವರ್ಷವೂ ಡಿಸೆಂಬರ್‌ನಿಂದಲೇ ಗಲಾಟೆ ಶುರುವಾದರೂ, ಕೊನೆಗೆ ತೀರ್ಮಾನ ಕೈಗೊಂಡಿದ್ದು ಮಾತ್ರ ಕಳೆದ ವಾರ.

ಹಾಗೆ ನೋಡಿದರೆ, ಒಂದನೇ ತರಗತಿ ಸೇರಲು ವಯೋಮಿತಿಯ ವಿಷಯದಲ್ಲಿ ಸರಕಾರದ ತೀರ್ಮಾನ ಕೊಂಚ ಕಠಿಣವಾಗಿದೆ. ಏಕೆಂದರೆ, ಸದ್ಯ ಎರಡು ತಿಂಗಳ ವಿನಾಯಿತಿ ನೀಡಿದ್ದರೂ, ಆಗಸ್ಟ್‌ನಿಂದ ಡಿಸೆಂಬರ್ ಅವಧಿಯಲ್ಲಿ ಜನಿಸುವ ಮಗು ಒಂದನೇ ತರಗತಿ ಸೇರಲು ಅಗತ್ಯವಿರುವಷ್ಟು ಬುದ್ಧಿಮತ್ತೆಯಿದ್ದರೂ ನಿಯಮದ ಕಾರಣಕ್ಕೆ ಸೇರ್ಪಡೆ ಮಾಡದಿರುವುದು ಸರಿಯಲ್ಲ. ನಾಲ್ಕೈದು ತಿಂಗಳಿನ ವ್ಯತ್ಯಾಸವು ಮಗುವಿನ ಅಭ್ಯಾಸಕ್ಕೆ ಬಹುದೊಡ್ಡ ವ್ಯತ್ಯಾಸವನ್ನೇನೂ ಮಾಡುವುದಿಲ್ಲ ಎನ್ನುವುದು ವೈಜ್ಞಾನಿಕವಾಗಿಯೂ ಸಾಬೀತಾಗಿದೆ. ಅಮೆರಿಕ, ಯುಕೆ ಸೇರಿದಂತೆ ಅನೇಕ ರಾಷ್ಟ್ರಗಳಲ್ಲಿ ಐದು ವರ್ಷಕ್ಕೆ ಶಾಲೆಗಳಿಗೆ ಪ್ರವೇಶ ನೀಡಿದರೆ, ಫಿನ್‌ಲ್ಯಾಂಡ್, ಸ್ವೀಡನ್‌ನಂಥ ರಾಷ್ಟ್ರಗಳಲ್ಲಿ ಏಳು ವರ್ಷಕ್ಕೆ ಮಕ್ಕಳನ್ನು ಶಾಲೆಗೆ ಸೇರಿಸಲಾಗುತ್ತಿದೆ. ಆದರೆ ಭಾರತ ಸೇರಿದಂತೆ ಬಹುತೇಕ ರಾಷ್ಟ್ರಗಳು ಆರು ವರ್ಷದ ನಿಯಮವನ್ನು ಜಾರಿಗೊಳಿಸಿವೆ. ಆರು ವರ್ಷಕ್ಕೆ ಶಾಲಾ ಶಿಕ್ಷಣ ಆರಂಭಿಸುವುದು ಸೂಕ್ತವಾದರೂ, 'ಕಡ್ಡಾಯ'ವಾಗಿ ಆರು ವರ್ಷ ಆಗಿರಬೇಕು ಎನ್ನುವುದು ಈಗಿರುವ ಗೊಂದಲ ಹಾಗೂ ವಿವಾದಕ್ಕೆ ಕಾರಣ ಎಂದರೆ ತಪ್ಪಾಗುವುದಿಲ್ಲ.

ಶಿಕ್ಷಣ ಇಲಾಖೆಯು ಎಸ್‌ಎಸ್‌ಎಲ್‌ಸಿ ತೃತೀಯ ಭಾಷಾ ವಿನಾಯಿತಿ ವಿಷಯದಲ್ಲಿ ನಿರ್ಧಾರವನ್ನು ತೆಗೆದುಕೊಂಡಷ್ಟು ವೇಗವಾಗಿ ಮಕ್ಕಳ ಶಾಲಾ ಪ್ರವೇಶಾತಿ ವಿಷಯದಲ್ಲಿ ತೆಗೆದುಕೊಳ್ಳಲಿಲ್ಲ ಎನ್ನುವುದು ಎರಡನೇ ಮಾತು. ಆದರೆ ಒಂದನೇ ತರಗತಿಗೆ ಆರು ವರ್ಷ ಕಡ್ಡಾಯ ಎನ್ನುವ ನಿಯಮವನ್ನು ಪ್ರತಿವರ್ಷ ಟಾಪ್‌ಅಪ್ ರೀತಿ ಮಾಡುವ ಬದಲು ಶಾಶ್ವತ ಕಾಯಿದೆಯನ್ನು ರೂಪಿಸುವ ಅನಿವಾರ್ಯತೆಯಿದೆ. ಇದರೊಂದಿಗೆ ಒಂದನೇ ತರಗತಿಗಷ್ಟೇ ಅಲ್ಲದೇ, ಎಲ್‌ಕೆಜಿ, ಯುಕೆಜಿ ವಿಷಯದಲ್ಲಿಯೂ ಸರಕಾರಗಳು ಸ್ಪಷ್ಟ ನಿಲುವಿಗೆ ಬರಬೇಕಿದೆ. ಇಲ್ಲದೇ ಹೋದರೆ, ಮೂರುವರೆ ವರ್ಷಕ್ಕೆ ಎಲ್‌ಕೆಜಿ ಸೇರಿ, ನಾಲ್ಕೂವರೆ ವರ್ಷಕ್ಕೆ ಯುಕೆಜಿಗೆ ಬರುವ ವಿದ್ಯಾರ್ಥಿ ಐದೂವರೆ ವರ್ಷಕ್ಕೆ ಯುಕೆಜಿ ಮುಗಿಸುತ್ತಾನೆ. ಆಗ ಈ ಆರು ವರ್ಷ ಕಡ್ಡಾಯ ಎನ್ನುವ ನಿಯಮದಿಂದ ವಿದ್ಯಾರ್ಥಿಗಳು ಯುಕೆಜಿಯಲ್ಲಿಯೇ ಹೆಚ್ಚುವರಿ ಒಂದು ವರ್ಷ ಕಲಿಯಬೇಕಾದ ಅಥವಾ ಒಂದು ವರ್ಷ ಮನೆಯಲ್ಲಿಯೇ ಕೂರಬೇಕಾದ ಸ್ಥಿತಿ ನಿರ್ಮಾಣವಾಗುತ್ತದೆ. ಇದರಿಂದಾಗಿ ಮಗುವಿನ ಮನಸ್ಸಿನ ಮೇಲೆ ಆಗಬಹುದಾದ ಪರಿಣಾಮಗಳ ಬಗ್ಗೆ ಸರಕಾರ ಎಚ್ಚರವಹಿಸಬೇಕಿದೆ. ಶಿಕ್ಷಣ ಕ್ಷೇತ್ರದಲ್ಲಿ ತೆಗೆದುಕೊಳ್ಳುವ ಯಾವುದೇ ತೀರ್ಮಾನ ಕೇವಲ ಒಬ್ಬ ವ್ಯಕ್ತಿ ಅಥವಾ ಕುಟುಂಬದ ಮೇಲೆ ಪರಿಣಾಮವನ್ನು ಬೀರುವುದಿಲ್ಲ. ಬದಲಿಗೆ ಇಡೀ ಸಮುದಾಯದ ಮೇಲೆ ಅದಕ್ಕೂ ಮಿಗಿಲಾಗಿ ನಾಡಿನ ಭವಿಷ್ಯದ ಮೇಲೆ ತೀವ್ರ ಹೊಡೆತ ಬೀಳುವ ಅಪಾಯವಿರುತ್ತದೆ.

ಆಡಳಿತ ಮೊಗಸಾಲೆಯಲ್ಲಿರುವ ಸರಕಾರಗಳು ತಮ್ಮ ಸೈದ್ಧಾಂತಿಕ ನಿಲುವುಗಳಿಗೆ ಸರಿಹೊಂದುವ ರೀತಿಯಲ್ಲಿ ತೀರ್ಮಾನಗಳನ್ನು ತೆಗೆದುಕೊಳ್ಳುವುದನ್ನು ನೋಡಿದ್ದೇವೆ. ಶಿಕ್ಷಣ ಕ್ಷೇತ್ರದಲ್ಲಿಯೂ ಇದೇ ರೀತಿಯ ಹತ್ತು ಹಲವು ತೀರ್ಮಾನಗಳನ್ನು ತೆಗೆದುಕೊಂಡಿರುವುದಕ್ಕೆ ಉದಾಹರಣೆಗಳಿವೆ. ನಾಲ್ಕೈದು ವರ್ಷದಲ್ಲಿ ಕರ್ನಾಟಕದಲ್ಲಿಯೇ ಆಗಿರುವ ವಿಷಯವನ್ನು ನೋಡುವುದಾದರೆ, ಈ ಹಿಂದಿದ್ದ ಬಿಜೆಪಿ ಸರಕಾರ ಇಡೀ ರಾಷ್ಟ್ರದಲ್ಲಿ ಎನ್‌ಇಪಿ ಜಾರಿಗೊಳಿಸಿದ ಮೊದಲ ರಾಜ್ಯ ಎನ್ನುವ 'ಹೆಮ್ಮೆ' ಪಡೆಯಬೇಕು. ಈ ಮೂಲಕ ದೆಹಲಿ ನಾಯಕರನ್ನು ಒಲೈಸಬೇಕು ಎನ್ನುವ ಕಾರಣಕ್ಕೆ ತಯಾರಿ ಇಲ್ಲದೇ ಎನ್‌ಇಪಿ ಜಾರಿಗೊಳಿಸಿತ್ತು. ಇದಾಗುತ್ತಿದ್ದಂತೆ ಅಧಿಕಾರಕ್ಕೆ ಬಂದ ಕಾಂಗ್ರೆಸ್ ನಾಯಕರು ಎನ್‌ಇಪಿ ಬದಲು ಎಸ್‌ಇಪಿ (ರಾಜ್ಯ ಶಿಕ್ಷಣ ನೀತಿ) ಜಾರಿಗೊಳಿಸುವುದಾಗಿ ಘೋಷಿಸಿ, ಅದಕ್ಕೊಂದು ಸಮಿತಿಯನ್ನು ರಚಿಸಿದ್ದರು.

ಈ ಸಮಿತಿಯ ವರದಿಯಲ್ಲೇನಿದೆ? ಅದನ್ನು ಯಾವ ರೀತಿಯಲ್ಲಿ ಜಾರಿಗೊಳಿಸಬೇಕು ಎನ್ನುವ ಆಲೋಚನೆ ಮಾಡುವ ಮೊದಲೇ ಎನ್‌ಇಪಿಯನ್ನು ರದ್ದುಗೊಳಿಸಿರುವುದಾಗಿ ಸರಕಾರ ಘೋಷಿಸಿದೆ. ಸದ್ಯ 'ಇತ್ತ ಎನ್‌ಇಪಿ ಇಲ್ಲದೇ, ಅತ್ತ ಎಸ್‌ಇಪಿ ಇಲ್ಲ' ಎನ್ನುವ ಸ್ಥಿತಿ ನಿರ್ಮಾಣವಾಗಿದೆ. ರಾಜ್ಯದ, ರಾಷ್ಟ್ರದ ಭವಿಷ್ಯವನ್ನು ನಿರ್ಮಿಸುವಲ್ಲಿ ಪ್ರಮುಖ ಪಾತ್ರವಹಿಸುವ ಶಿಕ್ಷಣ ಕ್ಷೇತ್ರದಲ್ಲಿ ರಾಜಕೀಯ ನಾಯಕರು ತಮ್ಮ ಸಿದ್ಧಾಂತ, ರಾಜಕೀಯ ಲಾಭ-ನಷ್ಟದಲ್ಲಿಯೇ ತೀರ್ಮಾನಿಸುವ ಬದಲು ಇಂದಿನ ದಿನಮಾನಕ್ಕೆ ಶಿಕ್ಷಣ ಕ್ಷೇತ್ರಕ್ಕೆ ಬೇಕಿರುವುದೇನು ಎನ್ನುವ ನಿಟ್ಟಿನಲ್ಲಿ ಆಲೋಚಿಸಿ ತೀರ್ಮಾನಿಸಬೇಕಿದೆ. ಈ ವಿಷಯದಲ್ಲಿ ಸಿದ್ಧಾಂತ ಮೀರಿದ 'ಶಿಕ್ಷಣ' ತಜ್ಞರೊಂದಿಗಿನ ಚರ್ಚೆ ಇಂದಿನ ಅಗತ್ಯವೆಂದರೆ ತಪ್ಪಾಗುವುದಿಲ್ಲ.

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ತಾಂಬೂಲ ಸೊಗಸಾಗಿತ್ತು!

ಶ್ರೀವತ್ಸ ಜೋಶಿಯವರ 'ತಿಳಿರು ತೋರಣ' ಅಂಕಣದಲ್ಲಿ (ಮಾ.29) ಪ್ರಕಟವಾದ ತಾಂಬೂಲದ ಬಗೆಗಿನ ಲೇಖನ ಬಹಳ ಚೆನ್ನಾಗಿತ್ತು. ಅದನ್ನು ಓದುವಾಗ ಒಂದು ಹಳೆಯ ನೆನಪು ಬಂತು. ನಾನು 2010ರಲ್ಲಿ ಕಾರ್ಯನಿಮಿತ್ತ ದೆಹಲಿಯಲ್ಲಿದ್ದೆ. ಹೀಗೇ ಒಂದು ದಿನ ಅಲ್ಲಿನ ಕನಾಟ್ ಪ್ಲೇಸ್ ಎಂಬ ವಾಣಿಜ್ಯಸ್ಥಳಕ್ಕೆ ರಾತ್ರಿ ಹತ್ತು ಗಂಟೆಯ ನಂತರ ಹೋಗಿದ್ದೆ. ಅಲ್ಲಿನ ಒಂದು ಪಾನ್ ಅಂಗಡಿ ಮುಂದೆ ಬಹಳ ಜನಜಂಗುಳಿ ಇತ್ತು. ಎಲ್ಲರೂ ಅತ್ಯಂತ ಶ್ರೀಮಂತ ಪುರುಷರಂತೆಯೇ ಕಾಣುತ್ತಿದ್ದರು. ಅದೇನು ವಿಶೇಷ ನೋಡೋಣ ಅಂತ ನಾನೂ ನುಗ್ಗಿದೆ. ಅಲ್ಲಿ ಗಿಣಿಹಸಿರು ಬಣ್ಣದ ಸೀರೆ ಮತ್ತು ಕೆಂಪು ರವಿಕೆ ಧರಿಸಿದ್ದ ದೆಹಲಿಯ ಅತ್ಯಂತ ಸುಂದರ ತರುಣಿಯರು ಗಿರಾಕಿಯು ಕೇಳಿದ ಪಾನ್ ತಯಾರಿಸಿ ಅದನ್ನು ಅವರ ಬಾಯಿಗೆ ಇಡುತ್ತಿದ್ದರು, ನಂತರ ಪೇಪರ್ ನ್ಯಾಪ್‌ಕಿನ್‌ನಿಂದ ಮೂತಿ ಒರೆಸಿ ಕಳಿಸುತ್ತಿದ್ದರು. ಅವರ ಈ ಸೇವೆಗೆ ಶುಲ್ಕ 1000 ರುಪಾಯಿ ಮಾತ್ರ! ನಾನು ಕೂಡ ಆ ಸೇವೆ ಪಡೆದುಕೊಂಡೆ ಎಂಬ ನೆನಪು ಇಂದು ಮರುಕಳಿಸಿತು. ಅಂದಹಾಗೆ ಬೇರೆ ಕಡೆ ಆಗ ಒಂದು ಪಾನ್‌ಗೆ 5 ರುಪಾಯಿ ಇತ್ತು!!



– ಪ್ರಭಾಕರ ಎಂ.ಕೆ., ಬೆಂಗಳೂರು

ಈ ಮೌನವ ತಾಳೆವು

ಸಾಮಾಜಿಕ ಮಾಧ್ಯಮಗಳಲ್ಲಿ ರಾಜಾರೋಷವಾಗಿ ಹರಿದಾಡುತ್ತಿರುವ ನಕಲಿ ಹೂಡಿಕೆ ಜಾಹೀರಾತುಗಳನ್ನು ನಂಬಿ ಸಾರ್ವಜನಿಕರು ಕೋಟ್ಯಂತರ ರುಪಾಯಿ ಕಳೆದುಕೊಳ್ಳುತ್ತಿದ್ದಾರೆ. ಇದು ವ್ಯವಸ್ಥೆಯ ನೈತಿಕ ಅಧಃಪತನಕ್ಕೆ ಸಾಕ್ಷಿ. ಭಾರತದಲ್ಲಿ ಸೈಬರ್ ಅಪರಾಧಗಳು ವರ್ಷವರ್ಷವೂ ಹೆಚ್ಚುತ್ತಿದ್ದರೂ ಸರಕಾರ ಕೇವಲ ಜಾಗೃತಿ ಎಂಬ ನಾಟಕವಾಡುತ್ತಾ ಜನಸಾಮಾನ್ಯರ ಬೆವರಿನ ಹಣ ಲೂಟಿಯಾಗುವುದನ್ನು ಮೂಕಪ್ರೇಕ್ಷಕನಂತೆ ನೋಡುತ್ತಿದೆ. ಇದು ಅತ್ಯಂತ ಖಂಡನೀಯ. ಇನ್‌ಸ್ಟಾಗ್ರಾಂ, ಫೇಸ್‌ಬುಕ್ ನಂಥ ವೇದಿಕೆಗಳು ಕೇವಲ ಜಾಹೀರಾತು ಲಾಭಕ್ಕಾಗಿ ವಂಚಕರಿಗೆ ಸೌಕರ್ಯ ಕಲ್ಪಿಸುವುದರಿಂದ ಅಪರಾಧಿಗಳಿಗೆ ಇವು 'ಅಡ್ಡಾ'ಗಳಾಗಿ ಮಾರ್ಪಟ್ಟಿವೆ.

ತಾಂತ್ರಿಕವಾಗಿ ಮುಂದುವರಿದಿರುವ ಈ ಕಂಪನಿಗಳು ಪ್ರತಿಯೊಂದು ಆರ್ಥಿಕ ಜಾಹೀರಾತನ್ನು ಕೃತಕ ಬುದ್ಧಿಮತ್ತೆ ಆಧಾರಿತ ಕಟ್ಟುನಿಟ್ಟಿನ ಸ್ಕ್ರೀನಿಂಗ್‌ಗೆ ಒಳಪಡಿಸದೆ ಪ್ರದರ್ಶಿಸುವುದು ಅಕ್ಷಮ್ಯ ಅಪರಾಧ. ಸರಕಾರವು ಹೂಡಿಕೆ ಸಂಬಂಧಿತ ಜಾಹೀರಾತುಗಳಿಗೆ ಕಡ್ಡಾಯ ಡಿಜಿಟಲ್ ಐಡೆಂಟಿಟಿ ವೆರಿಫಿಕೇಶನ್ ಅನ್ನು ಕೂಡಲೇ ಜಾರಿಗೆ ತರಬೇಕು ಮತ್ತು ವಂಚನೆ ವರದಿಯಾದ ತಕ್ಷಣ ಸ್ವಯಂಚಾಲಿತವಾಗಿ ಹಣವನ್ನು ತಡೆಹಿಡಿಯುವ 'ರಿಯಲ್-ಟೈಮ್ ಫ್ರೀಜಿಂಗ್' ತಂತ್ರಜ್ಞಾನವನ್ನು ಬ್ಯಾಂಕುಗಳಲ್ಲಿ ಅಳವಡಿಸಬೇಕು. ಈ ನಿಟ್ಟಿನಲ್ಲಿ ವಿಫಲವಾಗುವ ಸಾಮಾಜಿಕ ಮಾಧ್ಯಮಗಳ ಮಾಲೀಕರ ಮೇಲೆ ದಂಡ ವಿಧಿಸುವ ಕಠಿಣ ಕಾನೂನು ಬರಬೇಕು. ಇಲ್ಲವಾದಲ್ಲಿ ಸರಕಾರವು 'ಜನಜಾಗೃತಿ' ಅಂತ ಏನೇ ಬೊಂಬಡಾ ಹೊಡೆದರೂ ಪ್ರಯೋಜನವಾಗದು.

– ಡಾ.ವಿಜಯಕುಮಾರ ಎಚ್.ಕೆ., ರಾಯಚೂರು

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಟಿಕೆಟ್ ಕೊಡಿಸಲಾಗದವ ಯಾವ ಸೀಮೆ ಶಾಸಕ!?

ರಾಜಕಾರಣಿಗಳಿಂದ ಪ್ರಜೆಗಳು ಅಭಿವೃದ್ಧಿ ಕೆಲಸ, ಸಮಾಜೋಪಯೋಗಿ ಕೆಲಸಗಳನ್ನು ನಿರೀಕ್ಷಿಸುವ ಬದಲು, ಐಪಿಎಲ್ ಟಿಕೆಟ್ ಕೊಡಿಸಲಿ, ಯಾವುದೋ ಕಾಲೇಜಿನಲ್ಲಿ ಸೀಟ್ ಕೊಡಿಸಲಿ, ಪಾಸ್ ಮಾಡಿಸಲಿ, ರೆಕಮೆಂಡ್ ಮಾಡಿ ಕೆಲಸ ಕೊಡಿಸಲಿ, ಬಿಗ್ ಬಾಸ್ ಎಂಟ್ರಿ ಕೊಡಿಸಲಿ, ಪೊಲೀಸರು ಡ್ರಿಂಕ್ ಅಂಡ್ ಡ್ರೈವ್ ಹಿಡಿದಾಗ ಬಿಡಿಸಲಿ.. ಈ ಥರದ ಕೆಲಸಗಳನ್ನೇ ನಿರೀಕ್ಷಿಸುತ್ತಾರೆ. ಪರ್ಸನಲ್ ಫೇವರ್‌ಗಳನ್ನು ಬಯಸುವ ಪ್ರಜೆಗಳು ಇರುವ ತನಕ ರಾಜಕಾರಣಿಗಳು ಬದಲಾಗುವುದಿಲ್ಲ.

ಪದಸಾಗರ
ನವೀನ್ ಸಾಗರ್
vveditoped@gmail.com

ವಿಧಾನಸಭಾ ಅಧಿವೇಶನದ ನಡುವೆ ಸದನದಲ್ಲಿ ಶಾಸಕ ವಿಜಯಾನಂದ್ ಕಾಶಪ್ಪನವರ್ ಅವರು ಆಡಿದ ಮಾತುಗಳು ಮೂರ್ನಾಲ್ಕು ದಿನಗಳ ಸೋಷಿಯಲ್ ಮೀಡಿಯಾ ಸರಕಾಯ್ತು. ರಾಜ್ಯವು ಸಮಸ್ಯೆಗಳಿಂದ ತತ್ತರಿಸುತ್ತಾ ಇರುವಾಗ, ಜಗತ್ತು ಯುದ್ಧದ ಅಡ್ಡಪರಿಣಾಮ ಎದುರಿಸುತ್ತಿರುವಾಗ, ಜನಪ್ರತಿನಿಧಿಯಾಗಿ ಸದನದಲ್ಲಿ ಮಂಡಿಸಲು ಹಲವಾರು ವಿಷಯಗಳು ಇರುವಾಗ ಐಪಿಎಲ್ ಟಿಕೆಟ್ ಬೇಕು ಅಂತ ಕೇಳಿದ್ದು ವ್ಯಾಪಕ ಟೀಕೆ, ಟ್ರೋಲ್ ಮತ್ತು ಆಕ್ರೋಶಕ್ಕೆ ಗುರಿಯಾಯ್ತು. ಆದರೆ ನನ್ನ ಮನಸು ಕೇಳಿಕೊಳ್ಳುತ್ತಿತ್ತು. ಈ ಸದನದಲ್ಲಿ ಯಾವತ್ತು ತಾನೇ ಅರ್ಥಪೂರ್ಣ ಚರ್ಚೆ ಆಗಿದೆ. ಪ್ರತಿದಿನವೂ ಅಪ್ರಬುದ್ಧ, ಅಪ್ರಸ್ತುತ ವಿಷಯಗಳ ಮಂಡನೆ, ವೈಯಕ್ತಿಕ ತೇಜೋವಧೆ, ರೌಡಿಗಳ ಥರದ ಭಾಷಾಪ್ರಯೋಗ, ಪರಸ್ಪರ ಕೆಸರೆರಚಾಟ, ಅಪರೂಪಕ್ಕೆ ಒಳ್ಳೇ ಮೂಡಲ್ಲಿದ್ದಾಗ ತಮಾಷೆ! ಇದರ ಹೊರತಾಗಿ ರಾಜ್ಯದ ಸಮಸ್ಯೆಗಳ ಕುರಿತಾಗಿ, ಅಭಿವೃದ್ಧಿಯ ವಿಚಾರವಾಗಿ ಯಾವ ಒಳ್ಳೆಯ ಚರ್ಚೆಗಳು ಕೇಳಿವೆ. ಹುಡುಕಿದರೂ ಒಬ್ಬೇ ಒಬ್ಬ ಒಳ್ಳೆಯ ಸಂಸದೀಯ ಪಟು ಕಾಣುತ್ತಿಲ್ಲ. ಪಳಗಿದ ಅನುಭವಿ ರಾಜಕಾರಣಿಗಳು ಕೂಡ ಸದನದಲ್ಲಿ ಹಾದಿ ತಪ್ಪಿ ಮಾತನಾಡುವಂತಾಗಿ ಹೋಗಿದೆ. ಇನ್ನು ನಿಜಕ್ಕೂ ಚೆನ್ನಾಗಿ ಮಾತನಾಡುವ ವ್ಯಕ್ತಿ ಎದ್ದು ನಿಂತರೆ, ಗಹನವಾದ ವಿಚಾರ ಮಾತನಾಡಲು ಶುರುವಿಟ್ಟರೆ ಸ್ಪೀಕರ್ ತಡೆದು ನಿಲ್ಲಿಸಿ ಬಾಯಿಮುಚ್ಚಿಸಿ ಮುಗಿಸಿಬಿಡುತ್ತಾರೆ. ನಿಜಕ್ಕೂ ಇಂಥ ಅಶಿಸ್ತಿನ ಸದನ ಮತ್ತು ಅಧಿವೇಶನ ನೋಡಲು ಅಸಹ್ಯವಾಗುತ್ತದೆ. ಪ್ರಜೆಗಳ ಕೋಟಿಗಟ್ಟಲೆ ಹಣವನ್ನು ಹವಾನಿಯಂತ್ರಿತ ಹಾಲ್‌ನಲ್ಲಿ ಕೂತು ನಿರುಪಯೋಗಿ ಮಾತನಾಡುತ್ತಾ ದಂಡ ಮಾಡುತ್ತಿದ್ದಾರಲ್ಲ ಎಂದು ಆಕ್ರೋಶ ಹುಟ್ಟುತ್ತದೆ. ಲೋಕಸಭೆ ಮತ್ತು ರಾಜ್ಯಸಭೆಗಳ ಅಧಿವೇಶನ ನೋಡಿದಾಗ ಅಲ್ಲಿಗೂ ಇಲ್ಲಿಗೂ ಎಷ್ಟು ವ್ಯತ್ಯಾಸವಿದೆಯಲ್ಲ ಅನಿಸುತ್ತದೆ. ಅಲ್ಲಿಯೂ ಅಲ್ಲೊಂದು ಇಲ್ಲೊಂದು ಅಪ್ರಬುದ್ಧ ಪಪ್ಪೂಗಳು ಇವೆ ನಿಜ. ಆದರೆ ಮೆಜಾರಿಟಿ ಮಾತುಗಳು ವಿಷಯಾಧಾರಿತವಾಗಿರುತ್ತವೆ. ಸಾಕಷ್ಟು ಅಭಿವೃದ್ಧಿ ಕುರಿತ ಚರ್ಚೆಗಳಾಗುತ್ತವೆ. ಸಮಸ್ಯೆಗಳನ್ನು ಮುಂದಿಡುವ ಪ್ರಯತ್ನವಾಗುತ್ತದೆ. ರಾಜ್ಯ ವಿಧಾನಸಭೆ ಯಾಕಿಷ್ಟು ಗಬ್ಬೆದ್ದು ಹೋಗಿದೆ ಎಂದು ಸಂಕಟವಾಗುತ್ತದೆ. ಇಲ್ಲಿಯ ಮೇಲ್ಮನೆ ಕೂಡ ಕೆಳಮನೆಗಿಂತ ಕೆಳಮಟ್ಟಕ್ಕಿಳಿದು ಹೋಗಿದೆ ಎಂಬುದು ಇನ್ನೂ ಬೇಸರದ ವಾಸ್ತವ. ಇಂಥ ಸದನದಲ್ಲಿ ಕಾಶಪ್ಪನವರ್ ಮಾತು ಮಾತ್ರವೇ ಇಷ್ಟೊಂದು ಟೀಕೆಗೆ ಗುರಿಯಾಯ್ತು. ಆಫ್ ಕೋರ್ಸ್ ಅದು ಟೀಕೆಗೆ ಅರ್ಹವಿದ್ದ ಮಾತುಗಳೇ. ಎಮ್ಮೆಲ್ಲೆಗಳಿಗೆ ಫ್ರೀ ಐಪಿಎಲ್ ಟಿಕೆಟ್‌ಗಳನ್ನು ಕೊಡಬೇಕು, ಅವರಿಗೆ ಕೂರೋದಕ್ಕೆ ಪ್ರತ್ಯೇಕ ಗ್ಯಾಲರಿ ಬೇಕು ಎಂಬ ಮಾತುಗಳನ್ನು ಕೇಳಿದರೆ ಕಪಾಳಕ್ಕೆ ಬಾರಿಸಬೇಕು ಅನಿಸದಿರದು.

ಆದರೆ ಇನ್ನೊಂದು ದೃಷ್ಟಿಕೋನದಲ್ಲಿ ನೋಡಿದಾಗ, ಶಾಸಕರನ್ನು ಹೀಗೆ ಮಾಡಿದವರು ನಾವೇ ಅಲ್ಲವೇ ಎಂಬ ಪ್ರಶ್ನೆ ಏಳುತ್ತದೆ. ರಾಜಕಾರಣಿಗಳಿಂದ ಪ್ರಜೆಗಳು ಅಭಿವೃದ್ಧಿ ಕೆಲಸ, ಸಮಾಜೋಪಯೋಗಿ ಕೆಲಸಗಳನ್ನು ನಿರೀಕ್ಷಿಸುವ ಬದಲು, ಐಪಿಎಲ್ ಟಿಕೆಟ್ ಕೊಡಿಸಲಿ, ಯಾವುದೋ ಕಾಲೇಜಿನಲ್ಲಿ ಸೀಟ್ ಕೊಡಿಸಲಿ, ಪಾಸ್ ಮಾಡಿಸಲಿ, ರೆಕಮೆಂಡ್ ಮಾಡಿ ಕೆಲಸ ಕೊಡಿಸಲಿ, ಬಿಗ್ ಬಾಸ್ ಎಂಟ್ರಿ ಕೊಡಿಸಲಿ, ಪೊಲೀಸರು ಡ್ರಿಂಕ್ ಅಂಡ್ ಡ್ರೈವ್ ಹಿಡಿದಾಗ ಬಿಡಿಸಲಿ.. ಈ ಥರದ ಕೆಲಸಗಳನ್ನೇ ನಿರೀಕ್ಷಿಸುತ್ತಾರೆ. ಪರ್ಸನಲ್ ಫೇವರ್‌ಗಳನ್ನು ಬಯಸುವ ಪ್ರಜೆಗಳು ಇರುವ ತನಕ ರಾಜಕಾರಣಿಗಳು ಬದಲಾಗುವುದಿಲ್ಲ. ರಾಜಕಾರಣಿಗೆ ಯಾರಾದರೂ ಫೋನ್ ಮಾಡಿ 'ನಿಮ್ ಪ್ರಭಾವ ಬಳಸಿ ಒಂದು ಐಪಿಎಲ್ ಟಿಕೆಟ್ ಕೊಡಿಸಿ' ಅಂದಾಗ ಆ ರಾಜಕಾರಣಿ ತಿರುಗಿ ಬಯ್ದು ಅಂದ್ಕೊಳ್ಳಿ, ಆತ ದೊಡ್ಡ ವಿಲನ್ ಆಗಿಹೋಗ್ತಾನೆ. 'ಇಲ್ಲಪ್ಪ, ಟಿಕೆಟ್ ಸಿಗೋದು ಕಷ್ಟ ಇದೆ' ಅಂತ ಹೇಳ್ದ ಅಂದ್ಕೊಳ್ಳಿ, 'ಅಯ್ಯೋ ಏನ್ ಶಾಸಕನೋ ಇವ್ನು, ಆಫ್ಟರಾಲ್ ಒಂದು ಐಪಿಎಲ್ ಟಿಕೆಟ್ ಕೊಡಿಸೋಕೆ ಆಗಲ್ವಂತೆ.. ವೇಸ್ಟು' ಅಂತಾರೆ. ಹೀಗಿದೆ ಸಮಾಜ. ಮನೆ ಮಕ್ಕಳು, 'ನಮ್ಮಪ್ಪ ಮಂತ್ರಿ ಇದಾನೆ, ಐಪಿಎಲ್ ಟಿಕೆಟ್ ಕೊಡಿಸ್ತಾನೆ' ಅಂತ ಬಿಲ್ಡಪ್ ಕೊಟ್ಕೊಂಡಿರ್ತವೆ. ಐಪಿಎಲ್ ಟಿಕೆಟ್ ಕೊಡಿಸದೇ ಹೋದ್ರೆ ಅವರ ಮರ್ಯಾದೆಯೇ ಹರಾಜಾಗಿ ಹೋಗಿಬಿಡುತ್ತೆ. ಅವರೆದುರು ರಾಜಕಾರಣಿ ದುರ್ಬಲ ಅನಿಸಿಬಿಡುತ್ತಾನೆ. ರಾಜಕಾರಣಿಗಳದ್ದು, ತಾವು ನೋಡಲಿ ಬಿಡಲಿ, ತಮ್ಮ ಕೋಟಾಗೆ ಒಂದು ಐದು ಟಿಕೆಟ್ ಸಿಕ್ಕರೆ ಹವಾ ಮೇಂಟೇನ್ ಮಾಡಬಹುದು ಎಂಬ ಲೆಕ್ಕಾಚಾರ. ಐಪಿಎಲ್ ಟಿಕೆಟ್ ಮಾರಾಟದಲ್ಲಿ ಪಾರದರ್ಶಕತೆ ಇದ್ದಿದ್ದರೆ, ಜನಸಾಮಾನ್ಯನಿಗೂ ಟಿಕೆಟ್ ಸಿಕ್ಕಿರುತ್ತಿತ್ತು, ಮಂತ್ರಿಗಳಿಗೂ ಟಿಕೆಟ್ ಸಿಕ್ಕಿರುತ್ತಿತ್ತು. ಮೂಲ ಸರಿಮಾಡದೇ ಬೇರೆಲ್ಲೋ ಸರಿಮಾಡಲು ಹೋದರೆ ಸರಿಯಾಗಲು ಸಾಧ್ಯವೇ? ಖಂಡಿತ ಇಲ್ಲ.

ಹಿಂದೊಮ್ಮೆ, ಮಾಜಿ ಸಂಸದ ಪ್ರತಾಪ್ ಸಿಂಹ, 'ಸಂಸದರ ಸಂಬಳ ಮತ್ತು ಭತ್ಯೆ ಹೆಚ್ಚಿಸಬೇಕು' ಎಂಬ ಅಹವಾಲು ಮುಂದಿಟ್ಟಿದ್ದರು. 'ಸಂಸದರು ಸಂಬಳ ನಂಬಿಕೊಂಡು ಜೀವನ ಮಾಡ್ತಾರಾ? ಅವರಿಗೇನು ಕಮ್ಮಿ, ಅಕ್ರಮವಾಗಿ ಸಾಕಷ್ಟು ಹಣ ಹರಿದುಬರತ್ತೆ, ಅದರ ಮೇಲೂ ಸಂಬಳ ಬೇರೆ ಜಾಸ್ತಿ ಮಾಡಿ ಅಂತ ಕೇಳ್ತಾರಲ್ಲ?' ಎಂಬೆಲ್ಲ ಟೀಕೆಗಳು ಬಂದಿದ್ದವು. ಪ್ರಾಮಾಣಿಕ ಸಂಸದರಾಗಿದ್ದರಿಂದಲೇ, ಸಂಬಳವನ್ನು ಮಾತ್ರ ನಂಬಿಕೊಂಡಿದ್ದರಿಂದಲೇ ಪ್ರತಾಪಸಿಂಹ ಅಂದು ಹೆಚ್ಚಳಕ್ಕೆ ಆಗ್ರಹಿಸಿದ್ದಾಗಿತ್ತು. ಒಬ್ಬ ಪ್ರಾಮಾಣಿಕ ಸಂಸದನ ಕಷ್ಟಗಳೇನು, ಏನೇನು ಸವಾಲುಗಳು, ಖರ್ಚುಗಳು ಬರುತ್ತವೆ ಎಂದೆಲ್ಲ ವಿವರಿಸಿ, ಕಡೇ ಪಕ್ಷ ಅಂಥವನ್ನೆಲ್ಲ ಸರಿದೂಗಿಸೋಕಾದ್ರೂ ಸಂಬಳ ಹೆಚ್ಚಳದ ಅಗತ್ಯವಿದೆ ಎಂದು ಮನವರಿಕೆ ಮಾಡಿಕೊಟ್ಟಿದ್ದರು. ನಾವು ರಾಜಕಾರಣಿಗಳನ್ನು 'ಸೂಪರ್ ಪವರ್' ಮಾಡಿಟ್ಟಿದ್ದೇವೆ. ಹೀಗಾಗಿ ಅವರ ನಿಸ್ಸಹಾಯಕತೆಯನ್ನು ಒಪ್ಪುವುದಿಲ್ಲ, ಪ್ರಾಮಾಣಿಕತೆಯನ್ನು 'ದೌರ್ಬಲ್ಯ' ಎಂದುಕೊಳ್ಳುತ್ತೇವೆ. ಕೆಲಸಕ್ಕೆ ಬಾರದವನು ಎಂದುಕೊಳ್ಳುತ್ತೇವೆ. ಇವತ್ತು ಶಾಸಕ ಸುರೇಶ್ ಕುಮಾರ್, ನನಗೂ ಐಪಿಎಲ್ ಟಿಕೆಟ್ ಬೇಡ, ನಾನ್ಯಾರಿಗೂ ಕೊಡಿಸುವುದೂ ಇಲ್ಲ ಎಂದಿದ್ದಾರೆ. ಆ ಮಾತಿಗೆ ಸೋಷಿಯಲ್ ಮೀಡಿಯಾದಲ್ಲಿ ಲೈಕ್ಸ್ ಸಿಗಬಹುದೇ ಹೊರತು, ಅಂಥವರ ಸುತ್ತ ಪಟಾಲಂ ಸೇರುವುದೇ ಇಲ್ಲ. ಹಾಗಾದರೆ ಯಾರನ್ನು ಬಯ್ಯಬೇಕು?

ಇಂಥ ದ್ವಂದ್ವಗಳ ನಡುವೆ ರಾಜ್ಯಸಭೆಯ ಒಂದು ಅರ್ಥಪೂರ್ಣ ವಿಷಯ ಮಂಡನೆ ನನ್ನ ಗಮನ ಸೆಳೆಯಿತು. ಅದು ಆಮ್ ಆದ್ಮಿ ಪಾರ್ಟಿಯ ರಾಘವ್ ಚಡ್ಡಾ ಅವರ ಮಾತು. ಇಂಟರ್‌ನೆಟ್ ಡೇಟಾ ಕುರಿತಾದ ಮೂರು ನಿಮಿಷದ ಸರಾಗವಾದ ಮಾತು ಅದು. ಮೇಲ್ನೋಟಕ್ಕೆ 'ಅಯ್ಯೋ ಇಂಟರ್ನೆಟ್ ಡೇಟಾ ಚರ್ಚಿಸಬೇಕಾದ ವಿಷಯಾನಾ? ಹೊಟ್ಟೆಗೆ ತಿನ್ನೋ ಅನ್ನದ ಬಗ್ಗೆ ಚರ್ಚಿಸೋ ಬದಲು ಡೇಟಾ ಬಗ್ಗೆ ಮಾತಾಡ್ತಿದಾರಲ್ಲಪ್ಪಾ?' ಅಂತ ಅದನ್ನೂ ಟ್ರೋಲ್ ಮಾಡಬಹುದು. ಆದರೆ ಅಂಥ ಚರ್ಚೆಗಳು ಇನ್ನಷ್ಟು ವಿಷಯ ಮಂಡನೆಗೆ ದಾರಿ ಮಾಡಿಕೊಡುತ್ತವೆ, ಯೋಚನೆಗೆ ಹಚ್ಚುತ್ತವೆ ಎಂದು ಒಪ್ಪಲೇಬೇಕು. ರಾಘವ್ ಚಡ್ಡಾ ವಾದದಲ್ಲಿ ಬಹಳ ಸ್ಪಷ್ಟತೆ ಇತ್ತು. ನಾವು ಪ್ರತಿದಿನ ಬಳಸುವ ಇಂಟರ್ನೆಟ್ ಡೇಟಾ ವಿಷಯದಲ್ಲಿ ಗ್ರಾಹಕರಿಗೆ ನ್ಯಾಯ ಸಿಗುತ್ತಿಲ್ಲ. ಟೆಲಿಕಾಮ್ ಆಪರೇಟರ್‌ಗಳು ರಿಚಾರ್ಜ್ ಪ್ಲಾನ್‌ನಲ್ಲಿ ಪ್ರತಿದಿನಕ್ಕೆ ಇಂತಿಷ್ಟು ಡೇಟಾ ಅಂತ ಕೊಡುತ್ತಿವೆ. ದಿನಕ್ಕೆ ಒಂದೂವರೆ, ಎರಡು ಅಥವಾ ಮೂರು ಜಿಬಿ ಡೇಟಾ ಲಿಮಿಟ್ ಅಂತ ಕೊಡ್ತವೆ. ಹಾಗೆ ಕೊಡುವ ಡೇಟಾವನ್ನು ನಾವು ಪೂರ್ತಿ ಬಳಸಿದರೆ ಓಕೆ. ಆದರೆ ಪ್ರತಿದಿನವೂ ಗ್ರಾಹಕರು ಪೂರ್ತಿ ಡೇಟಾ ಬಳಸುವುದಿಲ್ಲ. ಇಪ್ಪತ್ನಾಲ್ಕು ಗಂಟೆಗಳಲ್ಲಿ ಪೂರ್ತಿ ಡೇಟಾ ಬಳಕೆ ಆಗದೇಹೋದಲ್ಲಿ, ಆ ದಿನದ ಡೇಟಾ ಎಕ್ಸ್‌ಪೈರ್ ಆಗಿಬಿಡುತ್ತದೆ. ಮರುದಿನ ಮತ್ತೆ ಹೊಸತಾಗಿ ಆ ದಿನದ ಡೇಟಾ ಲಿಮಿಟ್ ಶುರುವಾಗುತ್ತದೆ. ಇದು ಗ್ರಾಹಕನಿಗೆ ಆಗ್ತಾ ಇರೋ ಅನ್ಯಾಯ. ಪ್ರತಿ ದಿನದ ಅಂತ್ಯಕ್ಕೆ ಗ್ರಾಹಕನ ಬಳಿ ಡೇಟಾ ಬಾಕಿ ಉಳಿದಿದ್ದಲ್ಲಿ ಅದು ಮರುದಿನಕ್ಕೆ ವರ್ಗಾವಣೆ ಆಗಬೇಕು. ಒಂದು ತಿಂಗಳ ರಿಚಾರ್ಜ್ ಮಾಡಿಸುವವನಿಗೆ, ಪ್ರತಿದಿನದ ಲೆಕ್ಕದಲ್ಲಿ ಡೇಟಾ ಕೊಡುವುದೇಕೆ? ತಿಂಗಳ ಲೆಕ್ಕದಲ್ಲೇ ಡೇಟಾ ಕೊಡಬಹುದಲ್ಲವೇ? ಪ್ರತಿದಿನ ಬಾಕಿ ಉಳಿಯುವ ಹನಿಹನಿ ಡೇಟಾ ತಿಂಗಳ ಕೊನೆಯಲ್ಲಿ ಹಳ್ಳವಾಗಿ ಉಳಿದುಕೊಂಡಿದ್ದಲ್ಲಿ, ಅದಕ್ಕೆ ಮುಂದಿನ ರಿಚಾರ್ಜ್‌ನಲ್ಲಿ ಅಡ್ಜಸ್ಟ್ ಮಾಡುವ ಪದ್ಧತಿ ಬರಬೇಕು. ಇದು ರಾಘವ್ ಚಡ್ಡಾ ವಾದ. ಇದಕ್ಕೆ ಅವರು ಕೊಡುವ ಉದಾಹರಣೆಯೂ ಬಹಳ ಲಾಜಿಕಲ್. ಇಪ್ಪತ್ತು ಲೀಟರ್ ಪೆಟ್ರೋಲ್ ಹಾಕಿಸಿ ಗಾಡಿ ಓಡಿಸುವ ನಮಗೆ ತಿಂಗಳ ಕೊನೆಯಲ್ಲಿ ಹದಿನೈದೇ ಲೀಟರ್ ಖಾಲಿ ಮಾಡಿದ್ದರೆ, ಪೆಟ್ರೋಲ್ ಬಂಕ್‌ನವನು ಐದು ಲೀಟರ್ ವಾಪಸ್ ಕೇಳುವುದಿಲ್ಲ. ವಿದ್ಯುತ್ ಕೂಡ ನಮಗೆ ಎಷ್ಟು ಬಳಸಿದ್ದೇವೆಯೊ ಅಷ್ಟಕ್ಕೇ ಬಿಲ್ ಬರುತ್ತದೆ. ಹೀಗಿರುವಾಗ ಡೇಟಾ ವಿಷಯದಲ್ಲಿ ಮಾತ್ರ ಯಾಕೆ ಹೀಗೆ? ತಿಂಗಳಿಗೆ ಸುಮಾರು ಅರವತ್ತು ಜಿಬಿ ಡೇಟಾಗೆ ನಾವು ಹಣ ತೆತ್ತಿರುತ್ತೇವೆ. ಮೂವತ್ತೇ ಜಿಬಿ ಬಳಸಿದ್ದಾಗ, ಒಂದೋ ಆ ಡೇಟಾ ಮುಂದಿನ ತಿಂಗಳು ಬಳಸಲು ಸಾಧ್ಯವಾಗಬೇಕು ಅಥವಾ ಅದಕ್ಕೆ ತಕ್ಕಂತೆ ಮುಂದಿನ ರಿಚಾರ್ಜ್‌ನಲ್ಲಿ ಅಡ್ಜಸ್ಟ್ ಮಾಡುವಂತಿರಬೇಕು. ಅಷ್ಟೇ ಅಲ್ಲ ಡೇಟಾ ಪ್ಯಾಕ್ ಟ್ರಾನ್ಸ್‌ಫರ್ ಮಾಡುವ ಆಪ್ಶನ್ ಕೂಡ ಕೊಡಬೇಕು. ಡೇಟಾ ಕೂಡ ಹಣಕ್ಕೆ ಸಮ. ಇದನ್ನು ಸುಮ್ಮನೆ ಪ್ರತಿದಿನ ವ್ಯರ್ಥವಾಗಿಸೋ ಬದಲು, ಕ್ಯಾರಿ ಫಾರ್ವರ್ಡ್, ಡಿಸ್ಕೌಂಟ್ ಮತ್ತು ಟ್ರಾನ್ಸ್‌ಫರ್ ಸೌಲಭ್ಯ ತರಬೇಕು ಎಂಬ ಬಹಳ ಲಾಜಿಕಲ್ ವಾದವನ್ನು ರಾಘವ್ ಚಡ್ಡಾ ಮಂಡಿಸಿದರು. ಡೇಟಾ ಅನ್ನೋದು ಲಕ್ಸುರಿ ಅಲ್ಲ. ಅದು ಇಂದಿನ ಮೂಲಭೂತ ಸೌಕರ್ಯಗಳಲ್ಲೊಂದು ಎಂಬ ನಿಟ್ಟಿನಲ್ಲಿ ಆ ವಾದ ಬಹಳ ಸಮರ್ಥವಾಗಿತ್ತು. ಇಂಟರ್ನೆಟ್ ಡೇಟಾ ಇಂದು ದುರ್ಬಳಕೆ ಆಗುತ್ತಿರಬಹುದು, ಕಾಲಹರಣಕ್ಕೂ ಮೂಲವಾಗಿರಬಹುದು. ಆದರೆ ಅದು ಉದ್ಯೋಗ, ವ್ಯವಹಾರ ಮತ್ತಿತರ ಕ್ಷೇತ್ರಗಳ ಮೂಲ ಅಗತ್ಯವೂ ಆಗಿದೆ. ಈ ನಿಟ್ಟಿನಲ್ಲಿ ಇಂಥದ್ದೊಂದು ಚರ್ಚೆ ಅರ್ಥಪೂರ್ಣ. ಹಾಗೆ ಕ್ಯಾರಿ ಫಾರ್ವರ್ಡ್ ಮಾಡುವುದು, ಟ್ರಾನ್ಸ್‌ಫರ್ ಮಾಡುವುದು, ಮುಂದಿನ ರಿಚಾರ್ಜ್‌ಗೆ ಅಡ್ಜಸ್ಟ್ ಮಾಡುವುದು ಇವೆಲ್ಲ ಸಾಧ್ಯವಾ? ನ್ಯಾಯಯುತವಾ? ಎಂಬ ಬಗ್ಗೆ ಆಳವಾದ ಚರ್ಚೆ ನಡೆಯಬಹುದು, ಟೆಲಿಕಾಂ ಕಂಪನಿಗಳು ಇದರ ಬಗ್ಗೆ ಸಂಶೋಧನೆ ನಡೆಸಬಹುದು. ಇದರಿಂದ ಯಾವುದೋ ಬದಲಾವಣೆಗಳು ಆಗಲೂಬಹುದು, ಹೊಸ ಪಾಲಿಸಿಗಳು ಜಾರಿಯಾದರೂ ಆಗಬಹುದು. ಜನಪ್ರತಿನಿಧಿಗಳಿಂದ ಆಗಬೇಕಿರೋದು ಇಂಥ ಚರ್ಚೆಯೇ ಹೊರತು ಐಪಿಎಲ್ ಟಿಕೆಟ್ಟಿಂದಾಗಲೀ, ಬಿಗ್ ಬಾಸ್ ಕಾರ್ಯಕ್ರಮದ್ದಾಗಲೀ ಅಲ್ಲ. ಅಥವಾ ನಮ್ಮ ಜನಪ್ರತಿನಿಧಿಗಳ ಯೋಗ್ಯತೆ ಅರ್ಥಮಾಡಿಕೊಳ್ಳಲು ಇಂಥ ಪ್ರಹಸನಗಳು ನಡೆಯಬೇಕೇನೋ!

ಭಟ್ಟರ್ ಸ್ಕಾಚ್

- **ರಾಜು ಪತ್ತಾರ, ಹುಬ್ಬಳ್ಳಿ**
ಭಟ್ರೇ, ಕೆಲಸ ಮಾಡುವಾಗ ನಿದ್ರೆ ಬಂದರೆ ಅದಕ್ಕೊಂದು ಪರಿಹಾರವೇನು?
- **ಬಾಸ್ ಬರುವ ಶಬ್ದ ಕೇಳುವ ತನಕ ಆರಾಮವಾಗಿ ಮಲಗಬಹುದಲ್ಲ?!**

- **ಸಂಚಾರಿ ಪ್ರಾಣೇಶ, ಮೈಸೂರು**
ಭಟ್ರೇ, ಹೇರ್ ಕಟಿಂಗ್ ಸಲೂನ್‌ಗಳಲ್ಲಿ ಹೆಚ್ಚು ಪತ್ರಿಕೆಗಳನ್ನು ತರಿಸೋದು ಏಕೆ?
- **ತಲೆ ಹಗುರ ಮಾಡಿಕೊಂಡ ಗಿರಾಕಿಗಳ ತಲೆಗೆ ಅನಗತ್ಯ ವಿಷಯಗಳನ್ನು ತುರುಕಲು!**

- **ಅಮಾಸೆ ಸುಬ್ಬು, ಮೈಸೂರು**
ಭಟ್ರೇ, ಕಾಲೇಜಿಗೆ ಬರುವ ಹುಡುಗಿಯರು ತಿಂಗಳಿಗೆ ಒಮ್ಮೆಯಾದರೂ ಲಂಗ-ದಾವಣಿಯಲ್ಲಿ ಬರಲಿ ಅಂತ ಹುಡುಗರು ಆಗ್ರಹಿಸಿದರೆ, ಹುಡುಗಿಯರು?
- **ಹುಡುಗರು ವಾರಕ್ಕೊಮ್ಮೆಯಾದರೂ ಕಚ್ಚೆ-ಪಂಚೆಯಲ್ಲಿ ಬರಲಿ ಎಂದು ಬಯಸಿಯಾರು!**

- **ಘಂಟಿ ವರದ, ಕೃಷ್ಣಮೂರ್ತಿಪುರಂ**
ಭಟ್ರೇ, ಮೂವರು ಡಾಕ್ಟರುಗಳು ಸಂಗೀತ ವಾದನ ಬಲ್ಲವರಾಗಿದ್ದು ಕಛೇರಿ ನಡೆಸಿಕೊಟ್ಟರೆ ಏನೆನ್ನೋಣ?
- **ವಾದ್ಯ (ವೈದ್ಯ) ತ್ರಯ!**

- **ಸಂಡೂರು ಭೋಗಶೆಟ್ಟಿ, ಮೈಸೂರು**
ಭಟ್ರೇ, ಯುದ್ಧ ಯಾವಾಗ ನಿಲ್ಲುತ್ತೆ ಅಂತ ಚಾಟ್ ಜಿಪಿಟಿನ ಕೇಳಿದ್ದಕ್ಕೆ ತುಂಬ ಉದ್ಧಟತನದ ಉತ್ತರ ಕೊಟ್ಟಿತಲ್ಲ?
- **ಉತ್ತರ ಹೇಳಲು ನಾನೇನು ದೈವಜ್ಞ ಸೋಮಯಾಜಿನಾ ಅಂತ ಹೇಳ್ತಾ?**

- **ಮಹಾಮಹಿಮ ಶಾಸ್ತ್ರೀ, ಶಂಕರಪುರ**
ಭಟ್ರೇ, ಪ್ರತಿಪಕ್ಷ ನಾಯಕ ಅಶೋಕ ಪುಕ್ಸಟ್ಟೆ ಟಿಕೆಟಿಗಾಗಿ ಹಲ್ಲು ಗಿಂಜಿದ್ದು ಸರಿಯಾ?
- **ಕಾರ್ಯಕರ್ತರಿಗೆ ಕೇಳಿದೆ ಅಂತ ಸುಳ್ಳು ಬೇರೆ!**

- **ಪ್ರಸನ್ನ ನಾಯಕ, ತುರುವೇಕೆರೆ**
ಭಟ್ರೇ, ಒಬ್ಬ ವ್ಯಕ್ತಿ ಮದುವೆಯಾದ ಮೇಲೆ ಯಾಕೆ ಸೈಲೆಂಟ್ ಆಗ್ತಾನೆ?
- **ಯಾಕಂದ್ರೆ, ಅವನಿಗೆ ಗೊತ್ತಾಗುತ್ತೆ, ಸಂಸಾರದಲ್ಲಿ 'ಮಾತು ಬೆಳ್ಳಿ, ಮೌನ ಬಂಗಾರ' ಅನ್ನೋದು ಕೇವಲ ಮಾತಲ್ಲ, ಅದು ಅನಿವಾರ್ಯ ಅಂತ!**

- **ಅಜಿತ್ ಬೆಂಗ್ರೆ, ಗದಗ**
ಭಟ್ರೇ, ವಾಟ್ಸಾಪ್ ಗ್ರೂಪ್ ಮತ್ತು ರಾಜಕೀಯಕ್ಕೆ ಇರುವ ಸಾಮ್ಯತೆ ಏನು?
- **ಎರಡರಲ್ಲೂ ಯಾರು ಏನು ಹೇಳುತ್ತಾರೆ ಎನ್ನುವುದು ಯಾರಿಗೂ ಅರ್ಥವಾಗಲ್ಲ, ಆದ್ರೆ ಎಲ್ಲರೂ 'ಲೈಕ್' ಮಾಡುತ್ತಾ ಇರುತ್ತಾರೆ!**

ಕನ್ನಡ ಎನ್ನುವುದು ನಮ್ಮ ಗುರುತಾಗಬೇಕು..

ವಿಶ್ವರಂಗ

ರಂಗಸ್ವಾಮಿ ಮೂಕನಹಳ್ಳಿ

vveditoped@gmail.com

ನಾನು ಹತ್ತನೇ ತರಗತಿ ಪಾಸಾದದ್ದು 1990ರಲ್ಲಿ. ಅವತ್ತಿನ ದಿನದಲ್ಲಿ ಹಿಂದಿ ಭಾಷೆ ಒಂದು ವಿಷಯವಾಗಿತ್ತು. ಆದರೆ ಅದು 'ಆಟಕ್ಕುಂಟು ಲೆಕ್ಕಕ್ಕಿಲ್ಲ' ಎನ್ನುವಂತಿತ್ತು. ಈ ವಿಷಯದ ಬಗ್ಗೆ ಬಹಳ ಸೀರಿಯಸ್ಸಾಗಿ ಯಾರೂ ಮಾತಾಡುತ್ತಿರಲಿಲ್ಲ. ನಮ್ಮ ಶಾಲೆಯಲ್ಲಿ ಹಿಂದಿ ಭಾಷೆಯ ಬೋಧನೆ ಬಗ್ಗೆ ಕೂಡ ಸೀರಿಯಸ್ ಆಗಿರಲಿಲ್ಲ. 'ಖಾಲಿ ಪೇಪರ್ ಕೊಟ್ಟರೆ ನಪಾಸಾಗುತ್ತೀರಿ ಎಚ್ಚರ, ಹೀಗಾಗಿ ಏನಾದರೂ ಬರೆದು ಬನ್ನಿ' ಎನ್ನುವ ಮಾತುಗಳನ್ನು ಗುರುಗಳು ಹೇಳುತ್ತಿದ್ದರು. ಅವತ್ತಿಗೆ ಬೇಕಾದ ಒಂದಷ್ಟು ಕಲಿತದ್ದು ಬಿಟ್ಟರೆ, ಇಂದಿಗೆ ನನಗೆ ನನ್ನ ಹೆಸರನ್ನು ಕೂಡ ಹಿಂದಿಯಲ್ಲಿ ಬರೆಯಲು ಬರುವುದಿಲ್ಲ. ಪರೀಕ್ಷೆಯಲ್ಲಿ ಹೇಗೂ ಬಿಟ್ಟಪದ ತುಂಬುವುದು, ಹೊಂದಿಸಿ ಬರೆಯುವುದು ಹೀಗೆ ಮಕ್ಕಳು ಹೆಚ್ಚಿನ ಭಾಷಾಜ್ಞಾನವಿಲ್ಲದೆ ಪಾಸಾಗಲು ಎಷ್ಟು ಅಂಕಗಳಿಸಬೇಕೋ ಅಷ್ಟು ಸುಲಭವಾಗಿ ತೆಗೆಯುವಂಥ ವ್ಯವಸ್ಥೆ ಅಂದಿನ ದಿನದಲ್ಲಿತ್ತು. ಒಟ್ಟಾರೆ ಹಿಂದಿ ಬರುವುದಿಲ್ಲ ಎನ್ನುವ ಕಾರಣಕ್ಕೆ ನಾನು ನಪಾಸಾಗಲಿಲ್ಲ. ಅದು ಬುದ್ಧಿ ತಿಳಿಯದ ದಿನಗಳು. ಒಂದು ಭಾಷೆಯನ್ನು ಕಲಿಯುವುದು ನಮಗೆ ಲಾಭ ಎಂದು ಅರಿವಿರದ ದಿನಗಳು. ಹೀಗಾಗಿ ಹಿಂದಿ ಕಲಿಯಲಿಲ್ಲ. ಕಲಿಯದೆಯೂ ಪಾಸು ಮಾಡಿದ ಅಂದಿನ ವ್ಯವಸ್ಥೆಗೆ ಸಾವಿರ ನಮನಗಳು. ಹೀಗೆ ನಮನವನ್ನು ಅರ್ಪಿಸಲು ಕಾರಣವಿದೆ. ನಾನು ಹತ್ತನೇ ತರಗತಿ ನಪಾಸಾಗಿದ್ದರೆ? ನನ್ನ ಭವಿಷ್ಯ ಏನಾಗಿರುತ್ತಿತ್ತು? ಗೊತ್ತಿಲ್ಲ. ಪಾಸಾದ ಕಾರಣ ಅದು ಮುಂದೆ ನನ್ನ ಮೊದಲ ಕೆಲಸಕ್ಕೆ ಎಂದು ದುಬೈಗೆ ಕರೆದೊಯ್ದಿತು. ಅಲ್ಲಿ ಹಿಂದಿ ಭಾಷೆಯನ್ನು ಸ್ಪಷ್ಟವಾಗಿ ಮಾತಾಡಲು ಕಲಿತೆ. ಇಂದಿಗೆ ಕನ್ನಡದಷ್ಟೇ ಸುಲಲಿತವಾಗಿ ಹಿಂದಿ ಭಾಷೆಯನ್ನು ಮಾತಾಡಬಲ್ಲೆ. ಆದರೆ ಬರೆಯಲು ಮತ್ತು ಓದಲು ಬರುವುದಿಲ್ಲ.

ನೀವು ನನ್ನನ್ನು ಅಜ್ಞಾನಿ ಎಂದುಕೊಂಡರೂ ಪರವಾಗಿಲ್ಲ. ಆದರೆ ಸತ್ಯ ಹೇಳದೆ ಇರುವುದು ಮಾತ್ರ ಸಾಧ್ಯವಿಲ್ಲ. ಅದೇನೆಂದರೆ ನನಗೆ ಸ್ಪೇನ್ ಎನ್ನುವ ದೇಶವಿದೆ ಎನ್ನುವುದು ಗೊತ್ತಿರಲಿಲ್ಲ. ಇನ್ನು ಸ್ಪ್ಯಾನಿಷ್ ಎನ್ನುವ ಭಾಷೆಯಿದೆ ಎನ್ನುವುದು ಹೇಗೆ ಗೊತ್ತಾಗಬೇಕು? ನಮ್ಮ ಚರಿತ್ರೆಯಲ್ಲಿ ಫ್ರೆಂಚರು, ಡಚ್ಚರು, ಪೋರ್ಚುಗೀಸರು, ಬ್ರಿಟಿಷರು ಎಂದು ಓದಿದ್ದೆವು. ಆದರೆ ಸ್ಪ್ಯಾನಿಷ್ ಹೆಸರು ಕೇಳಿರಲಿಲ್ಲ. ಬದುಕು ನನ್ನನ್ನು 23ನೇ ವಯಸ್ಸಿಗೆ ಸ್ಪೇನ್ ದೇಶಕ್ಕೆ ಕರೆದುಕೊಂಡು ಹೋಯ್ತು. ಮೂರು ತಿಂಗಳ ಕಾಲಾವಧಿಯಲ್ಲಿ ನಾನು ಸ್ಪ್ಯಾನಿಷ್ ಭಾಷೆಯನ್ನು ಕಲಿತೆ. ಓದುವುದು, ಬರೆಯುವುದು, ಮಾತಾಡುವುದು ಎಲ್ಲವೂ ಬರುತ್ತದೆ. ಕನ್ನಡದ ನಂತರ ಅತಿ ಹೆಚ್ಚು ಬಳಸುವ ಭಾಷೆ ಇಂದಿಗೂ ಸ್ಪ್ಯಾನಿಷ್. ಆ ನಂತರದ್ದು ಇಂಗ್ಲಿಷ್. ಹಿಂದಿ ಭಾಷೆ ದುಬೈನಲ್ಲಿರುವಾಗ ಉಪಯೋಗಿಸಿದ್ದು ಬಿಟ್ಟರೆ ಮತ್ತದು ನನಗೆ ಹೆಚ್ಚು ಉಪಯೋಗಕ್ಕೆ ಬಂದಿಲ್ಲ.

ಮನುಷ್ಯನಿಗೆ ಅವಶ್ಯಕತೆ ಎನ್ನುವುದು ಎಲ್ಲವನ್ನೂ ಕಲಿಸುತ್ತದೆ. ನಮ್ಮ ದೇಶದ ಹಿಂದಿ ಭಾಷೆ ಇಂದಿಗೂ ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ಆದರೆ ದೂರದ ಯುರೋಪಿನ ಸ್ಪ್ಯಾನಿಷ್ ಜತೆಗೆ ಪೋರ್ಚುಗೀಸ್, ಇಟಾಲಿಯನ್ ಬರುತ್ತದೆ. ಏಕೆಂದರೆ ಅದು ನನಗೆ ಅನ್ನದ ದಾರಿ ಒದಗಿಸಿಕೊಟ್ಟಿತು. ಹಿಂದಿ ನನಗೆ ಆ ಅವಕಾಶವನ್ನು ತೆರೆದುಕೊಟ್ಟಿದ್ದರೆ ನಾನು ಅದನ್ನು ಕೂಡ ಕಲಿತಿರುತ್ತಿದ್ದೆ. ಎಷ್ಟು ಭಾಷೆ ಕಲಿತರೂ ಅಷ್ಟೂ ಒಳ್ಳೆಯದು ಎಂದು ನನ್ನ ಭಾವನೆ. ಆದರೆ ಹಿಂದಿ ಭಾಷೆ ಬರುವುದಿಲ್ಲ ಎನ್ನುವ ಒಂದೇ ಕಾರಣಕ್ಕೆ ಬೇರೆಲ್ಲಾ ಸಬ್ಜೆಕ್ಟ್‌ಗಳಲ್ಲಿ ಉತ್ತಮ ಅಂಕ ತೆಗೆದ ವಿದ್ಯಾರ್ಥಿಯನ್ನು ನಪಾಸು ಮಾಡುವುದಕ್ಕೆ ನನ್ನ ವಿರೋಧವಿದೆ. ನಾವಿರುವುದು ಕರ್ನಾಟಕದಲ್ಲಿ, ಕನ್ನಡ ನಮ್ಮ ಮಾತೃಭಾಷೆ, ಹೀಗಾಗಿ ಇಲ್ಲಿ ಓದುವ ಪ್ರತಿಯೊಬ್ಬರಿಗೂ ಕನ್ನಡ ಕಡ್ಡಾಯವಾಗಬೇಕು. ಹಿಂದಿ ಎನ್ನುವ ವಿಷಯವನ್ನು ವಿದ್ಯಾರ್ಥಿಗಳ ಆಯ್ಕೆಗೆ ಬಿಡಬೇಕು. ಅದನ್ನು ಮೂರನೇ ಭಾಷೆಯನ್ನಾಗಿ ಕೂಡ ಆಯ್ಕೆ ಮಾಡಿಕೊಳ್ಳುವಂತಿರಬೇಕು. ಅಂದರೆ ಇಲ್ಲಿ ಓದುತ್ತಿರುವ ವಿದ್ಯಾರ್ಥಿಯ ಮಾತೃಭಾಷೆ ತೆಲುಗು ಇದ್ದಲ್ಲಿ ಕನ್ನಡ, ಇಂಗ್ಲಿಷ್ ಜತೆಗೆ ತೆಲುಗನ್ನು ಮೂರನೇ ಭಾಷೆಯನ್ನಾಗಿ ಆಯ್ಕೆ ಮಾಡಿಕೊಳ್ಳುವ ಅವಕಾಶ ನೀಡಬೇಕು. ಅದೇ ರೀತಿ ವಿದ್ಯಾರ್ಥಿಗೆ ಹಿಂದಿ ಇಷ್ಟವಿದ್ದಲ್ಲಿ ಹಿಂದಿ, ಸಂಸ್ಕೃತ ಇಷ್ಟವಿದ್ದಲ್ಲಿ ಸಂಸ್ಕೃತ ಆಯ್ಕೆ ಮಾಡಿಕೊಳ್ಳುವ ಅವಕಾಶ ಇರಬೇಕು. ಇಂಗ್ಲಿಷ್ ಭಾಷೆಯಿಲ್ಲದೆ ಇಂದಿನ ಜಗತ್ತಿನಲ್ಲಿ ಬದುಕು ಕಟ್ಟಿಕೊಳ್ಳುವುದು ಸುಲಭದ ಮಾತಲ್ಲ. ಹೀಗಾಗಿ ಕನ್ನಡ, ಇಂಗ್ಲಿಷ್ ಎರಡನ್ನೂ ಎಲ್ಲಾ ಮಕ್ಕಳು ಕಡ್ಡಾಯವಾಗಿ ಓದುವಂತಿರಬೇಕು. ಮಿಕ್ಕ ಯಾವುದೇ ಭಾಷೆಯಾಗಲಿ ಅದು ಹಿಂದಿಯೇ ಆಗಿರಬೇಕು ಎಂದಿಲ್ಲ, ಅದು ಆಯ್ಕೆಯ ವಿಷಯವಾಗಬೇಕು.

ಭಾಷೆಯ ಆಧಾರದ ಮೇಲೆ 1956ರಲ್ಲಿ ರಾಜ್ಯಗಳ ಪುನರ್ವಿಂಗಡನೆ ಮಾಡಿದ್ದು ಏಕೆ? ಅದು ರಾಜ್ಯಗಳ ಆಡಳಿತ ಸುಲಭವಾಗುತ್ತದೆ ಎನ್ನುವ ಕಾರಣಕ್ಕೆ, ಮಾತೃಭಾಷೆಯಲ್ಲಿ ಸಂವಹನ ಸುಲಭ, ಸರಾಗ ಎನ್ನುವ ಕಾರಣಕ್ಕೆ ಅಲ್ಲವೇ? ಈಗ ಅದು ಬದಲಾಗಿ ಹೋಗಿದೆಯೇ? ಹಿಂದಿ ಭಾಷೆಯನ್ನು ಗ್ರೇಡಿಂಗ್ ವ್ಯವಸ್ಥೆಗೆ ತಂದ ಕರ್ನಾಟಕ ಸರಕಾರ ಅಭಿನಂದನಾರ್ಹ. ಉತ್ತರ ಪ್ರದೇಶದ ಮಗು ಕನ್ನಡವನ್ನು ಮೂರನೇ ಭಾಷೆಯಾಗಿ ಕಲಿಯಬೇಕು ಮತ್ತು ಅದರಲ್ಲಿ ಆ ಮಗು ಅನುತ್ತೀರ್ಣನಾದರೆ ಒಂದು ವರ್ಷ ಮತ್ತೆ ಅದೇ ಕ್ಲಾಸು ರಿಪೀಟ್ ಮಾಡಬೇಕು ಎನ್ನುವುದನ್ನು ಅಲ್ಲಿನ ಸರಕಾರ ಒಪ್ಪುತ್ತದೆಯೇ? ಅಲ್ಲಿನ ಜನ ಒಪ್ಪುವರೇ? ಅದೇಕೆ ನಮ್ಮ ಮಕ್ಕಳು ಹಿಂದಿಯಲ್ಲಿ ನಪಾಸಾದರೆ ಒಂದು ವರ್ಷದ ನಷ್ಟವನ್ನು ಅನುಭವಿಸಬೇಕು? ಮತ್ತೆ ಹೇಳುತ್ತೇನೆ, ಬದುಕು ದೊಡ್ಡದು, ಅವಕಾಶಗಳು ಮತ್ತು ಅವಶ್ಯಕತೆಗಳು ಬಿದ್ದಲ್ಲಿ ಹಿಂದಿಯಲ್ಲ ಯಾವುದೇ ಭಾಷೆಯನ್ನಾದರೂ ಮನುಷ್ಯ ಕಲಿಯುತ್ತಾನೆ. ಅದಕ್ಕೆ ಉದಾಹರಣೆಯಾಗಿ ನಾನಿದ್ದೇನೆ. ಹತ್ತನೇ ತರಗತಿವರೆಗೂ ಕನ್ನಡ ಮಾಧ್ಯಮದಲ್ಲಿ ಓದಿದ ನನಗೆ ಕನ್ನಡ ಬಿಟ್ಟು ಬೇರಾವ ಭಾಷೆಯೂ ಅತ್ಯುತ್ತಮವಾಗಿ ಬರುತ್ತಿರಲಿಲ್ಲ. ಇವತ್ತಿಗೆ ಐದಾರು ಭಾಷೆಗಳ ಮೇಲೆ ಹಿಡಿತವಿದೆ. ಇವೆಲ್ಲದರ ಸಾರಾಂಶವಿಷ್ಟೆ - ಭಾಷೆ ಎಂದಿಗೂ ಹೇರಿಕೆಯಾಗಬಾರದು. ಇದರರ್ಥ ಹಿಂದಿ ಕಲಿಯಬಾರದು ಎಂದು ಕೂಡ ಅಲ್ಲ, ಆದರೆ ಅದು ಆಯಾ ವ್ಯಕ್ತಿಗೆ ಬಿಟ್ಟದ್ದು. 'ಏಕಭಾರತ ಶ್ರೇಷ್ಠ ಭಾರತ' ಎನ್ನುವುದರ ಬಗ್ಗೆ ತಕರಾರಿಲ್ಲ, ಆದರೆ ಭಾರತಕ್ಕೊಂದು ಭಾಷೆಯ ಮುಖ ಕೊಡಬೇಕು, ಮತ್ತದು ಹಿಂದಿಯಾಗಿರಬೇಕು ಎಂದರೆ ಅದಕ್ಕೆ ವಿರೋಧವಿದೆ.

ನೀವು ಯುರೋಪಿಗೆ ಭೇಟಿಕೊಟ್ಟು ನೋಡಿ, ಅಲ್ಲೆಲ್ಲಾ ಭಾಷೆಯ ಬಗ್ಗೆ ಅದೆಷ್ಟು ಪ್ರೀತಿಯಿದೆ ಎನ್ನುವುದು ತಿಳಿದುಬರುತ್ತದೆ. ನಾನು 18 ವಸಂತಗಳನ್ನು ಕಳೆದ ರಾಜ್ಯದ ಹೆಸರು ಕತಾಲೋನ್ಯ, ಬಾರ್ಸಿಲೋನಾ ರಾಜಧಾನಿ. ಈ ರಾಜ್ಯದ ಜನಸಂಖ್ಯೆ 80 ಲಕ್ಷ ದಾಟುವುದಿಲ್ಲ, ಆದರೆ ಇವರು ನಾವು ಪ್ರತ್ಯೇಕ ದೇಶ ಎಂದು ಕರೆದುಕೊಳ್ಳುತ್ತಾರೆ. ದಶಕಗಳಿಂದ ಸ್ಪೇನಿನಿಂದ ಸ್ವಾತಂತ್ರ್ಯ ಪಡೆದುಕೊಳ್ಳಲು ಹೋರಾಡುತ್ತಿದ್ದಾರೆ. ಬಾಸ್ಕೋ ಎನ್ನುವ ಇನ್ನೊಂದು ರಾಜ್ಯದ ಕಥೆಯೂ ಸೇಮ್. ಅವರು ತಮ್ಮನ್ನು ತಾವು 'ಪಾಯಿಸ್ ಬಾಸ್ಕೋ' ಎಂದು ಕರೆದುಕೊಳ್ಳುತ್ತಾರೆ. ಅಂದರೆ ಬಾಸ್ಕೋ ದೇಶ ಎಂದರ್ಥ. ಯುರೋಪಿನ ತುಂಬೆಲ್ಲಾ ಇಂಥ ಹತ್ತಾರು ಸಂಘರ್ಷಗಳು ನಿಮಗೆ ಕಾಣ ಸಿಗುತ್ತವೆ. ಹತ್ತಿಪ್ಪತ್ತು ಲಕ್ಷ ಜನ ಮಾತಾಡುವ ಭಾಷೆಯ ಜನ ತಮ್ಮದೇ ಆದ ಅಸ್ಮಿತೆಯಿದೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ನಾವು ಇದೇ ರೀತಿ ಹೊಡೆದಾಡಬೇಕು ಎನ್ನುವ ಕಾರಣಕ್ಕೆ ಈ ಸಾಲುಗಳನ್ನು ಬರೆದಿಲ್ಲ. ನಾವು ಹೀಗೆ ಮಾಡಬೇಕು ಎನ್ನುವುದು ಕೂಡ ನನ್ನ ಅಭಿಪ್ರಾಯವಲ್ಲ. ಆದರೆ ಏಳು ಕೋಟಿಗೂ ಮೀರಿದ ಜನರಿರುವ ಕನ್ನಡ ನಾಡಿನಲ್ಲಿ 'ಕನ್ನಡವೇ ಸಾರ್ವಭೌಮ' ಎನ್ನುವ ಮಾತನ್ನು ಹೇಳದೆ ಇರಲು ಮಾತ್ರ ಸಾಧ್ಯವಿಲ್ಲ.

ಈಗಾಗಲೇ ಡೆಮೊಗ್ರಾಫಿ ಬದಲಾಗುತ್ತಿದೆ. ಕನ್ನಡ ಜನತೆಯ ಫರ್ಟಿಲಿಟಿ ರೇಟ್ 1.5 ಎನ್ನುತ್ತದೆ ಅಂಕಿ-ಅಂಶ. ಅಂದರೆ ಪ್ರತಿ ಇಬ್ಬರು ಕನ್ನಡಿಗರ ಜಾಗದಲ್ಲಿ ಒಂದೂವರೆ ಕನ್ನಡಿಗ ಹುಟ್ಟುತ್ತಿದ್ದಾನೆ. ಇನ್ನಷ್ಟು ಸರಳವಾಗಿ ಹೇಳಬೇಕೆಂದರೆ ಕರ್ನಾಟಕದಲ್ಲಿ ಮಕ್ಕಳ ಜನನ ಪ್ರಮಾಣವು ಕುಸಿತವನ್ನು ಕಂಡಿದೆ. ಕನ್ನಡ ನಾಡು ಕನ್ನಡ ನಾಡಾಗಿಯೇ ಉಳಿದುಕೊಳ್ಳಲು ಬೇಕಿರುವ ಫರ್ಟಿಲಿಟಿ ರೇಟ್ ಎರಡು! ಅದಕ್ಕಿಂತ ಕಡಿಮೆಯಾದರೆ ಅದನ್ನು 'ಪಾಯಿಂಟ್ ಆಫ್ ನೋ ರಿಟರ್ನ್' ಎನ್ನಬಹುದು. 2025ರ ಅಂಕಿ-ಅಂಶದ ಪ್ರಕಾರ ಕನ್ನಡಿಗರ ಫರ್ಟಿಲಿಟಿ ರೇಟ್ ಒಂದೂವರೆ. ಇದರರ್ಥ ಮುಂದಿನ ಮೂರು ದಶಕದಲ್ಲಿ ಕನ್ನಡ ನಾಡಿನಲ್ಲಿ ಕನ್ನಡ, ಕನ್ನಡಿಗ ಸಾರ್ವಭೌಮ ಎಂದು ಹೇಳಿಕೊಳ್ಳಲು ಸಾಧ್ಯವಿರುವುದಿಲ್ಲ.

ರೈಲ್ವೆ ನೇಮಕಾತಿ, ರೈಲ್ವೆ ಪರೀಕ್ಷೆ ಸಹಿತ ಹಲವಾರು ಪರೀಕ್ಷೆಗಳನ್ನು ನಾವು ನಮ್ಮ ಮಾತೃಭಾಷೆಯಲ್ಲಿ ತೆಗೆದುಕೊಳ್ಳಲು ಆಗುತ್ತಿಲ್ಲ. ಕರ್ನಾಟಕದ ಹಳ್ಳಿಗಳಲ್ಲಿ ಕೂಡ ನಾವು ಬ್ಯಾಂಕುಗಳಲ್ಲಿ ಹಿಂದಿ ಭಾಷಿಕರನ್ನು ಕಾಣಬಹುದು. ಹೀಗೇಕಾಗುತ್ತದೆ? ಏಕೆಂದರೆ ಅವರು ತಮ್ಮ ಮಾತೃಭಾಷೆಯಲ್ಲಿ ಪರೀಕ್ಷೆಗಳನ್ನು ಬರೆಯುತ್ತಾರೆ. ಯಾರು ತಮ್ಮ ಮಾತೃಭಾಷೆಯಲ್ಲಿ ಅಧ್ಯಯನ ಮಾಡುತ್ತಾರೋ ಅವರಿಗೆ ವಿಷಯಜ್ಞಾನ ಹೆಚ್ಚಾಗಿರುತ್ತದೆ ಎನ್ನುವುದು ಇವತ್ತಿಗೆ ಸಾಬೀತಾಗಿರುವ ಅಂಶ. ಚೀನಾ, ಜಪಾನ್ ಮತ್ತು ಯುರೋಪಿನ ದೇಶಗಳು ಇದಕ್ಕೆ ಉದಾಹರಣೆಯಾಗಿ, ಸಾಕ್ಷಿಯಾಗಿ ನಿಂತಿವೆ. ಯುರೋಪಿಯನ್ ಒಕ್ಕೂಟದಿಂದ ಬ್ರಿಟನ್ ಹೊರಹೋದ ನಂತರ ಯುರೋಪಿಯನ್ ಒಕ್ಕೂಟದಿಂದ ಇಂಗ್ಲಿಷ್ ಭಾಷೆಯನ್ನು ತೆಗೆದುಹಾಕಲಾಗಿದೆ. ಗಮನಿಸಿ ಯುರೋಪಿಯನ್ ಒಕ್ಕೂಟದ ಪಾರ್ಲಿಮೆಂಟಿನಲ್ಲಿ ಎಲ್ಲಾ ಸದಸ್ಯ ದೇಶಗಳವರು ಆಯಾ ಭಾಷೆಯಲ್ಲಿ ಮಾತಾಡುತ್ತಾರೆ. ಇಂಗ್ಲಿಷ್ ಕೂಡ ಒಂದು ಭಾಷೆಯಾಗಿತ್ತು ಅಷ್ಟೇ, ಇವತ್ತಿಗೆ ಅದನ್ನೂ ತೆಗೆದುಹಾಕಿದ್ದಾರೆ. ಏಕೆಂದರೆ ಬ್ರಿಟನ್ ಇವತ್ತಿಗೆ ಸದಸ್ಯ ರಾಷ್ಟ್ರವಲ್ಲ!

ಕನ್ನಡಿಗ ಮಾತ್ರ ತನ್ನ ಮಾತೃಭಾಷೆಯ ಉಪಯೋಗ ಪಡೆದುಕೊಳ್ಳಲು ಆಗುತ್ತಿಲ್ಲ. ಇದಕ್ಕೆ ನಾವು ಕೇಂದ್ರ ಸರಕಾರವನ್ನೂ ಸಂಪೂರ್ಣ ದೂಷಿಸುವಂತಿಲ್ಲ. ಬಹಳಷ್ಟು ಕನ್ನಡಿಗರು ತಮ್ಮ ಮಕ್ಕಳಿಗೆ ಕನ್ನಡ ಓದಲು, ಬರೆಯಲು ಬರುವುದಿಲ್ಲ ಎನ್ನುವುದನ್ನು ಹೆಮ್ಮೆ ಎನ್ನುವಂತೆ ಹೇಳಿಕೊಳ್ಳುತ್ತಾರೆ. ನಮ್ಮನ್ನು ನಾವು ಗೌರವಿಸಿಕೊಳ್ಳದಿದ್ದರೆ ಬೇರೆಯವರು ಹೇಗೆ ಗೌರವಿಸಿಯಾರು? ಎನ್ನುವ ಸಾಮಾನ್ಯಜ್ಞಾನ ಕನ್ನಡಿಗನಲ್ಲಿ ಜಾಗೃತವಾಗಬೇಕಿದೆ.

ಕನ್ನಡ ನಾಡಿಗೆ ಕೆಲಸಕ್ಕಾಗಿ ವಲಸೆ ಬಂದ ಅನ್ಯರಾಜ್ಯದ ಜನರು ಇಲ್ಲಿನ ಭಾಷೆಯನ್ನು ಕಡ್ಡಾಯವಾಗಿ ಕಲಿಯಬೇಕು. ಕನ್ನಡ ಕಲಿಯದೇ ಇಲ್ಲಿ ಬದುಕಬಹುದು ಎನ್ನುವ ದಾರ್ಷ್ಟಿಕತೆ ಅವರಲ್ಲಿ ಬಂದದ್ದು ಹೇಗೆ? ಅದಕ್ಕೆ ಕಾರಣರಾರು ಎನ್ನುವುದನ್ನು ಕೂಡ ನಾವು ವಿಮರ್ಶೆ ಮಾಡಿಕೊಳ್ಳಬೇಕು. ಸಂವಹನದ ಪ್ರಾರಂಭವನ್ನು ಕನ್ನಡದಲ್ಲಿ ನಾವು ಮಾಡಲು ಶುರುಮಾಡಿದರೆ ನಿಧಾನವಾಗಿ ಅವರು ಕನ್ನಡ ಕಲಿಯುತ್ತಾರೆ. ಆದರೆ ನಮ್ಮಲ್ಲಿ ಆ ಒಗ್ಗಟ್ಟು ಎಲ್ಲಿಂದ ತರುವುದು? ಹಿಂದಿಯ ಬಗೆಗಿನ ಕರ್ನಾಟಕ ಸರಕಾರದ ಧೋರಣೆ ಸರಿಯಿದೆ ಎಂದ ತಕ್ಷಣ, ತತ್ವ-ಸಿದ್ಧಾಂತದ ಅಡಿಯಲ್ಲಿ ವ್ಯಕ್ತಿಯನ್ನು ಅಳೆಯಲಾಗುತ್ತದೆ. ಯಾವುದನ್ನು ನಾವು ಚರ್ಚಿಸಬೇಕು ಆ ವಿಷಯವನ್ನು ಬಿಟ್ಟು ವಿಷಯ ಎಲ್ಲೆಲ್ಲಿಗೋ ಹೋಗುತ್ತದೆ. ಅದು ಧರ್ಮ, ರಾಷ್ಟ್ರೀಯತೆಯ ಕಡೆಗೆ ತಿರುಗುತ್ತದೆ. ಹಿಂದಿ ಬೇಡವೆನ್ನುವ ನೀವು ಉರ್ದು ಬಗ್ಗೆ ಚಕಾರವೆತ್ತುವುದಿಲ್ಲ ಎನ್ನಲಾಗುತ್ತದೆ. ಒಟ್ಟಾರೆ ಕನ್ನಡ, ಕನ್ನಡಿಗ, ನಮ್ಮ ಅಸ್ಮಿತೆ ಬಗ್ಗೆಯ ಚರ್ಚೆ ಬಿಟ್ಟು ವಿಷಯಾಂತರವಾಗುತ್ತದೆ. ಹಿಂದಿ ಬೇಡ ಎನ್ನುವುದು ಬರಹದ ಉದ್ದೇಶವಲ್ಲ, ಹಿಂದಿ ಕಡ್ಡಾಯ, ಆ ವಿಷಯದಲ್ಲಿ ಪಾಸಾಗಬೇಕು ಎನ್ನುವುದು ತಪ್ಪು ಎನ್ನುವುದು ಮತ್ತು ಹಿಂದಿ ಭಾಷೆಯನ್ನು ಆಟಕ್ಕುಂಟು ಲೆಕ್ಕಕ್ಕಿಲ್ಲ ಎನ್ನುವಂತೆ ಗ್ರೇಡಿಂಗ್ ಸಿಸ್ಟಮಿಗೆ ತಂದಿರುವುದು ಸರಿ ಎನ್ನುವುದನ್ನು ಹೇಳುವುದಷ್ಟೇ ಈ ಬರಹದ ಉದ್ದೇಶ.

ಎಲ್ಲರೂ ಅವರವರ ಅವಶ್ಯಕತೆಗೆ ತಕ್ಕಂತೆ ಭಾಷೆಯನ್ನು ಕಲಿಯುತ್ತಾರೆ. ನಮ್ಮ ಮಾತೃಭಾಷೆಯಲ್ಲದ ಬೇರೆ ಭಾಷೆಯಲ್ಲಿ ನಪಾಸಾದರೆ ಅದು ವಿದ್ಯಾರ್ಥಿಯ ಸಮಯವನ್ನು, ಆತನ ಆತ್ಮವಿಶ್ವಾಸವನ್ನು ಕಳೆಯುತ್ತದೆ. ಇಂಥ ವ್ಯವಸ್ಥೆಗೆ ಧಿಕ್ಕಾರ. ಇವತ್ತಿನ ಗ್ರೇಡಿಂಗ್ ವ್ಯವಸ್ಥೆಗೆ ನನ್ನ ಜೈಕಾರ. ನೆನಪಿರಲಿ ಮೊದಲಿಗೆ ನಾವೊಬ್ಬ ಉತ್ತಮ ಕನ್ನಡಿಗನಾಗಬೇಕು. ಆಗ ಮಾತ್ರ ನಾವು ಉತ್ತಮ ಭಾರತೀಯರಾಗಬಹುದು. ಆದರೆ ಎಲ್ಲದರಲ್ಲೂ ಒಡಕು ಸೃಷ್ಟಿಸುವ ಇಂದಿನ ದಿನಗಳಲ್ಲಿ ನೈಜ ಉದ್ದೇಶಗಳು ಮಾತ್ರ ಸುದ್ದಿಯಾಗದೆ ಸಾಯುತ್ತವೆ.

ಭಗವಾನ್ ಮಹಾವೀರರು ಬದುಕಿನ ಅವಿಭಾಜ್ಯ ಅಂಗ

ಇಂದು ಮಹಾವೀರ ಜಯಂತಿ

ಜಗತ್ತು ಅಂಧಕಾರಮಯವಾದಾಗ, ಮನುಷ್ಯತ್ವವೇ ಸತ್ತು ಹೋದಾಗ, ಜನ ಕಷ್ಟದಿಂದ ಬೆಂದು ಬಸವಳಿದಾಗ ಒಬ್ಬ ವ್ಯಕ್ತಿ ಜನ್ಮತಾಳಿ ತನ್ನನ್ನು ತಾನು ಮೊದಲು ಸುಧಾರಿಸಿಕೊಂಡು ಜಗತ್ತಿಗೆ ಮಾರ್ಗದೀಪಕನಾಗುವುದು ಭರತ ಖಂಡದಲ್ಲೇನೂ ಹೊಸದಲ್ಲ. ಈ ವರ್ತಮಾನ ಕಾಲದಲ್ಲಿ ಜಗತ್ತು ಇಂತಹುದೇ ವಿಷಮ ಕಾಲದಲ್ಲಿದ್ದಾಗ ಜೈನರ ಪ್ರಥಮ ತೀರ್ಥಂಕರ ಆದಿನಾಥರಿಂದ ಹಿಡಿದು ತೀರಾ ಇತ್ತೀಚಿನ 24 ನೇ ತೀರ್ಥಂಕರ ಭಗವಾನ್ ಮಹಾವೀರರವರೆಗಿನ ಮಹಾಪುರುಷರು ತಮ್ಮನ್ನು ತಾವು ಮೊದಲು ತಿದ್ದಿತೀಡಿಕೊಂಡು ನಂತರ ಜಗತ್ತಿನ ಓರೆಕೋರೆಗಳನ್ನು ಸರಿ ಮಾಡಲು ಮುಂದಾಗಿದ್ದರು.

ಮಹಾವೀರರ ಜನ್ಮವು ಕ್ರಿ.ಪೂ 599ರಲ್ಲಾಯಿತು ಹಾಗೂ ನಿರ್ವಾಣವು ಕ್ರಿ.ಪೂ. 527 ರಲ್ಲಾಯಿತು. ಈಗಿನ ಬಿಹಾರದ ಕುಂಡಲಪುರದ ರಾಜಾ ಸಿದ್ಧಾರ್ಥನ ರಾಣಿ ತ್ರಿಶಲಾ ಮಗನಾಗಿ ಜನಿಸಿದ ಅವರಿಗೆ ಅರಮನೆಯ ಸಕಲ ಸುಖಭೋಗಗಳು ಆವರಿಸಿದ್ದವು. ಆದರೆ ಮಹಾವೀರ ಯುವಕನಾಗುತ್ತಿದ್ದಂತೆ ರಾಜವೈಭೋಗಗಳು ಸಪ್ಪೆಯೆನಿಸತೊಡಗಿದವು. ನನಗೆ ನನ್ನ ತಂದೆ ತಾಯಿ ಯಾವುದರಲ್ಲೂ ಕಡಿಮೆ ಮಾಡಿಲ್ಲ, ನಿಜ. ಆದರೆ ನನಗೆ ಏನೋ ಬೇರೆ ಬೇಕು ಅನಿಸುತ್ತಿದೆ, ಆದರೆ ಅದು ಏನೆಂದು ಅರಿವಾಗುತ್ತಿಲ್ಲ. ಅರಮನೆಯಲ್ಲಿರುವ ಈ ಮಹಾ ವೈಭೋಗಗಳು ನನ್ನನ್ನು ಸುತ್ತುವರೆದಿದ್ದರೂ ನನ್ನ ಆತ್ಮದಲ್ಲೇಕೆ ಚಡಪಡಿಕೆ ಎಂದು ರಾಜ ಭೋಗಗಳನ್ನು ಧಿಕ್ಕರಿಸಿ ತನ್ನನ್ನು ತಾನು ಅರಿತುಕೊಳ್ಳಲು ತಪೋವನಕ್ಕೆ ತೆರಳಿದನು. ಶರೀರದ ಮಮಕಾರವನ್ನು ತೊರೆದು ಆತ್ಮನ ಸ್ವರೂಪದಡೆಗೆ ಧಾವಿಸತೊಡಗಿದನು. ಅಂತರಂಗದಲ್ಲಿ ಹುದುಗಿರಬಹುದಾದ ಅಂತರಂಗ ಪರಿಗ್ರಹಗಳಾದ ಕ್ರೋಧ, ಮಾನ, ಮಾಯಾ, ಲೋಭ ಇತ್ಯಾದಿಗಳನ್ನು ತೊರೆದು ಬಾಹ್ಯ ಪರಿಗ್ರಹಗಳತ್ತವೂ ಸೋಕದೇ ಅಂತರ್ಮುಖಿಯಾಗಿ ಜಯಿಸಿ ತಪೋ ನಿರತನಾದನು. ಇದರ ಫಲವಾಗಿ ಕೇವಲ ಜ್ಞಾನವನ್ನು ಪಡೆದುಕೊಂಡನು. ಜ್ಞಾನದ ಕಾಂತಿಯಿಂದ ಸಹಿತನಾಗಿ ಲೋಕದ ಸಮಸ್ತ ಕಾಲದ, ಸಮಸ್ತ ವಿಷಯಗಳನ್ನು ಅರಿತುಕೊಂಡ ಭಗವಾನ್ ಮಹಾವೀರರು ಜನತೆಗೆ ಉಪದೇಶಿಸಲು ಪ್ರಾರಂಭಿಸಿದರು.

ತನ್ನಿಮಿತ್ತ

ನಿರಂಜನ್ ಜೈನ್ ಕುದ್ಯಾಡಿ

vveditoped@gmail.com

ಭಗವಾನ್ ಮಹಾವೀರರು ಅನೇಕ ವಿಷಯಗಳ ಮೂಲಕ ಮಾನವ ಜನ್ಮದ ಉನ್ನತಿಗಾಗಿ ಉಪದೇಶವನ್ನು ಜಗತ್ತಿಗೆ ಸಾರಿದರು. ಪ್ರತೀ ಮನುಷ್ಯನೂ ತನ್ನ ಹಿತಕ್ಕಾಗಿ ಪಾಪದ ಕಾರ್ಯಗಳನ್ನು ಮಾಡುತ್ತಾನೆ. ಇದರಲ್ಲಿ ಕೆಲವರು ತಾನು ಮಾಡಿದ್ದು ಪಾಪವೆಂದು ತಿಳಿದು ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತಾರೆ. ಹಾಗೆಯೇ ಕೆಲವರು ಮತ್ತಷ್ಟೂ ಪಾಪಗಳ ಅಡಿಯಲ್ಲೇ ಬದುಕುತ್ತಾರೆ. ಭಗವಾನ್ ಮಹಾವೀರರ ಪ್ರಕಾರ ಪಾಪಗಳು ಐದು ಪ್ರಕಾರವಾಗಿದೆ. ಹಿಂಸೆ, ಸುಳ್ಳು, ಕಳ್ಳತನ, ಕುಶೀಲ ಮತ್ತು ಪರಿಗ್ರಹವಾಗಿದೆ. ಇವುಗಳು ಮನುಷ್ಯನ ಮಾನಸಿಕತೆಯನ್ನು, ಮಾನವೀಯ ಮೌಲ್ಯವನ್ನು, ಬೌದ್ಧಿಕ ವಿಕಾಸವನ್ನು ನಾಶ ಪಡಿಸುತ್ತದೆ. ಅಶುಭ ಕಾರ್ಯಗಳನ್ನು ಮಾಡುವುದು ಹಾಗೂ ಆತ್ಮನ ಪತನಕ್ಕೆ ಕಾರಣವಾಗುವ ಕ್ರಿಯೆಗಳೇ ಪಾಪಗಳಾಗಿವೆ.

ಪ್ರಮಾದದಿಂದ ಅಥವಾ ಉದ್ದೇಶಪೂರ್ವಕವಾಗಿ ತನ್ನ ಸ್ವಂತದ ಲಾಭಕ್ಕಾಗಿ ಇತರರಿಗೆ ತೊಂದರೆ ಮಾಡುವುದು ಹಿಂಸೆಯಾಗಿದೆ. ಹಿಂಸೆಯಲ್ಲಿ ಎರಡು ಪ್ರಕಾರವಿದೆ. ಒಂದನೆಯದಾಗಿ ಕ್ರಿಯೆಯ ಮೂಲಕ ಇತರ ಜೀವಿಗಳಿಗೆ ಹಿಂಸೆ ಕೊಡುವುದು ದ್ರವ್ಯ ಹಿಂಸೆಯಾಗಿದೆ. ಎರಡನೆಯದಾಗಿ ಯಾವ ಜೀವಿಗಾದರೂ ಪೀಡೆ ಕೊಡಬೇಕೆಂಬ ಭಾವನೆ ಮಾಡುವುದು ಭಾವ ಹಿಂಸೆಯಾಗಿದೆ. ಹಿಂಸೆಯಲ್ಲಿ ನಾಲ್ಕು ಪ್ರಕಾರವಿದೆ. ಅವುಗಳೆಂದರೆ ಸಂಕಲ್ಪ ಹಿಂಸೆ, ಆರಂಭ ಹಿಂಸೆ, ವಿರೋಧಿ ಹಿಂಸೆ ಮತ್ತು ಉದ್ಯೋಗ ಹಿಂಸೆ.

ಇನ್ನು ಎರಡನೇಯದ್ದಾಗಿ ಸುಳ್ಳು. ಸುಳ್ಳು ನೋಡಿರುವ ಅಥವಾ ಕಂಡಿರುವ ವಿಚಾರಗಳನ್ನು ನೈಜವಾಗಿ ಅಥವಾ ಇರುವಂತೆಯೇ ಹೇಳದೇ ಬೇರೆ ಪ್ರಕಾರದಿಂದ ಹೇಳುವುದು ಸುಳ್ಳಾಗಿದೆ. ಈ ಸುಳ್ಳು ಹಿಂಸೆಯಂತೆಯೇ ಪಾಪವಿದೆ. ಸುಳ್ಳು ಕಲಹವನ್ನು ಉಂಟು ಮಾಡುತ್ತದೆ, ದ್ವೇಷವನ್ನು ಹುಟ್ಟಿಸಬಹುದಾಗಿದೆ. ಕೆಲವೊಂದು ಸುಳ್ಳುಗಳು ಧರ್ಮಾತ್ಮರ ಚಾರಿತ್ರ ಹರಣ ಮಾಡುತ್ತದೆ. ಹಾಗೆಯೇ ಸಮಾಜದ ಬಾಂಧವ್ಯಗಳನ್ನು ಹಾಳು ಮಾಡುವ ಸುಳ್ಳುಗಳು, ಇತರರನ್ನು ಮೋಸ ವಂಚನೆ ಮಾಡುವ ಸುಳ್ಳುಗಳು, ಇನ್ನೊಬ್ಬರ ಪ್ರಾಣಕ್ಕೆ ಘಾತವಾಗುವಂತಹ ಸುಳ್ಳುಗಳು ಪಾಪವಿದೆ. ಯಾವ ಸುಳ್ಳಿನಿಂದ ಮತ್ತೊಂದು ಜೀವಿಯ ಮನ, ವಚನ, ಕಾಯಕ್ಕೆ ಹಾನಿ ಉಂಟು ಮಾಡುತ್ತದೆಯೋ ಆ ಸುಳ್ಳು ಪಾಪವಾಗಿರುತ್ತದೆ.

ಮನುಷ್ಯ ಜೀವಿಸಲು ಪರಿಗ್ರಹಗಳ ಅವಶ್ಯಕತೆ ಇರುತ್ತದೆ. ಪರಿಗ್ರಹಗಳಿಲ್ಲದೇ ಜೀವನ ಸುಲಲಿತವಾಗಿ ನಡೆಯಲು ಸಾಧ್ಯವಿಲ್ಲ. ಆದರೆ ಪರಿಗ್ರಹ ಮಿತಿಯಲ್ಲಿದ್ದರೆ ಬದುಕು ಸುಲಲಿತ, ಮಿತಿಮೀರಿದರೆ ಅಂದರೆ ಆಸೆಯು ದುಃಖಕ್ಕೆ ಕಾರಣವಾಗುತ್ತದೆ ಹಾಗೆಯೇ ಅದು ಪಾಪಕ್ಕೂ ಕಾರಣವಾಗುತ್ತದೆ. ಪರಿಗ್ರಹವು ಐದನೆಯ ಪಾಪವಾಗಿದೆ. ಪರಿಗ್ರಹದಲ್ಲಿ ಎರಡು ವಿಧ. ಅಂತರಂಗ ಪರಿಗ್ರಹ ಮತ್ತು ಬಹಿರಂಗ ಪರಿಗ್ರಹ ಎಂದು ಎರಡು ಪ್ರಕಾರವಿದೆ.

ಕ್ರೋಧ ಕಷಾಯವು ಅಂತರಂಗ ಪರಿಗ್ರಹವಾಗಿರುತ್ತದೆ. ಮೂಲತಃ ಆತ್ಮನ ಸ್ವಭಾವವು ಕ್ಷಮೆಯಾಗಿರುತ್ತದೆ. ಇದರ ವಿರುದ್ಧವೇ ಕ್ರೋಧವಾಗಿರುತ್ತದೆ. ಕ್ರೋಧವು ವಿವೇಕವನ್ನು ಘಾಸಿಗೊಳಿಸುತ್ತದೆ. ಕ್ರೂರತೆ, ಅಸಹನೆಯನ್ನು ಕ್ರೋಧವು ಉಂಟು ಮಾಡುತ್ತದೆ. ಕ್ರೋಧದಿಂದ ಬೇರೆಯವರಿಗೆ ಹಿಂಸೆ ಆಗುತ್ತದೆ ಹಾಗೂ ತನ್ನನ್ನು ತಾನು ಹಾಳು ಮಾಡುತ್ತದೆ. ಕ್ರೋಧದಿಂದ ಮನಶ್ಶಾಂತಿಯನ್ನು ಕಳೆದುಕೊಳ್ಳಬೇಕಾಗುತ್ತದೆ. ಮನಶ್ಶಾಂತಿ ಇಲ್ಲದ ಬದುಕು ನರಕಮಯವಾಗಿರುತ್ತದೆ. ಕ್ರೋಧವು ವೈರ, ಹಿಂಸೆಗೆ ಕಾರಣವಾಗುತ್ತದೆ. ಕ್ರೋಧದ ಬದಲಿಗೆ ಕ್ಷಮೆಯು ಮನುಷ್ಯನನ್ನು ಎತ್ತರದ ಸ್ಥಾನಕ್ಕೆ ಕೊಂಡೊಯ್ಯುತ್ತದೆ ಹಾಗೂ ಪ್ರಗತಿಯತ್ತ ಮತ್ತು ವಿಕಾಸಶೀಲನನ್ನಾಗಿಸುತ್ತದೆ.

ಮಾನ ಕಷಾಯವು ಕೂಡ ಅಂತರಂಗ ಪರಿಗ್ರಹವಾಗಿದೆ. ಬೇರೆಯವರ ಬಗ್ಗೆ ತಿರಸ್ಕಾರ, ಅಹಂಕಾರ, ನಯವಿನಯ ಇಲ್ಲದೇ ಇರುವುದು, ತಾನೊಬ್ಬನೇ ಶ್ರೇಷ್ಠ ಅನ್ನುವ ಭಾವನೆ ಇರುವುದೇ ಮಾನ ಕಷಾಯವಾಗಿದೆ. ತನಗಿಂತ ಉತ್ತಮರು ಈ ಜಗದಲ್ಲಿ ಯಾರೂ ಇಲ್ಲ, ತಾನು ಮಾಡಿದ್ದೆಲ್ಲವೂ ಸರಿ ಎನ್ನುವುದೇ ಮಾನಾಭಿಮಾನದ ಸಂಕೇತವಾಗಿದೆ. ಎಲ್ಲರೂ ಉತ್ತಮರೇ , ಕೆಲವೊಂದು ಕಾರಣಗಳಿಂದಾಗಿ ವ್ಯತ್ಯಾಸ ಇರಬಹುದು, ಎಲ್ಲರೂ ನನ್ನಂತೆಯೇ ಎಂದು ಭಾವಿಸಿ ವಾತ್ಸಲ್ಯ ಭಾವನೆಯನ್ನು ಇಡುವುದು ಉತ್ತಮರ ಲಕ್ಷಣವಾಗಿದೆ. ಬಹಿರಂಗ ಪರಿಗ್ರಹಗಳಾದ ಬಾಹ್ಯ ಭೋಗದ ವಸ್ತುಗಳು. ಭೂಮಿ, ಧನಕನಕಗಳು, ಮನೆ, ದಾಸದಾಸಿಯರು ಇನ್ನಿತರ ಭೋಗದ ವಸ್ತುಗಳು ಬಹಿರಂಗ ಪರಿಗ್ರಹಗಳಾಗಿವೆ. ಈ ಪರಿಗ್ರಹಗಳು ಮನುಷ್ಯನಿಗೆ ಮತ್ತಷ್ಟು ಬೇಕು ಬೇಕು ಅನ್ನುವಂತೆ ಮಾಡುವುದರಿಂದ ಅವುಗಳ ಪ್ರಾಪ್ತಿಗಾಗಿ ಪಾಪದ ಕೆಲಸ ಮಾಡಬೇಕಾಗುತ್ತದೆ.

ಹಿಂಸೆ, ಸುಳ್ಳು, ಕಳ್ಳತನ, ಕುಶೀಲ ಮತ್ತು ಪರಿಗ್ರಹಗಳು ಮಾನುಷ್ಯನ ವಿವೇಕವನ್ನು , ಸಾತ್ವಿಕತೆಯನ್ನು, ಮನುಷ್ಯನ ಸಹಜ ಗುಣವನ್ನು ಹಾಳು ಮಾಡುತ್ತದೆ. ಇವುಗಳಿಂದ ಪಾಪ ಸಂಭವಿಸುತ್ತದೆ. ಪಾಪವನ್ನು ದೂರ ಮಾಡಿದರೆ ಮುನುಷ್ಯತ್ವದ ಉದ್ದೀಪನವಾಗುತ್ತದೆ. ಭಗವಾನ್ ಮಹಾವೀರರು ಪಾಪವನ್ನು ಮಾಡುವ ಮನುಷ್ಯನು ಅಧೋಗತಿಗೆ ಇಳಿಯುತ್ತಾನೆ ಎಂದು ಜೀವಕೋಟಿಗೆ ಉಪದೇಶ ನೀಡಿದ್ದಾರೆ. ನೀನು ಬದುಕು, ನಿನಗೆ ಬದುಕುವ ಹಕ್ಕಿದೆ, ಅದಕ್ಕೆ ಸಂಚಕಾರ ತಂದುಕೊಳ್ಳಬೇಡ ಆದರೆ ನೀನು ಬದುಕುವ ಭರಾಟೆಯಲ್ಲಿ ಇತರರ ಬದುಕಿನ ಹಕ್ಕಿಗೆ ಮುಳುವಾಗಬೇಡ ಎಂದು ಮಹಾವೀರರು ಆದೇಶ ನೀಡಿದ್ದಾರೆ. ಇಂದಿನ ಪ್ರಸ್ತುತ ಸಂದರ್ಭದಲ್ಲಿ ನಮ್ಮ ಮಹಾವೀರರು ನಮ್ಮ ಬದುಕಿನ ಅವಿಭಾಜ್ಯ ಅಂಗವಾಗಿರಬೇಕು ಎಂಬುದು ನನ್ನ ಆಶಯವಾಗಿದೆ.

ಕಾರ್ಪೊರೇಟ್ ಆಸ್ಪತ್ರೆ ಅನುಭವ: ಚಿಕಿತ್ಸೆ, ಸಹನೆ, ಖರ್ಚಿನ ಪಾಠ

ವಿಚಾರ ಮಂಟಪ

ಕೆ.ವಿ.ಚಂದ್ರಮೌಳಿ

vveditoped@gmail.com

ನಲವತ್ತು ವರ್ಷಗಳ ಹಿಂದೆ, ಡಾಕ್ಟರ್‌ರನ್ನು ಭೇಟಿ ಮಾಡುವುದು ಎಂದರೆ ಟಾರ್ಚ್ ಹಿಡಿದ ಒಬ್ಬ ಮಮತೆಯ ಮಾವನನ್ನು ಭೇಟಿ ಮಾಡಿದಂತೆಯೇ ಇತ್ತು- ಅದರಲ್ಲೊಂದು ಮನೆಯ ಸೌಕರ್ಯ, ಆತ್ಮೀಯತೆ ಮತ್ತು ಭರವಸೆ ಅಡಗಿಕೊಂಡಿರುತ್ತಿತ್ತು. ಕ್ಲಿನಿಕ್‌ಗೆ ಕಾಲಿಟ್ಟ ಕ್ಷಣದಲ್ಲೇ, ಅಲ್ಲಿ ಇರುವ ಸರಳ ವಾತಾವರಣವೇ ಮನಸ್ಸಿಗೆ ನೆಮ್ಮದಿ ನೀಡುತ್ತಿತ್ತು. ಬಿದಿರಿನ ಕುರ್ಚಿಗಳು ನಿಮ್ಮ ಕೆಮ್ಮಿನ ತಾಳಕ್ಕೆ ಕಿರುಕಿರುಗುಟ್ಟುತ್ತಾ, ನಿಮ್ಮ ಅಸ್ವಸ್ಥತೆಗೆ ಸಹಾನುಭೂತಿ ತೋರಿಸುವಂತಿದ್ದವು. ಡಾಕ್ಟರ್ ನಿಮ್ಮನ್ನು ನೋಡಿ 'ಬಾಯಿ ತೆರೆ' ಎಂದಾಗ, ಅದು ಕೇವಲ ಒಂದು ಕ್ರಮವಲ್ಲ- ನಿಜವಾದ ಪರಿಶೀಲನೆಯ ಆರಂಭವಾಗುತ್ತಿತ್ತು. ಅವರು ನೀವು ಬಾಯಿ ಚೆನ್ನಾಗಿ ತೆರೆಯುವಂತೆ ಮಾಡಿ, ಟಾನ್ಸಿಲ್‌ಗಳೊಳಗಿನ ಗುಪ್ತ ಇತಿಹಾಸವನ್ನೇ ಓದುತ್ತಿದ್ದರು. ನಂತರ ಎದೆಗೆ ಸೌಮ್ಯವಾಗಿ ತಟ್ಟಿ, ಬೆನ್ನಿಗೆ ಬಡಿದು, ಶ್ವಾಸದ ಚಲನವಲನವನ್ನು ಕೇಳುತ್ತಿದ್ದರು. ಕಣ್ಣಿನ ರೆಪ್ಪೆಗಳನ್ನು ಎತ್ತಿ, ನಾಡಿ ಸ್ಪಂದನವನ್ನು ಹಿಡಿದು, ಡಿಕೋಡ್ ಮಾಡುವಂತೆ ಅರ್ಥಮಾಡಿಕೊಳ್ಳುತ್ತಿದ್ದರು. ಪ್ರತಿಯೊಂದು ಚಲನವಲನವೂ ಅನುಭವದ, ಸಹನೆಯ ಮತ್ತು ಕಾಳಜಿಯ ಪ್ರತಿಫಲವಾಗಿತ್ತು.

ಈ ಪರಿಶೀಲನೆಗೆ ಸಮಯ ತೆಗೆದುಕೊಳ್ಳುತ್ತಿದ್ದುದು- ಅಂದಾಜು 15 ನಿಮಿಷಗಳು; ಆದರೆ ಆ ಸಮಯದಲ್ಲಿ ನೀವು ರೋಗಿಯಾಗಿಯೇ ಅಲ್ಲ, ಒಬ್ಬ ವ್ಯಕ್ತಿಯಾಗಿ ಕಾಣಿಸಿಕೊಂಡಿದ್ದಿರಿ. ಕೊನೆಗೆ, ನಗುವಿನೊಂದಿಗೆ ಅವರು ಹಿತವಾಗಿ ಹೇಳುತ್ತಿದ್ದರು: ''ಎರಡು ಮಾತ್ರೆಗಳು, ಬಿಸಿನೀರು- ಆಯ್ತು!''. ಆ ಮಾತುಗಳಲ್ಲಿ ಚಿಕಿತ್ಸೆ ಮಾತ್ರವಲ್ಲ, ಭರವಸೆಯೂ ಇರುತ್ತಿತ್ತು. ಹತ್ತು ರುಪಾಯಿ ಫೀ- ಆದರೆ ಜತೆಗೆ ಸಿಗುತ್ತಿದ್ದುದೇ ಅಮೂಲ್ಯವಾದದ್ದು. ಸರಿಯಾದ ಸಮಯಕ್ಕೆ ಊಟ ಮಾಡುವುದು, ಒಳ್ಳೆಯ ನಿದ್ರೆ ಮಾಡುವುದು, ಅತಿಯಾಗಿ ತಿನ್ನಬಾರದು ಎಂಬ ಸರಳ ಆದರೆ ಜೀವನ ಪರ್ಯಂತ ಉಪಯೋಗವಾಗುವ ಉಪದೇಶ. ನೀವು ಹೊರ ಬಂದಾಗ, ದೇಹವಷ್ಟೇ ಅಲ್ಲದೆ ಮನಸ್ಸೂ ಹಗುರವಾಗಿರುತ್ತಿತ್ತು. ಸ್ವಲ್ಪ ಜಾಣ್ಮೆ ಹೆಚ್ಚಿದಂತೆ, ನಿಮ್ಮ ಜೀವನಶೈಲಿಯ ಬಗ್ಗೆ ಹೊಸ ಅರಿವು ಮೂಡಿದಂತೆ ಮತ್ತು ಕಳೆದ ವಾರ ತಿಂದ ಆ ಹೆಚ್ಚುವರಿ ಲಡ್ಡು ಬಗ್ಗೆ ತುಸು ಪಶ್ಚಾತ್ತಾಪವೂ ಹೃದಯದಲ್ಲಿ ಮೃದುವಾಗಿ ಮೂಡುತ್ತಿತ್ತು. ಅವು ಕೇವಲ ಚಿಕಿತ್ಸೆಯ ದಿನಗಳಲ್ಲ, ಜತೆಗೆ ಮಾನವೀಯ ಸ್ಪರ್ಶದ, ಮಮತೆಯ ಮತ್ತು ಸಹನೆಯ ದಿನಗಳು. ಡಾಕ್ಟರ್-ರೋಗಿಯ ಸಂಬಂಧ ಕೇವಲ ವ್ಯವಹಾರವಾಗಿರಲಿಲ್ಲ; ಅದು ನಂಬಿಕೆ, ಕಾಳಜಿ, ಆತ್ಮೀಯತೆಯ ಬಂಧವಾಗಿತ್ತು. ಇಂದಿಗೂ ಆ ನೆನಪುಗಳು ಮೃದುವಾಗಿ ಪ್ರತಿಧ್ವನಿಸುತ್ತವೆ.

1970ರ ದಶಕದಲ್ಲಿ ನಾವು ಬೆಂಗಳೂರಿನಲ್ಲಿದ್ದಾಗ, ನರ್ಸಿಂಗ್ ಹೋಮ್ ಎಂಬ ಕಲ್ಪನೆಯೇ ಇರಲಿಲ್ಲ. ಯಾವುದೇ ಅನಾರೋಗ್ಯ ಒದಗಿದರೂ, ನಾವು ಧಾವಿಸುತ್ತಿದ್ದುದ್ದು ವಿಕ್ಟೋರಿಯಾ, ಕೆ.ಸಿ. ಜನರಲ್, ಬೌರಿಂಗ್, ಮಿಂಟೋ ಮತ್ತು ಬೆಂಗಳೂರು ಸರಕಾರಿ ದಂತ ಆಸ್ಪತ್ರೆಗಳಿಗೆ. ಆ ಕಾಲದಲ್ಲಿ ವೈದ್ಯರನ್ನು ದೇವರ ರೂಪದಲ್ಲೇ ಕಾಣುತ್ತಿದ್ದೆವು. ಅವರ ಮಾತು ನಮಗೆ ಆಶ್ವಾಸನೆ, ಅವರ ಚಿಕಿತ್ಸೆ-ಕಾಳಜಿ ನಮ್ಮ ಬದುಕಿನ ಆಧಾರವಾಗಿತ್ತು. ಅಲ್ಲಿ ಹಣಕ್ಕಿಂತ ಮಾನವೀಯತೆ ಮೇಲುಗೈ ಸಾಧಿಸುತ್ತಿತ್ತು; ಸರಳತೆಯೊಳಗೆ ಸತ್ಯವಾದ ಸೇವೆ ಮತ್ತು ಹೃದಯಸ್ಪರ್ಶಿ ಆರೈಕೆ ನೆಲೆಸಿತ್ತು.

ಆದರೆ ಇಂದು, ಕಾರ್ಪೊರೇಟ್ ಆಸ್ಪತ್ರೆಗೆ ಕಾಲಿಟ್ಟ ಕ್ಷಣದಲ್ಲೇ, ನೀವು five-star airport ಗೆ ಬಂದಿರುವಂತೆ ಭಾಸವಾಗುತ್ತದೆ- ಶಾಪಿಂಗ್ ಮಾಲ್‌ನ ಮೆರುಗು, ಸರಕಾರಿ ಕಚೇರಿಯ ಕ್ರಮ, ಇವೆಲ್ಲವೂ ಒಂದೇ ಜಾಗದಲ್ಲಿ ಬೆರೆತ ವಿಚಿತ್ರ ಅನುಭವ. ಇದನ್ನೆಲ್ಲಾ, ಅತಿಯಾಗಿ ಚುರುಕಾದ 'ಐಟಿ' ತಂಡ ಅಚ್ಚುಕಟ್ಟಾಗಿ ರೂಪಿಸಿ ನಿರ್ವಹಿಸುತ್ತಿರುವಂತೆ ಕಾಣುತ್ತದೆ. ರಿಸೆಪ್ಷನಿಸ್ಟ್ ನಿಮ್ಮನ್ನು ನಗುತ್ತಾ ಸ್ವಾಗತಿಸುತ್ತಾಳೆ; ಆದರೆ ಆ ನಗುವಿನ ಒಳಾರ್ಥ ಸ್ಪಷ್ಟ- 'ನಮ್ಮ ಬಿಲ್ಲಿಂಗ್ ವ್ಯವಸ್ಥೆಗೆ ಸ್ವಾಗತ!' ಅಂತ. ಹಿಂದೆ ಡಾಕ್ಟರ್ ರೋಗವನ್ನು ಪತ್ತೆಹಚ್ಚುತ್ತಿದ್ದರು; ಇಂದು ರಿಸೆಪ್ಷನಿಸ್ಟ್ ನಿಮ್ಮ ಪರ್ಸಿನ ಸ್ಥಿತಿಯನ್ನೇ ಮೊದಲು ಅಳೆಯುವಂತೆ ಭಾಸವಾಗುತ್ತದೆ.

ನಂತರ ಡಾಕ್ಟರ್‌ರ ದರ್ಶನ. ಅವರು ತಮ್ಮ ಅಮೂಲ್ಯ ಸಮಯದಿಂದ ನಿಮಗೆ 180 ಸೆಕೆಂಡುಗಳನ್ನು ಮಾತ್ರ ನೀಡುತ್ತಾರೆ. 'ಬಾಯಿ ತೆರೆ' ಇಲ್ಲ, 'ಆಳವಾದ ಉಸಿರು ತೆಗೆದುಕೊಳ್ಳಿ' ಇಲ್ಲ- ನಿಮ್ಮನ್ನು ಮುಟ್ಟುವುದೇ ಇಲ್ಲ. ಬದಲಾಗಿ, ನಿಮ್ಮ ಫೈಲನ್ನು ಒಂದು ಥ್ರಿಲ್ಲರ್ ಕಾದಂಬರಿಯಂತೆ ನೋಡುತ್ತಾ, ಕೆಲವು ಮಾತುಗಳನ್ನು ಗುನುಗುತ್ತಾರೆ. ತಕ್ಷಣವೇ, ಪರೀಕ್ಷೆಗಳ ಪಟ್ಟಿಯನ್ನು ಮುದ್ರಿಸುತ್ತಾರೆ. ರಕ್ತ ಪರೀಕ್ಷೆ, ಮೂತ್ರ ಪರೀಕ್ಷೆ, ಇಸಿಜಿ, ಎಂಆರ್‌ಐ, ಸಿ.ಟಿ. ಸ್ಕ್ಯಾನ್, ಅಲ್ಟ್ರಾಸೌಂಡ್, ಲಿವರ್ ಪ್ರೊಫೈಲ್, ಕಿಡ್ನಿ ಪ್ರೊಫೈಲ್, ವಿಟಮಿನ್ ಬಿ-12, ವಿಟಮಿನ್ ಡಿ- ಪ್ರತಿ ಅಂಗವೂ, ಪ್ರತಿಯೊಂದು ಪೋಷಕಾಂಶವೂ 'ನನ್ನನ್ನೂ ಸೇರಿಸಿ' ಎಂದು ಕೇಳುತ್ತಿರುವಂತೆ! ನೀವು ಧೈರ್ಯ ಮಾಡಿ, ''ಸರ್ ಇವೆಲ್ಲಾ ಪರೀಕ್ಷೆಗಳು ಅಗತ್ಯವೇ?'' ಎಂದು ಕೇಳಿದರೆ, ಡಾಕ್ಟರ್ ಶಾಂತವಾಗಿ ಹೇಳುತ್ತಾರೆ: ''ಸರ್ ಪ್ರೋಟೋಕಾಲ್''. ನೀವು ಇನ್ನೂ ಆಶ್ಚರ್ಯದಿಂದ ಉಸಿರೆಳೆಯುವಷ್ಟರಲ್ಲಿ, ನರ್ಸ್ ಒಳಗೆ ಬಂದು ನಿಮ್ಮ ಕೈಗೆ IV cannula ಸೂಜಿಯನ್ನು ಇಡುತ್ತಾಳೆ. ನೀವು ಗೊಂದಲದಿಂದ, ''ನನಗೆ ಕೇವಲ ಜ್ವರ, ಇದೇಕೆ?'' ಎಂದು ಕೇಳಿದರೆ, ಅವಳು ವೃತ್ತಿಪರ ನಗೆಯೊಂದಿಗೆ ಉತ್ತರಿಸುತ್ತಾಳೆ: ''ಸರ್, ಪ್ರೋಟೋಕಾಲ್''. ಆ ಸೂಜಿ ನಂತರ ನಿಮ್ಮ ನಿಷ್ಠಾವಂತ ಸಂಗಾತಿಯೇ ಆಗಿಬಿಡುತ್ತದೆ- ನೀವು ನಡೆಯುವಾಗ ಡೋಲಾಯಮಾನವಾಗಿ ಓಲಾಡುತ್ತಾ, ಅತಿಯಾದ ಪ್ರೇರಣಾದಾಯಕ ತರಬೇತುದಾರನಂತೆ ನಿಮಗೆ ಮರುಮರು ಚುಚ್ಚಿ, ನೀವು ಈಗ ಹಣಕಾಸಿನ ಬಂಧನದಲ್ಲಿದ್ದೀರಿ ಎಂದು ನೆನಪಿಸುವಂತೆ. ನಿಧಾನವಾಗಿ ನಿಮಗೆ ಅನಿಸುತ್ತದೆ- ಆ ಸೂಜಿಗೆ ರಕ್ತನಾಳಗಳಿಗಿಂತ ನಿಮ್ಮ ಬ್ಯಾಂಕ್ ಖಾತೆಯೊಂದಿಗೇ ಹೆಚ್ಚು ಸಂಬಂಧವಿದೆಯೇನೋ ಅಂತ! ಅದರೊಂದಿಗೆ, ಸೇವೆಗಳ ಪರೇಡ್ ಆರಂಭವಾಗುತ್ತದೆ.

ಮೊದಲು ಡಯಟಿಷಿಯನ್ ಬರುತ್ತಾರೆ- ಅವರು ನಿಮಗೆ ಸಕ್ಕರೆ, ಎಣ್ಣೆ, ಉಪ್ಪು, ಫ್ರೈಡ್ ಫುಡ್, ಬೇಯಿಸಿದ ಆಹಾರ- ಬಹುಶಃ ಸಂತೋಷವನ್ನೇ- ತಪ್ಪಿಸಿಕೊಳ್ಳಲು ಉಪದೇಶ ಕೊಡುತ್ತಾರೆ. ನೀವು ಶಿಸ್ತಿನಿಂದ ತಲೆಯಾಡಿಸುತ್ತೀರ; ನಿಮ್ಮ ಜ್ವರವೇ ಸ್ವಲ್ಪ ಸಂಕೋಚಪಡುತ್ತಿರುವಂತೆ ಕಾಣುತ್ತದೆ. ಅವರ ಸಲಹೆ ನಿಜವಾಗಿಯೂ ಕೆಲಸ ಮಾಡುತ್ತದೆಯೇ ಅಥವಾ ಇದು ನಿಮ್ಮ ಸಹನಶೀಲತೆ ಪರೀಕ್ಷಿಸಲು ನಡೆಸುತ್ತಿರುವ ಕ್ಲಿನಿಕಲ್ ಪ್ರಯೋಗವೋ ಎಂದು ನೀವು ಯೋಚಿಸುತ್ತೀರಿ. ಅದರ ಜತೆಗೆ, ಆ ಸಲಹೆಯನ್ನು ಅವರು ತಮ್ಮ ಮೇಲೂ ಎಂದಾದರೂ ಅನುಸರಿಸಿದ್ದಾರೆಯೇ? ಎಂದು ಕುತೂಹಲವೂ ಮೂಡುತ್ತದೆ.

ಮುಂದೆ ಸೈಕಾಲಜಿಸ್ಟ್ ಒಳಗೆ ಬರುತ್ತಾರೆ. ಅವರ ನೋಟ್‌ಬುಕ್ ಆಸ್ಪತ್ರೆಯ ನಿಯಮ ಪುಸ್ತಕಕ್ಕಿಂತಲೂ ದಪ್ಪವಾಗಿರುತ್ತದೆ. ''ಈಗ ನೀವು ಎಲ್ಲಿದ್ದೀರಿ ಗೊತ್ತಾ?'', ''ಇವತ್ತು ಯಾವ ದಿನ, ಸಮಯ ಏನು ಗೊತ್ತಾ?'', ''ನಾನು ಹೇಳುವುದನ್ನು ಗಮನದಿಂದ ಕೇಳಲು ತೊಂದರೆ ಆಗ್ತಿದೆಯಾ?'', ''ಮೊದಲು ನಿಮಗೆ ಡಿಪ್ರೆಶನ್ ಅಥವಾ ಆತಂಕದಂಥ ಸಮಸ್ಯೆಗಳು ಇದ್ದವಾ?'', ''ಮಾನಸಿಕವಾಗಿ ನೀವು ಹೇಗಿದ್ದೀರಿ?'' ಎಂದು ಪ್ರಶ್ನೆಗಳ ಮಳೆ ಸುರಿಸುತ್ತಾರೆ. ನಿಜವಾಗಿ ನೋಡಿದರೆ, ನೀವು ಬಿಸಿ ಚಹಾದಲ್ಲಿ ಹೆಚ್ಚು ಹೊತ್ತು ನೆನೆಸಿದ ಬಿಸ್ಕಿಟ್‌ನಂತೆ ಒಳಗೊಳಗೇ ಕುಸಿದು ಹೋಗುತ್ತಿದ್ದೀರಿ. ಆದರೂ ಮುಖದಲ್ಲಿ ನಗು ಇಟ್ಟುಕೊಂಡು, ''ನಾನು ಓಕೆ'' ಎಂದು ಹೇಳುತ್ತೀರಿ. ಅವರು ಗಂಭೀರವಾಗಿ ತಲೆಯಾಡಿಸಿ, ಏನೋ ಗೀಚಿ ''ರೋಗಿ ತನಗೆ ಏನೂ ಆಗಿಲ್ಲ ಅನ್ನೋ ಭ್ರಮೆಯಲ್ಲಿದ್ದಾನೆ'' ಎಂದು ದಾಖಲಿಸುತ್ತಾರೆ. ಮತ್ತೆ ಬಿಲ್ಲಿಗೆ 700 ರು. ಸೇರಿಸಲಾಗುತ್ತದೆ.

ಮುಂದೆ ಫಿಸಿಯೋಥೆರಪಿಸ್ಟ್ ಬರುತ್ತಾರೆ. ನಿಮಗೆ ಜ್ವರ ಇದೆ ಅನ್ನೋದನ್ನ ನೆನಪಿಟ್ಟುಕೊಳ್ಳಿ- ಆದರೆ ಅವರಿಗೆ ಅದರಿಂದ ವಿಶೇಷ ವ್ಯತ್ಯಾಸವೇ ಇಲ್ಲ ಅನ್ನಿಸುತ್ತದೆ. 'ಕೈ ಎತ್ತಿ', 'ಭುಜ ತಿರುಗಿಸಿ', 'ಮೊಣಕಾಲು ಮಡಿಸಿ', 'ಇನ್ನೂ ಸ್ವಲ್ಪ ಬಾಗಿರಿ' ಎಂದು ಆದೇಶಗಳ ಸರಮಾಲೆ ಆರಂಭವಾಗುತ್ತದೆ. ನೀವು ಒಳಗೊಳಗೆ 'ನನಗೆ ಜ್ವರ ಇದೆ ಅಲ್ವಾ?' ಎಂದು ಯೋಚಿಸುತ್ತಾ ಇದ್ದರೂ, ಹೊರಗೆ ಮಾತ್ರ ವಿಧೇಯ ವಿದ್ಯಾರ್ಥಿಯಂತೆ ಎಲ್ಲವನ್ನೂ ಮಾಡುತ್ತೀರಿ. ಏಕೆಂದರೆ ಇಲ್ಲಿ 'ಮಾಡಲ್ಲ' ಅಂತ ಹೇಳೋದು ಕೂಡ ಒಂದು ರಿಸ್ಕ್. ಎಲ್ಲಿ ನಂತರ ಬಿಲ್ಲಿನಲ್ಲಿ 'ಸಹಕರಿಸಿಲ್ಲ ಶುಲ್ಕ- 650 ರು.' ಎಂದು ಹೊಸ ಸಾಲು ಸೇರಿಸಿಬಿಟ್ಟರೆ? ಅಂತ. ಆದ್ದರಿಂದ, ಜ್ವರದ ಜತೆಗೂಡಿ, ನೀವು ಸಣ್ಣ ಮಟ್ಟಿಗೆ ಜಿಮ್ ವರ್ಕೌಟ್ ಅನ್ನೂ ಮುಗಿಸುತ್ತೀರಿ!

ಹೌಸ್‌ಕೀಪಿಂಗ್ ಸಿಬ್ಬಂದಿ ಒಳಗೆ ಬಂದು, ನಿಮ್ಮ ತಲೆಯ ದಿಂಬನ್ನು ಸ್ವಲ್ಪ ಸರಿಪಡಿಸಿ, ಶಾಂತವಾಗಿ ಹೊರಗೆ ಹೋಗುತ್ತಾರೆ. ನಂತರ ಬಿಲ್ಲಿನಲ್ಲಿ ನೋಡಿದಾಗ: 'ದಿಂಬು ಸರಿಪಡಿಸಿದ ಶುಲ್ಕ – 180 ರು.'. ಅದಾದ ಮೇಲೆ ನರ್ಸ್ ಬಂದು ಕಂಬಳಿಯನ್ನು ಸ್ವಲ್ಪ ಹೆಚ್ಚು ಬಿಗಿಯಾಗಿ ಹೊದಿಸುತ್ತಾರೆ- ಸ್ವಲ್ಪ ಕಾಳಜಿಯ ಸ್ಪರ್ಶದೊಂದಿಗೆ. ದೊಡ್ಡದೇನೂ ಅಲ್ಲ, ಆದರೆ ನಿಮಗೆ ಆರೈಕೆ ಆಗುತ್ತಿದೆ ಅನ್ನಿಸುವಷ್ಟು ಮಾತ್ರ. ಆದರೆ ಅದಕ್ಕೂ ಬಿಲ್ ಇದೆ: 'ಕಂಬಳಿ ಸರಿಪಡಿಸಿದ ಶುಲ್ಕ – 220 ರು.'. ಆಮೇಲೆ ಟೆಕ್ನಿಷಿಯನ್ ಬರುತ್ತಾರೆ: ಒಬ್ಬ ಬಿಪಿ ಯಂತ್ರವನ್ನು ಚೆಕ್ ಮಾಡುತ್ತಾನೆ, ಮತ್ತೊಬ್ಬ ನಿಮ್ಮ ಬಿಪಿಯನ್ನು ಪರೀಕ್ಷಿಸುತ್ತಾನೆ, ಮೂರನೆಯವ ಮೊದಲಿಬ್ಬರು ಸರಿಯಾಗಿ ಕೆಲಸ ಮಾಡಿದ್ದಾರೆಯೇ ಎಂದು ನೋಡುತ್ತಾನೆ. ಪ್ರತಿ ಕೆಲಸವೂ ಅಚ್ಚುಕಟ್ಟಾಗಿ ದಾಖಲಾಗಿ, ಸಹಜವಾಗಿಯೇ ಬಿಲ್ಲಿನಲ್ಲಿ ಸೇರಿಸಲಾಗುತ್ತದೆ!

ಈ ಮಧ್ಯೆ, ಆಸ್ಪತ್ರೆಯ 'ಆ್ಯಪ್' ಪ್ರತಿ ಗಂಟೆಗೆ ನಿಮಗೆ ನೆನಪಿಸುತ್ತದೆ: 'ನಿಮ್ಮ ಅನುಭವವನ್ನು ಮೌಲ್ಯಮಾಪನ ಮಾಡಿ'. ನೀವು ಆತುರದಿಂದ 'ಇನ್ನೂ ಕಷ್ಟದಲ್ಲಿದ್ದೇನೆ', 'ಸಹಾಯ ಕಳುಹಿಸಿ' ಅಥವಾ 'ನನ್ನ ವಕೀಲರನ್ನು ಕರೆಸಿ' ಎಂಬ ಆಯ್ಕೆಗಳನ್ನು ಹುಡುಕುತ್ತೀರಿ. ಆದರೆ ಅಲ್ಲಿ ದೊರೆಯುವುದು ಮಾತ್ರ- 'ಗುಡ್', 'ವೆರಿ ಗುಡ್', ಮತ್ತು 'ಔಟ್‌ಸ್ಟಾಂಡಿಂಗ್!'. ಕೊನೆಯಲ್ಲಿ, ನೀವು ನಿಟ್ಟುಸಿರು ಬಿಡುತ್ತಾ, ಬಲವಂತದ ನಗು ಮೂಡಿಸಿದ ಎಮೋಜಿಯನ್ನು ಆಯ್ಕೆ ಮಾಡುತ್ತೀರಿ.

ಇನ್ನೂ ಇದೆ- ಕ್ಯಾಂಟೀನ್ ಕಥೆ! ಒಂದು ಇಡ್ಲಿಯ ಬೆಲೆ ನಿಮ್ಮ ಬಾಲ್ಯದ ಹುಟ್ಟುಹಬ್ಬದ ಪಾರ್ಟಿಗಿಂತಲೂ ಹೆಚ್ಚು ಅನ್ನಿಸುತ್ತದೆ. ತಟ್ಟೆಗೆ ಬರುವಷ್ಟರಲ್ಲಿ ಸಾಂಬಾರ್ ಯಾವುದೋ ಭಾವನಾತ್ಮಕ ಸಂಕಷ್ಟವನ್ನು ಎದುರಿಸಿದಂತೆ ಕಾಣುತ್ತದೆ! ಬಿಲ್ಲಿನಲ್ಲಿ Hygiene Charge ಎಂಬ ಒಂದು ವಿಶೇಷ ಸೇರ್ಪಡೆ- ಬಹುಶಃ ನಿಮ್ಮ ಚಮಚದ ಜತೆಗೆ ನಿಮ್ಮ ಕರ್ಮವನ್ನೂ ಶುದ್ಧಗೊಳಿಸಲು ಇರಬಹುದು! ಈ ಎಲ್ಲದಕ್ಕೂ ತಕ್ಕಂತೆ, ನೀವು ನಿಧಾನವಾಗಿ ತಿನ್ನುತ್ತಾ, ಪ್ರತಿಯೊಂದು ತುಂಡನ್ನೂ ಚೆನ್ನಾಗಿ ಜಗಿಯುತ್ತೀರಿ- ನಿಮ್ಮ ರುಚಿಕೋಶಗಳ 'ಹೂಡಿಕೆಯ ಮೇಲಿನ ಲಾಭ' ಏನಾದರೂ ಹೆಚ್ಚುತ್ತದೆಯೇ? ಎಂದು ಯೋಚಿಸುತ್ತಾ!

ಪ್ರತಿ ಗಂಟೆಗೂ ನರ್ಸ್‌ಗಳು ನಿಮ್ಮ ಬಳಿಗೆ ಬರುತ್ತಾರೆ- ನಿಮ್ಮ ಜ್ವರ ಎಷ್ಟು ಇದೆ, ಒತ್ತಡ ಎಷ್ಟು ಇದೆ ಎಂದು ನೋಡಲು ಅಲ್ಲ; ನಿಮ್ಮ ಡೆಪಾಸಿಟ್‌ನಲ್ಲಿ ಇನ್ನೂ ಎಷ್ಟು ಹಣ ಉಳಿದಿದೆ ಎಂದು ಪರಿಶೀಲಿಸಲು ಬಂದಂತಿರುತ್ತಾರೆ! ನಿಮ್ಮ ಜ್ವರ ತೀರಾ ಸಣ್ಣದಷ್ಟೇ ಇದೆ, ಆದರೆ ನಿಮ್ಮ ಪರ್ಸ್ ಮಾತ್ರ ತುಂಬಾ ಗಂಭೀರ ಸ್ಥಿತಿಯಲ್ಲಿ ಇದೆ ಅನ್ನಿಸುವಂತೆ ಆಗುತ್ತದೆ- ಅದು ಐಸಿಯುನಲ್ಲೇ ಇದ್ದಂತೆ! ಹೀಗೆ ನೋಡುತ್ತಾ ಹೋದಂತೆ, ನಿಮಗೆ ಒಂದು ಅನುಮಾನ ಬರುತ್ತದೆ- ಈ ಥರ್ಮಾಮೀಟರ್ ಅನ್ನು ನಿಜವಾಗಿಯೂ ಜ್ವರವನ್ನು ಅಳೆಯಲು ಬಳಸುತ್ತಾರಾ ಅಥವಾ ನಿಮ್ಮ ಗಮನವನ್ನು ಬೇರೆಡೆ ತಿರುಗಿಸಲು ಮಾತ್ರವೇ? ಏಕೆಂದರೆ, ನೀವು ಅದನ್ನು ನೋಡುತ್ತಿರುವಷ್ಟರಲ್ಲಿ, ಆಸ್ಪತ್ರೆಯ ಅಕೌಂಟೆಂಟ್ ಶಾಂತವಾಗಿ ಕುಳಿತು ನಿಮ್ಮ ಬಿಲ್ಲಿಗೆ ಚಕ್ರಬಡ್ಡಿಯನ್ನು ಹಾಕುತ್ತಾ ಇದ್ದಾನೋ ಅನ್ನಿಸುತ್ತದೆ!

ಕೊನೆಗೆ- ಮಹಾ ಅಂತಿಮ ಕ್ಷಣ: ಬಿಲ್!

ಮ್ಯಾರಥಾನ್ ಓಟಗಾರನಂತೆ ಪ್ರಿಂಟರ್ ಗುನುಗುಟ್ಟುತ್ತಾ, ಪುಟದ ಮೇಲೆ ಪುಟವನ್ನು ಹೊರಹಾಕುತ್ತಲೇ ಇರುತ್ತದೆ. ಅದರೊಳಗೆ ಕಾಣುವ ಕೆಲವು 'ಮಣಿಗಳು' ಹೀಗಿವೆ: ಆಕ್ಸಿಜನ್ ಲಭ್ಯತೆ: 500 ರು. (ನೀವು ಬಳಸಿಲ್ಲ; ಕೇವಲ ಉಸಿರಾಡಿದ್ದೀರಿ- ಅದೇ ತಪ್ಪು!); ಬೆಡ್‌ಶೀಟ್ ಸರಿಪಡಿಸುವಿಕೆ: 250 ರು. (ಯಾರೋ ಅದನ್ನು ಮುಟ್ಟಿದ್ದಾರೆ- ಭಾವನಾತ್ಮಕ ಸ್ಪರ್ಶ!); ನರ್ಸಿಂಗ್ ವಿಸಿಟ್: 400 ರು. ('ಹೇಗಿದ್ದೀರಿ?' ಎಂದು ಕೇಳಿದ್ದಷ್ಟೇ!); ಡಾಕ್ಟರ್ ಕಾರಿಡಾರ್ ನಡೆ: 300 ರು. (ಅವರು ನಿಮ್ಮ ಕೊಠಡಿಯನ್ನು ಹಾದುಹೋಗಿದ್ದಾರೆ- ಅದಕ್ಕೂ ಬೆಲೆ ಇದೆ!); ಕುರ್ಚಿ ಬಳಕೆ: 150 ರು. (ನೀವು ಕುಳಿತಿರಿ- ಅದು ಸಹ ಖರ್ಚೇ!); ಮಿಸೆಲೇನಿಯಸ್: 3750 ರು. (ಆಸ್ಪತ್ರೆಯ ಹಣಕಾಸಿನ ಬರ್ಮುಡಾ ಟ್ರಯಾಂಗಲ್!).

ಕೊನೆಗೆ, ನೀವು ಧೈರ್ಯವನ್ನು ಒಗ್ಗೂಡಿಸಿ ನರ್ಸ್‌ಗೆ IV cannula ಸೂಜಿಯನ್ನು ತೆಗೆದುಹಾಕಲು ಕೇಳುತ್ತೀರಿ. ಅವಳು ಅನುಭವಸಂಪನ್ನ ಮಾತುಗಾರ್ತಿಯಂತೆ ಮೃದುವಾಗಿ ನಗುತ್ತಾ ''ಸರ್ ಮೊದಲು ಪಾವತಿ ಮಾಡಿ'' ಎನ್ನುತ್ತಾಳೆ: ಆಗ ನಿಮಗೆ ಅರ್ಥವಾಗುತ್ತದೆ -ಅದು ಒಂದು ಭದ್ರತೆ, ಹಣ ಪಾವತಿಸುವವರೆಗೆ ಇಟ್ಟಿರುವ ಭಾವನಾತ್ಮಕ ಮತ್ತು ಆರ್ಥಿಕ ಭದ್ರತೆ. ಒಂದು ಚಿಕ್ಕ ಮದುವೆಯನ್ನು ಪ್ರಾಯೋಜಿಸುವಷ್ಟು ಹಣ ಪಾವತಿಸಿದ ನಂತರ, ಆ ಸೂಜಿಯನ್ನು ವಿಧಿವತ್ತಾಗಿ ತೆಗೆಯುತ್ತಾರೆ. ನೀವು ಹೊರಬರುವಾಗ, ದೀರ್ಘ ಮತ್ತು ದುಬಾರಿ ಯುದ್ಧದಿಂದ ಹಿಂದಿರುಗುವ ಸೈನಿಕನಂತೆ ಭಾಸವಾಗುತ್ತದೆ. ಗೇಟ್ ಬಳಿ ನಿಂತಿರುವ ಭದ್ರತಾ ಸಿಬ್ಬಂದಿಯು ಸಂತೋಷದಿಂದ ಹೇಳುತ್ತಾನೆ: ''ಬೇಗ ಗುಣವಾಗಲಿ ಸರ್!''. ನೀವು ನಿಧಾನವಾಗಿ ನಿಮ್ಮೊಳಗೆ ಗುನುಗುತ್ತೀರಿ: 'ಮೊದಲು ನನ್ನ ಬ್ಯಾಂಕ್ ಖಾತೆ ಗುಣವಾಗಲಿ'.

ಒಂದು ಕಾಲದಲ್ಲಿ ಆಸ್ಪತ್ರೆಗಳು ರೋಗಗಳಿಗೆ ಚಿಕಿತ್ಸೆ ನೀಡುತ್ತಿದ್ದವು. ಇಂದು ಅವು ಅನುಭವ, ಸಹನೆ, ತಾಳ್ಮೆ ಮತ್ತು ಹಣಕಾಸಿನ ನಿಯಂತ್ರಣವನ್ನು ಪರೀಕ್ಷಿಸುವ ಸ್ಥಳಗಳಾಗಿ ಬದಲಾಗಿವೆ. ನಿಜವಾದ ಗುಣಮುಖತೆಯು ಅಂತಿಮ ಬಿಲ್ ನೋಡಿದ ನಂತರವೇ ಆರಂಭವಾಗುತ್ತದೆ- ಒಮ್ಮೆ ಮನಸ್ಸು ಸಮಾಧಾನಗೊಂಡ ಮೇಲೆ, ಮತ್ತು ಬಹುಶಃ ಸ್ವಲ್ಪ ಮೂಲಭೂತ ಅರ್ಥಶಾಸ್ತ್ರವನ್ನೂ ಕಲಿತ ನಂತರ!

ಇಂದು ಜನರು ಹಾಸ್ಯವಾಗಿ ಹೇಳುತ್ತಾರೆ: ''ನಾವು ಆಸ್ಪತ್ರೆಗಳಿಗೆ ರೋಗ ಗುಣಪಡಿಸಿಕೊಳ್ಳಲು ಹೋಗುವುದಿಲ್ಲ; ಬದಲಿಗೆ ವಿನಯ, ಸಹನೆ ಮತ್ತು ಕಾರ್ಪೊರೇಟ್ ಆಡಿಟ್‌ನಿಂದ ಹೇಗೆ ಬದುಕುಳಿಯುವುದು ಎಂಬುದನ್ನು ಕಲಿಯಲು!''. ಮತ್ತೆ ಎಲ್ಲೋ, ಒಂದು ಸಮಾಂತರ ಜಗತ್ತಿನಲ್ಲಿ, ಆ 'ಮಮತೆಯ ಮಾವ' ಡಾಕ್ಟರ್ ಇನ್ನೂ ಇದ್ದಾನೆ- ತನ್ನ ಟಾರ್ಚ್, ಸ್ಟೆಥಸ್ಕೋಪ್ ಮತ್ತು ಸರಳ ಹತ್ತು ರುಪಾಯಿ ಚಿಕಿತ್ಸೆಯೊಂದಿಗೆ, ಯಾರನ್ನಾದರೂ ಕಾದಿರುವಂತೆ. ಒಂದು ದಿನ ಆ ಜಗತ್ತು ಮತ್ತು ಈ ಕಾರ್ಪೊರೇಟ್ ಆಸ್ಪತ್ರೆಗಳ ಜಗತ್ತು ಮುಖಾಮುಖಿಯಾಗಲಿ ಎಂದು ನಾವು ಪ್ರಾರ್ಥಿಸಬಹುದು; ಆದರೆ ಅದು ನಮ್ಮ ಬ್ಯಾಂಕ್ ಖಾತೆಗಳು ಚೇತರಿಸಿಕೊಂಡ ನಂತರವಾಗಿದ್ದರೆ ಇನ್ನೂ ಉತ್ತಮ!

ಪಂಚ್‌ಲೈನ್: ಕಾರ್ಪೊರೇಟ್ ಆಸ್ಪತ್ರೆಗಳಲ್ಲಿ ನೀವು ಒಳಹೋಗುವ ಮೊದಲು ನಿಮ್ಮ ಪರ್ಸ್ ಅಡ್ಮಿಟ್ ಆಗುತ್ತದೆ, ಹೊರಬರುವಾಗ ಅದು ನಿಮಗಿಂತಲೂ ಹೆಚ್ಚು ಸೊರಗಿರುತ್ತದೆ!

(ಲೇಖಕರು ಬಾಯ್ಲರ್ ಕಾರ್ಯಾಚರಣೆಗಳ ನಿವೃತ್ತ ಉಪ ನಿರ್ದೇಶಕರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914

VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:74

ಸಮಾಚಾರ ಸಣ್ಣದಲ್ಲ

ಭವಾನಿಪುರ ಕ್ಷೇತ್ರದಲ್ಲಿ ಜಿದ್ದಾಜಿದ್ದಿ ಹೋರಾಟ

ಕೋಲ್ಕತ್ತ: ಪಶ್ಚಿಮ ಬಂಗಾಳ ವಿಧಾನಸಭೆಗೆ ಎರಡು ಹಂತಗಳಲ್ಲಿ ಚುನಾವಣೆ ನಡೆಯಲಿದ್ದು, ಮೊದಲ ಹಂತದ ಚುನಾವಣೆಗೆ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಪ್ರಾರಂಭವಾಗಿದೆ.



ಭವಾನಿಪುರ ಕ್ಷೇತ್ರ ಈ ಬಾರಿ ವಿಶೇಷ ಕಾರಣಕ್ಕಾಗಿ ದೇಶದ ರಾಜಕೀಯ ಆಸಕ್ತರೆಲ್ಲರ ಗಮನ ಸೆಳೆಯುತ್ತಿದೆ. ಕಾರಣ ಈ ಕ್ಷೇತ್ರದಲ್ಲಿ ಬಿಜೆಪಿ ಮತ್ತು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷದಿಂದ ಘಟಾನುಘಟಿ ನಾಯಕ/ ನಾಯಕಿಯರೇ ಕಣಕ್ಕಿಳಿದಿದ್ದಾರೆ. ವಾಸ್ತವವಾಗಿ ಇಲ್ಲಿಯವರೆಗೂ ಕೋಲ್ಕತ್ತದ ದಕ್ಷಿಣ ಭಾಗದಲ್ಲಿನ ಕ್ಷೇತ್ರ ಭವಾನಿ ಪುರ ತೃಣಮೂಲ ಕಾಂಗ್ರೆಸ್ ಪಾಲಿಗೆ ರಾಜಕೀಯವಾಗಿ ಭದ್ರಕೋಟೆ ಎನಿಸಿಕೊಂಡಿದೆ. ಭವಾನಿಪುರ ವಿಧಾನಸಭಾ ಕ್ಷೇತ್ರದಿಂದಲೇ 2021ರ ಉಪ ಚುನಾವಣೆಯಲ್ಲಿ ಮಮತಾ ಬ್ಯಾನರ್ಜಿ ಸ್ಪರ್ಧೆ ಮಾಡಿ ಗಣನೀಯ ಪ್ರಮಾಣದ ಮತಗಳನ್ನು ಪಡೆದು ಗೆದ್ದಿದ್ದರು. ಹಾಗಾಗಿ ಈ ಕ್ಷೇತ್ರ ಭಾವನಾತ್ಮಕವಾಗಿಯೂ ಮಮತಾ ಅವರಿಗೆ ಹೃದಯಕ್ಕೆ ಹತ್ತಿರವಾದ ಕ್ಷೇತ್ರ ಎನಿಸಿಕೊಂಡಿದೆ. ಇದೇ ಕ್ಷೇತ್ರದಲ್ಲಿಯೇ ಈ ಬಾರಿಯೂ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನಾಮಪತ್ರ ಸಲ್ಲಿಸಿದ್ದಾರೆ. ಆದರೆ, ಈ ಬಾರಿ ಅವರಿಗೆ ಸ್ಪರ್ಧೆ ಕಠಿಣ ಎನಿಸಲಿದೆ. ಕಾರಣ, ಅವರಿಗೆ ಎದುರಾಗಿ ವಿಧಾನಸಭೆ ಪ್ರತಿಪಕ್ಷ ನಾಯಕ, ರಾಜ್ಯ ಬಿಜೆಪಿ ವರಿಷ್ಠ ಸುವೇಂದು ಅಧಿಕಾರಿ ಸ್ಪರ್ಧೆ ಕಣಕ್ಕಿಳಿದಿದ್ದಾರೆ. ಹಾಗಾಗಿ ತೀವ್ರ ಹಣಾಹಣಿ ನಿರೀಕ್ಷಿಸಲಾಗಿದೆ. ಜಿದ್ದಾಜಿದ್ದಿ ಹೋರಾಟದ ಕಣವಾಗಿ ಪರಿಣಮಿಸಿರುವ ಈ ಕ್ಷೇತ್ರ ಈಗ ಇಡೀ ದೇಶದ ಗಮನ ಸೆಳೆದಿದೆ.

ಸಂಗಾತಿ ತುಂಡರಿಸಿದ ನೌಕಾಪಡೆ ಸಿಬ್ಬಂದಿ ಸೆರೆ

ವಿಶಾಖಪಟ್ಟಣಂ: ವಿವಾಹೇತರ ಸಂಬಂಧದ ಸಂಗಾತಿಯನ್ನು ಮನೆಗೆ ಕರೆಸಿಕೊಂಡು ಕೊಲೆ ಮಾಡಿ, ಮೃತದೇಹವನ್ನು 2 ತುಂಡು ಮಾಡಿ ಒಂದು ಭಾಗವನ್ನು ಫ್ರಿಜ್‌ನಲ್ಲಿ, ಇನ್ನೊಂದು ಭಾಗವನ್ನು ಚೀಲದಲ್ಲಿ ತುಂಬಿಸಿಟ್ಟಿದ್ದ ನೌಕಾಪಡೆಯ ಉದ್ಯೋಗಿ ರವೀಂದ್ರ ಎಂಬಾತನನ್ನು ವಿಶಾಖಪಟ್ಟಣಂನಲ್ಲಿ ಭಾನುವಾರ ಬಂಧಿಸಲಾಗಿದೆ.ನೌಕಾಪಡೆ ಉದ್ಯೋಗಿ ರವೀಂದ್ರ ಎಲ್‌ವಿ ನಗರದಲ್ಲಿ ವಾಸಿಸುತ್ತಿದ್ದಾನೆ. ಪತ್ನಿ ತವರು ಮನೆಗೆ ಹೋಗಿದ್ದಾಗ ಲಿವಿಂಗ್ ರಿಲೇಷನ್‌ಷಿಪ್ ಸಂಗಾತಿ ಮೌನಿಕಾಳನ್ನು ಭಾನುವಾರ ಮನೆಗೆ ಕರೆಸಿಕೊಂಡಿದ್ದಾನೆ. ಸಂಜೆ ವೇಳೆ ಇಬ್ಬರ ನಡುವೆ ಹಣಕಾಸು ವಿಚಾರವಾಗಿ ಜಗಳವಾಗಿದೆ. ಸಿಟ್ಟಿನ ಭರದಲ್ಲಿ ಮೌನಿಕಾಳನ್ನು ಕೊಲೆ ಮಾಡಿದ ರವೀಂದ್ರ, ಬಳಿಕ ಮೃತದೇಹ ಸಾಗಿಸಲು ಅನುಕೂಲವಾಗಲಿ ಎಂದು ದೇಹವನ್ನು 2 ಭಾಗ ಮಾಡಿ, ಒಂದು ಭಾಗವನ್ನು ಫ್ರಿಜ್‌ನಲ್ಲಿರಿಸಿದ್ದಾನೆ. ಮತ್ತೊಂದು ಭಾಗವನ್ನು ಚೀಲಕ್ಕೆ ತುಂಬಿ ಸಾಗಿಸಲು ಕತ್ತಲಾಗುವವರೆಗೂ ಕಾದು ಕುಳಿತಿದ್ದಾನೆ. ಕಡೆಗೆ ಮನಸ್ಸು ಬದಲಿಸಿ ತಡರಾತ್ರಿ, ಗಜುವಾಕ ಪ್ರದೇಶದ ಪೊಲೀಸ್ ಠಾಣೆಗೆ ತೆರಳಿ ಶರಣಾಗಿದ್ದಾನೆ. ಪೊಲೀಸರು ಆರೋಪಿ ಮನೆಗೆ ತೆರಳಿ ನೋಡಿದಾಗ ಮಹಿಳೆಯ ತುಂಡರಿಸಿದ ದೇಹದ ಒಂದು ಭಾಗ ಫ್ರಿಜ್‌ನಲ್ಲಿ, ಮತ್ತೊಂದು ಭಾಗ ಗೋಣಿ ಚೀಲದಲ್ಲಿ ಪತ್ತೆಯಾಗಿದೆ. ಕೊಲೆ, ಸಾಕ್ಷ್ಯ ನಾಶ ಪ್ರಕರಣ ದಾಖಲಿಸಿಕೊಂಡ ಗಾಜುವಾಕ ಪೊಲೀಸರು, ತನಿಖೆ ಆರಂಭಿಸಿದ್ದಾರೆ.

ಅಮೆರಿಕದೊಂದಿಗೆ ನೇರ ಸಂಧಾನ ನಡೆದಿಲ್ಲ: ಇರಾನ್

ಟೆಹರಾನ್: ಕದನ ವಿರಾಮ ಒಪ್ಪಂದ ಕುರಿತು ಅಮೆರಿಕದೊಂದಿಗೆ ಯಾವುದೇ ನೇರ ಮಾತುಕತೆ ನಡೆದಿಲ್ಲ. ಬದಲಾಗಿ ಮಧ್ಯವರ್ತಿಗಳ ಮೂಲಕ ಮಾತ್ರ ಸಂದೇಶಗಳು ಬರುತ್ತಿವೆ ಎಂದು ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಬಘೈ ಹೇಳಿದ್ದಾರೆ. ಪಶ್ಚಿಮ ಏಷ್ಯಾ ಸಂಘರ್ಷ ಕೊನೆಗೊಳಿಸುವ ನಿಟ್ಟಿನಲ್ಲಿ ಪಾಕಿಸ್ತಾನದ ಮಧ್ಯಸ್ಥಿಕೆಯಲ್ಲಿ ಸೌದಿ ಅರೇಬಿಯಾ, ಈಜಿಪ್ಟ್ ಮತ್ತು ಟರ್ಕಿಯ ವಿದೇಶಾಂಗ ಸಚಿವರು ಇಸ್ಲಾಮಾಬಾದ್‌ನಲ್ಲಿ ಸಭೆ ನಡೆಸಿದ್ದಾರೆ. ವಿದೇಶಾಂಗ ಸಚಿವರಾದ ಪಾಕಿಸ್ತಾನದ ಇಶಾಕ್ ದಾರ್, ಸೌದಿಯ ಫೈಸಲ್ ಬಿನ್ ಫರ್ಹಾನ್ ಅಲ್ ಸೌದ್, ಟರ್ಕಿಯ ಹಕನ್ ಫಿದಾನ್, ಈಜಿಪ್ಟ್‌ನ ಬದ್ರ್ ಅಬ್ದಲತಿ ಅವರು ಇರಾನ್–ಅಮೆರಿಕ, ಇಸ್ರೇಲ್ ನಡುವಿನ ಯುದ್ಧ ಮತ್ತು ಇದರಿಂದ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸೃಷ್ಟಿಯಾಗಿರುವ ತೈಲ, ಅನಿಲ ಬಿಕ್ಕಟ್ಟಿನ ಕುರಿತು ಸಮಗ್ರ ಚರ್ಚೆ ನಡೆಸಿದ್ದಾರೆ ಎನ್ನಲಾಗಿದೆ.

ರಾಹುಲ್ ಗಾಂಧಿ } ಕಾಂಗ್ರೆಸ್ ಸಂಸದ

ಬಿಜೆಪಿ ಆಡಳಿತದ ಗುಜರಾತಲ್ಲಿ ದಲಿತರು, ಆದಿವಾಸಿಗಳ ಮೇಲೆ ದೌರ್ಜನ್ಯ ಹೆಚ್ಚುತ್ತಿದೆ. 2016ರ ಉನಾವೊ ಥಳಿತ ಪ್ರಕರಣದ ಸಂತ್ರಸ್ತರು ಇನ್ನೂ ನ್ಯಾಯಕ್ಕಾಗಿ ಕಾಯುತ್ತಿದ್ದಾರೆ. ಪ್ರಸ್ತುತ ಆಡಳಿತದಲ್ಲಿ ದಲಿತ, ಆದಿವಾಸಿಗಳ ವಿರುದ್ಧ ತಾರತಮ್ಯ ಹೆಚ್ಚುತ್ತಿದೆ. ಆದಿವಾಸಿಗಳು ಶ್ರೇಷ್ಠ ವಿವಿಯಲ್ಲಿ ಓದಿ ದೊಡ್ಡ ಕಂಪನಿಗಳಲ್ಲಿ ಸಿಇಒ ಆಗುವಂತಾಗಬೇಕು.

ಎರಡು ಹಂತಗಳಲ್ಲಿ ಡಿಜಿಟಲ್ ಜನಗಣತಿ–2027 | ಮೊದಲು ಸ್ವಯಂ ಗಣತಿ ಮತ್ತು ಮನೆಗಳ ಪಟ್ಟಿ | 2ನೇ ಹಂತದಲ್ಲಿ ಮನೆ ಬಾಗಿಲಿಗೇ ಗಣತಿ ಅಧಿಕಾರಿ | 11,718 ಕೋಟಿ ರು. ವೆಚ್ಚದಲ್ಲಿ ಸಮಗ್ರ ಜನಗಣತಿ | 15 ವರ್ಷಗಳ ದೀರ್ಘ ವಿರಾಮದ ನಂತರ ಗಣತಿ

ನಾಳೆಯಿಂದಲೇ ಜನಗಣತಿ ಆರಂಭ

ದೆಹಲಿ: 2021ರಲ್ಲಿ ನಡೆಯಬೇಕಿದ್ದ ಜನಗಣತಿ ಕರೋನಾ ಕಾರಣದಿಂದಾಗಿ ರದ್ದಾಗಿದ್ದು, ಕಡೆಗೂ 15 ವರ್ಷಗಳಷ್ಟು ದೀರ್ಘ ಅವಧಿಯ ತರುವಾಯ ಭಾರತದಲ್ಲಿ ಜನಗಣತಿ ನಡೆಯುತ್ತಿದೆ. ಏ.1ರಿಂದಲೇ ಜನಗಣತಿ–2027ರ ಮೊದಲ ಹಂತ ಆರಂಭಗೊಳ್ಳುತ್ತಿದೆ. ಎರಡು ಹಂತಗಳಲ್ಲಿ



ನಡೆಯುವ ಜನಗಣತಿಯಲ್ಲಿ ಮೊದಲ ಹಂತದಲ್ಲಿ ಸ್ವಯಂ ಗಣತಿ ಮಾಹಿತಿ ಭರ್ತಿ ಮತ್ತು ಮನೆಗಳ ಪಟ್ಟಿ ಮಾಡುವಿಕೆ ಜರುಗಲಿದೆ. 2ನೇ ಹಂತದಲ್ಲಿ ಗಣತಿದಾರರೇ ಡಿಜಿಟಲ್ ಸಾಧನಗಳನ್ನು ಹಿಡಿದ ಜನರ ಮನೆ ಬಾಗಿಲಿಗೇ ತೆರಳಿ ಗಣತಿ ಪ್ರಕ್ರಿಯೆ ನಡೆಸಲಿದ್ದಾರೆ.

ದೆಹಲಿಯಲ್ಲಿ ಸೋಮವಾರ ಸುದ್ದಿಗೋಷ್ಠಿ ನಡೆಸಿದ 'ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯ ಅಂಡ್ ಸೆನ್ಸಸ್'ನ ಆಯುಕ್ತರಾದ ಮೃತ್ಯುಂಜಯ ಕುಮಾರ್ ನಾರಾಯಣ್, ಜನಗಣತಿ–2027ರಲ್ಲಿ ದೇಶದ ಕೋಟ್ಯಂತರ ಜನರಿಂದ ವ್ಯಕ್ತಿಗತವಾದ ಮತ್ತು ಕುಟುಂಬ ಸದಸ್ಯರ ಕುರಿತ ಹಾಗೂ ಎಲ್ಲರ ಆರ್ಥಿಕ, ಶೈಕ್ಷಣಿಕ, ಉದ್ಯೋಗ ಮೊದಲಾದ ಮಾಹಿತಿಗಳನ್ನು ಸಂಗ್ರಹಿಸಲಾಗುವುದು. ಸಂತಾನ(ಮಕ್ಕಳ ಸಂಖ್ಯೆ) ಕುರಿತೂ ಮಾಹಿತಿ ಪಡೆಯಲಾಗುವುದು. ಮೂಲ ನಿವಾಸಿಗಳೇ, ವಲಸೆ ಬಂದವರೆ? ಎಂಬುದನ್ನೂ ಗುರುತಿಸಲಾಗುವುದು. ಆದರೆ, ಈ ಎಲ್ಲಾ ಮಾಹಿತಿಗಳನ್ನೂ ಜನಗಣತಿ ಕಾಯಿದೆಯ ಸೆಕ್ಷನ್ 15ರನ್ವಯವೇ ರಹಸ್ಯವಾಗಿರಿಸಲಾಗುವುದು. ಈ ಮಾಹಿತಿಗಳನ್ನು ಯಾರೊಬ್ಬರೂ 'ಮಾಹಿತಿ ಹಕ್ಕು ಕಾಯಿದೆ'ಯಡಿಯಲ್ಲಿಯೂ ಪಡೆಯಲು ಸಾಧ್ಯವಿರುವುದಿಲ್ಲ ಎಂದು ವಿವರಿಸಿದರು.

ಏ.1ರಿಂದ ಆನ್‌ಲೈನ್ ಮೂಲಕವೇ ಜನರು ತಮ್ಮ ಮತ್ತು ತಮ್ಮ ಕುಟುಂಬದ ಸದಸ್ಯರ ಮಾಹಿತಿಗಳನ್ನು ಸ್ವಯಂ ಭರ್ತಿ ಮಾಡುವುದಕ್ಕೆ ಅವಕಾಶ ಮಾಡಿಕೊಡಲಾಗುತ್ತಿದೆ. ಈ ಸ್ವಯಂ ಮಾಹಿತಿ ನೀಡುವ ಪ್ರಕ್ರಿಯೆ ರಾಷ್ಟ್ರ ರಾಜಧಾನಿ ನಗರ ದೆಹಲಿ ಸೇರಿದಂತೆ ಕೇಂದ್ರಾಡಳಿತ ಪ್ರದೇಶಗಳು, ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳಲ್ಲಿ ಮೊದಲ ಹಂತದಲ್ಲಿ ಆರಂಭಗೊಳ್ಳುತ್ತದೆ ಎಂದರು.

ಜನಗಣತಿ–2027 ದೇಶ ಸ್ವಾತಂತ್ರ್ಯಗೊಂಡ ನಂತರದಲ್ಲಿ ನಡೆಯುತ್ತಿರುವ 8ನೇ ಹಾಗೂ ಈವರೆಗಿನ ಒಟ್ಟಾರೆ ಗಣತಿಗಳ ಲೆಕ್ಕದಲ್ಲಿ 16ನೇ ಜನಗಣತಿ ಆಗಿದೆ. ಜನಗಣತಿ ಎಂಬುದು ಬಹು ವಿಸ್ತಾರ ತಳಹದಿಯ ಕೆಲಸವಾಗಿದೆ. ಹಾಗಾಗಿ ಅದನ್ನು 2 ಹಂತಗಳಲ್ಲಿ ನಡೆಸಲು ಯೋಜಿಸಲಾಗಿದೆ. ಈ ಬಾರಿ ಜನರಿಂದ ಬರುವ ಮಾಹಿತಿಗಳನ್ನು ಡಿಜಿಟಲ್ ದತ್ತಾಂಶ ರೂಪದಲ್ಲಿ ಸಂಗ್ರಹಿಸಲಾಗುವುದು ಎಂದು ವಿವರಿಸಿದರು.

ಈ ಬಾರಿಯ ಜನಗಣತಿ ಪ್ರಕ್ರಿಯೆಯನ್ನು 'ಸೆನ್ಸಸ್ ಆಕ್ಟ್–1948' ಮತ್ತು 'ದಿ ಸೆನ್ಸಸ್ ರೂಲ್ಸ್–1990' ಕಾಯಿದೆಯಲ್ಲಿ ಲಭ್ಯವಿರುವ ಪ್ರಾವಿಷನ್‌ಗಳನ್ನು ಆಧರಿಸಿಯೇ ನಡೆಸಲಾಗುತ್ತದೆ. ಮೊದಲ ಹಂತದ ಜನಗಣತಿ ಪ್ರಕ್ರಿಯೆ ಪ್ರಶ್ನೋತ್ತರ ಮಾದರಿಯಲ್ಲಿರುತ್ತದೆ ಎಂದರು.

2ನೇ ಹಂತದ ಜನಗಣತಿಯು ಜನಸಂಖ್ಯೆಯ ಮೌಲ್ಯಮಾಪನವಾಗಿರಲಿದೆ. ಈ ಹಂತದಲ್ಲಿ ಜನಜೀವನ, ಜನರ ಸಾಮಾಜಿಕ–ಸಾಂಸ್ಕೃತಿಕ ಹಿನ್ನೆಲೆ, ಆರ್ಥಿಕ ಸ್ಥಿತಿಗತಿ, ವಲಸೆ ಬಂದವರೇ, ಸಂತಾನ ಪ್ರಮಾಣ ಮೊದಲಾದ ಅಂಶಗಳನ್ನು ಒಳಗೊಂಡಿರುತ್ತದೆ ಎಂದು ವಿವರಿಸಿದರು.

ಜನಗಣತಿ–2027 ಪ್ರಕ್ರಿಯೆ ನಡೆಸುವುದಕ್ಕಾಗಿ ಕೇಂದ್ರ ಸರಕಾರದ ಸಚಿವ ಸಂಪುಟ ಒಟ್ಟು 11,718.24 ಕೋಟಿ ರು. ಅನುದಾನ ಮಂಜೂರು ಮಾಡಿದೆ ಎಂದು ಆಯುಕ್ತರು ವಿವರಿಸಿದರು.

ವೈಯಕ್ತಿಕ ಮಾಹಿತಿ ರಹಸ್ಯವಾಗಿರಲಿದೆ

ಜನಗಣತಿ–2027 ಪ್ರಕ್ರಿಯೆಯಲ್ಲಿ ದೇಶಾದ್ಯಂತದ ಜನರಿಂದ ಸಂಗ್ರಹಿಸಲಾಗುವ ಜನರ ವೈಯಕ್ತಿಕ ಮಾಹಿತಿಗಳನ್ನು 'ಸೆನ್ಸಸ್ ಆಕ್ಟ್–1948'(ಜನಗಣತಿ ಕಾಯಿದೆ–1948)ರ ಕಲಂ 15ರ ಅನ್ವಯ ಬಲು ರಹಸ್ಯವಾಗಿ ಕಾಯ್ದಿರಿಸಲಾಗುತ್ತದೆ. ಈ ಮಾಹಿತಿಗಳನ್ನು ಯಾರೊಬ್ಬರೂ 'ಮಾಹಿತಿ ಹಕ್ಕು ಕಾಯಿದೆ'ಯಡಿಯಲ್ಲಿಯೂ ಪಡೆಯಲು ಅವಕಾಶ ಇರುವುದಿಲ್ಲ ಎಂದು 'ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯ ಅಂಡ್ ಸೆನ್ಸಸ್'ನ ಆಯುಕ್ತರಾದ ಮೃತ್ಯುಂಜಯ ಕುಮಾರ್ ನಾರಾಯಣ್ ಸ್ಪಷ್ಟವಾಗಿ ತಿಳಿಸಿದ್ದಾರೆ.

ಜಾತಿ ಗಣತಿ

2027ರ ಜನಗಣತಿ ವೇಳೆ ಜನರ ಜಾತಿಯನ್ನೂ ದಾಖಲಿಸಲಾಗುವುದು. ಆ ಮೂಲಕ ಇದು ಜಾತಿ ಗಣತಿಯೂ ಆಗಿರಲಿದೆ ಎಂದು ಕೇಂದ್ರ ಸರಕಾರ ಈ ಹಿಂದೆಯೇ ಹೇಳಿದೆ. 2025ರ ಏ.30ರಂದು ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಈ ಕುರಿತು ನಿರ್ಣಯ ಕೈಗೊಳ್ಳಲಾಗಿದೆ. ಈ ಹಿಂದೆ ದೇಶದಲ್ಲಿ ಜಾತಿ ಗಣತಿ ಎಂಬುದು 1931ರಲ್ಲಿ ಬ್ರಿಟಿಷರ ಆಡಳಿತ ಕಾಲದಲ್ಲಿ ನಡೆದಿತ್ತು.

2011ರಲ್ಲಿ 'ನಮ್ಮ ಜನಗಣತಿ–ನಮ್ಮ ಭವಿಷ್ಯ'

ದೇಶದ 7ನೇ ದಶ ವಾರ್ಷಿಕ ಜನಗಣತಿ, ಒಟ್ಟಾರೆಯಾಗಿ 15ನೇ ಜನಗಣತಿ 2010ರ ಏ.1ರಂದು ಆರಂಭಗೊಂಡಿತ್ತು. 'ನಮ್ಮ ಜನಗಣತಿ– ನಮ್ಮ ಭವಿಷ್ಯ' ಘೋಷವಾಕ್ಯದೊಂದಿಗೆ ಜನಗಣತಿ ನಡೆಸಲಾಗಿತ್ತು. ಮೊದಲ ಹಂತದಲ್ಲಿ ನ್ಯಾಷನಲ್ ಪಾಪ್ಯುಲೇಷನ್ ರಿಜಿಸ್ಟರ್(ಪಿಎನ್‌ಆರ್) ಮಾಹಿತಿ ಕಲೆಹಾಕಲಾಗಿತ್ತು. ಬಯೋಮೆಟ್ರಿಕ್ ಮಾಹಿತಿಗಳನ್ನೂ ಸಂಗ್ರಹಿಸಲಾಗಿತ್ತು.

2011ರ ಜನಗಣತಿ	
ಒಟ್ಟು ಜನಸಂಖ್ಯೆ	121,08,54,977
ಮಹಿಳೆ	58,64,69,294
ಪುರುಷ	62,37,24,568
ಸಾಕ್ಷರತೆ ಒಟ್ಟು	ಶೇ.74
ಮಹಿಳೆ	ಶೇ.65.46
ಪುರುಷ	ಶೇ.82.10
ಚ.ಕಿಮೀಗೆ ಜನ	382
ಪುರುಷ	1000
ಮಹಿಳೆ	943

ಆ ಮೂಲಕ ದೇಶದ ಪ್ರತಿ ಪ್ರಜೆಗೂ 12 ಅಂಕಿಗಳ ವಿಶಿಷ್ಟ ಗುರುತಿನ ಚೀಟಿ ನೀಡುವುದಕ್ಕೆ ಅವಕಾಶವಾಗಿತ್ತು. 2ನೇ ಹಂತದ ಜನಗಣತಿ 2011ರ ಫೆ.9ರಂದು ಆರಂಭಗೊಂಡು 28ಕ್ಕೆ ಮುಕ್ತಾಯಗೊಂಡಿತ್ತು. 2011ರ ಮಾ.31ರಂದು ತಾತ್ಕಾಲಿಕ ಜನಗಣತಿ ಪಟ್ಟಿ ಪ್ರಕಟವಾಗಿತ್ತು. ಅದರ ಪ್ರಕಾರ ಭಾರತದಲ್ಲಿ ಅಂದು 121 ಕೋಟಿ ಜನಸಂಖ್ಯೆ ಇದ್ದಿತು. ಹಿಂದಿನ ದಶಕಕ್ಕೆ ಹೋಲಿಸಿದಲ್ಲಿ ಜನಸಂಖ್ಯೆಯಲ್ಲಿ ಶೇ.17.70 ಪ್ರಮಾಣದ ಹೆಚ್ಚಳವಾಗಿತ್ತು. ವಯಸ್ಕರ ಸಾಕ್ಷರತೆ ಪ್ರಮಾಣ ಶೇ.74.04 ರಷ್ಟು ದಾಖಲಾಗಿತ್ತು. ಇದು ದಶಕದಲ್ಲಿ ಶೇ.9.21ರಷ್ಟು ಪ್ರಗತಿ ಕಂಡಿತ್ತು. (ಕರ್ನಾಟಕ ರಾಜ್ಯದಲ್ಲಿನ ಜನಸಂಖ್ಯೆ 6,10,95,297 ಇದ್ದಿತು).ಅಂದು 28 ರಾಜ್ಯಗಳು, 8 ಕೇಂದ್ರಾಡಳಿತ ಪ್ರದೇಶಗಳಲ್ಲಿನ 640 ಜಿಲ್ಲೆಗಳಲ್ಲಿನ 5924 ತಾಲೂಕುಗಳಲ್ಲಿ, 7935 ಪಟ್ಟಣಗಳಲ್ಲಿ, 6 ಲಕ್ಷ ಹಳ್ಳಿಗಳಲ್ಲಿ ಸುತ್ತಾಡಿದ 27 ಲಕ್ಷ ಜನಗಣತಿ ಅಧಿಕಾರಿಗಳು ಸಮಗ್ರ ಮಾಹಿತಿ ಕಲೆಹಾಕಿದ್ದರು. ಇದಕ್ಕಾಗಿ ಕೇಂದ್ರ 2,220 ಕೋಟಿ ರು. ವೆಚ್ಚ ಮಾಡಿತ್ತು.

ಸ್ವಯಂ ಗಣತಿ ಪ್ರಕ್ರಿಯೆ

ಕೇಂದ್ರಾಡಳಿತ ಪ್ರದೇಶಗಳಾದ ಅಂಡಮಾನ್–ನಿಕೋಬಾರ್ ದ್ವೀಪ ಸಮೂಹ, ಗೋವಾ, ಲಕ್ಷದ್ವೀಪ, ಎನ್‌ಸಿಟಿ ದೆಹಲಿ, ರಾಜ್ಯಗಳಾದ ಕರ್ನಾಟಕ, ಸಿಕ್ಕಿಂ, ಒಡಿಶಾ, ಮಿಜೋರಾಂನಲ್ಲಿ



ಮೊದಲಿಗೆ ಏ.1ರಿಂದ 15ರವರೆಗೂ ಹಾಗೂ ಗುಜರಾತ್‌ನಲ್ಲಿ ಏ.5ರಿಂದ 19ರವರೆಗೆ, ಉತ್ತರಾಖಂಡ ರಾಜ್ಯದಲ್ಲಿ ಏ.10ರಿಂದ 24ರವರೆಗೆ, ಆಂಧ್ರಪ್ರದೇಶ, ಅರುಣಾಚಲ ಪ್ರದೇಶ, ಹರಿಯಾಣ, ಮಧ್ಯಪ್ರದೇಶ, ಛತ್ತೀಸ್‌ಗಢ ರಾಜ್ಯಗಳು ಮತ್ತು ಚಂಡೀಗಢ ನಗರದಲ್ಲಿ ಏ.16ರಿಂದ 30ರವರೆಗೆ, ಬಿಹಾರದಲ್ಲಿ ಏ.17ರಿಂದ ಮೇ 1, ತೆಲಂಗಾಣ ಏ.26ರಿಂದ ಮೇ 10 ಮತ್ತು ಪಂಜಾಬ್‌ನಲ್ಲಿ ಏ.30ರಿಂದ ಮೇ 14ರವರೆಗೆ, ದೆಹಲಿ ಮಹಾನಗರ ಪಾಲಿಕೆ ಪ್ರದೇಶ, ರಾಜಸ್ಥಾನ, ಮಹಾರಾಷ್ಟ್ರ, ಮೇಘಾಲಯ, ಜಾರ್ಖಂಡ್ ರಾಜ್ಯಗಳಲ್ಲಿ ಮೇ 1ರಿಂದ 15ರವರೆಗೆ, ಉತ್ತರ ಪ್ರದೇಶ ಮೇ 7ರಿಂದ 21ರವರೆಗೆ, ಜಮ್ಮು–ಕಾಶ್ಮೀರ, ಲಡಾಖ್, ಪುದುಚೇರಿ ಕೇಂದ್ರಾಡಳಿತ ಪ್ರದೇಶಗಳಲ್ಲಿ ಮೇ 17ರಿಂದ 31ರವರೆಗೆ, ಹಿಮಾಚಲ ಪ್ರದೇಶದಲ್ಲಿ ಜೂ.1ರಿಂದ 15ರವರೆಗೆ, ಕೇರಳ, ನಾಗಾಲ್ಯಾಂಡ್‌ನಲ್ಲಿ ಜೂ.16ರಿಂದ 30ರವರೆಗೆ, ತಮಿಳುನಾಡು, ತ್ರಿಪುರಾ, ಮಣಿಪುರದಲ್ಲಿ ಜು.17ರಿಂದ 31ರವರೆಗೆ, ಅಸ್ಸಾಂನಲ್ಲಿ ಆ.2ರಿಂದ 16ರವರೆಗೆ ಸ್ವಯಂ ಜನಗಣತಿ ಪ್ರಕ್ರಿಯೆ ಜರುಗಲಿದೆ. ಜನರೇ ತಮ್ಮ ಹಾಗೂ ತಮ್ಮ ಕುಟುಂಬ ಸದಸ್ಯರ ಮಾಹಿತಿ ಭರ್ತಿ ಮಾಡಬಹುದಾಗಿದೆ.

ಮನೆಗಳ ಪಟ್ಟಿ ಪ್ರಕ್ರಿಯೆ

2026ರ ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ ಮನೆಗಳ ಪಟ್ಟಿ ಮಾಡುವುದು ನಡೆಯಲಿದೆ. ಮೊದಲಿಗೆ ಕೇಂದ್ರಾಡಳಿತ ಪ್ರದೇಶಗಳಾದ ಅಂಡಮಾನ್–ನಿಕೋಬಾರ್ ದ್ವೀಪ ಸಮೂಹ, ಗೋವಾ, ಲಕ್ಷದ್ವೀಪ, ಎನ್‌ಸಿಟಿ ದೆಹಲಿ, ರಾಜ್ಯಗಳಾದ ಕರ್ನಾಟಕ, ಸಿಕ್ಕಿಂ, ಒಡಿಶಾ, ಮಿಜೋರಾಂನಲ್ಲಿ ಮನೆಗಳನ್ನು ಪಟ್ಟಿ ಮಾಡುವ ಪ್ರಕ್ರಿಯೆ ಏ.16ರಿಂದ ಮೇ 15ರವರೆಗೆ ನಡೆಯಲಿದೆ. ಗುಜರಾತ್, ಉತ್ತರಾಖಂಡ ರಾಜ್ಯಗಳಲ್ಲಿ ಏ.20ರಿಂದ ಮೇ 19ರವರೆಗೆ ಜರುಗಲಿದೆ. ಆಂಧ್ರಪ್ರದೇಶ, ಅರುಣಾಚಲ ಪ್ರದೇಶ, ಹರಿಯಾಣ, ಮಧ್ಯಪ್ರದೇಶ, ಛತ್ತೀಸ್‌ಗಢ ರಾಜ್ಯಗಳು ಮತ್ತು ಚಂಡೀಗಢ ನಗರದಲ್ಲಿ ಮೇ 1ರಿಂದ 30ರವರೆಗೆ, ಬಿಹಾರದಲ್ಲಿ ಮೇ 2ರಿಂದ 31, ತೆಲಂಗಾಣ ಮೇ 11ರಿಂದ ಜೂನ್ 9 ಮತ್ತು ಪಂಜಾಬ್‌ನಲ್ಲಿ ಮೇ 15ರಿಂದ ಜೂನ್ 13ರವರೆಗೆ, ದೆಹಲಿ ಮಹಾನಗರ ಪಾಲಿಕೆ ಪ್ರದೇಶ, ರಾಜಸ್ಥಾನ, ಮಹಾರಾಷ್ಟ್ರ, ಮೇಘಾಲಯ, ಜಾರ್ಖಂಡ್ ರಾಜ್ಯಗಳಲ್ಲಿ ಮೇ 16ರಿಂದ ಜೂ.14ರವರೆಗೆ, ಉತ್ತರ ಪ್ರದೇಶ ಮೇ 22ರಿಂದ ಜೂ.20ರವರೆಗೆ, ಜಮ್ಮು–ಕಾಶ್ಮೀರ, ಲಡಾಖ್, ಪುದುಚೇರಿ ಕೇಂದ್ರಾಡಳಿತ ಪ್ರದೇಶಗಳಲ್ಲಿ ಜೂ.1ರಿಂದ 30ರವರೆಗೆ, ಹಿಮಾಚಲ ಪ್ರದೇಶದಲ್ಲಿ ಜೂ.16ರಿಂದ ಜು.15ರವರೆಗೆ. ಕೇರಳ, ನಾಗಾಲ್ಯಾಂಡ್, ತಮಿಳುನಾಡು, ತ್ರಿಪುರಾದಲ್ಲಿ ಜು.1ರಿಂದ 30ರವರೆಗೆ, ಅಸ್ಸಾಂನಲ್ಲಿ ಆ.17ರಿಂದ ಸೆ.15ರವರೆಗೆ ಮತ್ತು ಮಣಿಪುರದಲ್ಲಿ ಸೆ.1ರಿಂದ 30ರವರೆಗೆ ಮನೆಗಳನ್ನು ಪಟ್ಟಿ ಮಾಡಲಾಗುತ್ತದೆ.ಈ ಹಂತದಲ್ಲಿ ವ್ಯಕ್ತಿಯ ವೈಯಕ್ತಿಕ ಮಾಹಿತಿ ಪಡೆಯಲಾಗುವುದಿಲ್ಲ. ಕೇವಲ ಮನೆಗಳನ್ನು ಪಟ್ಟಿ ಮಾಡಿ, ಮನೆಯ ಪರಿಸ್ಥಿತಿ, ಅದರಲ್ಲಿರುವ ಮೂಲ ಸೌಲಭ್ಯಗಳು, ಮನೆಯಲ್ಲಿರುವ ಸಾಮಗ್ರಿಗಳ ಬಗ್ಗೆ ಮಾಹಿತಿ ಕಲೆಹಾಕಲಾಗುವುದು ಎಂದು ಜನಗಣತಿ ಆಯುಕ್ತ ಮೃತ್ಯುಂಜಯ ಕುಮಾರ್ ನಾರಾಯಣನ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ನಕ್ಸಲ್ ಕಮಾಂಡರ್ ಚೆಲ್ಲೂರಿ ನಾರಾಯಣರಾವ್ ಶರಣು

ವಿಜಯವಾಡ: 36 ವರ್ಷಗಳಿಂದ ಆಂಧ್ರಪ್ರದೇಶ, ಛತ್ತೀಸ್‌ಗಢ, ಒಡಿಶಾ ಪೊಲೀಸರಿಗೆ ಸಿಗದೇ ಆಟವಾಡಿಸಿದ್ದ, ಆಂಧ್ರಪ್ರದೇಶದ ಇಬ್ಬರು ಮಾಜಿ ಶಾಸಕರ ಹತ್ಯೆಯಲ್ಲಿಯೂ ಪ್ರಮುಖ ಪಾತ್ರ ವಹಿಸಿದ್ದ ಹಿರಿಯ ನಕ್ಸಲ್ ಕಮಾಂಡರ್ ಚೆಲ್ಲೂರಿ ನಾರಾಯಣ

ರಾವ್ ಕಡೆಗೂ ಆಂಧ್ರಪ್ರದೇಶ ಪೊಲೀಸರಿಗೆ ಸೋಮವಾರ ಶರಣಾಗಿದ್ದಾರೆ. ಅವರ ಜತೆಗೆ ನಕ್ಸಲ್ ಸಂಘಟನೆಗಳ ಛತ್ತೀಸ್‌ಗಢ ಮತ್ತು ಒಡಿಶಾ ವಲಯದ ಪ್ಲಟೂನ್ ಕಮಾಂಡರ್, ಏರಿಯಾ ಕಮಿಟಿ ಮೆಂಬರ್ ಸೇರಿದಂತೆ ಒಟ್ಟು 8 ನಕ್ಸಲ್ ನಾಯಕರೂ ಆಂಧ್ರಪ್ರದೇಶದ ಪೊಲೀಸ್ ಮಹಾನಿರ್ದೇಶಕ(ಡಿಜಿಪಿ) ಹರೀಶ್ ಕುಮಾರ್ ಗುಪ್ತಾ ಅವರೆದುರು ವಿಜಯವಾಡದಲ್ಲಿ ಶಸ್ತ್ರಾಸ್ತ್ರ ತ್ಯಜಿಸಿ ಶರಣಾಗತರಾಗಿದ್ದಾರೆ.

ಚೆಲ್ಲೂರಿ ನಾರಾಯಣ ರಾವ್ ಅಲಿಯಾಸ್ ಸುರೇಶ್, ಸಿಪಿಐ–ಮಾವೋವಾದಿ ಸಂಘಟನೆಯ ಕೇಂದ್ರ ಸಮಿತಿ ಸದಸ್ಯ. ಅಲ್ಲದೇ ಆಂಧ್ರ–ಒಡಿಶಾ ಗಡಿಯ ವಿಶೇಷ ವಲಯ ಸಮಿತಿ ಕಾರ್ಯದರ್ಶಿಯೂ ಆಗಿರುವ ಚೆಲ್ಲೂರಿ ನಾರಾಯಣರಾವ್, ಮಾವೋವಾದಿ ನಕ್ಸಲ್ ಸಂಘಟನೆಯಲ್ಲಿನ ಹಿರಿಯ ಕಮಾಂಡರ್‌ಗಳಲ್ಲೊಬ್ಬರು.

2018ರಲ್ಲಿ ಮಾಜಿ ಶಾಸಕರಾದ ಕಿದಾರಿ ಸರ್ವೇಶ್ವರ ರಾವ್ ಮತ್ತು ಸಿವಾರಿ ಸೋಮೇಶ್ವರ ರಾವ್ ಅವರ ಹತ್ಯೆಯಲ್ಲಿಯೂ ಚೆಲ್ಲೂರಿ ನಾರಾಯಣರಾವ್ ಪಾತ್ರವಿದೆ ಎನ್ನಲಾಗಿದೆ.ಹಾಗಾಗಿಯೇ ಚೆಲ್ಲೂರಿ ಸೆರೆಗೆ ನೆರವಾದವರಿಗೆ ಆಂಧ್ರ ಪೊಲೀಸರು 25 ಲಕ್ಷ ರು. ಇನಾಮು ಘೋಷಿಸಿದ್ದರು. ಈಗ ಶರಣಾಗಿರುವುದರಿಂದ ಅದೇ ಹಣ ಚೆಲ್ಲೂರಿ ಅವರಿಗೇ ಪುನರ್ವಸತಿ ಧನವಾಗಿ ಸಿಗಲಿದೆ. ಉಳಿದ 8 ನಕ್ಸಲರಿಗೂ ತಲಾ 1 ಲಕ್ಷದಿಂದ 5 ಲಕ್ಷ ರು.ವರೆಗೂ ಶರಣಾಗತಿ ಮೊತ್ತವನ್ನು ರಾಜ್ಯ ಸರಕಾರ ನೀಡಲಿದೆ ಎಂದು ತಿಳಿದುಬಂದಿದೆ.

ಸ್ಟಾಲಿನ್ ಕೊಲತ್ತೂರಲ್ಲಿ 4ನೇ ಬಾರಿ, ವಿಜಯ್ 2 ಕ್ಷೇತ್ರ ಸ್ಪರ್ಧೆ

ಸಿಎಂ ಸ್ಟಾಲಿನ್, ಟಿವಿಕೆ ವಿಜಯ್ ನಾಮಪತ್ರ

ಚೆನ್ನೈ: 234 ಸದಸ್ಯ ಬಲದ ತಮಿಳುನಾಡು ವಿಧಾನಸಭೆಗೆ ಏ.23ರಂದು ಒಂದೇ ಹಂತದಲ್ಲಿ ಚುನಾವಣೆ ನಡೆಯಲಿದ್ದು, ಮುಖ್ಯಮಂತ್ರಿ, ಡಿಎಂಕೆ ಪಕ್ಷದ ವರಿಷ್ಠ ಎಂ.ಕೆ.ಸ್ಟಾಲಿನ್ ತಮ್ಮ ಅದೃಷ್ಟದ ವಿಧಾನಸಭಾ ಕ್ಷೇತ್ರ ಕೊಲತ್ತೂರ್‌ನಲ್ಲಿ ಸೋಮವಾರ ನಾಮಪತ್ರ ಸಲ್ಲಿಸಿದರು.

ಸ್ಟಾಲಿನ್: 2011 ಮತ್ತು 2016 ಹಾಗೂ 2021ರಲ್ಲಿ ಕೊಲತ್ತೂರ್ ವಿಧಾನಸಭಾ ಕ್ಷೇತ್ರದಲ್ಲಿ ಹ್ಯಾಟ್ರಿಕ್ ಗೆಲುವು ಸಾಧಿಸಿರುವ ಎಂ.ಕೆ. ಸ್ಟಾಲಿನ್, 4ನೇ ಬಾರಿಗೂ ಅದೇ ಕ್ಷೇತ್ರದಲ್ಲಿ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ.ನಾಮಪತ್ರ ಸಲ್ಲಿಸಿದ ಬಳಿಕ ಸ್ಟಾಲಿನ್, ಕೊಲತ್ತೂರ್ ಕ್ಷೇತ್ರದಲ್ಲಿ ರೋಡ್ ಶೋ ನಡೆಸಿದರು. ನೆರೆದಿದ್ದ ಸಾವಿರಾರು ಅಭಿಮಾನಿಗಳು, ಪಕ್ಷದ ಕಾರ್ಯಕರ್ತರು, ಸಾರ್ವಜನಿಕರತ್ತ ಕೈಬೀಸಿದರು, ಕರ ಜೋಡಿಸಿ ಮತ ಯಾಚಿಸಿದರು. ಇದೇ ವೇಳೆ, ಕಳೆದ 15 ವರ್ಷಗಳಲ್ಲಿ ತಾವು ಕೊಲತ್ತೂರ್ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳು, ಮಾಡಿದ ಅಭಿವೃದ್ಧಿ ಕಾರ್ಯಗಳ ಬಗ್ಗೆ ವಿವರಿಸುವ ಕಿರುಪುಸ್ತಕ ಬಿಡುಗಡೆ ಮಾಡಿದರು.ಕಳೆದ 3 ಬಾರಿಗೆ ಹೋಲಿಸಿದರೆ ಈ ಬಾರಿ ಮತ್ತೂ ಹೆಚ್ಚಿನ ಬೆಂಬಲ ವ್ಯಕ್ತವಾಗುತ್ತಿದೆ. ಈ ಸಲದ ಗೆಲುವು ತುಂಬಾ ಪ್ರಕಾಶಮಾನವಾಗಿರುತ್ತದೆ ಎಂದು ಸ್ಟಾಲಿನ್ ವಿಶ್ವಾಸ ವ್ಯಕ್ತಪಡಿಸಿದರು.234 ವಿಧಾನಸಭಾ ಕ್ಷೇತ್ರಗಳ ಪೈಕಿ 164 ಕ್ಷೇತ್ರಗಳಲ್ಲಿ ಡಿಎಂಕೆ ಸ್ಪರ್ಧಿಸುತ್ತಿದೆ. ಉಳಿದ 70 ಸ್ಥಾನಗಳನ್ನು ಕಾಂಗ್ರೆಸ್(28) ಮತ್ತು ಸಿಪಿಐ–ಎಂ(5) ಸೇರಿದಂತೆ ಮಿತ್ರಪಕ್ಷಗಳಿಗೆ ಬಿಟ್ಟುಕೊಟ್ಟಿದೆ.

ವಿಜಯ್ ಮೊದಲ ಚುನಾವಣೆ

ಇನ್ನೊಂದೆಡೆ, ಇದೇ ಮೊದಲ ಬಾರಿಗೆ ಚುನಾವಣಾ ಕಣಕ್ಕಿಳಿಯುತ್ತಿರುವ 'ತಮಿಳಗ ವೆಟ್ರಿ

ಕಳಗಂ'(ಟಿವಿಕೆ) ಪಕ್ಷದ ನಾಯಕ, ಖ್ಯಾತ ಚಿತ್ರನಟ ಜೋಸೆಫ್ ವಿಜಯ್ ಅವರೂ ಚೆನ್ನೈನ ಪೆರಂಬೂರು ಮತ್ತು ತಿರುಚಿ ಪೂರ್ವ ಕ್ಷೇತ್ರಗಳಲ್ಲಿ ನಾಮಪತ್ರ ಸಲ್ಲಿಸಿದರು.ವ್ಯಾಸರಪಾಡಿಯ ಡಾ. ಅಂಬೇಡ್ಕರ್ ಸರಕಾರಿ ಕಲಾ ಕಾಲೇಜಿನಲ್ಲಿನ ಚುನಾವಣಾಧಿಕಾರಿ ಕಚೇರಿಯಲ್ಲಿ ವಿಜಯ್ ನಾಮಪತ್ರ ಸಲ್ಲಿಸಿದರು. ಪಕ್ಷದ ಪ್ರಧಾನ ಕಾರ್ಯದರ್ಶಿ ಎನ್.ಆನಂದ್, ಜಂಟಿ ಪ್ರಧಾನ ಕಾರ್ಯದರ್ಶಿ ಸಿಟಿಆರ್ ನಿರ್ಮಲ್ ಕುಮಾರ್ ಜತೆಗಿದ್ದರು. ನಾಮನಿರ್ದೇಶನ ದಿನವೇ ಟಿವಿಕೆಯ ಶಕ್ತಿ ಪ್ರದರ್ಶನವೂ ನಡೆದಿದೆ. ವಿಜಯ್ ಅಭಿಮಾನಿಗಳು, ಪಕ್ಷದ ಕಾರ್ಯಕರ್ತರು ಅಪಾರ ಸಂಖ್ಯೆಯಲ್ಲಿ ಚುನಾವಣಾಧಿಕಾರಿ ಕಚೇರಿ ಮಾರ್ಗದ ಎಡಬಲ ನೆರೆದಿದ್ದರು.

ಲಾಕರ್‌ನಲ್ಲೇನಿರುತ್ತೆ ಬ್ಯಾಂಕ್ ನೋಡಲ್ಲ

ದೆಹಲಿ: ಗ್ರಾಹಕರು ಲಾಕರ್‌ಗಳಲ್ಲಿ ಏನಿಟ್ಟಿರುತ್ತಾರೆ ಎಂಬುದನ್ನು ಬ್ಯಾಂಕ್‌ನವರು ನೋಡುವುದೂ ಇಲ್ಲ, ಅದರಲ್ಲಿ ಸಂಗ್ರಹಿಸಿರುವ ಬೆಲೆ ಬಾಳುವ ವಸ್ತುಗಳನ್ನು ಬ್ಯಾಂಕ್‌ನವರು ದಾಖಲಿಸಲೂ ಸಾಧ್ಯವಿಲ್ಲ. ಏಕೆಂದರೆ,

ಅದೇ ಬ್ಯಾಂಕ್‌ನ ನಿಯಮವಾಗಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೋಮವಾರ ಲೋಕಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಹೇಳಿದರು. ಹಾಗಾಗಿ, ಲಾಕರ್‌ನಲ್ಲಿರುವ ವಸ್ತುಗಳ ನಿಜವಾದ ಮೌಲ್ಯದ ಆಧಾರದ ಮೇಲೆ ವಿಮಾ ಸೌಲಭ್ಯ ಒದಗಿಸುವುದು ಪ್ರಾಯೋಗಿಕವಲ್ಲ ಎಂದು ಸ್ಪಷ್ಟಪಡಿಸಿ ದರು. ಲಾಕರ್‌ನಲ್ಲಿರುವ ವಸ್ತುಗಳಿಗೆ ವಿಭಿನ್ನ ವಿಮಾ ರಕ್ಷಣೆ ದೊರಕಿಸಿಕೊಡುವ ಅವಕಾಶವನ್ನು ತಳ್ಳಿಹಾಕಿದರು. ಗಡ್ಚಿರೋಲಿ–ಚಿಮೂರ್ ಕ್ಷೇತ್ರದ ಕಾಂಗ್ರೆಸ್ ಸಂಸದ ನಾಮ್‌ದಿಯೋ ದಾಸರಾಂ ಕಿರ್ಸನ್ ಕೇಳಿದ್ದ ಪೂರಕ ಪ್ರಶ್ನೆಗೆ ಉತ್ತರ ನೀಡಿದ ಸಚಿವೆ ನಿರ್ಮಲಾ ಸೀತಾರಾಮನ್, ಒಂದೊಮ್ಮೆ ಲಾಕರ್‌ನಲ್ಲಿರುವ ವಸ್ತು ನಷ್ಟವಾಗಿದ್ದರೆ, ಲಾಕರ್ ಬಾಗಿಲು ಮುರಿದು ಕಳವಾಗಿದ್ದರೆ ಲಾಕರ್‌ನ ವಾರ್ಷಿಕ ಬಾಡಿಗೆಗಿಂತ 100 ಪಟ್ಟು ಹೆಚ್ಚು ಹಣವನ್ನು ಗ್ರಾಹಕರಿಗೆ ಪರಿಹಾರವಾಗಿ ನೀಡಲಾಗುತ್ತದೆ ಎಂದರು.

11 ವರ್ಷಗಳ ಸೆರೆವಾಸ ಬಳಿಕ ಬಾಂಗ್ಲಾಕ್ಕೆ ತೆರಳಿ ಎಲ್‌ಇಟಿ ಶಾಖೆ ಆರಂಭ | ಭಾರತ ವಿರುದ್ಧ ಉಗ್ರ ಕೃತ್ಯಕ್ಕೆ ಸಂಚು, ದೆಹಲಿ ಭೇಟಿ | ದೆಹಲಿಯಲ್ಲಿರುವ ಬಾಂಗ್ಲಾ ಮುಸ್ಲಿಂ ಅಕ್ರಮ ವಲಸಿಗರ ನೇಮಕ–ತರಬೇತಿ

ಲಷ್ಕರೆ ಉಗ್ರ ಶಬ್ಬೀರ್ ಅಹ್ಮದ್ ಬಂಧನ

ದೆಹಲಿ: ಭಾರತದಲ್ಲಿ ಭಯೋತ್ಪಾದಕ ಕೃತ್ಯಗಳನ್ನು ನಡೆಸಲು ಹೊಂಚು ಹಾಕುತ್ತಿದ್ದ, ಅದಕ್ಕಾಗಿ ದೆಹಲಿಯಲ್ಲಿನ ಅಕ್ರಮ ಬಾಂಗ್ಲಾದೇಶೀ ವಲಸಿಗರನ್ನು ನೇಮಿಸಿಕೊಳ್ಳುತ್ತಿದ್ದ 'ಲಷ್ಕರ್–ಎ–ತಯ್ಯಬಾ'(ಎಲ್‌ಇಟಿ) ಭಯೋತ್ಪಾದಕ ಸಂಘಟನೆಯ ಪ್ರಮುಖ ಶಬ್ಬೀರ್ ಅಹ್ಮದ್ ಲೋನ್ ಎಂಬಾತನನ್ನು ದೆಹಲಿ ಪೊಲೀಸ್ ವಿಶೇಷ ಸೆಲ್‌ನ ತಂಡ ರಾಜಧಾನಿ ಗಡಿಯಲ್ಲಿ ಭಾನುವಾರ ಬಂಧಿಸಿದೆ. ಅಲ್ಲದೇ, ಶಬ್ಬೀರ್‌ನಿಂದ ಈವರೆಗೂ

ಎಲ್‌ಇಟಿಗೆ ನೇಮಕಗೊಂಡು ತರಬೇತಿ ಪಡೆಯುತ್ತಿದ್ದವರಲ್ಲಿ 7 ಬಾಂಗ್ಲಾದೇಶೀ ಮುಸ್ಲಿಂ ಯುವಕರು ಸೇರಿದಂತೆ 8 ಜನರನ್ನು ದೇಶದ ವಿವಿಧೆಡೆ ಬಂಧಿಸಲಾಗಿದೆ.

ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ಸೂಚನೆ ಮೇರೆಗೆ ಉಗ್ರ ಶಬ್ಬೀರ್ ಅಹ್ಮದ್ ಲೋನ್ ಬಾಂಗ್ಲಾದೇಶದಲ್ಲಿ ಹೊಸದಾಗಿ ಲಷ್ಕರ್ ಎ ತಯ್ಯಬಾ ಮಾದರಿ ಸಂಘಟನೆ ಕಟ್ಟಲು ಶುರು ಮಾಡಿದ್ದ. ಖಚಿತ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿದ ದೆಹಲಿ ಪೊಲೀಸರು ಮತ್ತು ಭದ್ರತಾ ಪಡೆಗಳು ರಾಜಧಾನಿ ಗಡಿಯಲ್ಲಿ ಶಬ್ಬೀರ್ ಮತ್ತು ಆತನ ಸಹಚರನೊಬ್ಬನನ್ನು ಭಾನುವಾರ ಬಂಧಿಸಿವೆ. ಇದಲ್ಲದೇ ಕಳೆದ 7 ವಾರಗಳಿಂದ ದೇಶದ ವಿವಿಧೆಡೆ ಕಾರ್ಯಾಚರಣೆ ನಡೆಸಿ ಶಬ್ಬೀರ್‌ನ ಒಟ್ಟು 8 ಸಹಚರರನ್ನು ಬಂಧಿಸಲಾಗಿದೆ. ಆ ಮೂಲಕ ಬಾಂಗ್ಲಾದಿಂದ ನಿಯಂತ್ರಿತವಾಗುತ್ತಿದ್ದ ಹೊಸ ಎಲ್‌ಇಟಿ ಮಾಡ್ಯೂಲ್ ಪತ್ತೆ ಮಾಡಿ ನಾಶಪಡಿಸಲಾಗಿದೆ ಎಂದು ದೆಹಲಿ ಪೊಲೀಸರ ವಿಶೇಷ ಘಟಕದ ಹೆಚ್ಚುವರಿ ಪೊಲೀಸ್ ಆಯುಕ್ತ ಪ್ರಮೋದ್ ಸಿಂಗ್ ಕುಶ್ವಾಹ್ ತಿಳಿಸಿದ್ದಾರೆ.

ಶಬ್ಬೀರ್ 11 ವರ್ಷಗಳ ಜೈಲು ವಾಸದ ನಂತರವೂ ಭಾರತ ವಿರೋಧಿ ಚಟುವಟಿಕೆಗಳನ್ನು ಮುಂದುವರಿಸಿದ್ದ. ಭಾರತದಲ್ಲಿ ಉಗ್ರ ಕೃತ್ಯ ನಡೆಸುವುದಕ್ಕಾಗಿ ಬಾಂಗ್ಲಾದೇಶದ ಮುಸ್ಲಿಮರನ್ನು ನೇಮಕ ಮಾಡಿಕೊಳ್ಳುತ್ತಿದ್ದ. ಅದಕ್ಕಾಗಿಯೇ ದೆಹಲಿಗೆ ಪದೇಪದೇ ಭೇಟಿ ನೀಡುತ್ತಿದ್ದ. ಶಹೀನ್‌ಭಾಗ್‌ನಲ್ಲಿ ನೆಲೆಸಿದ್ದ ಅಕ್ರಮ ವಲಸಿಗ ಬಾಂಗ್ಲಾ ಮುಸ್ಲಿಮ್ ಯುವಕರನ್ನು ಸಂಪರ್ಕಿಸುತ್ತಿದ್ದ ಎಂಬುದು ತನಿಖೆಯಿಂದ ತಿಳಿದುಬಂದಿದೆ. ಶಬ್ಬೀರ್‌ನ ವಿಚಾರಣೆ ನಡೆಸಿ ದೆಹಲಿ, ಸುತ್ತಲ ಪ್ರದೇಶಗಳಲ್ಲಿ ಅಡಗಿರುವ ಆತನ ಸಹಚರರನ್ನು ಕಂಡುಹಿಡಿಯಲು ಪ್ರಯತ್ನ ನಡೆದಿದೆ ಎಂದೂ ಕುಶ್ವಾಹ್ ವಿವರಿಸಿದ್ದಾರೆ.

ಫೆಬ್ರವರಿಯಲ್ಲಿ ಮೊದಲಿಗೆ, ದೆಹಲಿ ಮತ್ತು ದಕ್ಷಿಣ ಭಾರತದಲ್ಲಿ ಲಷ್ಕರ್–ಎ–ತಯ್ಯಬಾ ಮಾಡ್ಯೂಲ್ ಪತ್ತೆ ಹಚ್ಚಲಾಯಿತು. ಇದರ ಸದಸ್ಯರು ದೆಹಲಿ ಮತ್ತು ಕೋಲ್ಕತ್ತದ ವಿವಿಧೆಡೆ ಭಾರತ ವಿರೋಧಿ ಮತ್ತು ಭಯೋತ್ಪಾದಕರ ಪರವಾದ ಪೋಸ್ಟರ್‌ಗಳನ್ನು ಅಂಟಿಸಿದ್ದರು. ದೆಹಲಿ ಪೊಲೀಸ್ ವಿಶೇಷ ಘಟಕ ಮತ್ತು ಕೇಂದ್ರ ತನಿಖಾ ಸಂಸ್ಥೆಗಳು ತಮಿಳುನಾಡು, ಪಶ್ಚಿಮ ಬಂಗಾಳ ಸೇರಿದಂತೆ ದೇಶದ ವಿವಿಧೆಡೆ ಜಂಟಿ ಕಾರ್ಯಾಚರಣೆ ನಡೆಸಿ ಶಬ್ಬೀರ್ ಸೇರಿದಂತೆ ಒಟ್ಟು 9 ಉಗ್ರರನ್ನು ಬಂಧಿಸಿವೆ.

ಸಹಚರನೊಂದಿಗೆ ಭಾನುವಾರ ಸೆರೆ ಸಿಕ್ಕ ಎಲ್‌ಇಟಿ ಉಗ್ರ ಶಬ್ಬೀರ್ ಅಹ್ಮದ್ ಲೋನ್.

ತಿಹಾರ್ ಜೈಲಲ್ಲಿ 11 ವರ್ಷ

ಮೂಲತಃ ಶ್ರೀನಗರದವನಾದ ಶಬ್ಬೀರ್ ಅಹ್ಮದ್ ಲೋನ್, 'ಎಲ್‌ಇಟಿ'ಯಿಂದ ತರಬೇತಿ ಪಡೆದಿರುವ ಭಯೋತ್ಪಾದಕ. ಈ ಮೊದಲು 2007ರಲ್ಲಿ ಬಂಧಿತನಾಗಿ ಜೈಲು ಸೇರಿದ್ದ. ದೆಹಲಿ ಪೊಲೀಸರ ವಿಶೇಷ ಘಟಕ ಎಕೆ–47 ಬಂದೂಕುಗಳು ಮತ್ತು ಗ್ರನೇಡ್‌ಗಳನ್ನು ಹೊಂದಿದ್ದ ಶಬ್ಬೀರ್‌ನನ್ನು ಬಂಧಿಸಿತ್ತು. ಆಗಲೂ, ಈತ ಎಲ್‌ಇಟಿ ಪ್ರಮುಖ ಪಾಕಿಸ್ತಾನದ ಹಫೀಜ್ ಸಯೀದ್ ಜತೆ ನೇರ ಸಂಪರ್ಕ ಹೊಂದಿದ್ದ.ಶಬ್ಬೀರ್ 2007ರಿಂದ ತಿಹಾರ್ ಜೈಲಿನಲ್ಲಿ 11 ವರ್ಷ ಸೆರೆವಾಸ ಅನುಭವಿಸಿದ್ದ. 2018ರಲ್ಲಿ ಬಿಡುಗಡೆಯಾದ ನಂತರ ಬಾಂಗ್ಲಾದೇಶಕ್ಕೆ ತೆರಳಿ ಅಲ್ಲಿ ಎಲ್‌ಇಟಿ ಶಾಖೆ ರಚಿಸಿದ್ದ. ಭಾರತದ ವಿರುದ್ಧ ಉಗ್ರ ಚಟುವಟಿಕೆ ನಡೆಸುವುದಕ್ಕೆ ಭಾರತ ಮತ್ತು ಬಾಂಗ್ಲಾದೇಶದ ಮುಸ್ಲಿಂ ಯುವಕರನ್ನು ನೇಮಿಸಿಕೊಂಡು ತರಬೇತಿ ನೀಡುತ್ತಿದ್ದ. ಬಾಂಗ್ಲಾದೇಶದಲ್ಲಿದ್ದುಕೊಂಡೇ ಭಾರತದಲ್ಲಿ ಉಗ್ರ ಕೃತ್ಯ ನಡೆಸಲು ಸಂಚು ನಡೆಸುತ್ತಿದ್ದ. ಶಬ್ಬೀರ್ ಲೋನ್‌ಗೆ ಪಾಕ್‌ನ ಗುಪ್ತಚರ ಸಂಸ್ಥೆ ಐಎಸ್‌ಐ ಆರ್ಥಿಕವಾಗಿ ನೆರವಾಗುತ್ತಿದೆ, ಅಲ್ಲದೇ, ಶಬ್ಬೀರ್‌ನ ಎಲ್ಲಾ ಚಟುವಟಿಕೆಗಳಿಗೂ ಬೆಂಬಲ ನೀಡುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.ಶಬ್ಬೀರ್ ಈಗಾಗಲೇ ಅಕ್ರಮ ಶಸ್ತ್ರಾಸ್ತ್ರ ಪತ್ತೆ ಪ್ರಕರಣದಲ್ಲಿ 11 ವರ್ಷ ಸೆರೆವಾಸ ಅನುಭವಿಸಿಯಾಗಿದ್ದರೂ, ಆತನ ವಿರುದ್ಧ ಇನ್ನೂ 2 ಪ್ರಕರಣಗಳು ಬಾಕಿ ಇವೆ. 'ಅಕ್ರಮ ಹಣ ವರ್ಗಾವಣೆ ತಡೆ ಕಾಯಿದೆ'ಯಡಿ ಒಂದು ಪ್ರಕರಣ ಹಾಗೂ 2011ರಿಂದ ದೆಹಲಿ ಹರಿನಗರ ಪೊಲೀಸ್ ಠಾಣೆಯ ಮತ್ತೊಂದು ಅಪರಾಧ ಪ್ರಕರಣದಲ್ಲಿ ಆರೋಪಿಯಾಗಿದ್ದಾನೆ.

ಫೆ.8ರಂದು ಶುರುವಾದ ಬಂಧನ ಕಾರ್ಯಾಚರಣೆ

ಇದೇ ವರ್ಷದ ಫೆ.8ರಂದು ಕೇಂದ್ರ ಕೈಗಾರಿಕಾ ಭದ್ರತಾ ಪಡೆ(ಸಿಐಎಸ್‌ಎಫ್)ಯ ಪಾಳಿ ಮುಖ್ಯಸ್ಥರೊಬ್ಬರು 'ಜನಪಥ್ ಮೆಟ್ರೊ ಸ್ಟೇಷನ್ ಹಾಗೂ ಸುತ್ತಲ ಪ್ರದೇಶಗಳ ಗೋಡೆಗಳ ಮೇಲೆ ಭಾರತ ವಿರೋಧಿ ಮತ್ತು ಪಾಕ್ ಪರವಾದ ಹಾಗೂ ಭಯೋತ್ಪಾದಕರನ್ನು ಪ್ರಶಂಸಿಸುವ ಪೋಸ್ಟರ್‌ಗಳನ್ನು ಅಂಟಿಸಲಾಗಿದೆ' ಎಂದು ಸುಪ್ರೀಂ ಕೋರ್ಟ್ ಮೆಟ್ರೊ ನಿಲ್ದಾಣ ಸಮೀಪದ ಪೊಲೀಸ್ ಠಾಣೆಗೆ ಲಿಖಿತ ದೂರು ನೀಡುವುದರೊಂದಿಗೆ ಈ ಪ್ರಕರಣದ ತನಿಖೆ ಮೊದಲಾಯಿತು. ಆ ತನಿಖೆ ಕೊನೆಗೆ ಎಲ್‌ಇಟಿ ಉಗ್ರ ಶಬ್ಬೀರ್ ಮತ್ತು ಆತನ 8 ಸಹಚರರ ಬಂಧನದವರೆಗೆ ಬಂದು ತಲುಪಿದೆ ಎಂದು ದೆಹಲಿ ಪೊಲೀಸರ ವಿಶೇಷ ಘಟಕದ ಹೆಚ್ಚುವರಿ ಪೊಲೀಸ್ ಆಯುಕ್ತ ಪ್ರಮೋದ್ ಸಿಂಗ್ ಕುಶ್ವಾಹ್ ಸುದ್ದಿಸಂಸ್ಥೆಗೆ ಸೋಮವಾರ ತಿಳಿಸಿದ್ದಾರೆ.ಬಾಂಗ್ಲಾದೇಶಿ ಅಕ್ರಮ ವಲಸಿಗರು ಈ ಎಲ್‌ಇಟಿ ಮಾಡ್ಯೂಲ್‌ನಲ್ಲಿ ಸೇರಿಕೊಂಡಿರುವ ಬಗ್ಗೆ ಸುಳಿವು ಸಿಕ್ಕು ಆ ದಿಸೆಯಲ್ಲಿ ತನಿಖೆ ನಡೆಸಲಾಯಿತು. ದೆಹಲಿಯ ವಿವಿಧೆಡೆ ಅಡಗಿದ್ದ ಅಕ್ರಮ ಬಾಂಗ್ಲಾದೇಶೀ ವಲಸಿಗರತ್ತ ತನಿಖೆಯನ್ನು ಕೇಂದ್ರೀಕರಿಸಲಾಯಿತು. ಪರಿಣಾಮವಾಗಿ ಫೆ.15ರಂದು ದೆಹಲಿಯ ಶಹೀನ್‌ಭಾಗ್ ಪ್ರದೇಶದಲ್ಲಿ ದಾಳಿ ನಡೆಸಿ ಪಶ್ಚಿಮ ಬಂಗಾಳದ ಮಾಲ್ಡಾ ಜಿಲ್ಲೆಯ ನಿವಾಸಿ ಉಮರ್ ಫಾರೂಕ್(31) ಮತ್ತು ಬಾಂಗ್ಲಾದೇಶ ಮೂಲದ ರೊಬಿವುಲ್ ಇಸ್ಲಾಂ(31) ಎಂಬಾತನನ್ನು ಬಂಧಿಸಲಾಯಿತು. ವಿಚಾರಣೆ ವೇಳೆ ತಾನು 2025ರ ಮಾರ್ಚ್‌ನಲ್ಲಿಯೇ ಶಬ್ಬೀರ್ ಮೊಹಮ್ಮದ್ ಲೋನ್ ಭೇಟಿ ಮಾಡಿದ್ದನ್ನೂ, ಬಾಂಗ್ಲಾದೇಶೀ ಮುಸ್ಲಿಂ ವಲಸಿಗರಲ್ಲಿ ಯುವಕರನ್ನು ಆರಿಸಿ ನೇಮಕ ಮಾಡುವ ಕೆಲಸವನ್ನು ತನಗೆ ಶಬ್ಬೀರ್ ವಹಿಸಿದ್ದನ್ನೂ ಫಾರೂಕ್ ಬಾಯಿಬಿಟ್ಟ. ಬಳಿಕ ಇದೇ ವರ್ಷದ ಫೆ.6ರಂದು ರೊಬಿವುಲ್ ಇಸ್ಲಾಂ ಜತೆಗೂಡಿ ಕೋಲ್ಕತ್ತದಿಂದ ಪಟನಾ ಮಾರ್ಗವಾಗಿ ವಿಮಾನದಲ್ಲಿ ದೆಹಲಿಗೆ ಫೆ.7ರಂದು ಬಂದಿಳಿದೆ. ಜನಪಥ್ ಮೆಟ್ರೊ ಸ್ಟೇಷನ್‌ನ ಹಾಗೂ ಸುತ್ತಲ ಪ್ರದೇಶಗಳಲ್ಲಿನ ಗೋಡೆಗಳ ಮೇಲೆ 10 ಕಡೆ ಪಾಕ್ ಪರ ಮತ್ತು ಭಯೋತ್ಪಾದಕರ ಪರವಾದ ಪೋಸ್ಟರ್‌ಗಳನ್ನು ಅಂಟಿಸಿದೆವು. ಅದರ ವಿಡಿಯೊ ಮಾಡಿ ಶಬ್ಬೀರ್‌ಗೆ ಕಳುಹಿಸಿದೆವು. ಬಳಿಕ ಫೆ.8ರಂದು ರೈಲಿನಲ್ಲಿ ಕೋಲ್ಕತ್ತಾಗೆ ಮರಳಿದೆವು ಎಂದು ಫಾರೂಕ್ ತಪ್ಪೊಪ್ಪಿಕೊಂಡ ಎಂದು ಪ್ರಮೋದ್ ಸಿಂಗ್ ಕುಶ್ವಾಹ್ ವಿವರ ನೀಡಿದ್ದಾರೆ.

ಸಮಾಚಾರ ಸಣ್ಣದಲ್ಲ

ಬ್ಯಾಂಕ್ ಲಾಕರ್‌ಗೆ ಪ್ರತ್ಯೇಕ ವಿಮೆ ಅಸಾಧ್ಯ

ದೆಹಲಿ: ಗ್ರಾಹಕನೊಬ್ಬ ತನ್ನ ಲಾಕರ್‌ನಲ್ಲಿ ಎಷ್ಟು ಬೆಲೆಬಾಳುವ ವಸ್ತುಗಳನ್ನು ಇಡುತ್ತಿದ್ದಾನೆ ಎಂಬುವುದನ್ನು ದಾಖಲಿಸುವುದು ಬ್ಯಾಂಕಿಂಗ್ ನಿಯಮಗಳ ಉಲ್ಲಂಘನೆಯಾಗಿದ್ದು, ಹೀಗಾಗಿ ಲಾಕರ್‌ನಲ್ಲಿರುವ ವಸ್ತುಗಳ ಮೌಲ್ಯದ ಆಧಾರದ ಮೇಲೆ ಪ್ರತ್ಯೇಕ ವಿಮಾ ಸೌಲಭ್ಯ ನೀಡಲು ಸಾಧ್ಯವಿಲ್ಲ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೋಮವಾರ ತಿಳಿಸಿದ್ದಾರೆ. ಲೋಕಸಭೆಯ ಪ್ರಶ್ನೋತ್ತರ ಅವಧಿಯಲ್ಲಿ ಗಡ್ಚಿರೋಲೀ ಚಿಮುರ್ ಲೋಕಸಭೆ ಕ್ಷೇತ್ರದ ಸಂಸದ (ಕಾಂಗ್ರೆಸ್) ನಾಮ್ದೇವ್ ದಸರಮ್ ಕಿರ್‌ಸಾನ್ ಅವರು ಕೇಳಿದ ಪೂರಕ ಪ್ರಶ್ನೆಗೆ ಉತ್ತರಿಸಿದ ಅವರು, ಬ್ಯಾಂಕ್ ಲಾಕರ್‌ಗಳ ವಿಷಯದಲ್ಲಿ ಯಾವುದೇ ನಷ್ಟ ಸಂಭವಿಸಿದರೆ, ವಾರ್ಷಿಕ ಲಾಕರ್ ಬಾಡಿಗೆಯ 100 ಪಟ್ಟು ಮೊತ್ತವನ್ನು ಪ್ರಮಾಣಿತ ವಿಮೆಯಾಗಿ ನಿಗದಿಪಡಿಸಲಾಗಿದೆ ಎಂದಿದ್ದಾರೆ.

ಏ.4ಕ್ಕೆ ಡಾ.ಮನಮೋಹನ್ ಸಿಂಗ್ ವಿವಿ ಘಟಕೋತ್ಸವ

ಬೆಂಗಳೂರು: ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿವಿಯ 5ನೇ ವಾರ್ಷಿಕ ಘಟಿಕೋತ್ಸವವನ್ನು ಏ.4 ಶನಿವಾರದಂದು ಬೆಳಗ್ಗೆ 11.30ಕ್ಕೆ ವಿವಿಯ ಜ್ಞಾನಜ್ಯೋತಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ರಾಜ್ಯದ ರಾಜ್ಯಪಾಲರು ಹಾಗೂ ವಿವಿಯ ಕುಲಾಧಿಪತಿಗಳಾದ ಥಾವರ್‌ಚಂದ್ ಗೆಹ್ಲೋತ್, ಘಟಿಕೋತ್ಸವದ ಅಧ್ಯಕ್ಷತೆ ವಹಿಸುವರು. ಉನ್ನತ ಶಿಕ್ಷಣ ಸಚಿವ ಡಾ.ಎಂ. ಸಿ. ಸುಧಾಕರ್, ರಕ್ಷಣಾ ಸಂಶೋಧನಾ ಅಭಿವೃದ್ಧಿ ಸಂಸ್ಥೆ ಮಹಾನಿರ್ದೇಶಕ ಡಾ.ಬಿನಯ್ ಕುಮಾರ್ ದಾಸ್, ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ವಿವಿ ಕುಲಪತಿ ಪ್ರೊ.ರಮೇಶ್ ಅವರು ವಿಶ್ವವಿದ್ಯಾನಿಲಯದ ಚಟುವಟಿಕೆಗಳ ಕುರಿತು ಸಂಕ್ಷಿಪ್ತ ವರದಿ ಪ್ರಸ್ತುತಪಡಿಸುವರು. ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು, ಸಾರ್ವಜನಿಕರು ಪಾಲ್ಗೊಂಡು ಘಟಿಕೋತ್ಸವ ಯಶಸ್ವಗೊಳಿಸಲಿ ಕೋರಲಾಗಿದೆ.

ರಸಗೊಬ್ಬರ ಪೂರೈಕೆ ವ್ಯತ್ಯಯ ಆಗದು

ದೆಹಲಿ: ಇರಾನ್ ಯುದ್ಧ ನಿಲ್ಲದ ಹಿನ್ನೆಲೆಯಲ್ಲಿ ರಸಗೊಬ್ಬರ, ಎಲ್‌ಪಿಜಿ, ಪೆಟ್ರೋಲ್, ಡೀಸಲ್, ಗ್ಯಾಸ್ ಪೂರೈಕೆ ಬಗ್ಗೆ ಜನರ ಆತಂಕ ಮುಂದುವರಿದಿರುವ ಮಧ್ಯೆ, ಯೂರಿಯಾ ಸಂಗ್ರಹ ಸಾಕಷ್ಟಿದೆ, ಬೇರೆ ಬೇರೆ ಮೂಲಗಳಿಂದ ರಸಗೊಬ್ಬರ ಪೂರೈಕೆಗೆ ಪ್ರಯತ್ನಿಸಲಾಗುತ್ತಿದೆ ಎಂದು ಸರಕಾರ ಹೇಳಿದೆ. ರಸಗೊಬ್ಬರಕ್ಕೂ ಭಾರತವು ಆಮದು ಮೇಲೆ ಅವಲಂಬಿತವಾಗಿದೆ. ಹೆಚ್ಚಿನ ರಸಗೊಬ್ಬರ ಆಮದು ಗಲ್ಫ್‌ನಿಂದ ಮಾಡಲಾಗುತ್ತಿದೆ. ಪೆಟ್ರೋಲಿಯಂ ಸಚಿವಾಲಯ ನೀಡಿರುವ ಮಾಹಿತಿ ಪ್ರಕಾರ ಶೇ. 20-30ರಷ್ಟು ಯೂರಿಯ, ಶೇ. 30ರಷ್ಟು ಡಿಎಪಿಯನ್ನು ಗಲ್ಫ್‌ನಿಂದ ಆಮದು ಮಾಡಿಕೊಳ್ಳಲಾಗುತ್ತಿದೆ. ಸದ್ಯ ರಸಗೊಬ್ಬರ ದಾಸ್ತಾನು ಸಾಕಷ್ಟಿದೆ. ಕಳೆದ ವರ್ಷ ಈ ಅವಧಿಯಲ್ಲಿ 147 ಲಕ್ಷ ಟನ್ ಯೂರಿಯಾ ಇತ್ತು. ಈಗ ಅದು 180 ಲಕ್ಷ ಟನ್‌ಗಳಷ್ಟಿದೆ. ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಬೇಸಾಯ ಹೆಚ್ಚು ಇರುವುದಿಲ್ಲ, ಹೀಗಾಗಿ ಮುಂಗಾರು ಬೆಳೆಗೆ ಅಗತ್ಯವಿರುವ ಯೂರಿಯಾ ದಾಸ್ತಾನು ಮಾಡಲು ಅವಕಾಶ ಇದೆ ಎಂದು ಸರಕಾರ ತಿಳಿಸಿದೆ. ಯೂರಿಯಾ ಉತ್ಪಾದನೆ ಹೆಚ್ಚಿಸಲು ಕೇಂದ್ರ ಸರಕಾರ ಕ್ರಮ ಕೈಗೊಂಡಿದೆ. ಯೂರಿಯಾ ಘಟಕಗಳಿಗೆ ಎಲ್‌ಎನ್‌ಜಿ ಪೂರೈಕೆಯನ್ನು ಹೆಚ್ಚಿಸಲಾಗಿದೆ. ಇದರಿಂದ ಯೂರಿಯಾ ಉತ್ಪಾದನೆ ದಿನಕ್ಕೆ 12,000-15,000 ಟನ್‌ಗಳಷ್ಟು ಹೆಚ್ಚಿಗೆ ಆಗಿದೆ ಎಂದು ಪೆಟ್ರೋಲಿಯಂ ಸಚಿವಾಲಯದ ಅಧಿಕಾರಿಗಳು ಹೇಳಿದ್ದಾರೆ.

ರುಪಾಯಿ ಮೌಲ್ಯ ಕುಸಿತ ನಿರ್ಮಲಾ ಸಮರ್ಥನೆ

ದೆಹಲಿ: ದೇಶದ ಆರ್ಥಿಕತೆಯ ಮೂಲಭೂತ ಅಂಶಗಳು ಬಲಿಷ್ಠವಾಗಿದ್ದು ಇತರ ಉದಯೋನ್ಮುಖ ಮಾರುಕಟ್ಟೆ ಆರ್ಥಿಕತೆಗಳಿಗೆ ಹೋಲಿಸಿದರೆ ಅಮೆರಿಕದ ಡಾಲರ್ ಎದುರು ಭಾರತದ ರುಪಾಯಿ ಮೌಲ್ಯ ಸಂಪೂರ್ಣವಾಗಿ ಉತ್ತಮವಾಗಿ ಸಾಗುತ್ತಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸೋಮವಾರ ಹೇಳಿದ್ದಾರೆ. ಫೆಬ್ರವರಿ 28ರಂದು ಪಶ್ಚಿಮ ಏಷ್ಯಾ ಸಂಘರ್ಷ ಪ್ರಾರಂಭವಾದಾಗಿನಿಂದ, ರುಪಾಯಿ ಮೌಲ್ಯವು ಶೇಕಡಾ 4.1ರಷ್ಟು ಕುಸಿದಿದ್ದು, ಇತಿಹಾಸದಲ್ಲೇ ಮೊದಲ ಬಾರಿಗೆ ಪ್ರತಿ ಡಾಲರ್‌ಗೆ 95 ರು.ಗೆ ತಲುಪಿದೆ. ರೂಪಾಯಿ ಅಪಮೌಲ್ಯೀಕರಣದ ಕುರಿತು ಲೋಕಸಭೆಯಲ್ಲಿ ಪೂರಕ ಪ್ರಶ್ನೆಗೆ ಉತ್ತರಿಸಿದ ಸೀತಾರಾಮನ್ ಅವರು, ಭಾರತದ ಆರ್ಥಿಕತೆ ಬಲಿಷ್ಠವಾಗಿದೆ. ಇಡೀ ಜಗತ್ತು ನಮ್ಮ ಹಣಕಾಸಿನ ಕೊರತೆ ನಿರ್ವಹಣೆಯನ್ನು ಹೊಗಳುತ್ತಿದೆ. ನಮ್ಮ ವಿದೇಶೀ ವಿನಿಮಯ ಮೀಸಲು ಸಹ ಬಲಿಷ್ಠವಾಗಿದೆ ಎಂದರು. ಇತರ ಉದಯೋನ್ಮುಖ ಆರ್ಥಿಕತೆಗಳೊಂದಿಗೆ ಹೋಲಿಸಿದರೆ ರೂಪಾಯಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ ಮತ್ತು ಅದರ ಮೌಲ್ಯ ಸಂಪೂರ್ಣವಾಗಿ ಉತ್ತಮವಾಗಿದೆ ಎಂದು ನಿರ್ಮಲಾ ಸೀತಾರಾಮನ್ ಹೇಳಿದರು.

ಪಿಎನ್‌ಜಿ ಪಡೆಯದಿದ್ದರೆ ಎಲ್‌ಪಿಜಿ ಕಟ್?

ಕೊಳವೆ ಮೂಲಕ ನೈಸರ್ಗಿಕ ಅನಿಲ ಪೂರೈಕೆ (ಪಿಎನ್‌ಜಿ) ಸೌಲಭ್ಯವಿರುವ ನಗರಗಳ ಜನರಿಗೆ ಮೂರು ತಿಂಗಳಲ್ಲಿ ಎಲ್‌ಪಿಜಿಯಿಂದ ಪಿಎನ್‌ಜಿಗೆ ಅನಿಲ ಸಂಪರ್ಕ ಬದಲಾವಣೆ ಮಾಡಿಕೊಳ್ಳುವಂತೆ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ಆದೇಶಿಸಿದೆ. 90 ದಿನಗಳಲ್ಲಿ ಪಿಎನ್‌ಜಿ ಪಡೆಯದಿದ್ದರೆ ಎಲ್‌ಪಿಜಿ ಸಂಪರ್ಕ ರದ್ದುಪಡಿಸುವಂತಹ ಕಠಿಣ ಕ್ರಮದ ಎಚ್ಚರಿಕೆ ನೀಡಿದೆ. ಹಾಗಾದರೆ ಏನಿದು ಪಿಎನ್‌ಜಿ? ಹೊಸ ಸಂಪರ್ಕ ಯಾರ್ಯಾರಿಗೆ ಲಭ್ಯವಾಗಲಿದೆ? ಎಂಬ ಕುರಿತು ಸಂಪೂರ್ಣ ಮಾಹಿತಿ ಇಲ್ಲಿದೆ.

ಅನಿಲ ಸರಬರಾಜಾಗುವ ಹೊರ್ಮುಜ್ ಜಲಸಂಧಿಯಲ್ಲಿ ತೊಡಕು ಸೇರಿದಂತೆ ಭೌಗೋಳಿಕ ರಾಜಕೀಯ ಉದ್ವಿಗ್ನತೆಗಳ ನಡುವೆ ಎಲ್‌ಪಿಜಿ ಆಮದಿನ ಸಂಕಷ್ಟದ ಹಿನ್ನೆಲೆಯಲ್ಲಿ ಅನಿಲ ಭದ್ರತೆ ಮತ್ತು ಗ್ರಾಮೀಣ ಪ್ರದೇಶಗಳಿಗೆ ಎಲ್‌ಪಿಜಿ ಪೂರೈಕೆ ಹೆಚ್ಚಿಸುವ ನಿಟ್ಟಿನಲ್ಲಿ ಈ ಕ್ರಮಕ್ಕೆ ಮುಂದಾಗಿದೆ. ಪಿಎನ್‌ಜಿಯು ಸುರಕ್ಷಿತ, ಹೆಚ್ಚು ಅನುಕೂಲಕರ ಮತ್ತು ವೆಚ್ಚ-ಪರಿಣಾಮಕಾರಿ ಪರ್ಯಾಯವಾಗಿ ಪರಿಗಣಿಸಲಾಗುತ್ತದೆ, ತ್ವರಿತ ಮೂಲಸೌಕರ್ಯ ವಿಸ್ತರಣೆ ಮತ್ತು ಸುಲಭ ಲಭ್ಯತೆಗೆ ಪರಿಶೀಲನೆಗಳು ನಡೆಯುತ್ತಿವೆ. ತಾಂತ್ರಿಕ ವಾಗಿ ಪಿಎನ್‌ಜಿ ಸಂಪರ್ಕ ಸಾಧ್ಯವಾಗದವರಿಗೆ ಮಾತ್ರ ವಿನಾಯಿತಿ ನೀಡಲಾಗಿದೆ. ಆದರೆ, ಸಂಬಂಧಪಟ್ಟ ಅಧಿಕಾರಿಗಳು ದೃಢೀಕರಿಸಬೇಕು. ಎಲ್‌ಪಿಜಿ ಸಿಲಿಂಡರ್‌ಗಳ ಮೇಲಿನ ನಗರ ಅವಲಂಬನೆಯನ್ನು ಕಡಿಮೆ ಮಾಡಲು ಮತ್ತು ಗೃಹಬಳಕೆಯ ಕೊಳವೆ ಆಧಾರಿತ ನೈಸರ್ಗಿಕ ಅನಿಲ ವಿತರಣೆಯನ್ನು ಬಲಪಡಿಸಲು ಇದು ಪ್ರಮುಖ ನೀತಿ ಬದಲಾವಣೆಯನ್ನು ಸೂಚಿಸುತ್ತದೆ ಎಂದು ವರದಿ ತಿಳಿಸಿದೆ.

ಸರಕಾರ ಹೇಳುವುದೇನು?: ಭಾರತವು ಅಡುಗೆ ಅನಿಲ ಆಮದಿನ ಮೇಲೆ ಬಹುವಾಗಿ ಅವಲಂಬನೆ ಹೊಂದಿದೆ. ದೇಶೀಯವಾಗಿ ಅಗತ್ಯವಿರುವ ಎಲ್‌ಪಿಜಿ ಪೈಕಿ ಶೇ.60ರಷ್ಟು ಆಮದು ಮಾಡಲಾಗುತ್ತಿದೆ. ಗಲ್ಫ್ ದೇಶಗಳಲ್ಲಿ ತೈಲಾಗಾರಗಳಿಗೆ ಆಗಿರುವ ಹಾನಿ ಮತ್ತು ಸಾಗಣೆ ತೊಡಕುಗಳ ಹಿನ್ನೆಲೆಯಲ್ಲಿ ದೇಶೀಯ ಕೊಳವೆ ಆಧರಿತ ನೈಸರ್ಗಿಕ ಅನಿಲದ ಮೇಲೆ ಅವಲಂಬನೆ ಹೆಚ್ಚಿಸಿ ಒತ್ತಡ ಕಡಿಮೆ ಮಾಡುವತ್ತ ಸರಕಾರ ಚಿತ್ತ ಹರಿಸಿದೆ. ಸಾಗಣೆ, ಬಾಟ್ಲಿಂಗ್ ಸ್ಥಾವರಗಳು, ಸಾರಿಗೆ ಮತ್ತು ಡೀಲರ್ ನೆಟ್‌ವರ್ಕ್‌ಗಳನ್ನು ಅವಲಂಬಿಸಿರುವ ಸಿಲಿಂಡರ್ ಆಧಾರಿತ ಪೂರೈಕೆಗಿಂತ ಬಲವಾದ ಪೈಪ್‌ಲೈನ್ ಜಾಲವು ಹೆಚ್ಚು ಸ್ಥಿತಿಸ್ಥಾಪಕತ್ವವನ್ನು ಹೊಂದಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

> ದೇಶಾದ್ಯಂತ ಪಿಎನ್‌ಜಿ ಸಂಪರ್ಕ ಜಾಲ ವಿಸ್ತರಣೆಗೆ ಆಯಾ ರಾಜ್ಯಗಳು ಒತ್ತು ನೀಡಬೇಕು ಮತ್ತು ಮೇಲ್ವಿಚಾರಣೆ ಕೈಗೊಳ್ಳಬೇಕು. ಹಂತ ಹಂತವಾಗಿ ಕಾರ್ಯವಿಧಾನಗಳನ್ನು ಬಲಪಡಿಸಬೇಕು. ಅಲ್ಲದೆ, ಗ್ರಾಹಕರು ಎಲ್‌ಪಿಜಿಯಿಂದ ಪಿಎನ್‌ಜಿಗೆ ಪರಿವರ್ತನೆಗೊಳ್ಳಲು ಅಗತ್ಯ ಪ್ರೋತ್ಸಾಹ ನೀಡಬೇಕು.
> -ಪ್ರಲ್ಹಾದ್ ಜೋಶಿ ಕೇಂದ್ರ ಸಚಿವ

ಆರ್ಥಿಕವಾಗಿ ಏಕೆ ಉತ್ತಮ?: ಪಶ್ಚಿಮ ಏಷ್ಯಾ ಸಂಘರ್ಷದಿಂದಾಗಿ ಎಲ್‌ಪಿಜಿ ಪೂರೈಕೆಯ ಮೇಲಿನ ಅನಿಶ್ಚಿತತೆಯ ನಡುವೆ, ಕೇಂದ್ರವು ಭಾರತದಾದ್ಯಂತ ಪೈಪ್‌ಲೈನ್ ನೈಸರ್ಗಿಕ ಅನಿಲ (ಪಿಎನ್‌ಜಿ) ಮೂಲಸೌಕರ್ಯದ ಅಭಿವೃದ್ಧಿಯನ್ನು ವೇಗಗೊಳಿಸುತ್ತಿದೆ. ಮನೆಗಳಿಗೆ ಮಾತ್ರವಲ್ಲದೆ ಕೈಗಾರಿಕೆಗಳು ಮತ್ತು ಇತರ ವಾಣಿಜ್ಯ ಸಂಸ್ಥೆಗಳಿಗೂ ನಿರಂತರ ಇಂಧನ ಪೂರೈಕೆಯನ್ನು ಖಚಿತಪಡಿಸುತ್ತಿದೆ. ಎಲ್‌ಪಿಜಿಗೆ ಹೋಲಿಸಿದರೆ ದೀರ್ಘಾವಧಿಯಲ್ಲಿ ಕೊಳವೆ ಆಧಾರಿತ ನೈಸರ್ಗಿಕ ಅನಿಲವು (ಪಿಎನ್‌ಜಿ) ಆರ್ಥಿಕವಾಗಿ ಹೆಚ್ಚು ಅನುಕೂಕರವಾಗಿದೆ. ಆರಂಭಿಕ ಸಂಪರ್ಕ ವೆಚ್ಚವನ್ನು 2-3 ವರ್ಷಗಳಲ್ಲಿ ಮರುಪಾವತಿಸಲಾಗುತ್ತದೆ. ಸ್ಥಳೀಯ ವಿತರಣಾ ಜಾಲಗಳ ಮೇಲೆ ಅವಲಂಬಿತವಾಗಿರುವುದರಿಂದ ಪಿಎನ್‌ಜಿ ಬೆಲೆಗಳು ಸಾಮಾನ್ಯವಾಗಿ ಎಲ್‌ಪಿಜಿಗಿಂತ ಹೆಚ್ಚು ಸ್ಥಿರವಾಗಿರುತ್ತವೆ.

ಯಾರು ಅರ್ಜಿ ಸಲ್ಲಿಸಬಹುದು?

ಪಿಎನ್‌ಜಿ ಸೌಲಭ್ಯವಿರುವ ಪ್ರದೇಶದಲ್ಲಿ ವಾಸಿಸುತ್ತಿರುವ ಮತ್ತು ಉದ್ಯಮ ನಡೆಸುತ್ತಿರುವ ಯಾರೊಬ್ಬರೂ ಸಂಪರ್ಕಕ್ಕೆ ಅರ್ಜಿ ಸಲ್ಲಿಸಬಹುದು. ಮನೆ ಮಾಲೀಕರು ಮತ್ತು ಬಾಡಿಗೆದಾರರು ಸಹ ಅರ್ಜಿ ಸಲ್ಲಿಕೆಗೆ ಅರ್ಹರು. ಅಪಾರ್ಟ್‌ಮೆಂಟ್‌ಗಳಲ್ಲಿ, ವಠಾರಗಳಲ್ಲಿ, ಬಂಗಲೆ, ಸರಕಾರದ ವಸತಿ ಯೋಜನೆ, ಕಂಪನಿಗಳ ವಸತಿ ಸಮುಚ್ಚಯಗಳಲ್ಲಿ ವಾಸಿಸುತ್ತಿರುವವರು ಅರ್ಜಿ ಸಲ್ಲಿಕೆಗೆ ಅರ್ಹರಾಗಿರುತ್ತಾರೆ. ಮನೆ ಮಾಲೀಕರ ಎನ್‌ಒಸಿ ಮತ್ತು ಮನೆ ಮಾಲೀಕರ ಮಾಲೀಕತ್ವದ ದಾಖಲೆ ಸಲ್ಲಿಸುವ ಮೂಲಕ ಬಾಡಿಗೆದಾರರು ಅರ್ಜಿ ಸಲ್ಲಿಸಬಹುದಾಗಿದೆ. ಗೃಹೋಪಯೋಗಿ, ಶಾಲೆಗಳು, ಕಾಲೇಜು, ಸಮುದಾಯ ಅಡುಗೆಮನೆಗಳು ಮತ್ತು ಅಂಗನವಾಡಿಗಳಿಗೆ ಆದ್ಯತೆ ಮೇಲೆ ಪಿಎನ್‌ಜಿ ಪೂರೈಕೆಗೆ ಸರಕಾರ ಒತ್ತು ನೀಡಿದೆ.

3 ತಿಂಗಳ ಬಳಿಕ ಏನಾಗುತ್ತದೆ?

ನಿಮ್ಮ ಪ್ರದೇಶದಲ್ಲಿ ಪಿಎನ್‌ಜಿ ಸೌಲಭ್ಯ ಲಭ್ಯವಿದ್ದರೂ ನೀವು ಬದಲಾಗದಿದ್ದರೆ, ನಿಮ್ಮ ಎಲ್‌ಪಿಜಿ ಸಂಪರ್ಕವು ಸ್ವಯಂಚಾಲಿತವಾಗಿ ರದ್ದಾಗುತ್ತದೆ. ತೈಲ ಮಾರಾಟ ಸಂಸ್ಥೆಗಳು ಮೊಬೈಲ್ ಸಂದೇಶ ಮತ್ತು ಧ್ವನಿ ಸಂದೇಶದ ಮೂಲಕ ಸಂಪರ್ಕ ಕಡಿತದ ಬಗ್ಗೆ ಮಾಹಿತಿ ಒದಗಿಸುತ್ತವೆ. ಗಡುವು ಮುಗಿದ ನಂತರ ನಿಮ್ಮ ವಿಳಾಸಕ್ಕೆ ಎಲ್‌ಪಿಜಿ ಮರುಪೂರಣವನ್ನು ತೈಲ ಮಾರಾಟ ಕಂಪನಿಗಳು ಮತ್ತು ವಿತರಕರು ನಿರ್ಬಂಧಿಸುತ್ತಾರೆ. ವಸತಿ ಸಮುಚ್ಚಯಕ್ಕೆ ಪೈಪ್‌ಲೈನ್ ಅಳವಡಿಕೆಯನ್ನು ಮಾಲೀಕರು ನಿರ್ಬಂಧಿಸಿದರೆ, 3 ತಿಂಗಳ ನಂತರ ಇಡೀ ವಸತಿ ಸಂಕೀರ್ಣಕ್ಕೆ ಎಲ್‌ಪಿಜಿ ಸರಬರಾಜನ್ನು ನಿರ್ಬಂಧಿಸಬಹುದು.

ಪಿಎನ್‌ಜಿ ಗ್ರಾಹಕರು ಯಾರು?: ಅಧಿಸೂಚಿತ ಪಿಎನ್‌ಜಿ ಗ್ರಾಹಕರು ಎಂದರೆ ಕೊಳವೆ ಮೂಲಕ ನೈಸರ್ಗಿಕ ಅನಿಲ ಮೂಲಸೌಕರ್ಯ ಲಭ್ಯವಿರುವ ಅಥವಾ ಅಧಿಕೃತ ಅನಿಲ ವಿತರಣಾ ಕಂಪನಿಗಳು ಪೈಪ್‌ಲೈನ್ ಅಳವಡಿಕೆಯನ್ನು ಪೂರ್ಣಗೊಳಿಸಿದ ಪ್ರದೇಶದಲ್ಲಿ ವಾಸಿಸುತ್ತಿರುವವರಾಗಿದ್ದಾರೆ. ಹೊಸ ಆದೇಶದ ಅಡಿಯಲ್ಲಿ, ಅಂತಹ ಮನೆಗಳಿಗೆ ಪಿಎನ್‌ಜಿಗೆ ಬದಲಾಗಲು ಅಧಿಕೃತವಾಗಿ ತಿಳಿಸಲಾಗುತ್ತದೆ. ಅಧಿಸೂಚನೆ ಹೊರಡಿಸಿದ ನಂತರ, ಅವರಿಗೆ ಪಿಎನ್‌ಜಿ ಸಂಪರ್ಕ ಪಡೆಯಲು ಮೂರು ತಿಂಗಳು (90 ದಿನಗಳು) ಕಾಲಾವಕಾಶ ನೀಡಲಾಗುತ್ತದೆ. ಈ ಅವಧಿಯೊಳಗೆ ಅವರು ಎಲ್‌ಪಿಜಿಯಿಂದ ಪಿಎನ್‌ಜಿಗೆ ಸಂಪರ್ಕವನ್ನು ಬದಲಾಯಿಸದಿದ್ದರೆ, ಆ ವಿಳಾಸಕ್ಕೆ ಎಲ್‌ಪಿಜಿ ಪೂರೈಕೆಯನ್ನು ಸ್ಥಗಿತಗೊಳಿಸಲಾಗುತ್ತದೆ.

ಪಿಎನ್‌ಜಿ ಸೌಲಭ್ಯ ಎಲ್ಲಿಲ್ಲಿದೆ?: ನಿಮ್ಮ ಸ್ಥಳೀಯ ಅನಿಲ ವಿತರಕರ ಅಧಿಕೃತ ವೆಬ್‌ಸೈಟ್ ಮೂಲಕ ಸುಲಭವಾಗಿ ಪರಿಶೀಲಿಸಬಹುದು. ಪೂರೈಕೆದಾರರು ಪಿಎನ್‌ಜಿ ಲಭ್ಯತೆ ಅಥವಾ ಹೊಸ ಸಂಪರ್ಕ ವಿಭಾಗವನ್ನು ತೆರೆದಿರುತ್ತಾರೆ. ಅಲ್ಲಿ ಬಳಕೆದಾರರು ನಗರ, ಪ್ರದೇಶ ಮತ್ತು ಪಿನ್ ಕೋಡ್‌ನಂತಹ ವಿವರಗಳನ್ನು ನಮೂದಿಸಿ ಪರಿಶೀಲಿಸಬಹುದು. ಅಲ್ಲಿ ನಿಮ್ಮ ಪ್ರದೇಶವು ಈಗಾಗಲೇ ಪಿಎನ್‌ಜಿ ಸಂಪರ್ಕ ಹೊಂದಿದೆಯೇ, ನೋಂದಣಿಗೆ ಮುಕ್ತ ವಾಗಿದೆಯೇ ಅಥವಾ ಇನ್ನೂ ತಾಂತ್ರಿಕ ಕಾರ್ಯ ಸಾಧ್ಯತಾ ಪರಿಶೀಲನೆಯಲ್ಲಿದೆಯೇ ಎಂಬ ಮಾಹಿತಿ ಸಿಗುತ್ತದೆ.

ದೆಹಲಿ ಏಮ್ಸ್‌ನ ನರ್ಸಿಂಗ್ ಪದವೀಧರೆ ನಿಶಾ ಮೆಹ್ತಾ

ನೇಪಾಳ ಸಚಿವೆ ಏಮ್ಸ್ ಹಳೆ ವಿದ್ಯಾರ್ಥಿ

ದೆಹಲಿ: ಏಮ್ಸ್ ನರ್ಸಿಂಗ್ ಕಾಲೇಜಿನ ಹಳೆಯ ವಿದ್ಯಾರ್ಥಿನಿ ನಿಶಾ ಮೆಹ್ತಾಅವರು ನೇಪಾಳದ ಆರೋಗ್ಯ ಸಚಿವೆಯಾಗಿ ನೇಮಕಗೊಂಡು ಗಮನ ಸೆಳೆದಿದ್ದಾರೆ. ಈ ಬಗ್ಗೆ ಏಮ್ಸ್ ಭಾನುವಾರ ಅಧಿಕೃತ ಪ್ರಕಟಣೆ ಹೊರಡಿಸಿ ಸಂತಸ ವ್ಯಕ್ತಪ ಡಿಸಿದೆ. 'ನಮ್ಮ ಸಂಸ್ಥೆ ಯೊಬ್ಬರು ಜಾಗತಿಕ ಮಟ್ಟದಲ್ಲಿ ಮಹತ್ವದ ಹುದ್ದೆಗೆ ಏರಿರುವುದು ಹೆಮ್ಮೆಯ ಸಂಗತಿ. ಶುಶ್ರೂಷಕಿ ಯಾಗಿ ತಮ್ಮ ವೃತ್ತಿ ಜೀವನವನ್ನು ಆರಂಭಿಸಿದ ನಿಶಾ ಅವರು ಇಂದು ದೇಶದ ಆರೋಗ್ಯ ನೀತಿಗಳನ್ನು ರೂಪಿ ಸುವ ಸ್ಥಾನಕ್ಕೇರಿರು ವುದು ನರ್ಸಿಂಗ್ ಕ್ಷೇತ್ರದ ಮಹತ್ವವನ್ನು ಮತ್ತಷ್ಟು ಹೆಚ್ಚಿಸುತ್ತದೆ' ಎಂದು ಹೇಳಿದೆ.

ಏಮ್ಸ್‌ನಲ್ಲಿ ಅಧ್ಯಯನ ಮಾಡುವ ಅವಧಿಯಲ್ಲಿ ನಿಶಾ ಅವರು ಪಾಠ್ಯ ಚಟುವಟಿಕೆಗಳ ಜತೆಗೆ ವಿವಿಧ ಪಠ್ಯೇತರ ಕಾರ್ಯಕ್ರಮಗಳಲ್ಲೂ ಸಕ್ರಿಯವಾಗಿ ಭಾಗವಹಿಸಿದ್ದರು. ವಿದ್ಯಾರ್ಥಿ ನಾಯಕತ್ವ ಕಾರ್ಯಕ್ರಮಗಳಲ್ಲಿ ತೊಡಗಿಸಿ ಕೊಂಡಿದ್ದ ಅವರು, ಶಿಸ್ತಿನ ಜೀವನ ಶೈಲಿ ಮತ್ತು ಸೇವಾಭಾವದಿಂದ ಗುರುತಿಸಿಕೊಂಡಿದ್ದರು. ಇದೇ ಗುಣಗಳು ಅವರನ್ನು ಸಾರ್ವಜನಿಕ ಸೇವೆ ಮತ್ತು ಆಡಳಿತ ಕ್ಷೇತ್ರದತ್ತ ಕೊಂಡೊಯ್ದವು ಎಂದು ಸಂಸ್ಥೆ ತಿಳಿಸಿದೆ. 2006ರಿಂದ 2010ರವರೆಗೆ ನರ್ಸಿಂಗ್ ಪದವಿ ಪಡೆದ ಬಳಿಕ, ನಿಶಾ ಅವರು ಆರೋಗ್ಯ ಸೇವಾ ಕ್ಷೇತ್ರದಲ್ಲಿ ವಿವಿಧ ಹಂತಗಳಲ್ಲಿ ಸೇವೆ ಸಲ್ಲಿಸಿ ಅನುಭವ ಸಂಪಾದಿಸಿದ್ದಾರೆ. ಗ್ರಾಮೀಣ ಹಾಗೂ ಹಿಂದುಳಿದ ಪ್ರದೇಶಗಳಲ್ಲಿ ಆರೋಗ್ಯ ಸೇವೆ ಒದಗಿಸುವಲ್ಲಿ ಅವರು ತೊಡಗಿಸಿಕೊಂಡಿದ್ದು, ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಒಳನೋಟವನ್ನು ಪಡೆದುಕೊಂಡಿದ್ದಾರೆ ಎನ್ನಲಾಗಿದೆ.

ಮಾರ್ಚ್ 27ರಂದು ನಿಶಾ ಮೆಹ್ತಾ ಅವರು ನೇಪಾಳದ ಆರೋಗ್ಯ ಸಚಿವೆಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದು, ಅವರ ಮುಂದಿರುವ ಪ್ರಮುಖ ಸವಾಲುಗಳಲ್ಲಿ ಆರೋಗ್ಯ ಮೂಲಸೌಕರ್ಯ ಬಲಪಡಿಸುವುದು, ಗ್ರಾಮೀಣ ಆರೋಗ್ಯ ಸೇವೆ ಸುಧಾರಿಸುವುದು ಹಾಗೂ ಸಾರ್ವಜನಿಕ ಆರೋಗ್ಯ ನೀತಿಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವುದು ಸೇರಿವೆ. ನೇಪಾಳದ ಆರೋಗ್ಯ ಕ್ಷೇತ್ರಕ್ಕೆ ಅವರು ಮಹತ್ವದ ಕೊಡುಗೆ ನೀಡಲಿ ಹಾಗೂ ಯಶಸ್ವಿ ಆಡಳಿತ ನಡೆಸಲಿ ಎಂದು ಏಮ್ಸ್‌ನ ನರ್ಸಿಂಗ್ ಕಾಲೇಜು ಶುಭ ಹಾರೈಸಿದೆ.

ಸಾರಿಗೆ ಇಲಾಖೆ ತಲುಪದ ಶಕ್ತಿ ಯೋಜನೆಯ ಬಾಕಿ ಹಣ | ಸರಕಾರದಿಂದ 2,247 ಕೋಟಿಯಷ್ಟೇ ಬಿಡುಗಡೆ

ಪಾವತಿ ಬಾಕಿಯಿಂದ ನಷ್ಟದಲ್ಲಿ ಬಿಎಂಟಿಸಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಸರಕಾರದ ಪ್ರಮುಖ ಗ್ಯಾರಂಟಿ ಯೋಜನೆಯಾದ ಶಕ್ತಿ ಯೋಜನೆಯ ಬಾಕಿ ಹಣ ಸಾರಿಗೆ ಇಲಾಖೆಗೆ ತಲುಪಿಲ್ಲ, ಇದರಿಂದ ಬಿಎಂಟಿಸಿ ಸಂಕಷ್ಟಕ್ಕೆ ಸಿಲುಕಿದೆ ಎನ್ನುವ ಮಾತುಗಳು ಕೇಳಿ ಬರುತ್ತಿದೆ.

ರಾಜ್ಯ ಸರಕಾರದ ಮಹತ್ವಾಕಾಂಕ್ಷಿ ಶಕ್ತಿ ಯೋಜನೆಯಿಂದ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಸೌಲಭ್ಯಗಳನ್ನು ಪಡೆದಿದ್ದರೂ ಕೂಡಾ ಅದರ ಆರ್ಥಿಕ ಹೊರೆ ಬಿಎಂಟಿಸಿ ಮೇಲೆ ಬೀರಿದೆ. ಸರಕಾರದಿಂದ ಪಾವತಿಯಾಗಬೇಕಿದ್ದ ಪರಿಹಾರ ಮೊತ್ತದಲ್ಲಿ ಸುಮಾರು 850 ಕೋಟಿ ರು. ಬಾಕಿ ಉಳಿದಿರುವುದು ಇದೀಗ ಸಾರಿಗೆ ಇಲಾಖೆಯ ಚಿಂತೆಗೆ ಕಾರಣವಾಗಿದೆ. ಸರಕಾರ ಒಟ್ಟು 3,097.27 ಕೋಟಿ ರು. ಪರಿಹಾರ ನೀಡಬೇಕಿದ್ದರೂ, ಇದುವರೆಗೆ ಕೇವಲ 2,247.35 ಕೋಟಿ ರು. ಮಾತ್ರ ಬಿಡುಗಡೆ ಮಾಡಿದೆ. ಇದರಿಂದ ಬಿಎಂಟಿಸಿ ಆರ್ಥಿಕ ಸಂಕಷ್ಟ ಎದುರಿಸುತ್ತಿದೆ ಎಂದು ತಿಳಿದುಬಂದಿದೆ.

ಶಕ್ತಿ ಯೋಜನೆ ಪ್ರಾರಂಭವಾದ ನಂತರ 2026ರ ಫೆಬ್ರವರಿವರೆಗೆ ಕರ್ನಾಟಕದಾದ್ಯಂತ ಮಹಿಳೆಯರು 680.87 ಕೋಟಿ ಉಚಿತ ಪ್ರಯಾಣಗಳನ್ನು ಮಾಡಿದ್ದಾರೆ. ಅದರಲ್ಲಿ 217.62 ಕೋಟಿ ಪ್ರಯಾಣಗಳನ್ನು ಬಿಎಂಟಿಸಿ ಮೂಲಕವೇ ನೀಡಲಾಗಿದೆ. ಯೋಜನೆ ಆರಂಭಕ್ಕೂ ಮುನ್ನವೇ ಬಿಎಂಟಿಸಿ ಸುಮಾರು 1,383.86 ಕೋಟಿ ರು. ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿತ್ತು. ಇಂಧನ ಕಂಪನಿಗಳಿಗೆ ಬಾಕಿ, ಭವಿಷ್ಯ ನಿಧಿ ಮತ್ತು ಪೂರೈಕೆದಾರರಿಗೆ ಪಾವತಿಸಬೇಕಾದ ಹಣ ಸೇರಿದಂತೆ ಹಲವು ಆರ್ಥಿಕ ಒತ್ತಡಗಳು ಸಂಸ್ಥೆಯನ್ನು ಸಂಕಷ್ಟಕ್ಕೆ ದೂಡಿದ್ದವು. ಡೀಸೆಲ್ ಬೆಲೆ ಏರಿಕೆ, ಸಿಬ್ಬಂದಿ ವೇತನ ಪರಿಷ್ಕರಣೆ ಹಾಗೂ ನಿರ್ವಹಣಾ ವೆಚ್ಚಗಳ ಏರಿಕೆಯಿಂದ ಸಮಸ್ಯೆ ಮತ್ತಷ್ಟು ಗಂಭೀರವಾಗಿದೆ. ಇದರ ನಡುವೆ ಸರಕಾರ, ಶಕ್ತಿ ಯೋಜನೆಯಡಿ ಪ್ರತಿ ತಿಂಗಳು ಮುಂಗಡವಾಗಿ ಹಣ ಬಿಡುಗಡೆ ಮಾಡುತ್ತಿರುವುದಾಗಿ ತಿಳಿಸಿದ್ದು,ಬಿಎಂಟಿಸಿ ಆರ್ಥಿಕ ಸ್ಥಿರತೆಗಾಗಿ 589.20 ಕೋಟಿ ರು. ಸಾಲ ಪಡೆಯಲು ಸರಕಾರ ಭರವಸೆ ನೀಡಿದ್ದು, ಅದನ್ನು ತೀರಿಸಲು ಬಜೆಟ್ ಸಹಾಯ ಒದಗಿಸುವುದು ಸೇರಿದಂತೆ ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಹೇಳಿದೆ. ಯೋಜನೆ ಮಹಿಳೆಯರ ಪ್ರಯಾಣಕ್ಕೆ ದೊಡ್ಡ ನೆರವಾಗಿದ್ದರೂ, ಅದರ ಆರ್ಥಿಕ ಹೊರೆ ಸಾರಿಗೆ ಸಂಸ್ಥೆಗಳ ಮೇಲೆ, ವಿಶೇಷವಾಗಿ ಬಿಎಂಟಿಸಿಯ ಮೇಲೆ ಹೆಚ್ಚುತ್ತಿರುವುದು ಗಮನಾರ್ಹ ವಿಚಾರವಾಗಿದೆ. ಭವಿಷ್ಯದಲ್ಲಿ ಯೋಜನೆ ಮುಂದುವರಿಸಲು ಆರ್ಥಿಕ ಸಮತೋಲನ ಸಾಧಿಸುವುದು ಸರಕಾರದ ಮುಂದಿರುವ ಪ್ರಮುಖ ಸವಾಲಾಗಿದೆ.

ಹೊಸ ಬಸ್‌ಗಳ ಖರೀದಿ

ಸರಕಾರವು ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಬಲಪಡಿಸಲು ಕ್ರಮ ಕೈಗೊಂಡಿದ್ದು, ಡೀಸೆಲ್ ಹಾಗೂ ವಿದ್ಯುತ್ ಬಸ್‌ಗಳನ್ನು ಹೆಚ್ಚಿಸುವ ಕಾರ್ಯವನ್ನು ಕೈಗೊಳ್ಳುತ್ತಿದೆ. ಪ್ರಧಾನಮಂತ್ರಿ ಇ-ಡ್ರೈವ್ ಯೋಜನೆಯಡಿ 4,500 ಎಲೆಕ್ಟ್ರಿಕ್ ಬಸ್‌ಗಳ ಖರೀದಿಗೆ ಅನುಮೋದನೆ ನೀಡಲಾಗಿದೆ. ಜತೆಗೆ 2026-27ರ ಬಜೆಟ್‌ನಲ್ಲಿ 1,000 ಡೀಸೆಲ್ ಬಸ್‌ಗಳನ್ನು ಸೇರಿಸುವ ಘೋಷಣೆಯನ್ನೂ ಮಾಡಿದೆ.

---

207 ತಾಲೂಕುಗಳಲ್ಲಿ ಕುಡಿಯುವ ನೀರಿನ ಸಮಸ್ಯೆ

ಮೈಸೂರು: ಬೇಸಿಗೆಯ ಉಷ್ಣತೆ ಹೆಚ್ಚಾದಂತೆ ರಾಜ್ಯಾದ್ಯಂತ ಕುಡಿಯುವ ನೀರಿನ ಸಮಸ್ಯೆ ಎದುರಾಗುವ ಸಾಧ್ಯತೆಯಿದೆ ಎಂದು ರಾಜ್ಯ ಮಟ್ಟದ ಹವಾಮಾನ ವೀಕ್ಷಣಾ ಸಮಿತಿಯ ಇತ್ತೀಚಿನ ವರದಿಯು ತಿಳಿಸಿದೆ.

ಈ ಬೇಸಿಗೆಯಲ್ಲಿ 207 ತಾಲೂಕುಗಳು ನೀರಿನ ಕೊರತೆ ಯನ್ನು ಎದುರಿಸುವ ನಿರೀಕ್ಷೆಯಿದ್ದರೆ, 60 ತಾಲೂಕುಗಳು ಈಗಾಗಲೇ ನೀರಿನ ಕೊರತೆಯನ್ನು ಎದುರಿಸುತ್ತಿವೆ. ಇದಲ್ಲದೆ, 2,258 ಗ್ರಾಮ ಪಂಚಾಯಿತಿಗಳನ್ನು ದುರ್ಬಲ ಎಂದು ಗುರುತಿಸಲಾಗಿದ್ದು, 212 ಪಂಚಾಯಿತಿಗಳು ಪ್ರಸ್ತುತ ತೀವ್ರ ನೀರಿನ ಕೊರತೆಯನ್ನು ಅನುಭವಿಸುತ್ತಿವೆ.

ರಾಜ್ಯದ 31 ಜಿಲ್ಲೆಗಳಲ್ಲಿ, ಹೆಚ್ಚು ಬಾಧಿತ ತಾಲ್ಲೂಕುಗಳು ಉತ್ತರ ಕನ್ನಡ (12), ಬೆಳಗಾವಿ (14), ಕಲಬುರಗಿ (11) ಮತ್ತು ತುಮಕೂರು (10) ನಲ್ಲಿ ಕೇಂದ್ರೀಕೃತವಾಗಿವೆ. ಗ್ರಾಮ ಪಂಚಾಯಿತಿ ಮಟ್ಟದಲ್ಲಿ, ಕಲಬುರಗಿಯಲ್ಲಿ 180 ಸ್ಥಳೀಯ ಸಂಸ್ಥೆಗಳು ಬಾಧಿತವಾಗಿವೆ, ನಂತರ ಉತ್ತರ ಕನ್ನಡ (170), ಹಾವೇರಿ (138), ಮಂಡ್ಯ (130) ಮತ್ತು ಬೆಳಗಾವಿ (126) ಗ್ರಾಮಗಳು ಸೇರಿವೆ. ಬಿಕ್ಕಟ್ಟನ್ನು ತಗ್ಗಿಸಲು, ಅಧಿಕಾರಿಗಳು ನಾಲ್ಕು ಇಲಾಖಾ ನೀರಿನ ಟ್ಯಾಂಕರ್‌ಗಳು ಮತ್ತು 56 ಖಾಸಗಿ ಟ್ಯಾಂಕರ್‌ಗಳನ್ನು ನಿಯೋಜಿಸಿದ್ದಾರೆ. ನೀರಿನ ಪೂರೈಕೆಗಾಗಿ 270 ಖಾಸಗಿ ಬೋರ್‌ವೆಲ್‌ಗಳನ್ನು ಸಹ ಬಳಸಿಕೊಂಡಿದ್ದಾರೆ, ಅಲ್ಲಿಂದ 246 ಹಳ್ಳಿಗಳಿಗೆ ನೀರು ಸರಬರಾಜು ಮಾಡಲಾಗುತ್ತಿದೆ.

ಮಾರ್ಚ್‌ನಿಂದ ಮೇ ತಿಂಗಳವರೆಗಿನ ಬೇಸಿಗೆಯ ಗರಿಷ್ಠ ಅವಧಿಯಲ್ಲಿ, ರಾಜ್ಯದ ಹೆಚ್ಚಿನ ಭಾಗಗಳಲ್ಲಿ ಅಧಿಕಾರಿಗಳು ಸಾಮಾನ್ಯಕ್ಕಿಂತ ಹೆಚ್ಚಿನ ಗರಿಷ್ಠ ತಾಪಮಾನವಿರುತ್ತದೆ. ಉತ್ತರ-ಒಳಾಂಗಣ ಜಿಲ್ಲೆಗಳಲ್ಲಿ ಮತ್ತು ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ನಗರ ಸೇರಿದಂತೆ ದಕ್ಷಿಣ-ಒಳಾಂಗಣ ಕರ್ನಾಟಕದ ಆಯ್ದ ಭಾಗಗಳಲ್ಲಿ - ಮೂರರಿಂದ ಆರು ದಿನಗಳವರೆಗೆ - ಸಾಮಾನ್ಯಕ್ಕಿಂತ ಹೆಚ್ಚಿನ ಶಾಖದ ಅಲೆಯ ದಿನಗಳು ಕಂಡುಬರುವ ಸಾಧ್ಯತೆಯಿದೆ.

ಜೂನ್‌ನಿಂದ ಆಗಸ್ಟ್‌ವರೆಗೆ, ಎಲ್ ನಿನೊ ಹೊರಹೊಮ್ಮುವ ನಿರೀಕ್ಷೆಯಿದೆ (62% ಅವಕಾಶ) ಕನಿಷ್ಠ 2026 ರ ಅಂತ್ಯದವರೆಗೆ ಇರುತ್ತದೆ. ಜೂನ್ ಮತ್ತು ಸೆಪ್ಟೆಂಬರ್ ನಡುವೆ ಎಲ್ ನಿನೋ ಬೆಳೆಯುವ ಸಾಧ್ಯತೆ (70%) ಹೆಚ್ಚಾಗಿದೆ. ಏತನ್ಮಧ್ಯೆ, ಜುಲೈ ನಿಂದ ಆಗಸ್ಟ್‌ವರೆಗೆ ಗರಿಷ್ಠ ತಿಂಗಳುಗಳಲ್ಲಿ ರಾಜ್ಯವು ಮಾನ್ಸೂನ್ ವಿರಾಮದಿಂದ ದೀರ್ಘಕಾಲದ ಒಣ ಹವೆ ಕಾರಣ ಹೆಚ್ಚಿನ ಅಪಾಯ ಎದುರಿಸುತ್ತಿದೆ, ಇದರ ಪರಿಣಾಮವಾಗಿ ಗಣನೀಯ ತೇವಾಂಶ ಕೊರತೆಯ ಸಾಧ್ಯತೆ ಇದೆ, ಇದರ ಪರಿಣಾಮವಾಗಿ ಕೃಷ್ಣ ಮತ್ತು ಕಾವೇರಿ ಜಲಾನಯನ ಪ್ರದೇಶಗಳಲ್ಲಿ ಸಾಮಾನ್ಯಕ್ಕಿಂತ ಕಡಿಮೆ ಮಳೆಯಾಗುತ್ತದೆ.

> ಎಲ್ ನಿನೋ ಪರಿಸ್ಥಿತಿಗಳು ರಾಜ್ಯದಲ್ಲಿ ಮಳೆ ಕೊರತೆಗೆ ಕಾರಣವಾಗಬಹುದು. ಹೆಚ್ಚಿನ ತಾಪಮಾನವು ಕೃಷಿ ಕಾರ್ಯಾಚರಣೆಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ನೀರಿನ ಕೊರತೆಯು ಕಾಡು ಪ್ರಾಣಿಗಳು ಆಹಾರ ಮತ್ತು ನೀರನ್ನು ಹುಡುಕುತ್ತಾ ಮಾನವ ಪ್ರದೇಶಗಳಿಗೆ ಹೋಗುವ ಸಾಧ್ಯತೆಯಿದೆ.
> -ಸಿ.ಗೋವಿಂದರಾಜು, ಕೃಷಿ ವಿಜ್ಞಾನ ವಿವಿ ಪ್ರಾಧ್ಯಾಪಕ

ರಾಷ್ಟ್ರೀಯ ಜನಗಣತಿಯ ಸಮರ್ಪಕ ಮತ್ತು ಸಮಯೋಚಿತ ಕಾರ್ಯಕ್ಕಾಗಿ ಅಗತ್ಯ ಕ್ರಮ: ಡಿ.ಎಸ್.ರಮೇಶ್

ಮನೆ ಗಣತಿ, ಸ್ವಯಂಗಣತಿಗೆ ಅವಕಾಶ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಏಪ್ರಿಲ್ 1ರಿಂದ ರಾಷ್ಟ್ರೀಯ ಜನಗಣತಿ-2027ರ ಪ್ರಯುಕ್ತ ಮನೆ ಪಟ್ಟಿ, ಮನೆ ಗಣತಿ ಆರಂಭವಾಗಲಿದ್ದು, ಜನಗಣತಿ ಕಾರ್ಯವನ್ನು ಸಮರ್ಪಕವಾಗಿ ಹಾಗೂ ಸಮಯೋಚಿತವಾಗಿ ಕೈಗೊಳ್ಳುವ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಪೂರ್ವ ನಗರ ಪಾಲಿಕೆ ಆಯುಕ್ತ ಡಿ.ಎಸ್. ರಮೇಶ್ ತಿಳಿಸಿದರು.

ರಾಜ್ಯ ಸರಕಾರದ ಆದೇಶದ ಮೇರೆಗೆ ಜನಗಣತಿ-2027ರ ಪ್ರಥಮ ಹಂತದಲ್ಲಿ ಮನೆಪಟ್ಟಿ ಮತ್ತು ಮನೆ ಗಣತಿ ಕಾರ್ಯಾಚರಣೆಗೆ ಸಂಬಂಧಿಸಿದಂತೆ ಪೂರ್ವ ಸಿದ್ಧತಾ ಕಾರ್ಯಗಳನ್ನು ವೇಗಗೊಳಿಸಲಾಗಿದ್ದು, ನಾಗರಿಕರು ತಮ್ಮ ಮನೆ ಹಾಗೂ ಕುಟುಂಬದ ಮೂಲಭೂತ ಮಾಹಿತಿಯನ್ನು ನಿಖರವಾಗಿ ದಾಖಲಿಸುವುದು ಅತ್ಯಂತ ಮಹತ್ವದ್ದಾಗಿರುತ್ತದೆ ಎಂದರು.

ಕೇಂದ್ರ ಗೃಹ ಸಚಿವಾಲಯ 2027ರ ಜನಗಣತಿಯನ್ನು ಎರಡು ಹಂತಗಳಲ್ಲಿ ನಡೆಸಲು ಉದ್ದೇಶಿಸಿದ್ದು, ಮೊದಲ ಹಂತದಲ್ಲಿ ಮನೆಪಟ್ಟಿ ಮತ್ತು ಮನೆ ಗಣತಿಯನ್ನು ಏಪ್ರಿಲ್ 01, 2026ರಿಂದ ಏಪ್ರಿಲ್ 15, 2026ರ ವರೆಗೆ 15 ದಿನಗಳ ಕಾಲ ವೆಬ್ ಪೋರ್ಟಲ್ https://se.census.gov.in ಮೂಲಕ ಸ್ವಯಂ-ಗಣತಿಗೆ ಅವಕಾಶ ಕಲ್ಪಿಸಿರುತ್ತದೆ. ಮನೆಯ ಯಾವುದೇ ಒಬ್ಬ ಸದಸ್ಯರು ಸುಮಾರು 15-20 ನಿಮಿಷಗಳ ಅವಧಿಯಲ್ಲಿ ಸ್ವಯಂ-ಗಣತಿ ಮಾಡಿ ಮನೆಯ ವಿವರಗಳನ್ನು ಒದಗಿಸಬಹುದು ಮತ್ತು ಮೊಬೈಲ್/ಇಮೇಲ್‌ನಲ್ಲಿ ಸ್ವಯಂ-ಗಣತಿ ಐಡಿಯನ್ನು ಪಡೆಯಬಹುದಾಗಿರುತ್ತದೆ ಎಂದರು.

ಜನಗಣತಿ-2027ರ ಎರಡನೇ ಹಂತದಲ್ಲಿ 16ನೇ ಏಪ್ರಿಲ್ 2026ರಿಂದ 15ನೇ ಮೇ 2026ರ ವರೆಗೆ ಗಣತಿದಾರರು ಮನೆ-ಮನೆಗೆ ಭೇಟಿ ನೀಡಿ ಮನೆಪಟ್ಟಿ ಮತ್ತು ಮನೆ ಗಣತಿ ಮಾಹಿತಿಯನ್ನು ಸಂಗ್ರಹಿಸಲಿದ್ದಾರೆ. ಗಣತಿದಾರರು ಮನೆಗೆ ಭೇಟಿ ನೀಡಿದಾಗ ದೃಢೀಕರಿಸಲು ಮತ್ತು ಸ್ವಯಂ-ಗಣತಿ ದತ್ತಾಂಶದ ಅಂತಿಮ ಸಲ್ಲಿಕೆಗಾಗಿ ಸ್ವಯಂ-ಗಣತಿ ಐ.ಡಿಯನ್ನು ಗಣತಿದಾರ ರೊಂದಿಗೆ ಹಂಚಿಕೊಳ್ಳಬೇಕಾಗಿ ರುತ್ತದೆ. ಸ್ವಯಂ ಗಣತಿ ಪ್ರಕ್ರಿಯೆಗಾಗಿ ನಿಗದಿಪಡಿಸಿರುವ ಅವಧಿಯಲ್ಲಿ ನಾಗರಿಕರು ತಮ್ಮ ಮಾಹಿತಿಯನ್ನು ದಾಖಲಿಸಲು ಅವಕಾಶವಿದ್ದು, ಇದರಿಂದ ಜನಗಣತಿ ಕಾರ್ಯದಲ್ಲಿ ಪಾರದರ್ಶಕತೆ, ವೇಗ ಮತ್ತು ನಿಖರತೆ ಹೆಚ್ಚಲಿದೆ ಎಂದು ಆಯುಕ್ತರು ವಿವರಿಸಿದರು.

ಸಮಗ್ರ ಅಭಿವೃದ್ಧಿಗೆ ಪೂರಕ ಹೆಜ್ಜೆ

ಜನಗಣತಿ-2027ರ ಮಾಹಿತಿಯ ಆಧಾರದ ಮೇಲೆ ಭವಿಷ್ಯದ ನಗರ ಯೋಜನೆ, ಮೂಲಸೌಕರ್ಯ ಅಭಿವೃದ್ಧಿ ಹಾಗೂ ಸಾರ್ವಜನಿಕ ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತದೆ. ಆದ್ದರಿಂದ ಎಲ್ಲಾ ನಾಗರಿಕರು ಸ್ವಯಂ ಗಣತಿಯಲ್ಲಿ ತಮ್ಮ ಸರಿಯಾದ ಮಾಹಿತಿಯನ್ನು ಒದಗಿಸುವ ಮೂಲಕ ಜನಗಣತಿ ಪ್ರಕ್ರಿಯೆಯಲ್ಲಿ ನಾಗರಿಕರ ಸಹಭಾಗಿತ್ವ ಅತ್ಯಂತ ಅಗತ್ಯವಾಗಿದೆ ಎಂದು ತಿಳಿಸಿದರು. ಪೂರ್ವ ನಗರ ಪಾಲಿಕೆ ವ್ಯಾಪ್ತಿಯ ಸಾರ್ವಜನಿಕರು ಸ್ವಯಂ ಗಣತಿ ವ್ಯವಸ್ಥೆಯನ್ನು ಬಳಸಿಕೊಂಡು ತಮ್ಮ ಮಾಹಿತಿಯನ್ನು ಸಲ್ಲಿಸುವಂತೆ ಹಾಗೂ ಗಣತಿದಾರ ಸಿಬ್ಬಂದಿಗಳಿಗೆ ಸಹಕರಿಸುವಂತೆ ಈ ಮೂಲಕ ಸಾರ್ವಜನಿಕರಲ್ಲಿ ಆಯುಕ್ತರು ಮನವಿ ಮಾಡಿದರು.

ಗಡುವಿಗೂ ಮುನ್ನ ಲೋಕಸಭೆಗೆ ಅಮಿತ್ ಶಾ ಸೋಮವಾರ ಮಾಹಿತಿ

ನಕ್ಸಲಿಸಂ ಬಹುತೇಕ ನಿರ್ಮೂಲನೆ

ದೆಹಲಿ: ದೇಶದಲ್ಲಿ ನಕ್ಸಲಿಸಂನ ಮೂಲ ಅಭಿವೃದ್ಧಿಯ ಕೊರತೆ, ಬಡತನ ಅಥವಾ ಅನ್ಯಾಯವಲ್ಲ, ಬದಲಿಗೆ ಒಂದು ಸಿದ್ಧಾಂತ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು.

ಲೋಕಸಭೆಯಲ್ಲಿ ಎಡಪಂಥೀಯ ಉಗ್ರವಾದದ ವಿರುದ್ಧದ ಅಭಿಯಾನದ ಕುರಿತು ನಡೆದ ಚರ್ಚೆಗೆ ಪ್ರತಿಕ್ರಿಯಿಸಿದ ಅಮಿತ್ ಶಾ, ನಕ್ಸಲಿಸಂ ವಿರುದ್ಧ ಸರಕಾರ ತೆಗೆದುಕೊಂಡ ಕ್ರಮಗಳು ಮತ್ತು ಅದರ ಭವಿಷ್ಯದ ಕಾರ್ಯತಂತ್ರದ ಬಗ್ಗೆ ಲೋಕಸಭೆಗೆ ಸೋಮವಾರ ಮಾಹಿತಿ ನೀಡಿದರು

ನಕ್ಸಲ್ ಸಿದ್ಧಾಂತದಿಂದ ಪ್ರೇರಿತವಾದ ಹಿಂಸಾಚಾರವನ್ನು ಬೇರುಸಹಿತ ಕಿತ್ತೊಗೆಯಲು ಕೇಂದ್ರ ಸರಕಾರ ದೃಢವಾದ ಕ್ರಮ ಕೈಗೊಳ್ಳುತ್ತಿದೆ, ಈ ಸರಕಾರದ ಅವಧಿಯಲ್ಲಿ ಭಾರತವು ನಕ್ಸಲಿಸಂನಿಂದ ಸಂಪೂರ್ಣವಾಗಿ ಮುಕ್ತವಾಗಲಿದೆ ಎಂಬ ವಿಶ್ವಾಸವನ್ನು ಶಾ ವ್ಯಕ್ತಪಡಿಸಿದರು.

1970 ರಿಂದ 2026 ರವರೆಗೆ ಜನರು ನಕ್ಸಲ್‌ವಾದದ ಪಿಡುಗನ್ನು ಅನುಭವಿಸಿದ್ದಾರೆ. ಇಂದು ಬಸ್ತಾರ್‌ನಲ್ಲಿ ನಕ್ಸಲ್‌ವಾದ ಬಹುತೇಕ ನಿರ್ಮೂಲನೆಯಾಗಿದೆ. ಬಸ್ತಾರ್‌ನ ಪ್ರತಿಯೊಂದು ಹಳ್ಳಿಯಲ್ಲಿ ಶಾಲೆ, ಪಡಿತರ ಅಂಗಡಿ, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಸಾಮಾನ್ಯ ಆರೋಗ್ಯ ಕೇಂದ್ರಗಳಿವೆ. ಪಡಿತರ ಚೀಟಿಗಳು ಮತ್ತು ಆಧಾರ್ ಕಾರ್ಡ್‌ಗಳನ್ನು ವಿತರಿಸಲಾಗಿದೆ. ಗ್ಯಾಸ್ ಸ್ಟೌವ್‌ಗಳನ್ನು ವಿತರಿಸಲಾಗುತ್ತಿದೆ. 1970ರಿಂದ ಬಸ್ತಾರ್‌ನ ಜನರಿಗೆ ಈ ಪ್ರಯೋಜನಗಳು ಏಕೆ ಸಿಗಲಿಲ್ಲ ಎಂಬುದನ್ನು ನಕ್ಸಲಿಸಂ ಅನ್ನು ಪ್ರತಿಪಾದಿಸುವವರಿಗೆ ಅಮಿತ್ ಶಾ ತಿರುಗೇಟು ನೀಡಿದರು.

ರೆಡ್ ಟೆರರ್‌ನ ನೆರಳಿನಿಂದ ಅಭಿವೃದ್ಧಿಗೆ ಅಡ್ಡಿಯಾಯಿತು. ಇಂದು ಅದರ ನೆರಳು ತೆಗೆದು ಹಾಕಲ್ಪಟ್ಟಿದೆ. ಬಸ್ತಾರ್ ಅಭಿವೃದ್ಧಿ ಹೊಂದುತ್ತಿದೆ. ಶಸ್ತ್ರಾಸ್ತ್ರಗಳನ್ನು ಕೈಗೆತ್ತಿಕೊಳ್ಳುವ ಯಾರಾದರೂ ಉತ್ತರಿಸ ಬೇಕಾಗುತ್ತದೆ ಎಂದು ಅಮಿತ್ ಶಾ ಹೇಳಿದರು. ಸರಕಾರ ಸೂಕ್ಷ್ಮವಾಗಿದ್ದು ಎಲ್ಲಾ ಸಮಸ್ಯೆಗಳನ್ನು ಆಲಿಸಲು ಮತ್ತು ಅವುಗಳನ್ನು ಪರಿಹರಿಸಲು ಬಯಸುತ್ತದೆ ಎಂದರು.



ಕಾಂಗ್ರೆಸ್ ವಿರುದ್ಧ ಟೀಕೆ

ಕಾಂಗ್ರೆಸಿಗರು ದೇಶವನ್ನು ಆಳಿದ 60 ವರ್ಷಗಳ ಕಾಲ ಬುಡಕಟ್ಟು ಜನಾಂಗದವರಿಗೆ ಅಭಿವೃದ್ಧಿ ಏಕೆ ತಲುಪಲಿಲ್ಲ? ಅವರಿಗೆ ವಸತಿ ಮತ್ತು ನೀರನ್ನು ನಿರಾಕರಿಸಲಾಗಿತ್ತು. ಶಾಲೆಗಳು, ಬ್ಯಾಂಕಿಂಗ್ ಸೌಲಭ್ಯಗಳು ಅಥವಾ ಮೊಬೈಲ್ ಟವರ್‌ಗಳ ಹಾಕಲು ಸಾಧ್ಯವಾಗಿರಲಿಲ್ಲ. ಈ ಬಗ್ಗೆ ಕಾಂಗ್ರೆಸ್ ಉತ್ತರಿಸಬೇಕು ಎಂದು ಅಮಿತ್ ಶಾ ಹೇಳಿದರು.

ಶೈಕ್ಷಣಿಕ ಸಂಸ್ಥೆಗಳಲ್ಲಿ ಕ್ಯಾಂಪಸ್ ರಾಜಕೀಯ ಸಂಪೂರ್ಣ ನಿಷೇಧ
ಭಾರತದೊಂದಿಗೆ ನಿಕಟ ಕಾರ್ಯ ನಿರ್ವಹಣೆ: ಬಾಲೆನ್ ಶಾ

ನೇಪಾಳದಲ್ಲಿ ಕ್ರಿಯಾಯೋಜನೆ ಅನಾವರಣ

ಕಠ್ಮಂಡು: ನೇಪಾಳದ ನೂತನ ಪ್ರಧಾನಿ ಬಲೇಂದ್ರ ಬಾಲೆನ್ ಶಾ ಅಧಿಕಾರ ಸ್ವೀಕರಿ ಸಿದ ಕೇವಲ 48 ಗಂಟೆಗಳಲ್ಲಿ ಸರಕಾರಿ ಸಂಸ್ಥೆಗಳ ಸುಧಾರಣೆಗಾಗಿ 100 ಅಂಶಗಳ ಬೃಹತ್ ಕ್ರಿಯಾ ಯೋಜನೆಯನ್ನು ಅನಾವರಣಗೊಳಿಸುವ ಮೂಲಕ ಇಡೀ ದೇಶದಲ್ಲೇ ಸಂಚಲನ ಸೃಷ್ಟಿಸಿದ್ದಾರೆ. ಈ ಯೋಜನೆಯಲ್ಲಿ ಅತ್ಯಂತ ವಿವಾದಾತ್ಮಕ ಹಾಗೂ ಸಾಹಸದ ನಿರ್ಧಾರವೆಂದರೆ ಶೈಕ್ಷಣಿಕ ಸಂಸ್ಥೆಗಳಲ್ಲಿ ಕ್ಯಾಂಪಸ್ ರಾಜಕೀಯವನ್ನು ಸಂಪೂರ್ಣವಾಗಿ ನಿಷೇಧಿಸಿರು ವುದಾಗಿದೆ.

ಮಾರ್ಚ್ 5ರಂದು ನಡೆದ ಚುನಾವಣೆಯಲ್ಲಿ ರಾಷ್ಟ್ರೀಯ ಸ್ವತಂತ್ರ ಪಾರ್ಟಿಯ ಭರ್ಜರಿ ಗೆಲುವಿನ ನಂತರ ನೇಪಾಳದ ಅತ್ಯಂತ ಕಿರಿಯ ಪ್ರಧಾನಿಯಾಗಿ 35 ವರ್ಷದ ಬಾಲೆನ್ ಶಾ ಅಧಿಕಾರಕ್ಕೇರಿದ್ದರು. ಯುವಜನತೆಯ ಅಪಾರ ಬೆಂಬಲ ದೊಂದಿಗೆ ಜನಾದೇಶ ಪಡೆದ ಅವರು, ಈಗ ದಶಕಗಳ ಹಳೆಯ ರಾಜಕೀಯ ವ್ಯವಸ್ಥೆಯನ್ನು ಆಳವಾಗಿ ಬದಲಿಸಲು ಮುಂದಾಗಿದ್ದಾರೆ.

ಕ್ಯಾಂಪಸ್ ರಾಜಕೀಯಕ್ಕೆ ಮುಕ್ತಿ: ರಾಜಕೀಯ ಪಕ್ಷಗಳ ಅಂಗಸಂಸ್ಥೆಗಳಾದ ವಿದ್ಯಾರ್ಥಿ ಸಂಘಟನೆಗಳನ್ನು ಕ್ಯಾಂಪಸ್‌ಗಳಿಂದ ಹೊರಹಾಕಲು ಆದೇಶಿಸಲಾಗಿದೆ. ಇವುಗಳ ಬದಲಿಗೆ 90 ದಿನಗಳಲ್ಲಿ ಪಕ್ಷಾತೀತ ವಿದ್ಯಾರ್ಥಿ ಮಂಡಳಿಗಳನ್ನು ಸ್ಥಾಪಿಸುವ ನಿರ್ಧಾರ.

ಆಡಳಿತ ಯಂತ್ರದ ಶುದ್ಧೀಕರಣ: ಸರಕಾರಿ ನೌಕರರು ಮತ್ತು ಶಿಕ್ಷಕರು ಯಾವುದೇ ರಾಜಕೀಯ ಪಕ್ಷದ ಸದಸ್ಯತ್ವ ಹೊಂದುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ಪೌರತ್ವ ಇಲ್ಲದಿದ್ದರೂ ಪದವಿ ಪ್ರವೇಶಕ್ಕೆ ಅವಕಾಶ.

ಶಿಕ್ಷಣದಲ್ಲಿ ಬದಲಾವಣೆ: ಆಕ್ಸ್‌ಫರ್ಡ್, ಸೇಂಟ್ ಕ್ಸೇವಿಯರ್ಸ್‌ನಂತಹ ವಿದೇಶಿ ಹೆಸರು ಹೊಂದಿರುವ ಶಿಕ್ಷಣ ಸಂಸ್ಥೆಗಳು ಈ ವರ್ಷದಿಂದ ಕಡ್ಡಾಯವಾಗಿ ಮೂಲ ನೇಪಾಳಿ ಹೆಸರು ಅಳವಡಿಕೆ.

ರಾಜಕೀಯ ವಿರೋಧಿಗಳ ವಿರುದ್ಧ ಕ್ರಮ

ಬಾಲೆನ್ ಶಾ ಸರಕಾರವು ತನ್ನ ಸುಧಾರಣಾ ಕ್ರಮಗಳ ಜತೆಗೆ ರಾಜಕೀಯ ವಿರೋಧಿಗಳ ವಿರುದ್ಧವೂ ಸಮರ ಸಾರಿದೆ. ಕಳೆದ ವರ್ಷ ನಡೆದ ಜೆನ್ ಝೀ ಪ್ರತಿಭಟನೆಯನ್ನು ಹಿಂಸಾತ್ಮಕವಾಗಿ ಹತ್ತಿಕ್ಕಿದ ಆರೋಪದ ಮೇಲೆ ಮಾಜಿ ಪ್ರಧಾನಿ ಕೆ.ಪಿ. ಶರ್ಮಾ ಓಲಿ ಮತ್ತು ರಮೇಶ್ ಲೇಖಕ್ ಅವರನ್ನು ಶನಿವಾರ ಬಂಧಿಸಲಾಗಿತ್ತು. ಪ್ರತಿಭಟನೆಯಲ್ಲಿ 77 ಜನರು ಮೃತಪಟ್ಟಿದ್ದರಲ್ಲದೆ ಅಪ್ರಾಪ್ತ ಬಾಲಕಿಯ ಮೇಲೆ ದೌರ್ಜನ್ಯ ಎಸಗಿದ ಆರೋಪದ ಮೇಲೆ ಶಾಸಕಿ ರೇಖಾ ಶರ್ಮಾ ಅವರನ್ನು ಬಂಧಿಸಲಾಗಿದೆ.

ಭದ್ರತೆ ಇಲ್ಲವೆಂದು ಟಿವಿಕೆ ದೂರು

ಚೆನ್ನೈ: ಇದೇ ಮೊದಲ ಬಾರಿಗೆ ಚುನಾವಣಾ ಅಖಾಡಕ್ಕೆ ಇಳಿದಿರುವ ಟಿವಿಕೆ ಅಧ್ಯಕ್ಷ ಹಾಗೂ ನಟ ವಿಜಯ್ ಅವರಿಗೆ ಚೆನ್ನೈನಲ್ಲಿ ಸೂಕ್ತ ಪೊಲೀಸ್ ಭದ್ರತೆ ಮತ್ತು ಬೆಂಗಾವಲು ಇಲ್ಲ ಎಂದು ಆರೋಪಿಸಿ ಟಿವಿಕೆ ಸೋಮವಾರ ತಮಿಳುನಾಡಿನ ಮುಖ್ಯ ಚುನಾವಣಾ ಅಧಿಕಾರಿಗೆ ದೂರು ನೀಡಿದೆ. ಸೂಕ್ತ ಭದ್ರತೆ ಇಲ್ಲದ ಕಾರಣ ವಿಲ್ಲಿವಕ್ಕಂನಲ್ಲಿ ಪಕ್ಷವು ತನ್ನ ನಿಗದಿತ ಮತ್ತು ಅಧಿಕೃತವಾಗಿ ಅನುಮತಿ ಪಡೆದ ಪ್ರಚಾರವನ್ನು ರದ್ದುಗೊಳಿಸಿದೆ. ಅಲ್ಲಿ ನಟ-ರಾಜಕಾರಣಿ ಮತ್ತು ಟಿವಿಕೆ ಮುಖ್ಯಸ್ಥ ವಿಜಯ್ ಜನಸಮೂಹವನ್ನು ಉದ್ದೇಶಿಸಿ ಮಾತನಾಡಬೇಕಿತ್ತು ಎಂದು ಟಿವಿಕೆ ಹೇಳಿದೆ. ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಕಟಿಸಲಾದ ಪತ್ರದಲ್ಲಿ, ಸೋಮವಾರ ಪ್ರಚಾರದ ಸಮಯದಲ್ಲಿ ಚುನಾವಣೆಗೆ ಸಂಬಂಧಿಸಿದ ಭದ್ರತಾ ವ್ಯವಸ್ಥೆಗಳಲ್ಲಿ ಗಂಭೀರ ಲೋಪ ಎದ್ದು ಕಾಣುತ್ತಿತ್ತು. ಪೆರಂಬೂರಿನಿಂದ ಕೊಳತ್ತೂರಿಗೆ ಬೆಂಗಾವಲು ಪಡೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿತ್ತು ಎಂದು ಪಕ್ಷ ಹೇಳಿಕೊಂಡಿದೆ

ಸಮಾಚಾರ ಸಣ್ಣದಲ್ಲ

ಮೋದಿಗೆ ಧರ್ಮದ ಕುರಿತು ಕಾಳಜಿ ಇಲ್ಲ

ಪತ್ತನಂತಿಟ್ಟ: ಪ್ರಧಾನಿ ನರೇಂದ್ರ ಮೋದಿ ಅವರು ಶಬರಿಮಲೆ ವಿಚಾರದಲ್ಲಿ ಮೌನ ವಹಿಸಿದ್ದು, ಧರ್ಮದ ಬಗ್ಗೆ ಅವರಿಗೆ ಕಿಂಚಿತ್ತೂ ಕಾಳಜಿ ಇಲ್ಲ ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಾಗ್ದಾಳಿ ನಡೆಸಿದ್ದಾರೆ. ಅಡೂರ್‌ನಲ್ಲಿ ನಡೆದ ಯುಡಿಎಫ್ ಚುನಾವಣಾ ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ರಾಹುಲ್, ಕಾಂಗ್ರೆಸ್ ಈ ಬಾರಿ ಚುನಾವಣೆಯಲ್ಲಿ ಸಿಪಿಐ(ಎಂ) – ಬಿಜೆಪಿಯನ್ನು ಎದುರಿಸುತ್ತಿದೆ. ಕಾಂಗ್ರೆಸ್ ಪಕ್ಷವು ಬಿಜೆಪಿ ಹಾಗೂ ಆರ್‌ಎಸ್‌ಎಸ್‌ನ ಸೈದ್ಧಾಂತಿಕ ವಿಷಯಗಳ ವಿರುದ್ಧ ಹೋರಾಟ ನಡೆಸುತ್ತಿದೆ ಎಂದು ಹೇಳಿದ್ದಾರೆ. ಕೇರಳ ಭೇಟಿ ವೇಳೆ ಪ್ರಧಾನಿ ಮೋದಿ ಶಬರಿಮಲೆ ಚಿನ್ನ ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಹೇಳಿಕೆಗಳನ್ನು ನೀಡದೆ ಇರುವುದು ಎಲ್‌ಡಿಎಫ್ ಜತೆ ಬಿಜೆಪಿ ಒಟ್ಟಾಗಿ ಕೆಲಸ ಮಾಡುತ್ತಿದೆ. ಪ್ರಧಾನಿ ಮೋದಿ ಅವರಿಗೆ ಧರ್ಮ ಮತ್ತು ದೇವಾಲಯಗಳು ಕೇವಲ ಮತ ಗಳಿಕೆಯ ಸಾಧನಗಳು. ಚುನಾವಣೆ ಸಂದರ್ಭದಲ್ಲಿ ಲಾಭ ವಾಗುತ್ತದೆ ಎಂದರೆ ಮಾತ್ರ ಮಾತನಾಡುತ್ತಾರೆ. ವಾಸ್ತವವನ್ನು ಅವರು ಎಂದೂ ಮಾತನಾಡುವುದಿಲ್ಲ. ಯುಡಿಎಫ್ ಅಧಿಕಾರಕ್ಕೆ ಬಂದಾಗ ದೇವಾಲಯಕ್ಕೆ ಸಂಬಂಧಿಸಿದ ಅಕ್ರಮಗಳಿಗೆ ಕಾರಣರಾದವರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಭರವಸೆ ನೀಡಿದ್ದಾರೆ.

ನೈಜೀರಿಯಾ: ಗುಂಡಿನ ದಾಳಿಗೆ 20 ಮಂದಿ ಬಲಿ

ಅಬುಜಾ: ನೈಜೀರಿಯಾದ ಪ್ಲಾಟೌ ರಾಜ್ಯದ ಗರಿಯಾ ವಾಯೆ ಪ್ರದೇಶದಲ್ಲಿ ನಡೆದ ಗುಂಡಿನ ದಾಳಿಯಲ್ಲಿ ಕನಿಷ್ಠ 20 ಮಂದಿ ಸಾವಿಗೀಡಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಭಾನುವಾರ ರಾತ್ರಿ ಬೈಕ್‌ನಲ್ಲಿ ಬಂದ ಅನೇಕ ಬಂದೂಕುಧಾರಿಗಳು ಜನರತ್ತ ಗುಂಡು ಹಾರಿಸಿದರು. ರಾಜ್ಯ ಸರಕಾರವು ಸ್ಥಳದಲ್ಲಿ 48 ಗಂಟೆ ನಿಷೇಧಾಜ್ಞೆ ಹೊರಡಿಸಿದೆ. ಸದ್ಯ ಯಾವುದೇ ಗುಂಪು ದಾಳಿಯ ಹೊಣೆ ಹೊತ್ತುಕೊಂಡಿಲ್ಲ. ಮುಸ್ಲಿಂ ಫುಲಾನಿ ಕುರಿಗಾಹಿಗಳು ಹಾಗೂ ಕ್ರೈಸ್ತ ಸಮುದಾಯದ ಕೃಷಿಕರ ಗುಂಪುಗಳ ನಡುವೆ ಭೂಮಿ ಮತ್ತು ಮೇವಿನ ವಿಚಾರವಾಗಿ ಆಗಾಗ ಮಾರಕ ಘರ್ಷಣೆಗಳು ನಡೆಯುವುದು ಈ ಪ್ರದೇಶದಲ್ಲಿ ಸಾಮಾನ್ಯವಾಗಿದೆ. ಹಲವು ಕ್ರಿಮಿನಲ್ ಗುಂಪುಗಳೂ ಇಲ್ಲಿ ಸಕ್ರಿಯವಾಗಿವೆ.

ರಾಷ್ಟ್ರ ರಾಜಧಾನಿ ಸುತ್ತ ಹಲವೆಡೆ ಭಾರೀ ಮಳೆ

ದೆಹಲಿ: ರಾಷ್ಟ್ರ ರಾಜಧಾನಿ ಸುತ್ತಮುತ್ತ ಭಾರೀ ಮಳೆಯಾಗುತ್ತಿದ್ದು, ಭಾರತೀಯ ಹವಾಮಾನ ಇಲಾಖೆ ಯೆಲ್ಲೋ ಅಲರ್ಟ್ ಘೋಷಿಸಿದೆ. ಧೂಳು, ಬಿರುಗಾಳಿ ಸೇರಿದಂತೆ ಸಾಧಾರಣ ಮಳೆಯಾಗುವ ಸಾಧ್ಯತೆಯಿದ್ದು ದೆಹಲಿಯ ಉತ್ತರ, ವಾಯುವ್ಯ, ಮಧ್ಯ ಹಾಗೂ ದಕ್ಷಿಣ, ಗುರುಗ್ರಾಮ್ ಮತ್ತು ಫರಿದಾಬಾದ್‌ನಲ್ಲಿ ಮಳೆಯಾಗಲಿದೆ ಎಂದು ತಿಳಿಸಿದೆ. ದೆಹಲಿಯಲ್ಲಿ ತಾಪಮಾನವು 32 ಡಿಗ್ರಿ ಸೆಲ್ಸಿಯಸ್ ಮತ್ತು 34 ಡಿಗ್ರಿ ಸೆಲ್ಸಿಯಸ್ ನಡುವೆ ಗರಿಷ್ಠ ಮಟ್ಟವನ್ನು ತಲುಪಲಿದ್ದು, ಕನಿಷ್ಠ 20.4 ಡಿಗ್ರಿ ಸೆಲ್ಸಿಯಸ್‌ಗೆ ಇಳಿಯುವ ಸಾಧ್ಯತೆ ಇದೆ. ಮೀರತ್, ಬಾಗ್‌ಪತ್, ಮುಜಫರ್‌ನಗರ, ಸಹರಾನ್‌ಪುರ ಮತ್ತು ಬಿಜ್ನೋರ್ ಸೇರಿದಂತೆ ಉತ್ತರ ಪ್ರದೇಶದ ಕೆಲವು ಭಾಗಗಳಲ್ಲಿ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಹರಿಯಾಣದ ಫರುಖ್‌ನಗರ, ಕೋಸಾಲಿ, ಮಹೇಂದರ್‌ಗಢ, ಸೋಹ್ನಾ, ರೇವಾರಿ, ಪಲ್ವಾಲ್, ನರ್ನಾಲ್, ಬವಾಲ್ ಮತ್ತು ನುಹ್ ಹಾಗೂ ರಾಜಸ್ಥಾನದ ಭಿವಾಡಿ ಮತ್ತು ಖೈರ್ಥಲ್ ಪ್ರದೇಶಗಳಲ್ಲಿ8 ಗಂಟೆಗೆ 60ರಿಂದ 80 ಕಿ.ಮೀ ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆಯಿದೆ ಎಂದು ಹವಾಮಾನ ಸಂಸ್ಥೆ ತಿಳಿಸಿದೆ.

ನೆತನ್ಯಾಹು ಸರಕಾರದ ಬಜೆಟ್ ಅಂಗೀಕಾರ

ಟೆಲ್ ಅವೀವ್: ರಾತ್ರಿಯಿಡೀ ನಡೆದ ಸುದೀರ್ಘ ಅಧಿವೇಶನದಲ್ಲಿ ಇಸ್ರೇಲ್ ಸಂಸತ್ತು ಸೋಮವಾರ ತನ್ನ ವಾರ್ಷಿಕ ಬಜೆಟ್ ಅನ್ನು ಅಂಗೀಕರಿಸಿದೆ. ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ಸರಕಾರವು ಅಕ್ಟೋಬರ್–ನವೆಂಬರ್‌ವರೆಗೆ ಅಧಿಕಾರದಲ್ಲಿ ಮುಂದುವರಿಯುವುದನ್ನು ಇದು ಖಚಿತಪಡಿಸಿದೆ. ಅವಧಿಪೂರ್ವ ಚುನಾವಣೆಗಳನ್ನು ತಪ್ಪಿಸಲು ಏಪ್ರಿಲ್ 1ರ ಮೊದಲು ಬಜೆಟ್ ಅನ್ನು ಅಂಗೀಕರಿಸಬೇಕಾಗಿತ್ತು. ಆದಾಗ್ಯೂ, ನೆತನ್ಯಾಹು ಬಯಸಿದರೆ ಅದಕ್ಕೂ ಮೊದಲು ಅವಧಿಪೂರ್ವ ಚುನಾವಣೆಗಳನ್ನು ಘೋಷಿಸುವ ಹಕ್ಕನ್ನು ಇನ್ನೂ ಕಾಯ್ದಿರಿಸಿದ್ದಾರೆ. ನೆತನ್ಯಾಹು ಸರಕಾರದ ನಾಲ್ಕು ವರ್ಷಗಳ ಅಧಿಕಾರಾವಧಿಯು ಕೊನೆಯ ಘಟ್ಟದಲ್ಲಿದ್ದು, ಈ ವರ್ಷ ಅಕ್ಟೋಬರ್ ಅಂತ್ಯದ ವೇಳೆಗೆ ಚುನಾವಣೆ ನಡೆಸಬೇಕಾಗುತ್ತದೆ. ಇರಾನ್ ಜತೆಗಿನ ಯುದ್ಧದ ವೆಚ್ಚಗಳು ಏರುತ್ತಿರುವಾಗ ಮತ್ತು ಗಾಜಾದ ಎರಡು ವರ್ಷಗಳ ಯುದ್ಧದಿಂದಾಗಿ ದೇಶ ಇನ್ನೂ ಚೇತರಿಸಿಕೊಳ್ಳುತ್ತಿರುವಾಗಲೇ 'ತೀವ್ರ ಸಂಪ್ರದಾಯವಾದಿ' ಸಮುದಾಯಗಳಿಗೆ ಬಜೆಟ್‌ನಲ್ಲಿ ಹೆಚ್ಚಿನ ಹಣ ಮೀಸಲಿಟ್ಟಿರುವುದನ್ನು ವಿರೋಧ ಪಕ್ಷಗಳು ತೀವ್ರವಾಗಿ ಖಂಡಿಸಿವೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಮಲಬಾರ್ ಪ್ರದೇಶ ಎರಡು ಒಕ್ಕೂಟಗಳಿಗೂ ಪ್ರತಿಷ್ಠೆಯ ಕಣ

ಕೇರಳದ ಉತ್ತರ ಭಾಗದ ನಾಲ್ಕು ಜಿಲ್ಲೆಗಳು ಮಲಬಾರ್ ಕೇರಳ ಪ್ರದೇಶವೆಂದೇ ಜನಜನಿತವಾಗಿದೆ. ಮಂಜೇಶ್ವರ, ಕಾಸರಗೋಡು ವಿಧಾನಸಭಾ ಕ್ಷೇತ್ರಗಳನ್ನು ಹೊರತುಪಡಿಸಿದರೆ ಉಳಿದ ಮಲಬಾರ್ ಕೇರಳ ಪ್ರದೇಶದಲ್ಲಿ ಯುಡಿಎಫ್ ಮತ್ತು ಎಲ್‌ಡಿಎಫ್ ಒಕ್ಕೂಟಗಳದ್ದೇ ಪ್ರತಿಷ್ಠೆಯ ಚುನಾವಣಾ ಕಣ. ಎರಡೂ ಪಕ್ಷಗಳಿಗೂ ಈ ಸಲದ ಇಲ್ಲಿನ ಫಲಿತಾಂಶ ನಿಜಕ್ಕೂ ನಿರ್ಣಾಯಕ.

ನರೇಂದ್ರ ಪಾರೆಕಟ್

ಗಡಿನಾಡು ಪ್ರದೇಶವಾಗಿರುವ ಮಂಜೇಶ್ವರ ಮತ್ತು ಕಾಸರಗೋಡು ವಿಧಾನಸಭಾ ಕ್ಷೇತ್ರವನ್ನು ಹೊರತುಪಡಿಸಿದರೆ ಕೇರಳ ವಿಧಾನಸಭಾ ಕ್ಷೇತ್ರಗಳ ಪೈಕಿ ಮಲಬಾರ್ ಪ್ರದೇಶವು ಎಲ್.ಡಿ.ಎಫ್–ಯು.ಡಿ.ಎಫ್ ಒಕ್ಕೂಟಗಳದ್ದೇ ಶಕ್ತಿಕೇಂದ್ರ, ಹಾಗಾಗಿ ಪ್ರತೀ ವಿಧಾನಸಭಾ ಚುನಾವಣೆಗಳಲ್ಲಿ ಎರಡೂ ಒಕ್ಕೂಟಗಳ ನಡುವೆಯೇ ಇಲ್ಲಿ ನೇರವಾದ ಹಣಾಹಣಿ.

ಮತ ಬೇಟೆ

ಕಾಸರಗೋಡು ಜಿಲ್ಲೆಯ ಉದುಮ, ಕಾಞಂಗಾಡ್ ಮತ್ತು ತೃಕ್ಕರಿಪುರ್‌ನಲ್ಲಿ ಇದುವರೆಗೆ ಎಲ್‌ಡಿಎಫ್ ಮತ್ತು ಯುಡಿಎಫ್‌ನ ಅಭ್ಯರ್ಥಿಗಳು ಗೆಲ್ಲುತ್ತಾ ಬಂದಿದ್ದಾರೆ, ಹಾಗಾಗಿ ಆ 3 ಕ್ಷೇತ್ರಗಳಲ್ಲಿ ನಡೆಯುತ್ತಿರುವುದು ಕೇರಳದ ಆಡಳಿತ–ವಿರೋಧ ಪಕ್ಷಗಳ ನಡುವಿನ ಪ್ರತಿಷ್ಠೆಯ ಕಾದಾಟ.

ಕರ್ನಾಟಕ ಗಡಿ ಪ್ರದೇಶವನ್ನು ಹೊಂದಿರುವ ಕಣ್ಣೂರು ಜಿಲ್ಲೆಯಲ್ಲಿರುವ 11 ವಿಧಾನಸಭಾ ಕ್ಷೇತ್ರಗಳೆಂದರೆ ಪಯ್ಯನ್ನೂರ್, ಕಲ್ಲಶ್ಯೇರಿ, ತಳಿಪರಂಬ, ಇರಿಕ್ಕೂರ್, ಆಯಿಕ್ಕೋಡ್, ಕಣ್ಣೂರ್, ಧರ್ಮಾಡಂ, ತಲಶ್ಯೇರಿ, ಕೂತುಪರಂಬ, ಮಟ್ಟಾನ್ನೂರ್ ಮತ್ತು ಪೇರಾವೂರ್.

ಈ ವಿಧಾನಸಭಾ ಕ್ಷೇತ್ರಗಳ ಪೈಕಿ ಧರ್ಮಾಡಂ ವಿಧಾನಸಭಾ ಕ್ಷೇತ್ರವು ಕಳೆದ ಹಲವಾರು ಚುನಾವಣೆಗಳಲ್ಲಿ ಪ್ರಾಮುಖ್ಯತೆಯನ್ನು ಹೊಂದಿದೆ, ಕೇರಳದ ಈಗಿನ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ಸ್ಪರ್ಧಿಸುವ ಕ್ಷೇತ್ರವೂ ಇದಾಗಿದೆ. 4 ಬಾರಿ ಬೇರೆ ಕ್ಷೇತ್ರಗಳಿಂದ ಈ ಹಿಂದೆ ಆಯ್ಕೆಯಾಗಿದ್ದ ಅವರು, ಈ ಕ್ಷೇತ್ರದಿಂದ 2016 ಮತ್ತು 2021ರ ವಿಧಾನಸಭಾ ಚುನಾವಣೆಯಲ್ಲಿ ಸತತವಾಗಿ ಗೆದ್ದು ಬಂದವರು. 8 ಗ್ರಾಮ ಪಂಚಾಯತ್‌ಗಳನ್ನೊಳಗೊಂಡ ಧರ್ಮಾಡಂ ವಿಧಾನಸಭಾ ಕ್ಷೇತ್ರದ 2016ರ ಚುನಾವಣೆಯಲ್ಲಿ ಪಿಣರಾಯಿ ವಿಜಯನ್ ಅವರು ಸುಮಾರು 37,000 ಅಂತರದಲ್ಲಿ ನಿಕಟ ಪ್ರತಿಸ್ಪರ್ಧಿ ಕಾಂಗ್ರೆಸ್‌ನ ದಿವಾಕರನ್ ಅವರನ್ನು ಸೋಲಿಸಿದರು, ಆ ಮೂಲಕ ಎಲ್‌ಡಿಎಫ್‌ನ ಒಕ್ಕೂಟದ ಪರವಾಗಿ ವಿರೋಧ ಪಕ್ಷದ ನಾಯಕ ಸ್ಥಾನದಲ್ಲಿದ್ದ ಅವರು ಮುಖ್ಯಮಂತ್ರಿ ಸ್ಥಾನಕ್ಕೇರಿದರು. ಆಗ ಅಲ್ಲಿ ಬಿಜೆಪಿಗೆ ಒಟ್ಟು 12,000 ಮತಗಳಷ್ಟೇ ಬಂದಿದ್ದವು.

2021ರ ಚುನಾವಣೆಯಲ್ಲಿ ಕಣ್ಣೂರು ಜಿಲ್ಲೆಯ ಅದೇ ಧರ್ಮಾಡಂ ಕ್ಷೇತ್ರದಲ್ಲೇ ಮತ್ತೆ ಪಿಣರಾಯಿ ವಿಜಯನ್ ಅವರು ಚುನಾವಣೆಗೆ ಸ್ಪರ್ಧಿಸಿದರು. ಆ ಸಲ ಯುಡಿಎಫ್‌ನ ರಘುನಾಥನ್ ವಿರುದ್ಧ 50 ಸಾವಿರ ಅಂತರದಲ್ಲಿ ಗೆದ್ದು ಮತ್ತೆ 2 ಬಾರಿಗೆ ಕೇರಳದ ಮುಖ್ಯಮಂತ್ರಿಯಾಗಿ ಆಯ್ಕೆಯಾದವರು. ಆ ಸಲ ಅಲ್ಲಿ ಸ್ಪರ್ಧಿಸಿದ್ದ ಬಿಜೆಪಿಯ ಅಭ್ಯರ್ಥಿ ಸಿ.ಕೆ. ಪದ್ಮನಾಭನ್ ಅವರಿಗೆ 15,000 ಮತಗಳು ಬಿದ್ದವು.

2021ರ ಕೇರಳ ಚುನಾವಣೆಯಲ್ಲಿ ಕಣ್ಣೂರು ಜಿಲ್ಲೆಯಲ್ಲಿರುವ ಒಟ್ಟು 11 ಕ್ಷೇತ್ರಗಳ ಪೈಕಿ 8 ಕ್ಷೇತ್ರವನ್ನು ಗೆಲ್ಲಲು ಎಲ್‌ಡಿಎಫ್ ಯಶಸ್ವಿಯಾದರೆ, ಕೇವಲ 3 ಕ್ಷೇತ್ರಗಳ ಗೆಲುವಿನೊಂದಿಗೆ ಯುಡಿಎಫ್ ತೃಪ್ತಿಪಟ್ಟುಕೊಂಡಿತ್ತು.

ಮಲಬಾರ್ ಕೇರಳದ ಮತ್ಸ್ಯೋದ್ಯಮ.

ಉದ್ಯೋಗಾಧಾರಿತ ಪ್ರದೇಶ

ಕೇರಳದ ಮಲಬಾರ್ ಪ್ರದೇಶ ಹಲವಾರು ಚಿಕ್ಕ ವ್ಯಾಪಾರ ತಾಣಗಳ ಕೇಂದ್ರವಾಗಿದೆ. ಇಲ್ಲಿನ ಸಾವಿರಾರು ಮಂದಿ ಈಗಲೂ ಗಲ್ಫ್ ಪ್ರದೇಶಗಳಲ್ಲಿ ಚಿಕ್ಕ ಪುಟ್ಟ ಉದ್ಯೋಗದಲ್ಲಿದ್ದಾರೆ. ವಿಶಾಲವಾದ ಅರಬ್ಬೀ ಸಮುದ್ರವನ್ನು ಹೊಂದಿರುವುದರಿಂದ ಮತ್ಸ್ಯೋದ್ಯಮ ಇಲ್ಲಿನ ಒಂದು ಪ್ರಮುಖ ವೃತ್ತಿಯಾಗಿದೆ.

ಈ ಸಲದ ಚುನಾವಣೆಯಲ್ಲಿ ಧರ್ಮಾಡಂ ಕ್ಷೇತ್ರದಲ್ಲಿ ಪಿಣರಾಯ್ ವಿಜಯನ್ ವಿರುದ್ಧ ಕಾಂಗ್ರೆಸ್ ಪಕ್ಷವು ವಿ.ಪಿ. ಅಬ್ದುಲ್ ರಶೀದ್ ಅವರನ್ನು ಕಣಕ್ಕಿಳಿಸಿದರೆ, ಬಿಜೆಪಿಯು ಕೆ. ರಂಜಿತ್ ಅವರನ್ನು ಕಣಕ್ಕಿಳಿಸಿದೆ. ಕಳೆದೆರಡು ಬಾರಿಯಂತೆ ಈ ಸಲವೂ ಪಿಣರಾಯಿ ವಿಜಯನ್ ಅವರಿಗೆ ಗೆಲುವು ಕಟ್ಟಿಟ್ಟ ಬುತ್ತಿ ಎಂದು ಧರ್ಮಾಡಂ ವಿಧಾನಸಭಾ ಕ್ಷೇತ್ರದ ಮತದಾರರ ಮನದಾಳದ ಮಾತು.

3 ವಿಧಾನಸಭಾ ಕ್ಷೇತ್ರಗಳ ವಯನಾಡ್: ಮಲಬಾರ್ ಕೇರಳದ ಮತ್ತೊಂದು ಜಿಲ್ಲೆಯಾಗಿರುವ ವಯನಾಡ್ ಕೇವಲ 3 ವಿಧಾನಸಭಾ ಕ್ಷೇತ್ರಗಳನ್ನು ಹೊಂದಿದೆ. 2024, ಜನವರಿ 30ರಂದು ಇಲ್ಲಿ ನಡೆದ ದುರಂತದಲ್ಲಿ 300 ಹೆಚ್ಚು ಮಂದಿ ಅಸುನೀಗಿ, ಸಾವಿರಾರು ಮಂದಿ ಮನೆ ಕಳೆದುಕೊಂಡಿದ್ದರು. ಇದೀಗ ರಾಜ್ಯ ಸರಕಾರವು ಕೇಂದ್ರ ಸರಕಾರ ಮತ್ತು ನೆರೆರಾಜ್ಯಗಳ ನೆರವಿನಿಂದ ಬಹಳಷ್ಟು ಮಂದಿಗೆ ವುನಾಡಿನಲ್ಲಿ ಪುನರ್ವಸತಿ ಕಲ್ಪಿಸಿದೆ.

ಕೇರಳದ ಪ್ರಮುಖ ಪ್ರವಾಸಿ ತಾಣ ಮತ್ತು ಗಿರಿಧಾಮವಾಗಿರುವ ವಯನಾಡ್ ಕರ್ನಾಟಕದ ಗಡಿ ಪ್ರದೇಶವೂ ಹೌದು. ಈ ಜಿಲ್ಲೆಯಲ್ಲಿ ದಕ್ಷಿಣ ಕೇರಳದ ವಲಸಿಗರ ಪ್ರಮಾಣವೇ ಹೆಚ್ಚು, ಕ್ರಿಶ್ಚನ್ ಜನಾಂಗದ ಹೆಚ್ಚಿನ ಸಂಖ್ಯೆಯಲ್ಲಿ ಈ ಜಿಲ್ಲೆಯಲ್ಲಿದ್ದಾರೆ. ವಯನಾಡ್ ಜಿಲ್ಲೆಯು ಕೇರಳದ ಯುಡಿಎಫ್ ಒಕ್ಕೂಟದ ಪ್ರಮುಖ ಅಂಗಪಕ್ಷವಾದ ಕಾಂಗ್ರೆಸ್‌ನ ಭದ್ರಕೋಟೆ. 2009ರಿಂದ ಇಲ್ಲಿಯವರೆಗೂ ಕಾಂಗ್ರೆಸ್ ಲೋಕಸಭಾ ಸದಸ್ಯರೇ ಈ ಜಿಲ್ಲೆಯನ್ನು ಸಂಸತ್‌ನಲ್ಲಿ ಪ್ರತಿನಿಧಿಸುತ್ತಿದ್ದಾರೆ.

ಕಾಂಗ್ರೆಸ್ ಪಕ್ಷದ ನಾಯಕ ರಾಹುಲ್ ಗಾಂಧಿ 2019 ಮತ್ತು 2024ರ ಸಂಸತ್ ಚುನಾವಣೆಯಲ್ಲಿ ವಯನಾಡ್ ಲೋಕಸಭಾ ಕ್ಷೇತ್ರದಿಂದಲೇ ಗೆದ್ದವರು. ಆದರೆ 2024ರಲ್ಲಿ ಅವರು 2 ಲೋಕಸಭಾ ಕ್ಷೇತ್ರದಲ್ಲಿ ಗೆದ್ದ ಕಾರಣ ವಯನಾಡ್ ಕ್ಷೇತ್ರದಲ್ಲಿ ಸಹೋದರಿ ಪ್ರಿಯಾಂಕ ಗಾಂಧಿಯನ್ನು ಉಪ ಚುನಾವಣೆಯಲ್ಲಿ ನಿಲ್ಲಿಸಿ ಭರ್ಜರಿ ಅಂತರದಲ್ಲಿ ಗೆಲ್ಲಿಸಿದರು.

ವಯನಾಡ್ ಜಿಲ್ಲೆಯಲ್ಲಿರುವ ಮೂರು ವಿಧಾನಸಭಾ ಕ್ಷೇತ್ರಗಳೆಂದರೆ ಕಲ್ಪೆಟ್ಟ, ಸುಲ್ತಾನ್ ಬತ್ತೇರಿ ಮತ್ತು ಮಾನಂದವಾಡಿ. ಕಲ್ಪೆಟ್ಟಾ ವಿಧಾನಸಭಾ ಕ್ಷೇತ್ರವು ಕಲ್ಪೆಟ್ಟಾ ನಗರಸಭೆ ಮತ್ತು 10 ಗ್ರಾಮ ಪಂಚಾಯತ್‌ಗಳನ್ನು ಒಳಗೊಂಡಿದೆ. ವಿಧಾನಸಭಾ ಸದಸ್ಯರಾಗಿದ್ದ ಟಿ. ಸಿದ್ದಿಕ್ ಅವರನ್ನೇ ಕಾಂಗ್ರೆಸ್ ಪಕ್ಷವು ಈ ಕ್ಷೇತ್ರದಲ್ಲಿ ಮತ್ತೆ ಈ ಬಾರಿ ಕಣಕ್ಕಿಳಿಸಿದೆ. ಮಾನಂದವಾಡಿ ವಿಧಾನಸಭಾ ಕ್ಷೇತ್ರವು ಮಾನಂದವಾಡಿ ನಗರಸಭೆ ಅಲ್ಲದೇ ಆರು ಗ್ರಾಮ ಪಂಚಾಯತ್‌ಗಳನ್ನು ಒಳಗೊಂಡಿದೆ. ಆ ಕ್ಷೇತ್ರವನ್ನು ಎಲ್‌ಡಿಎಫ್ ಧುರೀಣ ಒ.ಆರ್. ಕೇಳು ಅವರು ಪ್ರತಿನಿಧಿಸುತ್ತಿದ್ದು, ಈ ಸಲವೂ ಅವರೇ ಆ ಕ್ಷೇತ್ರದಲ್ಲಿ ಸ್ಪರ್ಧಿಸುತ್ತಿದ್ದಾರೆ.

ಸುಲ್ತಾನ್ ಬತ್ತೇರಿ ವಿಧಾನಸಭಾ ಕ್ಷೇತ್ರವು ಸುಲ್ತಾನ್ ಬತ್ತೇರಿ ನಗರಸಭೆ ಅಲ್ಲದೆ 6 ಗ್ರಾಮ ಪಂಚಾತ್‌ಗಳನ್ನು ಒಳಗೊಂಡಿದೆ. ಕಳೆದ 3 ವಿಧಾನಸಭಾ ಚುನಾವಣೆಯಲ್ಲೂ ಕಾಂಗ್ರೆಸ್ ಪಕ್ಷವು ಇಲ್ಲಿ ಅಧಿಪತ್ಯ ಮೆರೆಯುತ್ತಿದ್ದು, ಐ.ಸಿ. ಬಾಲಕೃಷ್ಣನ್ ಶಾಸಕರಾಗಿದ್ದು, ಈ ಸಲದ ಚುನಾವಣೆಯಲ್ಲೂ ಅವರು ಯುಡಿಎಫ್ ಅಭ್ಯರ್ಥಿಯಾಗಿ ಮತ್ತೆ ಚುನಾವಣಾ ಕಣದಲ್ಲಿದ್ದಾರೆ.

ಕೋಯಿಕ್ಕೋಡ್ (ಕೋಝಿಕ್ಕೋಡ್) ಹಣಾಹಣಿ: ಉತ್ತರ ಕೇರಳದ ಪ್ರಮುಖ ಜಿಲ್ಲೆ ಎನಿಸಿರುವ ಕೋಯಿಕ್ಕೋಡ್ ಜಿಲ್ಲೆ 13 ವಿಧಾನಸಭಾ ಕ್ಷೇತ್ರಗಳನ್ನು ಹೊಂದಿದೆ. ಈ ಜಿಲ್ಲೆಯಲ್ಲಿ ಬಹು ಹಿಂದಿನಿಂದಲೂ ಯುಡಿಎಫ್ ಮತ್ತು ಎಲ್‌ಡಿಎಫ್ ಮಧ್ಯೆಯೇ ಪ್ರಮುಖ ಸ್ಪರ್ಧೆ. ಬಾಲುಶ್ಯೇರಿ, ಬೇಪೂರ್, ಎಲತ್ತೂರ್, ಕೊಡುವಳ್ಳಿ, ಕೋಝಿಕ್ಕೋಡ್–ಉತ್ತರ, ಕೋಝಿಕ್ಕೋಡ್–ದಕ್ಷಿಣ, ಕುನ್ನಮಂಗಲಂ, ಕುಟ್ಯಾಡಿ, ನಾದಾಪುರಂ, ಪೇರಾಂಬ್ರ, ಕೊಯಿಲಾಂಡಿ, ತಿರುವಂಬಾಡಿ ಮತ್ತು ವಡಕೆರ ವಿಧಾನಸಭಾ ಕ್ಷೇತ್ರವು ಈ ಜಿಲ್ಲೆಗೊಳಪಟ್ಟಿದೆ.

ವಯನಾಡ್ ದುರಂತ ಪ್ರದೇಶದ ಪುನರ್ವಸತಿ.

ಆಯುರ್ವೇದದ ಪ್ರಮುಖ ತಾಣ

ಕೇರಳದ ಪ್ರಮುಖ ಆಯುರ್ವೇದ ಸಂಸ್ಥೆಗಳಿರುವುದು ಮಲಬಾರ್ ಪ್ರದೇಶದಲ್ಲೇ. ಅಲ್ಲಿನ ಪ್ರಖ್ಯಾತ ಕೋಟಕ್ಕಲ್ ಆಯುರ್ವೇದ ಸಂಸ್ಥೆಯ ನೂರಾರು ಶಾಖೆಗಳು ಕರ್ನಾಟಕದಲ್ಲಿ ಇರುವುದರಿಂದ ನಮ್ಮ ರಾಜ್ಯದ ಸಾವಿರಾರು ಮಂದಿ ನೇರ ತಪಾಸಣೆಗೆ ಅಲ್ಲಿನ ಆಯುರ್ವೇದ ಚಿಕಿತ್ಸೆಯನ್ನೂ ಆಶ್ರಯಿಸಿಕೊಂಡಿದ್ದಾರೆ.

ಕಳೆದ ಚುನಾವಣೆಯಲ್ಲಿ ಕೋಯಿಕ್ಕೋಡ್ ಜಿಲ್ಲೆಯಿಂದ 9 ಮಂದಿ ಎಲ್‌ಡಿಎಫ್ ಅಭ್ಯರ್ಥಿಗಳು ಆಯ್ಕೆಯಾದರೆ, 4 ಮಂದಿ ಯುಡಿಎಫ್ ಅಭ್ಯರ್ಥಿಗಳು ಶಾಸಕರಾಗಿದ್ದಾರೆ. ಕೇರಳ ರಾಜ್ಯದಲ್ಲಿ ಕೊಚ್ಚಿನ್, ತಿರುವನಂತಪುರಂ ಹೊರತುಪಡಿಸಿದರೆ ಕೋಯಿಕ್ಕೋಡ್ ಪ್ರಮುಖ 3ನೇ ಪ್ರಮುಖ ನಗರ ಮತ್ತು ಮಲಬಾರ್ ಕೇರಳದ ಪ್ರಧಾನ ಕೇಂದ್ರ ಎಂಬ ಹೆಗ್ಗಳಿಕೆ ಹೊಂದಿದೆ. ಇದೊಂದು ಉತ್ತಮ ವ್ಯಾಪಾರ ಕೇಂದ್ರವೂ ಹೌದು. ಹಿಂದೂ ಮತದಾರಲ್ಲದೆ, ಮುಸ್ಲಿಂ ಮತದಾರರು ಕೋಯಿಕ್ಕೋಡ್ ಜಿಲ್ಲೆಯಲ್ಲಿ ಬಹಳಷ್ಟಿದ್ದಾರೆ.

ಕೋಯಿಕ್ಕೋಡ್ ಜಿಲ್ಲೆಯಲ್ಲಿ ವಡಗರ ಮತ್ತು ಕೋಯಿಕ್ಕೋಡ್ ಸಂಸತ್ ಕ್ಷೇತ್ರಗಳಿದ್ದು 2024ರ ಸಂಸತ್ ಕ್ಷೇತ್ರಗಳನ್ನು ಕಾಂಗ್ರೆಸ್ ಪಕ್ಷ ಗೆದ್ದಿತ್ತು. ಆದರೆ ವಿಧಾನಸಭಾ ಸಭಾ ಚುನಾವಣೆಗಳ ಸಂದರ್ಭದಲ್ಲಿ ಈ ಜಿಲ್ಲೆಯ ಮತದಾರರು ಎಡಪಕ್ಷಗಳಿಗಳಿಗೆ ಹೆಚ್ಚಿನ ಮನ್ನಣೆ ನೀಡುತ್ತಿದ್ದಾರೆಂಬುದು ವೈಶಿಷ್ಟ್ಯವಾಗಿದೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಜಿಲ್ಲೆಯಲ್ಲಿ ಬಿಜೆಪಿ ಶೇ.15 ಮತ ಗಳಿಸಿ ತನ್ನ ಛಾಪನ್ನೂ ಮೂಡಿಸಿತ್ತು. ಈ ಚುನಾವಣೆಯಲ್ಲೂ ಎಲ್‌ಡಿಎಫ್–ಯುಡಿಎಫ್ ಅಬ್ಬರದ ಪ್ರಚಾರದ ಮಧ್ಯೆ ಬಿಜೆಪಿಯೂ ಭರ್ಜರಿ ಪ್ರಚಾರ ಕಣದಲ್ಲಿದೆ.

ಕೇರಳ ರಾಜ್ಯದ ಮತ್ತೊಂದು ಪ್ರಮುಖ ಮಲಬಾರ್ ಪ್ರದೇಶ ಎಂದು ಜನಜನಿತವಾಗಿರುವ ಮಲಪ್ಪುರಂ ಜಿಲ್ಲೆಯು ಆ ರಾಜ್ಯದ ಮುಸ್ಲಿಂ ಧರ್ಮೀಯರು ಹೆಚ್ಚಿನ ಸಂಖ್ಯೆಯಲ್ಲಿರುವ ಪ್ರದೇಶವಾಗಿದ್ದು, ಒಟ್ಟು 16 ವಿಧಾನಸಭಾ ಕ್ಷೇತ್ರವನ್ನು ಮಲಪ್ಪುರಂ ಹೊಂದಿದೆ. ಅವು ಯಾವುವೆಂದರೆ ಎರ್ನಾಡ್, ಕೊಂಡೊತ್ತಿ, ಕೋಟಕ್ಕಲ್, ಮಲಪ್ಪುರಂ, ಮಂಜೇರಿ, ಮಾನ್ನಕ್ಕಡ, ನಿಲಂಬೂರ್, ಪೆರಿಂತಲ್ಮಣ್ಣ, ಪೊನ್ನಾಣಿ, ಥಾನೂರ್, ತವನೂರ್, ತೀರೂರ್, ತೀರೂರಂಗಾಡಿ, ವಲ್ಲಿಕ್ಕುನ್ನು, ವೆಂಙರ ಮತ್ತು ವಾಂಡೂರ್.

ಮಲಪ್ಪುರಂ ಜಿಲ್ಲೆಯು ಮಲಪ್ಪುರಂ ಮತ್ತು ಮಂಜೇರಿ ಲೋಕಸಭಾ ಕ್ಷೇತ್ರವನ್ನು ಹೊಂದಿದ್ದು, ಯುಡಿಎಫ್ ಒಕ್ಕೂಟದ ಮುಸ್ಲಿಂಲೀಗ್ ಈ ಎರಡೂ ಲೋಕಸಭಾ ಕ್ಷೇತ್ರದಲ್ಲಿ ಪ್ರಾಬಲ್ಯವನ್ನು ಹೊಂದಿದ್ದು, ಕಳೆದ ಹಲವು ಚುನಾವಣೆಗಳಲ್ಲಿ ಗೆದ್ದು ವಿಜಯಪತಾಕೆ ಹಾರಿಸಿದೆ.

ಈ ಬಾರಿಯ ವಿಧಾನಸಭಾ ಚುನಾವಣೆ ತಮಗೆ ಪೂರಕ ಆಗಿರುವುದರಿಂದ ಮಲಬಾರ್‌ನ ಮರ್‍ನಾಲ್ಕು ಜಿಲ್ಲೆಗಳ ಸರಿಸುಮಾರು ನಲ್ವತ್ತು ವಿಧಾನಸಭಾ ಕ್ಷೇತ್ರಗಳ ಪೈಕಿ ಮೂವತ್ತು ಕ್ಷೇತ್ರಗಳಲ್ಲಿ ತಮ್ಮ ಒಕ್ಕೂಟ ಗೆದ್ದರೆ ಈ ಸಲ ರಾಜ್ಯದಲ್ಲಿ ಆಡಳಿತ ಚುಕ್ಕಾಗಿ ಹಿಡಿಯುವುದು ಬಹಳ ಸುಲಭ ಎಂಬ ಆತ್ಮವಿಶ್ವಾಸ ಯುಡಿಎಫ್ ಮೈತ್ರಿಕೂಟದ್ದಾಗಿದೆ. ಆದರೆ ಮಲಬಾರ್ ಕೇರಳದಲ್ಲಿ ಕಳೆದ ಹತ್ತು ವರ್ಷಗಳ ತಮ್ಮ ಆಡಳಿತಾವಧಿಯಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳು ನಡೆದಿರುವುದರಿಂದ ಮಲಬಾರ್ ಕೇರಳ ಪ್ರದೇಶ ಈ ಸಲ ತಮ್ಮ ಒಕ್ಕೂಟದ ಕೈ ಹಿಡಿಯಲಿದೆ ಎಂಬುದು ಆಡಳಿತಾರೂಢ ಎಡರಂಗ ಸರಕಾರದ ನಿರೀಕ್ಷೆಯಾಗಿದೆ. ಮಲಬಾರ್ ಪ್ರದೇಶದಲ್ಲಿ ಶೇಕಡವಾರು ಮತವನ್ನು ಸಾಧ್ಯವಾದಷ್ಟು ಹೆಚ್ಚಿಸುವುದು ಬಿಜೆಪಿಯ ಸದ್ಯದ ಲೆಕ್ಕಾಚಾರ.

ಕರ್ನಾಟಕ–ಮಲಬಾರ್ ಸಂಪರ್ಕ

ಕೇರಳದ ಮಲಬಾರ್ ಪ್ರದೇಶವು ಕರ್ನಾಟಕದ ಹಲವು ಜಿಲ್ಲೆಗಳ ಗಡಿಪ್ರದೇಶಗಳಾಗಿವೆ. ಮಾಂಸಹಾರ ಕೇರಳದಲ್ಲಿ ಹೆಚ್ಚಿರುವುದರಿಂದ ಕರ್ನಾಟಕದ ಮಂಡ್ಯ, ಮೈಸೂರು ಸೇರಿದಂತೆ ಹಲವೆಡೆ ಬೆಳೆಯುವ ವಿವಿಧ ತರಕಾರಿಗಳು ದಿನಾಲೂ ಕೇರಳದ ಮಲಬಾರ್ ಪ್ರದೇಶಗಳಿಗೆ ಸರಬರಾಜಾಗುತ್ತಿದ್ದು, ಕರ್ನಾಟಕಕ್ಕೆ ಉತ್ತಮ ಆದಾಯವನ್ನೂ ಅದು ತಂದುಕೊಡುತ್ತಿದೆ.

ನೇಪಾಳ: ಪ್ರತಿಭಟನೆ ಸತತ 3ನೇ ದಿನಕ್ಕೆ

ಕಠ್ಮಂಡು: ಕಳೆದ ವರ್ಷ ನಡೆದಿದ್ದ ಜೆನ್–ಝಿ ಪ್ರತಿಭಟನೆ ಹತ್ತಿಕ್ಕಿದ್ದಕ್ಕಾಗಿ ಮಾಜಿ ಪ್ರಧಾನಿ ಕೆ.ಪಿ.ಶರ್ಮಾ ಒಲಿ ಅವರ ಬಂಧನ ವಿರೋಧಿಸಿ ನೇಪಾಳದಲ್ಲಿ ಸತತ 3ನೇ ದಿನವೂ ಪ್ರತಿಭಟನೆ ಮುಂದುವರಿದಿದೆ. ಈ ನಡುವೆ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಮೂವರು ಪ್ರಧಾನಿಗಳ ವಿರುದ್ಧದ ತನಿಖೆಯನ್ನು ಅಧಿಕಾರಿಗಳು ತೀವ್ರಗೊಳಿಸಿದ್ದಾರೆ.

ನೇಪಾಳದಲ್ಲಿ ರಚನೆಯಾದ ಬಾಲೇಂದ್ರ ಶಾ ಸರಕಾರವು ತನ್ನ ಮೊದಲ ಸಂಪುಟ ಸಭೆಯಲ್ಲಿ ಜೆನ್–ಝಿ ಪ್ರತಿಭಟನೆಗಳ ಕುರಿತ ತನಿಖಾ ಆಯೋಗದ ವರದಿಯನ್ನು ಜಾರಿತರಲು ನಿರ್ಧರಿಸಿದ ನಂತರ ಈ ಬಂಧನಗಳು ನಡೆದಿವೆ.

ಒಲಿ ಮತ್ತು ಮಾಜಿ ಗೃಹ ಸಚಿವ ರಮೇಶ್ ಲೇಖಕ್ ಅವರನ್ನು ಶನಿವಾರ ಬಂಧಿಸಲಾಗಿತ್ತು. ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಮಾಜಿ ಇಂಧನ ಸಚಿವ, ನೇಪಾಳಿ ಕಾಂಗ್ರೆಸ್ ನಾಯಕ ದೀಪಕ್ ಖಡ್ಕಾ ಅವರನ್ನು ಭಾನುವಾರ ಬಂಧಿಸಲಾಗಿತ್ತು.

ಖಡ್ಕಾ ಬಂಧನದ ನಂತರ ನೇಪಾಳದ ಹಣ ಅಕ್ರಮ ವರ್ಗಾವಣೆ ತನಿಖಾ ಇಲಾಖೆ (ಡಿಎಂಎಲ್‌ಐ) ಮತ್ತು ನೇಪಾಳ ಪೊಲೀಸರು ಮಾಜಿ ಪ್ರಧಾನಿಗಳಾದ ಶೇರ್ ಬಹದ್ದೂರ್ ದೇವುಬಾ, ಪುಷ್ಪ ಕಮಲ್ ದಹಾಲ್ ಮತ್ತು ಒಲಿ ವಿರುದ್ಧದ ತನಿಖೆಯನ್ನು ತೀವ್ರಗೊಳಿಸಿದ್ದಾರೆ.

ಪ್ರಕರಣವನ್ನು ವಿವರವಾದ ತನಿಖೆ ನಡೆಸುವುದಕ್ಕೂ ಮೊದಲು ಇಲಾಖೆಯು ಸುಮಾರು 6 ತಿಂಗಳ ಕಾಲ ಪ್ರಾಥಮಿಕ ವಿಚಾರಣೆಗಳನ್ನು ನಡೆಸಿತ್ತು ಎಂದು ಕಠ್ಮಂಡು ಪೋಸ್ಟ್ ವರದಿ ಮಾಡಿದೆ. ಒಲಿ ಅವರ ನೇಪಾಳ ಕಮ್ಯುನಿಸ್ಟ್ ಪಕ್ಷ (ಯುನೈಟೆಡ್ ಮಾರ್ಕ್ಸಿಸ್ಟ್–ಲೆನಿನಿಸ್ಟ್) ಹಾಗೂ ಅದರ ವಿದ್ಯಾರ್ಥಿ ಮತ್ತು ಇತರ ಸಂಘಟನೆಗಳ ನೂರಾರು ಸದಸ್ಯರು ಸೋಮವಾರ ಬೆಳಗ್ಗೆ ನಯಾ ಬನೇಶ್ವರ್ ಪ್ರದೇಶದಲ್ಲಿ ಜಮಾಯಿಸಿ ಸೇಡಿನ ರಾಜಕೀಯ ಕೊನೆಗೊಳಿಸಲು ಮತ್ತು ಒಲಿಯನ್ನು ತಕ್ಷಣವೇ ಬಿಡುಗಡೆ ಮಾಡಲು ಆಗ್ರಹಿಸಿದರು. ಶನಿವಾರ ಮತ್ತು ಭಾನುವಾರ ಪಕ್ಷವು ಆಯೋಜಿಸಿದ್ದ ಪ್ರತಿಭಟನೆಗಳಿಗೆ ಹೋಲಿಸಿದರೆ ಸೋಮವಾರದ ಪ್ರತಿಭಟನೆ ಶಾಂತವಾಗಿತ್ತು. ಭಾನುವಾರದ ಪ್ರತಿಭಟನೆಯಲ್ಲಿ ಗಲಭೆ ನಿಗ್ರಹ ಪೊಲೀಸರೊಂದಿಗೆ ನಡೆದ ಘರ್ಷಣೆಯಲ್ಲಿ ಡಜನ್‌ಗೂ ಹೆಚ್ಚು ಯುಎಂಎಲ್ ಕಾರ್ಯಕರ್ತರು ಗಾಯಗೊಂಡಿದ್ದರು.

ಕೆ.ಪಿ.ಒಲಿ ಬಂಧನ ವಿರೋಧಿಸಿ ನೂರಾರು ಬೆಂಬಲಿಗರು ಕಠ್ಮಂಡುವಿನಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಲಿವ್–ಇನ್ ಶಾಶ್ವತವೆಂದಾದರೆ ಗಣತಿಯಲ್ಲಿ ವಿವಾಹಿತ ದಂಪತಿ



ದೆಹಲಿ: ಸಹಜೀವನ (ಲಿವ್–ಇನ್) ನಡೆಸುತ್ತಿರುವ ದಂಪತಿಗಳು ತಮ್ಮದು ಶಾಶ್ವತ ಸಂಬಂಧ ಎಂದು ಪರಿಗಣಿಸಿದರೆ, ಅವರನ್ನು ಜನಗಣತಿ ವೇಳೆ ವಿವಾಹಿತ ದಂಪತಿಗಳಾಗಿ ಪರಿಗಣಿಸಬೇಕೆಂದು ಎಂದು ಕೇಂದ್ರ ಸರಕಾರ ತಿಳಿಸಿದೆ. ಸ್ವಯಂ–ಗಣತಿ ಪೋರ್ಟಲ್‌ನಲ್ಲಿರುವ ಪದೇ ಪದೇ ಕೇಳಲಾಗುವ ಪ್ರಶ್ನೆಗಳ ಕುರಿತಂತೆ ಕೇಂದ್ರ ಸರಕಾರ ಸ್ಪಷ್ಟನೆ ನೀಡಿದ್ದು, ಜನಗಣತಿಯ ಸಮಯದಲ್ಲಿ ಸ್ವಯಂ–ಗಣತಿ ಆಯ್ಕೆ ಮಾಡಿಕೊಳ್ಳುವ ಜನರಿಗೆ ಪೋರ್ಟಲ್ ತೆರೆಯಲಾಗಿದೆ. ಇದು ಜನಗಣತಿಯ ಎರಡು ಹಂತಗಳಾದ ಮನೆ ಪಟ್ಟಿ, ವಸತಿ ಗಣತಿ (ಎಚ್‌ಎಲ್‌ಒ) ಮತ್ತು ಜನಸಂಖ್ಯಾ ಗಣತಿಯಲ್ಲಿ ಲಭ್ಯವಿರುತ್ತದೆ. ದೇಶದ 16ನೇ ಜನಗಣತಿಯ ಸಂದರ್ಭದಲ್ಲಿ ಕೇಳಲಾದ ಪ್ರಶ್ನೆಗಳಿಗೆ ಉತ್ತರಿಸಲು ಸಾರ್ವಜನಿಕರಿಗೆ ಸುಲಭವಾಗುವಂತೆ ಪೋರ್ಟಲ್, ಪದೇ ಪದೇ ಕೇಳಲಾಗುವ ಪ್ರಶ್ನೆಗಳ (FAQ's) ಪಟ್ಟಿಯನ್ನು ಹೊಂದಿದೆ. ಲಿವ್–ಇನ್ ಸಂಬಂಧದಲ್ಲಿರುವ ಸಂಗಾತಿಗಳನ್ನು ವಿವಾಹಿತ ದಂಪತಿ ಎಂದು ಪರಿಗಣಿಸಲಾಗುತ್ತದೆಯೇ? ಎಂಬ ಪ್ರಶ್ನೆಗಳಿಗೆ ಉತ್ತರಿಸಿರುವ ಕೇಂದ್ರ ಸರಕಾರ, ಅವರು ತಮ್ಮ ಸಂಬಂಧವನ್ನು ಶಾಶ್ವತವೆಂದು ಪರಿಗಣಿಸಿದರೆ, ಅವರನ್ನು ವಿವಾಹಿತ ದಂಪತಿಗಳೆಂದು ಪರಿಗಣಿಸಲಾಗುತ್ತದೆ ಎಂದು ಹೇಳಿದೆ. ಏಪ್ರಿಲ್ 1ರಿಂದ ಜನಗಣತಿ ಆರಂಭವಾಗಲಿದೆ. ಮನೆಗಳ ಪಟ್ಟಿ ಮತ್ತು ವಸತಿ ಗಣತಿಯ ಮೊದಲ ಹಂತದಲ್ಲಿ ನಾಗರಿಕರಿಗೆ ಕೇಳಲಾಗುವ 33 ಪ್ರಶ್ನೆಗಳನ್ನು ಸರಕಾರ ಬಿಡುಗಡೆ ಮಾಡಿದೆ.

ಎಂಎಲ್‌ಸಿ ಸ್ಥಾನಕ್ಕೆ ನಿತೀಶ್, ನಿತಿನ್ ನವೀನ್ ರಾಜೀನಾಮೆ

ದೆಹಲು/ಪಟನಾ: ಮಾ.16ರಂದು ನಡೆದ 11 ರಾಜ್ಯಸಭೆ ಸ್ಥಾನಗಳ ಚುನಾವಣೆಯಲ್ಲಿ ಆಯ್ಕೆಯಾಗಿರುವ ಬಿಹಾರದ ಮುಖ್ಯಮಂತ್ರಿ, ಸಂಯುಕ್ತ ಜನತಾ ದಳ (ಜೆಡಿಯು) ವರಿಷ್ಠ ನಿತೀಶ್ ಕುಮಾರ್ ಮತ್ತು ಬಿಜೆಪಿಯ ನೂತನ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರು ಬಿಹಾರದ ವಿಧಾನ ಪರಿಷತ್ ಸ್ಥಾನಗಳಿಗೆ ಸೋಮವಾರ ರಾಜೀನಾಮೆ ಸಲ್ಲಿಸಿದರು. ಇಬ್ಬರೂ ನಾಯಕರು ರಾಜ್ಯಸಭೆ ಸದಸ್ಯರಾಗಿ 6 ವರ್ಷ ಸೇವೆ ಸಲ್ಲಿಸಲಿದ್ದಾರೆ. 'ಪ್ರಾಹಿಬಿಷನ್ ಆಫ್ ಸೈಮಲ್ಟೇನಿಯಸ್ ಮೆಂಬರ್‌ಶಿಪ್ ರೂಲ್–1950' ಪ್ರಕಾರ ಯಾವುದೇ ಒಬ್ಬ ವ್ಯಕ್ತಿಯು ಸಂಸತ್ತು ಮತ್ತು ರಾಜ್ಯ ಶಾಸನ ಸಭೆ ಸದಸ್ಯತ್ವ ಎರಡನ್ನೂ ಏಕಕಾಲದಲ್ಲಿ ಹೊಂದಿರುವಂತಿಲ್ಲ. ಹಾಗೊಮ್ಮೆ ಹೊಂದಿದ್ದರೆ ರಾಜ್ಯಸಭೆಗೆ ಆಯ್ಕೆಯಾದ 2 ವಾರ(14 ದಿನ)ದೊಳಗೆ ರಾಜ್ಯ ಶಾಸನಸಭೆ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಬೇಕಿದೆ. ಹಾಗಾಗಿಯೇ ಇಬ್ಬರೂ ನಾಯಕರು ಸೋಮವಾರ ಎಂಎಲ್‌ಸಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ.

ನಿತೀಶ್ ಕುಮಾರ್ ರಾಜ್ಯಸಭೆ ಪ್ರವೇಶ ಹಿನ್ನೆಲೆಯಲ್ಲಿ ಬಿಹಾರ ಮುಖ್ಯಮಂತ್ರಿ ಹುದ್ದೆಗೆ ಯಾವಾಗ ರಾಜೀನಾಮೆ ನೀಡಲಿದ್ದಾರೆ ಎಂಬುದು ಇನ್ನೂ ಸ್ಪಷ್ಟವಿಲ್ಲ. ಆ ಬಗ್ಗೆ ನಿತೀಶ್ ಕುಮಾರ್ ಅವರೇ ನಿರ್ಧಾರ ಕೈಗೊಳ್ಳುತ್ತಾರೆ ಎಂದು ಅವರ ಆಪ್ತ ಸಚಿವ ಶ್ರವಣ್ ಕುಮಾರ್ ಸೋಮವಾರ ಸುದ್ದಿಸಂಸ್ಥೆಗೆ ಪ್ರತಿಕ್ರಿಯಿಸಿದ್ದಾರೆ. ಸಿಎಂ ಸ್ಥಾನಕ್ಕೆ ನಿತೀಶ್ ರಾಜೀನಾಮೆ ಘೋಷಿಸಿದ ಬಳಿಕವಷ್ಟೇ ಬಿಹಾರಕ್ಕೆ ನೂತನ ಮುಖ್ಯಮಂತ್ರಿಯ ಆಯ್ಕೆ ಪ್ರಕ್ರಿಯೆ ನಡೆಯಲು ಸಾಧ್ಯ ಎನ್ನಲಾಗಿದೆ.

ಅಮೆರಿಕದೊಂದಿಗಿನ ಶತ್ರುತ್ವ, ಮಿತ್ರತ್ವ ಎರಡೂ ಮಾರಕ

ನೇರ ಯುದ್ಧಕ್ಕಿಳಿದರೆ ಯುಎಇ ಸರ್ವನಾಶ: ಜೆಫ್ರಿ ಸ್ಯಾಚ್ಸ್ ಕಳವಳ

ವಾಷಿಂಗ್ಟನ್: ಪ್ರಸ್ತುತ ಪಶ್ಚಿಮ ಏಷ್ಯಾ ಭಾಗದಲ್ಲಿ ನಡೆಯುತ್ತಿರುವ ಇರಾನ್ ವಿರುದ್ಧದ ಅಮೆರಿಕ–ಇಸ್ರೇಲ್ ಯುದ್ಧಕ್ಕೆ ಏನಾದರೂ ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ಧುಮುಕಿದರೆ, ಆ ದೇಶದ ಜನಪ್ರಿಯ ಪ್ರವಾಸಿ ತಾಣಗಳಾದ ದುಬೈ ಮತ್ತು ಅಬುಧಾಬಿ ಬಹಳಷ್ಟು ಹಾನಿಗೆ ಒಳಗಾಗಬೇಕಾಗುತ್ತದೆ ಎಂದು ಅಮೆರಿಕದ ಹಿರಿಯ ಅರ್ಥಶಾಸ್ತ್ರಜ್ಞ ಜೆಫ್ರಿ ಸ್ಯಾಚ್ಸ್ ಎಚ್ಚರಿಸಿದ್ದಾರೆ.

ಭಾರತದ ಸುದ್ದಿಸಂಸ್ಥೆ ಜತೆ ವಿಡಿಯೊ ಕರೆ ಸಂದರ್ಶನದಲ್ಲಿ ಮಾತನಾಡಿದ ಸ್ಯಾಚ್ಸ್, 'ಯುಎಇ ವಿದೇಶಾಂಗ ನೀತಿ ಆಯ್ಕೆಯಲ್ಲಿ ಗಂಭೀರವಾದ ಕಾರ್ಯತಂತ್ರ ಲೋಪವನ್ನು ಮಾಡಿದೆ. ಈ ತಪ್ಪುಗಳನ್ನು ಸರಿಪಡಿಸಿಕೊಳ್ಳುವುದಕ್ಕೆ ಬದಲಾಗಿ ಅಮೆರಿಕ ಮತ್ತು ಇಸ್ರೇಲ್ ಜತೆ ಮತ್ತಷ್ಟು ನಿಕಟವಾಗುವ ಮೂಲಕ ತಪ್ಪುಗಳನ್ನು ಹೆಚ್ಚಿಸುತ್ತಿದೆ. ಇದು ಯುಎಇಯ ಸದ್ಯದ ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸಬಹುದಾಗಿದೆ ಎಂದು ಎಚ್ಚರಿಸಿದ್ದಾರೆ.

ಒಂದೊಮ್ಮೆ ಯುಎಇ ಏನಾದರೂ ಸ್ವತಃ ಯುದ್ಧಕ್ಕೆ ಇಳಿದರೆ, ದುಬೈ ಮತ್ತು ಅಬುಧಾಬಿ ನಗರಗಳ ಮೇಲೆ ಕ್ಷಿಪಣಿಗಳ ಮಳೆಯೇ ಸುರಿಯಬಹುದು. ರೆಸಾರ್ಟ್ ಪ್ರದೇಶಗಳು ಮತ್ತು ಪ್ರವಾಸಿ ತಾಣಗಳಾಗಿರುವ ಎರಡೂ ಪ್ರಮುಖ ನಗರಗಳು ಸ್ಫೋಟಗೊಂಡು ನಾಶವಾಗಬಹುದಾದ ಅಪಾಯವಿದೆ. ಹಣವಂತರು ಮೋಜು ಮಸ್ತಿಗಾಗಿ ಹಣ ವೆಚ್ಚ ಮಾಡಲು ಬರುವ ಸ್ಥಳಗಳು ಇವಾಗಿದ್ದು, ಯುಎಇ ಆರ್ಥಿಕತೆಗೆ ಕೊಡುಗೆ ನೀಡುತ್ತಿವೆ. ಯುದ್ಧರಂಗಕ್ಕೆ ಯುಎಇ ಪ್ರವೇಶಿಸಿದರೆ ದುಬೈನಂತಹ ನಗರದ ಉದ್ದೇಶವೇ ಹಾಳಾಗುತ್ತದೆ. ಎಮಿರೇಟ್ಸ್ ತೊಂದರೆಗೆ ಸಿಲುಕಿಸಿಕೊಂಡಿದೆ, ದಿನೇ ದಿನೇ ಆ ತೊಂದರೆ ಹೆಚ್ಚುತ್ತಲೇ ಇದೆ' ಎಂದು ಸ್ಯಾಚ್ಸ್ ಕಳವಳ ವ್ಯಕ್ತಪಡಿಸಿದ್ದಾರೆ. ಅಮೆರಿಕದ ಹಿತಾಸಕ್ತಿಗಳು ಮುಂದೆ ಬದಲಾದರೆ ಅದರ ಪರಿಣಾಮಗಳೂ ಯುಎಇ ಮೇಲಾಗುತ್ತದೆ. ಅಮೆರಿಕ–ಇಸ್ರೇಲ್‌ಗೆ ಈ ಯುದ್ಧದಲ್ಲಿ ನೆರವಾಗುತ್ತಿರುವ ಗಲ್ಫ್ ರಾಷ್ಟ್ರಗಳನ್ನು ಈ ಮೈತ್ರಿಯು ಸುರಕ್ಷಿತವಾಗಿರಿಸುವ ಬದಲು ದುರ್ಬಲಗೊಳಿಸಲಿದೆ ಎಂದು ಸ್ಯಾಚ್ಸ್ ಭವಿಷ್ಯ ನುಡಿದಿದ್ದಾರೆ. 'ಯುನೈಟೆಡ್ ಸ್ಟೇಟ್ಸ್‌ಗೆ ಶತ್ರುವಾಗುವುದು ಅಪಾಯಕಾರಿ, ಆದರೆ ಸ್ನೇಹಿತನಾಗುವುದು ಇನ್ನೂ ಮಾರಕ' ಎಂಬುದು ಕಿಸ್ಸಿಂಜರ್ ಅವರ ಪ್ರಸಿದ್ಧ ಗಾದೆ. ಅದನ್ನು ನಾನು ಈಗಲೂ ಹೇಳಲು ಬಯಸುತ್ತೇನೆ ಎಂದು ಸ್ಯಾಚ್ಸ್ ಮಾತು ಮುಗಿಸಿದ್ದಾರೆ.

ಚೀನಾದ ಸಿಸಿಟಿವಿ ಭಾರತದಲ್ಲಿ ನಿಷೇಧ?

ದೆಹಲಿ: ಏಪ್ರಿಲ್ 1ರಿಂದ ಚೀನಾದ ಸಿಸಿಟಿವಿ ಬ್ರ್ಯಾಂಡ್‌ಗಳನ್ನು ದೇಶದಲ್ಲಿ ನಿಷೇಧಿಸಲು ಚಿಂತಿಸಲಾಗಿದೆ. ಚೀನಾದ ಸಿಸಿಟಿವಿ ದೈತ್ಯ ಕಂಪನಿಗಳಾದ ಹೈಕ್ವಿಷನ್ ಮತ್ತು ದಹುವಾವನ್ನು ದೇಶದಲ್ಲಿ ಇಂಟರ್‌ನೆಟ್ ಸಂಪರ್ಕ ಹೊಂದಿರುವ ಕ್ಯಾಮೆರಾಗಳು ಮತ್ತು ಸಂಬಂಧಿತ ಹಾರ್ಡ್‌ವೇರ್ ನಿಷೇಧಿಸಲು ಭಾರತ ಸರಕಾರ ಯೋಜನೆ ರೂಪಿಸಿದೆ. ಪ್ರಮಾಣೀಕರಣ ಪರೀಕ್ಷೆ ಮತ್ತು ಗುಣಮಟ್ಟ ಪ್ರಮಾಣೀಕರಣ ಚೌಕಟ್ಟಿನ ಅಡಿಯಲ್ಲಿ ಹೊಸ ಪ್ರಮಾಣೀಕರಣ ಅಗತ್ಯಗಳು ಮುಂದಿನ ತಿಂಗಳಿನಿಂದ ಜಾರಿಗೆ ಬರಲಿವೆ. ಇದರಿಂದ ಭಾರತದಲ್ಲಿ ಮಾರಾಟವಾಗುವ ಯಾವುದೇ ಸಿಸಿಟಿವಿ ಉತ್ಪನ್ನಕ್ಕೆ ಎಸ್‌ಟಿಕ್ಯೂಸಿ ಅನುಮೋದನೆ ಕಡ್ಡಾಯವಾಗಲಿದೆ. ಚೀನಾದ ಕಂಪನಿಗಳು ಮತ್ತು ಚೀನಾದ ಮೂಲ ಚಿಪ್‌ಸೆಟ್‌ಗಳನ್ನು ಬಳಸುವ ಯಾವುದೇ ಸಾಧನಗಳಿಗೆ ಈ ಪ್ರಮಾಣೀಕರಣ ನೀಡಲು ಅಧಿಕಾರಿಗಳು ನಿರಾಕರಿಸಲಿದ್ದಾರೆ. ಯಾವುದೇ ಅನುಮತಿ ಇಲ್ಲ ಎಂದರೆ ಮಾರುಕಟ್ಟೆ ಪ್ರವೇಶವಿಲ್ಲ. ಇದು ವಾಸ್ತವವಾಗಿ ನಿಷೇಧ ಹೇರಿದಂತೆ ಎನ್ನಲಾಗಿದೆ. ಈ ಕ್ರಮವು ಭಾರತದ ಸರಕಾರದ ಇಂಟರ್‌ನೆಟ್ ಕನೆಕ್ಟೆಡ್ ಉಪಕರಣಗಳ ಭದ್ರತಾ ಮಾನದಂಡಗಳನ್ನು ಗಟ್ಟಿಗೊಳಿಸುವ ಪ್ರಯತ್ನಕ್ಕೆ ಭಾಗ ಎಂದು ಪರಿಗಣಿಸಲಾಗಿದೆ.

ಅಲಿರೆಜಾ ಸಾವು; ದೃಢ



ಟೆಹರಾನ್: ಇಸ್ರೇಲ್ ದಾಳಿಯಲ್ಲಿ ಇರಾನ್‌ರೆವಲ್ಯೂಷನರಿ ಗಾರ್ಡ್ಸ್ ಕೋರ್‌ನ ನೌಕಾಪಡೆ ಮುಖ್ಯಸ್ಥ ಅಲಿರೆಜಾ ತಂಕಸಿರಿ ಮೃತಪಟ್ಟಿರುವುದನ್ನು ಇರಾನ್ ದೃಢಪಡಿಸಿದೆ. ಮಾ.26ರಂದು ಅಲಿ ರೆಜಾ ಸೇರಿ ಇರಾನ್ ನೌಕಾಪಡೆಯ ಇತರೆ ಕೆಲವು ಅಧಿಕಾರಿಗಳನ್ನು ಹತ್ಯೆ ಮಾಡಿರುವುದಾಗಿ ಇಸ್ರೇಲ್ ರಕ್ಷಣಾ ಸಚಿವ ಇಸ್ರೇಲಿ ಕಾಟ್ಜ್ ಹೇಳಿದ್ದರು. ಈ ಕುರಿತು ಇರಾನ್ ಖಚಿತಪಡಿಸಿದೆ.

ಉಪ್ರದಲ್ಲಿ ಕೆರೆ ಜಾಗದಲ್ಲಿ ಕಟ್ಟಲಾಗಿದ್ದ ಮುಸ್ಲಿಂ ಪ್ರಾರ್ಥನಾ ಮಂದಿರ

ಮಸೀದಿ ನೆಲಸಮ ಮಾಡಿದ ಯೋಗಿ ಸರಕಾರ

ಸೀತಾಪುರ (ಉ.ಪ್ರ): 12 ವರ್ಷಗಳ ಹಿಂದೆ ಸರಕಾರಿ ಭೂಮಿ (ಕೆರೆ)ಯಲ್ಲಿ ನಿರ್ಮಿಸಲಾಗಿದೆ ಎನ್ನಲಾದ ಮಸೀದಿಯನ್ನು ಉತ್ತರ ಪ್ರದೇಶದ ಸೀತಾಪುರದಲ್ಲಿ ಸೋಮವಾರ ಬೆಳಿಗ್ಗೆ ಅಧಿಕಾರಿಗಳು ನೆಲಸಮಗೊಳಿಸಿದ್ದಾರೆ.

ಬೆಳಗಿನ ಜಾವ 3 ಗಂಟೆ ಸುಮಾರಿಗೆ ಜಿಲ್ಲೆಯ ಲೆಹರ್‌ಪುರ ಪ್ರದೇಶದಲ್ಲಿರುವ ಸ್ಥಳಕ್ಕೆ ತೆರಳಿ, ಭದ್ರತೆಯ ನಡುವೆ ಮಸೀದಿ ನೆಲಸಮ ಮಾಡಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನೈಗಾಂವ್ ಬೆಹತಿ ಗ್ರಾಮದಲ್ಲಿನ ಮಸೀದಿಯನ್ನು, ಕೆರೆ ಎಂದು ಗೊತ್ತು ಪಡಿಸಿದ ಭೂಮಿಯಲ್ಲಿ ಅಕ್ರಮವಾಗಿ ನಿರ್ಮಿಸಲಾಗಿತ್ತು. ಈ ಸಂಬಂಧ ಗ್ರಾಮ ಸಭೆಯು ದೂರು ಸಲ್ಲಿಸಿದ ನಂತರ ತಹಸಿಲ್ ನ್ಯಾಯಾಲಯದ ಆದೇಶದ ಮೇರೆಗೆ ಈ ಕ್ರಮ ಕೈಗೊಳ್ಳಲಾಗಿದೆ.

ಕಾರ್ಯಾಚರಣೆಯ ಸಮಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಹಿರಿಯ ಅಧಿಕಾರಿಗಳು ಸೇರಿ 500 ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಈ ಮಸೀದಿಯ ವಿವಾದವು ದೀರ್ಘಕಾಲದಿಂದ ಬಾಕಿ ಇತ್ತು. ಮಸೀದಿಯು ಕೆರೆ ಮತ್ತು ಸ್ಮಶಾನಕ್ಕಾಗಿ ಮೀಸಲಾದ ಭೂಮಿಯಲ್ಲಿ ನಿರ್ಮಿಸಲಾಗಿತ್ತು ಎಂದು ಗ್ರಾಮ ಸಭೆ ಆರೋಪಿಸಿದೆ. ಈ ಸಂಬಂಧ 2025, ಡಿಸೆಂಬರ್ 18ರಂದು ಪ್ರಕರಣ ದಾಖಲಿಸಲಾಗಿತ್ತು. 2026 ಜನವರಿ 6 ರಂದು, ನ್ಯಾಯಾಲಯವು ಮಸೀದಿ ನಿರ್ಮಾಣ ವನ್ನು ಕಾನೂನುಬಾಹಿರವೆಂದು ಘೋಷಿಸಿ, ತೆರವು ಮಾಡಲು ಆದೇಶಿಸಿತು. ನಿಗದಿತ ಅವಧಿಯೊಳಗೆ ಆವರಣವನ್ನು ಖಾಲಿ ಮಾಡಲು ಮತ್ತು ಅಗತ್ಯ ವಸ್ತುಗಳನ್ನು ತೆಗೆದುಹಾಕಲು ಸಂಬಂಧಪಟ್ಟವರಿಗೆ ನೋಟಿಸ್ ನೀಡಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಗಡುವು ಮುಗಿದ ನಂತರ, ಜಿಲ್ಲಾಡಳಿತವು ಮಸೀದಿ ಕೆಡವಲು ಮುಂದಾಯಿತು ಎಂದು ಅವರು ಹೇಳಿದ್ದಾರೆ.



ಪದ್ಯಾಣ ಬ್ರಹ್ಮಕಲಶೋತ್ಸವ

ವಿದ್ವಾಂಸರು, ಕಲಾವಿದರ ಸಾಂಸ್ಕೃತಿಕ ನೆಲೆಬೀಡು

● **ಜಿತೇಂದ್ರ ಕುಂದೇಶ್ವರ**

ವಿಶೇಷ ಇತಿಹಾಸ, ಸಾಂಸ್ಕೃತಿಕ ಹಿನ್ನೆಲೆ ಇರುವ ಕರ್ನಾಟಕ-ಕೇರಳ ಗಡಿಭಾಗದ ಪದ್ಯಾಣ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಬ್ರಹ್ಮಕಲಶೋತ್ಸವದ ಮಾರ್ಚ್ 30ರಿಂದ ಏಪ್ರಿಲ್ 6ರವರೆಗೆ ನಡೆಯಲಿದೆ. ಈ ಬಾರಿಯ ಬ್ರಹ್ಮಕಲಶೋತ್ಸವವು ಖ್ಯಾತ ನ್ಯಾಯವಾದಿ ಡಾ. ಅರುಣಶ್ಯಾಮ್ ಅಧ್ಯಕ್ಷತೆಯಲ್ಲಿ, ಐಎಎಸ್ ಅಧಿಕಾರಿ ಡಾ. ಟಿ.ಶಾಮ ಭಟ್ ಗೌರವಾಧ್ಯಕ್ಷತೆಯಲ್ಲಿ, ಶ್ಯಾಮ ಸುದರ್ಶನ ಹೊಸಮೂಲೆ ಅವರ ಕಾರ್ಯಾಧ್ಯಕ್ಷತೆಯಲ್ಲಿ ಮತ್ತು ಆಡಳಿತ ಮೊಕ್ತೇಸರ ಸತ್ಯನಾರಾಯಣ ಭಟ್ ಸೇರಾಜೆ ಮೊದಲಾದ ಊರ ಗಣ್ಯರ ಮಾರ್ಗದರ್ಶನದಲ್ಲಿ ನಡೆಯಲು ಸಂಪೂರ್ಣ ಸಜ್ಜಾಗಿದೆ. ನಾಡಿನ ವಿವಿಧ ಮಠಾಧೀಶರು ಮತ್ತು ಚಿಂತಕರು ಈ ವೇಳೆ ಭಾಗವಹಿಸಲಿದ್ದಾರೆ.

● **ಕ್ಷೇತ್ರದ ಮಹಿಮೆ ಮತ್ತು ಇತಿಹಾಸ**

ಸುಮಾರು 600 ವರ್ಷಗಳ ಇತಿಹಾಸವಿರುವ ಈ ಕ್ಷೇತ್ರವು ದಕ್ಷಿಣ ಕನ್ನಡದ ಬಂಟ್ವಾಳ ತಾಲೂಕಿನ ಕರೋಪಾಡಿ ಗ್ರಾಮದ ರಮ್ಯ ಪ್ರಕೃತಿಯ ಮಡಿಲಲ್ಲಿದೆ. ಈ ದೇವಸ್ಥಾನವು ಪಶ್ಚಿಮಕ್ಕೆ ಮುಖ ಮಾಡಿದ್ದು, ಸಪರಿವಾರ ಶ್ರೀ ಮಹಾಲಿಂಗೇಶ್ವರ ಇಲ್ಲಿ ನೆಲೆಯಾಗಿದ್ದಾನೆ.

ಫಲಪ್ರದಾಯಕ ಕ್ಷೇತ್ರ: ಇಲ್ಲಿನ ದೇವರಲ್ಲಿ ಪ್ರಾರ್ಥಿಸಿದರೆ ವಿದ್ಯೆ, ಬುದ್ಧಿ, ಆರೋಗ್ಯ, ಉದ್ಯೋಗ, ವಿವಾಹ, ಸತ್ಸಂತಾನ ಹಾಗೂ ಕೃಷಿ ಸಮೃದ್ಧಿಯನ್ನು ದೇವರು ಕರುಣಿಸುತ್ತಾನೆ ಎಂಬುದು ಭಕ್ತರ ದೃಢ ನಂಬಿಕೆ.

ಶ್ರೀಚಕ್ರಾರಾಧನೆಯ ವೈಶಿಷ್ಟ್ಯ: ಈ ಕ್ಷೇತ್ರದ ಪ್ರಮುಖ ಆಕರ್ಷಣೆ ಎಂದರೆ ಶ್ರೀ ಚಕ್ರ ಪೂಜೆ. 1975ರಲ್ಲಿ ದೇವಸ್ಥಾನದ ನವೀಕರಣದ ಸಂದರ್ಭದಲ್ಲಿ ಶ್ರೀಚಕ್ರ ಸಹಿತ ಶ್ರೀ ಮಹಾಲಿಂಗೇಶ್ವರ ಸ್ವಾಮಿಯ ಪ್ರತಿಷ್ಠೆ ಮಾಡಲಾಗಿತ್ತು. ಒಂದು ಕಾಲದಲ್ಲಿ ಪಾಳುಬಿದ್ದಿದ್ದ ಈ ದೇಗುಲವನ್ನು 1975ರಲ್ಲಿ ದಿ. ಸೇರಾಜೆ ನಾರಾಯಣ ಭಟ್ಟರ ನೇತೃತ್ವದಲ್ಲಿ ಊರ ಭಕ್ತರ ಸಹಕಾರದೊಂದಿಗೆ ಪುನರ್‌ನಿರ್ಮಿಸಲಾಯಿತು. ಕ್ಷೇತ್ರದ ತಂತ್ರಿಗಳ ಮಾರ್ಗದರ್ಶನದಂತೆ 2006ರಲ್ಲಿ ನಾಗ-ಶಾಸ್ತಾರ ಪ್ರತಿಷ್ಠೆ ನಡೆಯಿತು. ದೇವಸ್ಥಾನದ ಆವರಣದಲ್ಲಿ ಧೂಮಾವತಿ ಮತ್ತು ಕೊರತಿ ದೈವಗಳ ಆರಾಧನೆಯೂ ನಿರಂತರವಾಗಿ ನಡೆಯುತ್ತಿದೆ.

ಸಾಂಸ್ಕೃತಿಕ ಕಲಾಪ್ರಿಯತೆ: ಪದ್ಯಾಣವು ಯಕ್ಷಗಾನ, ಸಂಗೀತ, ಸಾಹಿತ್ಯ ಮತ್ತು ಗಮಕ ಕಲೆಗಳ ತವರೂರು. ಇಲ್ಲಿನ ಮನೆ ಮನೆಗಳಲ್ಲಿ ಕಲಾವಿದರು ಮತ್ತು ಕಲಾಸಕ್ತರನ್ನು ಕಾಣಬಹುದು. ಇದೀಗ ಸಾಫ್ಟ್‌ವೇರ್ ಎಂಜಿನಿಯರ್ ಪದ್ಯಾಣದ ಪರಂಪರೆಯಲ್ಲಿ ಕಾಣ ಸಿಗುತ್ತಾರೆ.

ಯಕ್ಷಗಾನಕ್ಕೆ ಅನುಪಮ ಕೊಡುಗೆ: ಪದ್ಯಾಣ ಮನೆತನವು ಯಕ್ಷಗಾನದ ಹಿಮ್ಮೇಳ ಮತ್ತು ಮುಮ್ಮೇಳಕ್ಕೆ ದೊಡ್ಡ ಕೊಡುಗೆ ನೀಡಿದೆ. ಮಾಂಬಾಡಿ ನಾರಾಯಣ ಭಾಗವತರು, ಪದ್ಯಾಣ ಗಣಪತಿ ಭಟ್, ಪದ್ಯಾಣ ಶಂಕರನಾರಾಯಣ ಭಟ್ ಸೇರಿದಂತೆ ಅನೇಕ ಶ್ರೇಷ್ಠ ಕಲಾವಿದರು ಈ ಮಣ್ಣಿನವರು. ಪದ್ಯಾಣದದ ಪರಿಸರದಲ್ಲಿ ಪ್ರತಿ ಮನೆಗೊಬ್ಬ ಕಲಾವಿದನಿದ್ದಾನೆ ಎಂಬ ಪ್ರತೀತಿ ಇದೆ.

ಸಾಧಕರ ನೆಲೆ: ಪತ್ರಕರ್ತರು, ಐಎಎಸ್ ಅಧಿಕಾರಿಗಳು ಸೇರಿದಂತೆ ಈ ಭಾಗದ ಪಾದೇಕಲ್ಲು ನರಸಿಂಹ ಭಟ್ಟರು, ನೀರ್ಪಾಜೆ ಭೀಮಭಟ್ಟರಂಥ ಸಾಹಿತಿಗಳು ಈ ಪ್ರದೇಶದ ಕೀರ್ತಿಯನ್ನು ಹೆಚ್ಚಿಸಿದ್ದಾರೆ.

● **ಪದ್ಯಾಣ ಊರಿನ ಗಣ್ಯ ಮಹನೀಯರು**

ಈ ಕುಟುಂಬವು ಆಡಳಿತ, ಸಾಹಿತ್ಯ, ಯಕ್ಷಗಾನ ಮತ್ತು ಸಂಗೀತ ಕ್ಷೇತ್ರಗಳಲ್ಲಿ ಅನೇಕ ಸಾಧಕರನ್ನು ನೀಡಿದೆ:

● **ಆಡಳಿತ ಮತ್ತು ನಾಗರಿಕ ಸೇವೆ**

ಮಾಂಬಾಡಿ ಶಂಭು ಭಟ್ಟ: ಹವ್ಯಕ ಬ್ರಾಹ್ಮಣ ಸಮಾಜದಲ್ಲಿ ಮೊಟ್ಟಮೊದಲ ಬಾರಿಗೆ ಬ್ರಿಟಿಷ್ ಸರಕಾರದಿಂದ ಐಸಿಎಸ್ ಪದವಿ ಪಡೆದವರು.

ಟಿ. ಶ್ಯಾಮ ಭಟ್: ಐಎಎಸ್ ಅಧಿಕಾರಿ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರಾಗಿ ಸೇವೆ ಸಲ್ಲಿಸಿದವರು.

ಶಂಭು ರಾಮಚಂದ್ರ ಭಟ್: ವಿಶ್ವಸಂಸ್ಥೆಗೆ ಮಹಿಳಾ ಶೋಷಿತ ವರ್ಗದವರ ಅಭಿವೃದ್ಧಿಗೆ ಸಲಹೆಗಾರರಾಗಿ ಕಾರ್ಯನಿರ್ವಹಿಸಿದವರು.

ಮಾಂಬಾಡಿ ಶಂಭು ಭಟ್ಟರ ಪುತ್ರ: ಪಶ್ಚಿಮ ಬಂಗಾಳ ಸರಕಾರದಲ್ಲಿ ಪೋಸ್ಟ್ ಮಾಸ್ಟರ್ ಜನರಲ್ ಆಗಿ ಸೇವೆ ಸಲ್ಲಿಸಿದವರು.

● **ಯಕ್ಷಗಾನ ಮತ್ತು ಸಂಗೀತ ಸಾಧಕರು**

ಮಾಂಬಾಡಿ ನಾರಾಯಣ ಭಾಗವತರು: ಯಕ್ಷಗಾನದ ಪ್ರಸಿದ್ಧ ಗುರುಗಳು ಮತ್ತು ಭಾಗವತರು.

ಪದ್ಯಾಣ ಪುಟ್ಟು ನಾರಾಯಣ ಭಟ್ಟರು: ಹಿರಿಯ ಭಾಗವತರು.

ಪದ್ಯಾಣ ಗಣಪತಿ ಭಟ್: ವರ್ತಮಾನದ ಅಗ್ರಮಾನ್ಯ ಭಾಗವತರು ಮತ್ತು ನಿರ್ದೇಶಕರು.

ಪದ್ಯಾಣ ಶಂಕರನಾರಾಯಣ ಭಟ್: 'ನಾದಶಂಕರ' ಬಿರುದಾಂಕಿತ ಪ್ರಸಿದ್ಧ ಚಂಡೆ ಮತ್ತು ಮದ್ದಲೆ ವಾದಕರು.

ಪೆರುವೋಡಿ ನಾರಾಯಣ ಭಟ್ ಮತ್ತು ಪೆರುವೋಡಿ ಸುಬ್ರಹ್ಮಣ್ಯ ಭಟ್: ಹಿರಿಯ ಹಾಸ್ಯಗಾರರು.

ತಲೆಂಗಳ ಗೋಪಾಲಕೃಷ್ಣ ಭಟ್: ಪ್ರಸಿದ್ಧ ಹಿಮ್ಮೇಳ ವಾದಕರು.

ಸಂಗೀತವಾಹಿನೀ ಪದ್ಯಾಣ ತಿಮ್ಮಣ್ಣ ಭಟ್: ಸಂಗೀತಜ್ಞರು ಮತ್ತು ಶಿಕ್ಷಕರು.

● **ಸಾಹಿತ್ಯ ಮತ್ತು ಪತ್ರಿಕೋದ್ಯಮ**

ತಲೆಂಗಳ ವಿದ್ವಾನ್ ರಾಮಕೃಷ್ಣ ಭಟ್ಟರು: ಸಾಹಿತಿಗಳು ಮತ್ತು ಯಕ್ಷಗಾನ ಪ್ರಸಂಗಕರ್ತರು.

ಪ.ಗೋ. ಪದ್ಯಾಣ ಗೋಪಾಲಕೃಷ್ಣ ಭಟ್: ಪ್ರಸಿದ್ಧ ಪತ್ರಕರ್ತರು.

ಮಾಂಬಾಡಿ ಕೇಶವ ಭಟ್: ಇವರು ಬರೆದ ಇಂಗ್ಲಿಷ್ ಗ್ರಾಮರ್ ಪುಸ್ತಕವು ಮದ್ರಾಸ್ ಪ್ರಾಂತ್ಯದಲ್ಲಿ ಪಠ್ಯಪುಸ್ತಕವಾಗಿತ್ತು.

ನಯನಗೌರಿ ಸೇರಾಜೆ: ಹರಿಕಥಾ ಪ್ರವೀಣೆ.

● **ಸಾಂಸ್ಕೃತಿಕ ಮತ್ತು ಕುಟುಂಬ ಪರಂಪರೆ**

ಮೂಲ: ಈ ಕುಟುಂಬದ ಮೂಲವು ಉತ್ತರ ಕನ್ನಡ ಮತ್ತು ಸಾಗರದ ಆಸುಪಾಸಿನ ಹವ್ಯಕ ಸಮುದಾಯಕ್ಕೆ ಸೇರಿದ್ದಾಗಿದೆ.

ಹೆಸರಿನ ಅರ್ಥ: ಸಂಸ್ಕೃತದಲ್ಲಿ 'ಪದ್ಯಾಣ' ಎಂದರೆ ಪದ್ಯವನ್ನು ಹೇಳುವವನು ಅಥವಾ ಶಬ್ದ ಮಾಡುವವನು ಎಂಬ ಅರ್ಥವಿದೆ.

ಕಲಾ ಪರಂಪರೆ: ಪದ್ಯಾಣ ಕುಟುಂಬವು ಯಕ್ಷಗಾನ ಮತ್ತು ಸಂಗೀತಕ್ಕೆ ಪಾರಂಪರಿಕವಾದ ಕೊಡುಗೆಯನ್ನು ನೀಡಿದೆ. ಈ ಕುಟುಂಬದ ಸಂಬಂಧಗಳು ಕುರಿಯ, ಮೂಡಂಬೈಲು ಮತ್ತು ಕಜೆ ಮುಂತಾದ ಕಲಾ ಮನೆತನಗಳೊಂದಿಗೆ ಬೆಸೆದುಕೊಂಡಿವೆ.

ಕುಟುಂಬ ಶಾಖೆಗಳು: 2010ರಲ್ಲಿ ನಡೆದ 'ಅಘಸಂಕೋಚ' ಕಾರ್ಯಕ್ರಮದ ಪ್ರಕಾರ ಪ್ರಮುಖ ಶಾಖೆಗಳೆಂದರೆ ಪದ್ಯಾಣ (ಶಂಕಣ್ಣ ಭಟ್), ತಲೆಂಗಳ (ಶಂಭಟ್ಟ) ಮತ್ತು ಪದ್ಯಾಣ (ಕೇಶವ ಭಟ್).

● **ದೇವಸ್ಥಾನದ ಮಹತ್ವ, ವೈಶಿಷ್ಟ್ಯಗಳು**

ಪದ್ಯಾಣದಲ್ಲಿರುವ ಶ್ರೀ ಮಹಾಲಿಂಗೇಶ್ವರ ದೇವಸ್ಥಾನವು ಈ ಕುಟುಂಬದ ಶ್ರದ್ಧಾಕೇಂದ್ರವಾಗಿದೆ.

ದೇವತೆಗಳು: ಇಲ್ಲಿ ಶ್ರೀ ಮಹಾಲಿಂಗೇಶ್ವರ ಮುಖ್ಯ ದೇವರಾಗಿದ್ದು, ಶ್ರೀ ಮಹಾಗಣಪತಿ ಉಪದೇವನಾಗಿದ್ದಾನೆ. ಧೂಮಾವತಿ ಮತ್ತು ಕೊರತಿ ಇಲ್ಲಿನ ಧರ್ಮ ದೈವಗಳು.

ಶ್ರೀಚಕ್ರಾರಾಧನೆ: ಈ ದೇವಸ್ಥಾನದ ಪ್ರಮುಖ ವೈಶಿಷ್ಟ್ಯವೆಂದರೆ ಇಲ್ಲಿ ನಡೆಯುವ ಶ್ರೀಚಕ್ರದ ನಿರಂತರಾರಾಧನೆ.

ಭಜನಾ ಪರಂಪರೆ: ಪ್ರತಿ ಸೋಮವಾರ ದೇವಸ್ಥಾನದಲ್ಲಿ ಭಜನೆ ನಡೆಯುತ್ತದೆ. ಇದನ್ನು ಸೇರಾಜೆ ನಾರಾಯಣ ಭಟ್ಟರು ಆರಂಭಿಸಿದರು. ಇಲ್ಲಿನ ಭಜನೆಯು ಭಕ್ತಿ ಮತ್ತು ಸಂಗೀತದ ಮಾಧುರ್ಯಕ್ಕೆ ಹೆಸರಾಗಿದೆ.

ನವೀಕರಣ: 2008ರಲ್ಲಿ ದೇವಸ್ಥಾನದ ಜೀರ್ಣೋದ್ಧಾರ ಮತ್ತು ಅಷ್ಟಬಂಧ ಪ್ರತಿಷ್ಠೆ ನಡೆದಿದೆ. 2016ರಲ್ಲಿ ಧೂಮಾವತಿ ಗುಡಿಯನ್ನು ನೂತನವಾಗಿ ನಿರ್ಮಿಸಲಾಗಿದೆ.

ಚಿತ್ತವಿಹಾರ

ಬದುಕಿನ ಕಥೆಗಳು

ಆವಾಗಾವಾಗ ಬದುಕಿನ ವಿವಿಧ
ಕಥೆಗಳು ಹೇಳಲ್ಪಡುತ್ತವೆ.
ಅದರಲ್ಲಿ ಕೆಲವು ಕೇಳದೇ ಉಳಿದುಬಿಟ್ಟರೆ
ಮತ್ತೆ ಕೆಲವು ಯಾವುದೋ ತಿರುವಿನಲ್ಲಿ
ಸ್ತಬ್ಧವಾಗಿ ನಿಂತು ಬಿಡುತ್ತವೆ...

ಅದು ಬಿಟ್ಟರೆ ನೆನಪಿನ ಓಣಿಯೊಳಗೆ
ಅಲೆಯುತ್ತಲೇ ಇರುತ್ತವೆ.
ಕೆಲವು ಕಥೆಗಳು ಯಾರಾದರೊಬ್ಬರ
ನಗುವಿನೊಂದಿಗೆ ಸುತ್ತಿಕೊಂಡಿರುತ್ತವೆ.
ಇಲ್ಲವೇ, ಯಾರಾದರೊಬ್ಬರ ಗಾಢ
ಮೌನದೊಳು
ಬಂಧಿಯಾಗಿ ಕುಳಿತಿರುತ್ತವೆ...

ಕೆಲವು ಕಥೆಗಳು ನಾಲಿಗೆವರೆಗೆ ಬಂದವು
ಮುಂದೆ ಬಾರದೇ ಅಲ್ಲೇ ನಿಂತವು.
ಮತ್ತೆ ಕೆಲವು ಕಣ್ಣೀರಿನ ರೂಪ ತಾಳಿ,
ಸುರಿದು ಮಣ್ಣಲಿ ಮಣ್ಣಾಗಿಬಿಟ್ಟವು...

ಆದರೆ ಒಂದಂತೂ ಸತ್ಯ
ಕಥೆಗಳು ಎಂದಿಗೂ ಸಾಯಲ್ಲ
ಕೆಲವು ತಮ್ಮ ರೂಪ ಬದಲಾಯಿಸಿ
ಗೀತೆಯ ರೂಪದಲ್ಲಿ ಬಂದರೆ
ಮತ್ತೆ ಕೆಲವು ಯಾರದಾದರೂ
ಉಸಿರಾಗಿ ಮರಳುತ್ತವೆ...

ಪ್ರಾಯಶಃ ಇದೇ ಜೀವನಚಕ್ರ,
ಎನಿಸುತ್ತದೆ, ಪ್ರತಿ ಅಂತ್ಯದಲ್ಲೂ
ಹೊಸತನ ಆರಂಭವಾಗುತ್ತದೆ
ಅಪೂರ್ಣ ಕಥೆಗಳೇ ಮತ್ತೊಬ್ಬರ
ಪೂರ್ತಿ ಜೀವನವಾಗುತ್ತವೆ....

● **ಅರವಿಂದ ಜಿ. ಜೋಷಿ,** ಮೈಸೂರು

ಅರ್ಥಪೂರ್ಣ ನಾಟಕ

● **ಡಾ. ಅರುಣ ಎಸ್.**

'ಅಂತರಂಗ' ತಂಡದವರಿಂದ ಇತ್ತೀಚೆಗೆ ಪ್ರದರ್ಶನ ಕಂಡ 'ಒಳಚರಂಡಿ ಪುರಾಣ' ಒಂದು ಉತ್ತಮ ಸಂದೇಶ ಹೊಂದಿರುವ ನಾಟಕ ಎನಿಸಿದೆ ಮತ್ತು ಪ್ರಸಕ್ತ ಕಾಲಕ್ಕೆ ಬೇಕಾಗುವಂಥ ಮಹತ್ವದ ಸಂದೇಶವನ್ನು ನೀಡಿದೆ. ಡಾ. ನಾಗತಿಹಳ್ಳಿ ಚಂದ್ರಶೇಖರ್‌ರವರ ಕಥೆ ಆಧಾರಿತವಾಗಿ ನಾಟಕ ರೂಪುಗೊಂಡಿರುವುದು ವಿಶೇಷ. ಇದನ್ನು ವರ್ತಮಾನದ ಕಾಲಘಟ್ಟಕ್ಕೆ ಹೇಗೆ ಅರ್ಥೈಸಬೇಕೆಂಬ ಸವಾಲಿನ ಹಿನ್ನೆಲೆಯಲ್ಲಿ ನಾಟಕಕಾರ ಡಾ. ಗೌರೀಶ್ ಜೋಶಿಯವರು ತಮ್ಮ ಪರಿಕಲ್ಪನೆ ಮತ್ತು ರಂಗರೂಪದ ಮೂಲಕ ಒಳಚರಂಡಿಯೊಳಗಿನ ಲೋಕವನ್ನು ಅನಾವರಣಗೊಳಿಸುತ್ತಾ ನಾಗರಿಕತೆಗಳನ್ನು ನಾಟಕದಲ್ಲಿ ಅರ್ಥಪೂರ್ಣವಾಗಿ ಹೆಣೆದಿರುವುದು ಪ್ರಶಂಸನೀಯ.

ರೋಮ್, ಗ್ರೀಕ್ ಮತ್ತು ಸಿಂಧೂ ನಾಗರಿಕತೆಯ ಕಾಲದಲ್ಲಿ ಚರಂಡಿಗಳ ನಿರ್ಮಾಣದಲ್ಲಿನ ವ್ಯವಸ್ಥಿತ ಅಚ್ಚುಕಟ್ಟುತನ ರಂಗದ ಮೇಲೆ ಸೊಗಸಾಗಿ ಮೂಡಿಬಂದಿದೆ. ಬರುಬರುತ್ತಾ ಈ ಆಧುನಿಕ ಜಗತ್ತಿನಲ್ಲಿರುವ ಭ್ರಷ್ಟಾಚಾರ, ಅವ್ಯವಸ್ಥೆ ಹಾಗೂ ಬೇಜವಾಬ್ದಾರಿತನದಿಂದ ಒಳಚರಂಡಿ ವ್ಯವಸ್ಥೆ ಹಾಗೂ ರಸ್ತೆಗಳ ನಿರ್ಮಾಣ ಎಷ್ಟರ ಮಟ್ಟಿಗೆ ಹಾಳಾಗುತ್ತಿದೆ ಎಂಬುದನ್ನು ಕೂಲಂಕಷವಾಗಿ ನಮ್ಮ ಮುಂದೆ ಪ್ರದರ್ಶಿಸಿದ್ದು

ಚೆನ್ನಾಗಿದೆ. ಈ ನಾಟಕದಲ್ಲಿ ಬರುವಂಥ ಎಲ್ಲಾ ಪಾತ್ರಗಳು, ಅದರಲ್ಲೂ ಲೋಕಪ್ಪ ಎಂಬುವ ಪಾತ್ರ ಪ್ರಸಕ್ತ ಕಾಲಕ್ಕೆ ಅನಿವಾರ್ಯವಿರುವ ಜವಾಬ್ದಾರಿಯುತ ವ್ಯಕ್ತಿಯ ವ್ಯಕ್ತಿತ್ವವನ್ನು ತೋರಿಸುತ್ತದೆ. ಸಾಮಾಜಿಕ ಜವಾಬ್ದಾರಿಯು ಕೇವಲ ಸರಕಾರಕ್ಕೆ ಸೀಮಿತ ಅಲ್ಲ, ಪ್ರತಿಯೊಬ್ಬ ಸಾಮಾಜಿಕ ಪ್ರಜ್ಞೆಯುಳ್ಳ ಪ್ರಜೆಯ ಜವಾಬ್ದಾರಿಯೂ ಆಗಿರುತ್ತದೆ ಎಂಬ ಸಂದೇಶ ಈಗಿನ ಕಾಲಘಟ್ಟಕ್ಕೆ ಅನಿವಾರ್ಯವೂ ಹೌದು, ಅತ್ಯವಶ್ಯಕವೂ ಹೌದು. ರಂಗವಿನ್ಯಾಸ ಮತ್ತು ನಿರ್ದೇಶನದ ಜವಾಬ್ದಾರಿಯನ್ನು ಅರ್ಚನಾ ಶ್ಯಾಮ್‌ರವರು ಅರ್ಥಪೂರ್ಣವಾಗಿ ನಿಭಾಯಿಸಿದ್ದಾರೆ. ನಾಟಕವು ಗಮನ ಸೆಳೆಯುವಂತಿತ್ತು ಎನ್ನುವುದಕ್ಕೆ 'ರಂಗಶಂಕರ'ದಲ್ಲಿ ನೆರೆದಿದ್ದ ಪ್ರೇಕ್ಷಕರ ಚಪ್ಪಾಳೆಯ ಸುರಿಮಳೆಯೇ ಸಾಕ್ಷಿ.

ಪದಬಂಧ

● **ಸಿ.ರವಿಶಂಕರ ಶಾಸ್ತ್ರಿ, ದಂಬೆ**



ಎಡದಿಂದ ಬಲಕ್ಕೆ

1. ಶ್ರೀಕೃಷ್ಣನ ಕೈಯಲ್ಲಿರುವ ಕೊಳಲು (4)
3. ಮಾರಾಟ ಮಾಡು ಎಂದರ್ಥ (4)
5. ಕೊನೆಯಲ್ಲಿ ದೀರ್ಘವಾಗಿ ಬಂದಿರುವ ಕೊಡುವವನು, ಉದಾರಿ (3)
6. ಮೈಮೇಲಿನ ವ್ರಣ (2)
7. ನೀರಿನ ಹಚೆ ಇಲ್ಲಿ ತಿರುಗಿಬಂದಿದೆ (2)
9. ಹಳದಿಬಣ್ಣದ ಒಂದು ರಾಸಾಯನಿಕ ವಸ್ತು (3)
10. ಅದುವೇ ನೋಡಿ ಪರಿಣಯ (3)
13. ಮನ್ಮಥನ ಪತ್ನಿ (2)
15. ದೆವ್ವ ಅಥವಾ ಭೂತ (2)
16. ಶ್ರೀರಾಮನ ಈ ಸಹೋದರ ವನವಾಸದಲ್ಲೂ ಜತೆಯಾಗಿದ್ದ (3)
17. ಮನುಷ್ಯರಿರುವ ಪ್ರಪಂಚ (4)
18. ದೊಡ್ಡ ಗಾತ್ರದ ಸಸ್ತನಿ ಪ್ರಾಣಿ (4)

ಮೇಲಿಂದ ಕೆಳಕ್ಕೆ

1. ತಂದೆಯ ತಂದೆ (4)
2. ಬೀಳ್ಕೊಡುಗೆ ಎಂದ ಮೇಲೆ ನೋವು ಸಾಮಾನ್ಯ (3)
3. ವೈರಾಗ್ಯವನ್ನು ಹೊಂದಿರುವಾತ (3)
4. ಮೋಹಕವಾದ ನಗೆಯುಳ್ಳವಳು (4)
6. ಚೂರೂ ಬೆಳಕಿಲ್ಲ, ಸಂಪೂರ್ಣ ಕಗ್ಗತ್ತಲೆ (5)
8. ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿ (5)
11. ಸಾಕ್ಷಿ ಹೇಳಲು ಬಂದು ನಿಂತ ನಿಗದಿತ ಸ್ಥಳ (4)
12. ನಕ್ಷತ್ರ, ಗ್ರಹ ಮುಂತಾದುವುಗಳಿಂದ ಉಂಟಾಗುವ ಫಲವಿದು (4)
14. ಹಣೆಗಿಟ್ಟುಕೊಳ್ಳುವ ಬೊಟ್ಟು (3)
15. ಲೆಕ್ಕಹಾಕುವಿಕೆ, ಎಣಿಕೆ (3)

ಸರಿಯುತ್ತರಗಳು

ತುಳಸೀದಾಸರ ರಾಮಚರಿತ ಮಾನಸ

ಒಂದೊಳ್ಳೆ ಮಾತು

ರೂಪಾ ಗುರುರಾಜ್

Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಯಾವುದೇ ಒಂದು ಮಹಾನ್ ಕೃತಿಯು ಹುಟ್ಟಬೇಕಾದರೆ ಅದರ ಹಿಂದೆ ಒಂದು ಪ್ರಬಲವಾದ ಕಾರಣವಿರುತ್ತದೆ. ಗೋಸ್ವಾಮಿ ತುಳಸೀದಾಸರು 'ರಾಮಚರಿತ ಮಾನಸ'ವನ್ನು ರಚಿಸಿದ್ದು 16ನೇ ಶತಮಾನದಲ್ಲಿ (ಕ್ರಿ.ಶ. 1574). ಇದು ಭಾರತದ ಇತಿಹಾಸದಲ್ಲಿ ಅತ್ಯಂತ ಸಂಕೀರ್ಣವಾದ ಕಾಲಘಟ್ಟವಾಗಿತ್ತು. ಇದು ಮೊಘಲ್ ಸಾಮ್ರಾಟ ಅಕ್ಬರನ ಆಳ್ವಿಕೆಯ ಕಾಲ. ಆ ಕಾಲದ ಸಾಮಾಜಿಕ ಹಿನ್ನೆಲೆಯನ್ನು ಗಮನಿಸಿದರೆ ಈ ಕೃತಿಯ ರಚನೆಯ ಅನಿವಾರ್ಯತೆ ನಮಗೆ ಅರ್ಥವಾಗುತ್ತದೆ.

● **ಮೂಲ ಶ್ಲೋಕ (ಸೊರಠಾ):**

ಕಹಉಂ ಕಹಾ ಲಗಿ ನಾಮ ಬಡಾಈ ।
ರಾಮು ನ ಸಕಹಿಂ ನಾಮ ಗುಣ ಗಾಈ ॥
ನಾಮು ರಾಮ ಕೋ ಕಲ್ಪತರು
ಕಲಿ ಕಲ್ಯಾಣ ನಿವಾಸ ।
ಜೋ ಸುಮಿರತ ಭಯೋ ಭಾಂಗ ತೇಂ
ತುಲಸೀ ತುಲಸೀದಾಸ ॥

ಅಂದರೆ, ರಾಮನಾಮದ ಮಹಿಮೆಯನ್ನು ನಾನು ಎಷ್ಟು ಎಂದು ವರ್ಣಿಸಲಿ? ಸ್ವತಃ ಶ್ರೀರಾಮನಿಗೂ ತನ್ನ ನಾಮದ ಮಹಿಮೆಯನ್ನು ಪೂರ್ಣವಾಗಿ ಹಾಡಲು ಸಾಧ್ಯವಿಲ್ಲ. ಈ ಕಲಿಯುಗದಲ್ಲಿ ರಾಮನಾಮವು ಕಲ್ಪವೃಕ್ಷದಂತೆ ಸಕಲ ಕಲ್ಯಾಣಗಳ ನಿವಾಸವಾಗಿದೆ. ಈ ನಾಮವನ್ನು ಸ್ಮರಿಸಿದ್ದಕ್ಕೇ 'ಭಂಗ'ದಂತಿದ್ದ (ಕೀಳಾಗಿದ್ದ) ನಾನು 'ತುಳಸಿ'ಯಂತೆ ಪವಿತ್ರನಾದೆ ಎಂದು ಬರೆಯುತ್ತಾರೆ ತುಳಸಿದಾಸರು.

ಅದಕ್ಕೂ ಮೊದಲು ರಾಮಾಯಣವು ಮುಖ್ಯವಾಗಿ ಸಂಸ್ಕೃತದಲ್ಲಿ (ವಾಲ್ಮೀಕಿ ರಾಮಾಯಣ) ಇತ್ತು. ಆಗಿನ ಕಾಲದಲ್ಲಿ ಜ್ಞಾನವು ಕೇವಲ ಸಂಸ್ಕೃತ ಭಾಷೆ ಬಲ್ಲ ಪಂಡಿತರ ಸೊತ್ತಾಗಿತ್ತು. ಸಾಮಾನ್ಯ ಜನರಿಗೆ ವೇದ-ಪುರಾಣಗಳ ಅರಿವಿರಲಿಲ್ಲ. ತುಳಸೀದಾಸರು ಕಾಶಿಯ ಪಂಡಿತರ ತೀವ್ರ ವಿರೋಧದ ನಡುವೆಯೂ, ಸಂಸ್ಕೃತದ ಬದಲು ಅಂದಿನ ಆಡುಭಾಷೆಯಾದ 'ಅವಧಿ'ಯಲ್ಲಿ ರಾಮಾಯಣವನ್ನು ಬರೆದರು. ನೀರಡಿಕೆಯಾದವನಿಗೆ ಬಾಯಾರಿಕೆ ನೀಗಲು ನೀರು ಮುಖ್ಯವೇ ಹೊರತು ಅದು ಚಿನ್ನದ ಪಾತ್ರೆಯಲ್ಲಿದೆಯೇ ಅಥವಾ ಮಣ್ಣಿನ ಪಾತ್ರೆಯಲ್ಲಿದೆಯೇ ಎಂಬುದು ಮುಖ್ಯವಲ್ಲ ಎನ್ನುವುದು ತುಳಸೀದಾಸರ ತರ್ಕವಾಗಿತ್ತು. ಸಾಮಾನ್ಯ ಜನರಿಗೆ, ರೈತರಿಗೆ ಮತ್ತು ಅನಕ್ಷರಸ್ಥರಿಗೆ ರಾಮನ ಆದರ್ಶಗಳು ಅರ್ಥವಾಗುತ್ತಿರಲಿಲ್ಲ. ತುಳಸೀದಾಸರು ಅಂದಿನ ಆಡುಭಾಷೆಯಾದ 'ಅವಧಿ'ಯಲ್ಲಿ ಇದನ್ನು ರಚಿಸುವ ಮೂಲಕ, ರಾಮನನ್ನು ಪ್ರತಿಯೊಬ್ಬರ ಮನೆ-ಮನಕ್ಕೆ ತಲುಪಿಸಿದರು.

ಆ ಕಾಲದಲ್ಲಿ ಹಿಂದೂ ಧರ್ಮದೊಳಗೆ ಅನೇಕ ಪಂಥಗಳ ನಡುವೆ ಭೇದಭಾವವಿತ್ತು. ಮುಖ್ಯವಾಗಿ ಶಿವನ ಭಕ್ತರು (ಶೈವರು) ಮತ್ತು ವಿಷ್ಣುವಿನ ಭಕ್ತರು (ವೈಷ್ಣವರು) ತಮ್ಮೊಳಗೆ ವಾದ-ವಿವಾದಗಳಲ್ಲಿ ತೊಡಗಿದ್ದರು. ತುಳಸೀದಾಸರು 'ರಾಮಚರಿತ ಮಾನಸ'ದಲ್ಲಿ ಶಿವನು ರಾಮನನ್ನು ಪೂಜಿಸುವಂತೆ ಮತ್ತು ರಾಮನು ಶಿವನನ್ನು ಆರಾಧಿಸುವಂತೆ ಚಿತ್ರಿಸುವ ಮೂಲಕ ಈ ಎರಡು ಪಂಥಗಳನ್ನು ಒಂದುಗೂಡಿಸಿದರು. ಶಿವದ್ರೋಹಿಯು ನನ್ನ ಭಕ್ತನಾಗಲು ಸಾಧ್ಯವಿಲ್ಲ ಎಂಬ ರಾಮನ ಮಾತಿನ ಮೂಲಕ ಸಮಾಜದಲ್ಲಿ ಸೌಹಾರ್ದತೆ ಮೂಡಿಸಿದರು.

ತುಳಸೀದಾಸರ ಕಾಲದಲ್ಲಿ ಭಾರತವು ವಿದೇಶಿ ಆಕ್ರಮಣಕಾರರ ಆಳ್ವಿಕೆಯಲ್ಲಿತ್ತು. ಜನರ ಆತ್ಮವಿಶ್ವಾಸ ಕುಂದಿತ್ತು ಮತ್ತು ಸ್ವಧರ್ಮದ ಬಗ್ಗೆ ಕೀಳರಿಮೆ ಮೂಡುತ್ತಿತ್ತು. ದೇವಾಲಯಗಳ ಧ್ವಂಸ ಮತ್ತು ಬಲವಂತದ ಮತಾಂತರಗಳಿಂದಾಗಿ ಜನಸಾಮಾನ್ಯರಲ್ಲಿ ತಮ್ಮ ಧರ್ಮದ ಬಗ್ಗೆ ಭಯ ಮತ್ತು ಕೀಳರಿಮೆ ಮೂಡಿತ್ತು. ಇಂಥ ಸಮಯದಲ್ಲಿ ಜನರಿಗೆ ನೈತಿಕ ಸ್ಥೈರ್ಯ ನೀಡಲು,

ಅನ್ಯಾಯದ ವಿರುದ್ಧ ಹೋರಾಡಿದ 'ಮರ್ಯಾದಾ ಪುರುಷೋತ್ತಮ' ಶ್ರೀರಾಮನ ಚರಿತ್ರೆಯ ಅಗತ್ಯವಿತ್ತು. 'ರಾಮಚರಿತ ಮಾನಸ'ವು ಜನರಲ್ಲಿ ಕಳೆದುಹೋಗಿದ್ದ ಆತ್ಮ ವಿವೇಕವನ್ನು ಮತ್ತೆ ಜಾಗೃತಗೊಳಿಸಿತು. ಇಂಥ ಸಮಯದಲ್ಲಿ ಒಬ್ಬ ಆದರ್ಶ ರಾಜ ಹೇಗಿರಬೇಕು (ರಾಮರಾಜ್ಯ), ಒಬ್ಬ ಮಗ, ಪತಿ, ಸಹೋದರನ ಕರ್ತವ್ಯಗಳೇನು ಎಂಬುದನ್ನು ನೆನಪಿಸಿ, ಜನರಲ್ಲಿ ನೈತಿಕ ಸ್ಥೈರ್ಯ ತುಂಬಲು ಈ ಕಾವ್ಯವನ್ನು ರಚಿಸಲಾಯಿತು. ತುಳಸೀದಾಸರು ಚಿತ್ರಿಸಿದ 'ರಾಮರಾಜ್ಯ'ವು ಕೇವಲ ಕಲ್ಪನೆಯಲ್ಲ, ಅದು ಶೋಷಣೆಯಿಲ್ಲದ, ಧರ್ಮದ ಆಧಾರದ ಮೇಲೆ ನಡೆಯುವ ಜನಪರ ಆಡಳಿತದ ಪ್ರತಿಬಿಂಬವಾಗಿತ್ತು. ಇದು ಅಂದಿನ ಜನರಿಗೆ ಕಗ್ಗತ್ತಲೆಯಲ್ಲಿ ಕಂಡ ದಾರಿದೀಪದಂತಿತ್ತು.

ಎಲ್ಲಕ್ಕಿಂತ ಹೆಚ್ಚಾಗಿ ಜ್ಞಾನಮಾರ್ಗವು ಎಲ್ಲರಿಗೂ ಸುಲಭವಲ್ಲ ಎಂದು ಅರಿತ ತುಳಸೀದಾಸರು, ಕೇವಲ ನಾಮಸ್ಮರಣೆ ಮತ್ತು ಶರಣಾಗತಿಯಿಂದ ಭಗವಂತನನ್ನು ತಲುಪಬಹುದು ಎಂಬ ಸರಳ 'ಭಕ್ತಿ ಮಾರ್ಗ'ವನ್ನು ತೋರಿಸಿಕೊಟ್ಟರು. 'ಕಲಿಯುಗ ಕೇವಲ ನಾಮ ಆಧಾರಾ' (ಕಲಿಯುಗದಲ್ಲಿ ನಾಮಸ್ಮರಣೆಯೇ ಆಧಾರ) ಎಂಬುದು ಅವರ ಮೂಲ ಮಂತ್ರವಾಗಿತ್ತು.

ಸ್ವಾಂತಃಸುಖಾಯ ತುಲಸೀ
ರಘುನಾಥಗಾಥಾ ।
ಭಾಷಾನಿ ಬಂಧಮತಿಮಂಜುಲ
ಮಾತನೋತಿ ॥

ತುಳಸೀದಾಸರು ಹೇಳುತ್ತಾರೆ: ನಾನು ಈ ರಘುನಾಥನ (ರಾಮನ) ಕಥೆಯನ್ನು ರಚಿಸುತ್ತಿರುವುದು ಕೇವಲ ಲೋಕಕ್ಕೆ ತೋರಿಸಿಕೊಳ್ಳಲಿಕ್ಕಲ್ಲ, ಬದಲಾಗಿ ನನ್ನ ಅಂತರಾತ್ಮದ ಸುಖಕ್ಕಾಗಿ (ಸ್ವಾಂತಃ ಸುಖಾಯ). ನನ್ನೊಳಗಿನ ರಾಮನನ್ನು ಕಾಣಲು ಮತ್ತು ಆ ಆನಂದವನ್ನು ಆಡುಭಾಷೆಯಲ್ಲಿ ಹಂಚಿಕೊಳ್ಳಲು ಇದನ್ನು ರಚಿಸುತ್ತಿದ್ದೇನೆ.

ತುಳಸಿದಾಸರ ರಾಮಚರಿತ ಮಾನಸ ಇಂದಿಗೂ ಪ್ರಸ್ತುತವೇ. ಶ್ರೀರಾಮನ ಚರಿತ್ರೆ ನಮ್ಮೆಲ್ಲರಿಗೂ ಆದರ್ಶವಾಗಲಿ.

ನೀವೂ ಬರೆಯಬಹುದು

ನಮ್ಮ ವಿಳಾಸ

ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098

e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಕ್ಯಾಮರೋನ್‌ಗೆ ಸದ್ಯ ಬೌಲಿಂಗ್ ನಿರ್ಬಂಧ

ದೆಹಲಿ: ಇದೀಗ ನಡೆಯುತ್ತಿರುವ ಐಪಿಎಲ್‌ನಲ್ಲಿ ಬೌಲಿಂಗ್ ಮಾಡದಂತೆ ಕ್ಯಾಮರೋನ್ ಗ್ರೀನ್‌ಗೆ ಕ್ರಿಕೆಟ್ ಆಸ್ಟ್ರೇಲಿಯಾ ನಿರ್ಬಂಧ ಹೇರಿದೆ. ಕೊಲ್ಕತ್ತಾ ನೈಟ್ ರೈಡರ್ಸ್ ತಂಡದಲ್ಲಿರುವ ಗ್ರೀನ್ ಫಿಟ್ನೆಸ್ ಸಮಸ್ಯೆಯಿಂದ ಬಳಲುತ್ತಿದ್ದು, ಹೀಗಾಗಿ ಕೇವಲ ಬ್ಯಾಟರ್ ಆಗಿ ಕಣಕ್ಕಿಳಿಯುವಂತೆ ಸೂಚಿಸಲಾಗಿದೆ. ಐಪಿಎಲ್ ಮೆಗಾ ಹರಾಜಿನಲ್ಲಿ ಕಾಣಿಸಿಕೊಂಡಿದ್ದ ಕ್ಯಾಮರೋನ್ ಗ್ರೀನ್ ಅವರನ್ನು ಕೆಕೆಆರ್ ಫ್ರಾಂಚೈಸಿಯು ಬರೋಬ್ಬರಿ 25.20 ಕೋಟಿ ರು.ಗೆ ಖರೀದಿಸಿದೆ. ಮುಂಬೈ ಇಂಡಿಯನ್ಸ್ ವಿರುದ್ಧದ ಮೊದಲ ಪಂದ್ಯದಲ್ಲಿ ಅವರು ಬೌಲಿಂಗ್ ಮಾಡಿರಲಿಲ್ಲ. ಸಂಪೂರ್ಣ ಫಿಟ್ನೆಸ್ ಸಾಧಿಸುವವರೆಗೆ ಕೇವಲ ಬ್ಯಾಟರ್ ಆಗಿ ಆಡುವಂತೆ ಸೂಚಿಸಲಾಗಿದೆ. 2024ರ ಕೊನೆಯಲ್ಲಿ ಅವರು ಬೆನ್ನಿನ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಹಾಗಾಗಿ ಫಿಟ್ನೆಸ್ ಕಾಪಾಡಿಕೊಳ್ಳಲು ಆಸ್ಟ್ರೇಲಿಯಾ ಕ್ರಿಕೆಟ್ ಮಂಡಳಿ ಅವರ ಬೌಲಿಂಗ್ ಮೇಲೆ ಸದ್ಯಕ್ಕೆ ನಿರ್ಬಂಧ ಹೇರಿದೆ. ಐಪಿಎಲ್‌ನ ದ್ವಿತಿಯಾರ್ಧದ ವೇಳೆಗೆ ಅವರು ಸಂಪೂರ್ಣವಾಗಿ ಫಿಟ್ನೆಸ್ ಸಾಧಿಸಲಿದ್ದಾರೆ ಎಂಬುದು ಖಚಿತವಾಗಿದ್ದು, ಐಪಿಎಲ್ 2ನೇ ಹಂತದಲ್ಲಿ ಅವರು ಬೌಲಿಂಗ್ ಆರಂಭಿಸುವ ಸಾಧ್ಯತೆಯಿದೆ ಎಂದು ವರದಿಯಾಗಿದೆ. ಹಾಗಾಗಿ ಸದ್ಯ ಅವರು ಕೇವಲ ಬ್ಯಾಟರ್ ಆಗಿ ಮಾತ್ರ ಕಣಕ್ಕಿಳಿಯಲಿದ್ದಾರೆ.

ಆರು ಪಂದ್ಯಗಳಿಗೆ ಧೋನಿ ಅಲಭ್ಯ?

ಚೆನ್ನೈ: ಚೆನ್ನೈ ಸೂಪರ್ ಕಿಂಗ್ಸ್ ತಂಡದ ಹಿರಿಯ ಆಟಗಾರ ಎಂ.ಎಸ್ ಧೋನಿ ಅವರು ಮೊದಲ 6 ಪಂದ್ಯಗಳಿಂದ ಹೊರಗುಳಿಯುವ ಸಾಧ್ಯತೆಗಳಿವೆ ಎಂದು ಫ್ರಾಂಚೈಸಿಯೇ ಖುದ್ದಾಗಿ ಮಾಹಿತಿ ನೀಡಿದೆ. ಈ ಐಪಿಎಲ್ ಆವೃತ್ತಿಗಾಗಿ ಸತತ 1 ತಿಂಗಳು ಕಠಿಣ ತರಬೇತಿ ಪಡೆದ ಬಳಿಕ ಸ್ನಾಯು ಸೆಳೆತದಿಂದ ಧೋನಿ ಬಳಲುತ್ತಿದ್ದಾರೆ. ಹೀಗಾಗಿ ಮೊದಲ 6 ಪಂದ್ಯಗಳಿಗೆ ಅಲಭ್ಯರಾಗಲಿದ್ದಾರೆ. ಏಪ್ರಿಲ್ ತಿಂಗಳ ಕೊನೆಯ ವಾರದಲ್ಲಿ ತಂಡವನ್ನು ಸೇರಿಕೊಳ್ಳುವ ನಿರೀಕ್ಷೆಯಿದೆ ಎಂದು ಸಿಎಸ್‌ಕೆ ಫ್ರಾಂಚೈಸಿ ತಿಳಿಸಿದೆ. ಈಗಾಗಲೇ ಎಲ್ಲಾ ಮಾದರಿಯ ಕ್ರಿಕೆಟ್‌ನಿಂದಲೂ ನಿವೃತ್ತರಾಗಿರುವ ಧೋನಿ, ಐಪಿಎಲ್‌ನಲ್ಲಿ ಮಾತ್ರ ಆಡುತ್ತಿದ್ದಾರೆ. ಇದೇ ಆವೃತ್ತಿಯಲ್ಲಿ ಅವರು ಐಪಿಎಲ್‌ಗೆ ನಿವೃತ್ತಿ ಘೋಷಿಸುವ ಸಾಧ್ಯತೆಗಳಿವೆ ಎನ್ನುವ ಮಾತುಗಳೂ ಕೇಳಿಬರುತ್ತಿವೆ.

ಸಿಎಸ್‌ಕೆ ಬೌಲರ್‌ಗಳನ್ನು ಧೂಳೀಪಟ ಮಾಡಿದ ವೈಭವ್ ಸೂರ್ಯವಂಶಿ

ಚೆನ್ನೈ ವಿರುದ್ಧ ರಾಜಸ್ಥಾನಕ್ಕೆ ಭರ್ಜರಿ ಜಯ

ಗುವಾಹಟಿ: ಸೋಮವಾರ ನಡೆದ ಐಪಿಎಲ್ ಟೂರ್ನಿಯ ಮೂರನೇ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡದ ವಿರುದ್ಧ ರಾಜಸ್ಥಾನ್ ರಾಯಲ್ಸ್ ತಂಡವು ಭರ್ಜರಿ ಜಯ ದಾಖಲಿಸಿದೆ.

ಗುವಾಹಟಿಯ ಬರ್ಸಪಾರ ಕ್ರಿಕೆಟ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಚೆನ್ನೈ ತಂಡವು ರಾಜಸ್ಥಾನ್ ರಾಯಲ್ಸ್ ಬೌಲರ್‌ಗಳ ದಾಳಿಗೆ ಸಿಲುಕಿ ಕೇವಲ 127ಕ್ಕೆ ಆಲೌಟ್ ಆಗಿತ್ತು. 128 ರನ್‌ಗಳ ಸಾಧಾರಣ ಗುರಿಯನ್ನು ಬೆನ್ನಟ್ಟಿದ ರಾಜಸ್ಥಾನ ತಂಡ 12.1 ಓವರ್‌ಗಳಲ್ಲಿ ಕೇವಲ 2 ವಿಕೆಟ್ ಕಳೆದುಕೊಂಡು ಸುಲಭ ಜಯ ಸಾಧಿಸಿತು.

ಮೊದಲ ವಿಕೆಟ್ ಜತೆಯಾಟದಲ್ಲಿ ರಾಜಸ್ಥಾನ ತಂಡವು 6.2 ಓವರ್‌ಗಳಲ್ಲಿ 75 ರನ್‌ಗಳನ್ನು ಸಂಪಾದಿಸಿತು. ಯುವ ಆಟಗಾರ ವೈಭವ್ ಸೂರ್ಯವಂಶಿ ಕೇವಲ 17 ಎಸೆತಗಳಲ್ಲಿ 4 ಬೌಂಡರಿ, 5 ಸಿಕ್ಸರ್‌ಗಳ ಸಹಿತ 52 ರನ್ ಗಳಿಸಿ ಗೆಲುವಿನ ರೂವಾರಿಯಾದರು.

ರಾಜಸ್ಥಾನ ಪರ ಧ್ರುವ್ ಜುರೆಲ್ 9 ಬಾಲ್‌ಗಳಲ್ಲಿ 18 ರನ್ ಗಳಿಸಿದರು. ಯಶಸ್ವಿ ಜೈಸ್ವಾಲ್ 36 ಬಾಲ್‌ಗಳಿಂದ 38 ರನ್ ಮತ್ತು ರಿಯಾನ್ ಪರಾಗ್ 11 ಬಾಲ್‌ಗಳಿಂದ 14 ರನ್ ಗಳಿಸಿ ಅಜೇಯರಾಗಿ ಉಳಿದರು.

ಮೊದಲು ಬ್ಯಾಟಿಂಗ್ ಮಾಡಿದ ಚೆನ್ನೈ ತಂಡ ನೀರಸ ಪ್ರದರ್ಶನ ತೋರಿದ್ದು, 8ನೇ ಕ್ರಮಾಂಕದ ಬ್ಯಾಟರ್ ಜೇಮಿ ಓವರ್‌ಟನ್ 43 ರನ್ ಗಳಿಸಿ ತಂಡದ ಗರಿಷ್ಠ ಸ್ಕೋರರ್ ಎನಿಸಿಕೊಂಡರು. ಉಳಿದ ಯಾವುದೇ ಬ್ಯಾಟರ್ 20ರ ಗಡಿ ದಾಟಲಿಲ್ಲ.

ಚೆನ್ನೈ ನೀರಸ ಬ್ಯಾಟಿಂಗ್: ಟಾಸ್ ಸೋತು ಬ್ಯಾಟಿಂಗ್ ಇಳಿದ ಚೆನ್ನೈ ತಂಡವು ಆರಂಭದಲ್ಲೇ ಆಘಾತ ಅನುಭವಿಸಿತು. ಚೆನ್ನೈ ಪರ ಮೊದಲ ಪಂದ್ಯವನ್ನಾಡಲು ಆರಂಭಿಕನಾಗಿ ಕಣಕ್ಕಿಳಿದಿದ್ದ ಸಂಜು ಸ್ಯಾಮ್ಸನ್ ಕೇವಲ 6 ರನ್ ಗಳಿಸಿ ನಿರ್ಗಮಿಸಿದರು. ದಕ್ಷಿಣ ಆಫ್ರಿಕಾದ ನಾಂಡ್ರೆ ಬರ್ಗರ್ ಸ್ಯಾಮ್ಸನ್ ಅವರನ್ನು ಪೆವಿಲಿಯನ್‌ಗೆ ಕಳುಹಿಸಿದರು. ನಂತರದ ಓವರ್‌ನಲ್ಲೇ ಜೋಫ್ರಾ ಆರ್ಚರ್ 11 ಎಸೆತಗಳಲ್ಲಿ 6 ರನ್ ಗಳಿಸಿದ್ದ ನಾಯಕ ಋತುರಾಜ್ ಗಾಯಕ್ವಾಡ್ ರನ್ನು ಬೌಲ್ಡ್ ಮಾಡಿದರು. 3ನೇ ಓವರ್‌ನಲ್ಲಿ ಬರ್ಗರ್ ಯುವ ಆಟಗಾರ ಆಯುಷ್ ಮ್ಹಾತ್ರೆಯನ್ನುಪೆವಿಲಿಯನ್ ಸೇರಿಸಿದರು. ಪವರ್ ಪ್ಲೇಯ ಕೊನೆಯ ಓವರ್‌ನಲ್ಲಿ ಅನುಭವಿ ಆಟಗಾರ ಮ್ಯಾಥ್ಯೂ ಶಾರ್ಟ್ ಕೇವಲ 2 ರನ್ ಗಳಿಸಿ ಸಂದೀಪ್ ಶರ್ಮಾ ಬೌಲಿಂಗ್‌ನಲ್ಲಿ ಯಶಸ್ವಿ ಜೈಸ್ವಾಲ್‌ಗೆ ಕ್ಯಾಚ್ ನೀಡಿ ಔಟ್ ಆದರು.

ಜಡೇಜಾ ಡಬಲ್ ಆಘಾತ: ಮೊದಲ 6 ಓವರ್‌ಗಳಲ್ಲಿ ಚೆನ್ನೈ 4 ವಿಕೆಟ್ ಕಳೆದುಕೊಂಡು ಕೇವಲ 41 ರನ್ ಗಳಿಸಿತ್ತು. ಪವರ್ ಪ್ಲೇ ಮುಗಿದ ನಂತರವೂ ಚೇತರಿಸಿಕೊಳ್ಳಲು ರಾಜಸ್ಥಾನ್ ಬೌಲರ್‌ಗಳು ಅವಕಾಶ ನೀಡಲಿಲ್ಲ. 8 ಓವರ್‌ನಲ್ಲಿ ಬೌಲಿಂಗ್ ಮಾಡಲು ಬಂದ ರವೀಂದ್ರ ಜಡೇಜಾ ತಮ್ಮ ಮೊದಲ ಓವರ್‌ನಲ್ಲೇ ಚೆನ್ನೈಗೆ ಡಬಲ್ ಆಘಾತ ನೀಡಿದರು. 17 ರನ್ ಗಳಿಸಿ ಉತ್ತಮವಾಗಿ ಆಡುತ್ತಿದ್ದ ಸರ್ಫರಾಜ್ ಖಾನ್ ಹಾಗೂ 6 ರನ್ ಗಳಿಸಿದ್ದ ಶಿವಂ ದುಬೆ ವಿಕೆಟ್ ಪಡೆದರು.

100ರ ಗಡಿ ದಾಟಿಸಿದ ಓವರ್ಟನ್: ನಂತರ ಬಂದ ನೂರ್ ಅಹ್ಮದ್ 1 ರನ್ ಗಳಿಸಿ ಆರ್ಚರ್‌ಗೆ 2ನೇ ಬಲಿಯಾದರೆ, ಮ್ಯಾಟ್ ಹೆನ್ರಿ 5 ರನ್ ಗಳಿಸಿ ರವಿ ಬಿಷ್ಣೋಯ್ ಬೌಲಿಂಗ್‌ನಲ್ಲಿ ಔಟ್ ಆದರು. 8ನೇ ಕ್ರಮಾಂಕದಲ್ಲಿ ಬಂದು ಕೊನೆಯ ಓವರ್ ವರೆಗೂ ಆಡಿದ ಜೇಮಿ ಓವರ್‌ಟನ್ 36 ಎಸೆತಗಳಲ್ಲಿ 2 ಬೌಂಡರಿ, 2 ಸಿಕ್ಸರ್‌ಗಳ ಸಹಿತ 43 ರನ್ ಗಳಿಸಿ ತಂಡದ ಮೊತ್ತವನ್ನು 100ರ ಗಡಿ ದಾಟಿಸಿ ಚೆನ್ನೈ ತಂಡದ ಮಾನ ಕಾಪಾಡಿದರು.

ಇಂದು ಪಂಜಾಬ್ ಕಿಂಗ್ಸ್‌ಗೆ ಗುಜರಾತ್ ಟೈಟನ್ಸ್ ಸವಾಲು

ಚಂಡೀಗಢ: ಇಲ್ಲಿನ ಪಂಜಾಬ್ ಕ್ರಿಕೆಟ್ ಅಸೋಶಿಯೇಷನ್ ಸ್ಟೇಡಿಯಂನಲ್ಲಿ ಇಂದು ನಡೆಯಲಿ ರುವ ಐಪಿಎಲ್ ಪಂದ್ಯದಲ್ಲಿ ಅತಿಥೇಯ ಪಂಜಾಬ್ ಕಿಂಗ್ಸ್ ತಂಡವು ಗುಜರಾತ್ ಟೈಟನ್ಸ್ ತಂಡವನ್ನು ಎದುರಿಸಲಿದೆ.

ಶ್ರೇಯಸ್ ಅಯ್ಯರ್ ನಾಯಕತ್ವದ ಪಂಜಾಬ್ ಕಿಂಗ್ಸ್ ತಂಡದಲ್ಲಿ ಭಾರತೀಯ ತಂಡದ ಅರ್ಶದೀಪ್ ಸಿಂಗ್ ಅಲ್ಲದೆ, ವಿದೇಶದ ಪ್ರಮುಖ ಆಟಗಾರರಾದ ಮಾರ್ಕಸ್ ಸ್ಟೊಯ್ನಿಸ್, ಲಾಕಿ ಫರ್ಗುಸನ್, ಮಾರ್ಕೋ ಜಾನ್ಸನ್‌ರಂತಹ ಪ್ರಮುಖ ಆಟಗಾರರೂ ಇದ್ದಾರೆ. ಕಳೆದ ವರ್ಷ ಲೀಗ್‌ನ ಫೈನಲ್‌ನಲ್ಲಿ ಆರ್‌ಸಿಬಿ ಎದುರು ಸೋತು ರನ್ನರ್ ಅಪ್ ಆಗಿದ್ದ ಪಂಜಾಬ್ ಕಿಂಗ್ಸ್ ತಂಡವು ಈ ಸಲದ ಪಂದ್ಯಾವಳಿಯಲ್ಲಿ ಟೂರ್ನಿಯುದ್ದಕ್ಕೂ ಬೆಟ್ಟದಷ್ಟು ಸವಾಲನ್ನು ಎದುರಿಸಲು ಸಿದ್ಧವಾಗಿದೆ.

ಕಳೆದ ಐಪಿಎಲ್‌ನಲ್ಲಿ ತಂಡದ ಪ್ರಮುಖ ಆಟಗಾರರಾದ ಯಜ್ವೇಂದ್ರ ಚಹಾಲ್, ಪ್ರಬ್‌ಸಿಮ್ರಾನ್ ಸಿಂಗ್, ಪ್ರಿಯಾಂಶ್ ಆರ್ಯ ಮುಂತಾದ ಆಟಗಾರರು ಟೂರ್ನಿಯುದ್ದಕ್ಕೂ ಮಿಂಚಿದ್ದಾರೆ. ಇದುವರೆಗೂ ಒಮ್ಮೆ ಕೂಡಾ ಐಪಿಎಲ್ ಪ್ರಶಸ್ತಿ ಗೆಲ್ಲಲು ಸಾಧ್ಯವಾಗದ ಪಂಜಾಬ್, ಈ ಸಲ ಟ್ರೋಫಿಯ ಮೇಲೆ ಕಣ್ಣಿಟ್ಟಿದ್ದು, ಗುಜರಾತ್ ವಿರುದ್ಧ ತವರಿನಲ್ಲಿ ನಡೆಯಲಿರುವ ಪಂದ್ಯವನ್ನು ಪ್ರೇಕ್ಷಕರ ಉತ್ತಮ ಬೆಂಬಲದೊಂದಿಗೆ ಗೆದ್ದು ಟೂರ್ನಿಯಲ್ಲಿ ಶುಭಾರಂಭ ಮಾಡಬಹುದೆಂಬ ನಿರೀಕ್ಷೆಯಲ್ಲಿದೆ.

ಶುಭ್‌ಮನ್ ಗಿಲ್ ನಾಯಕತ್ವದ ಗುಜರಾತ್ ತಂಡ ಕೂಡಾ ಈ ಐಪಿಎಲ್‌ನ ಒಂದು ಬಲಿಷ್ಠ ತಂಡ ಎಂದೆನಿಸಿದೆ. ಭಾರತೀಯ ಕ್ರಿಕೆಟ್ ತಂಡದ ಸಾಯಿ ಸುದರ್ಶನ್, ಮೊಹಮ್ಮದ್ ಸಿರಾಜ್ ಹಾಗೂ ವಿದೇಶಿ ಆಟಗಾರರಾದ ಜೋಸ್ ಬಟ್ಲರ್, ಕಗಿಸೋ ರಬಾಡ ಮುಂತಾದ ಆಟಗಾರರು ಈ ಸಲ ಗುಜರಾತ್ ಟೈಟನ್ಸ್ ತಂಡದಲ್ಲಿದ್ದಾರೆ.

ಇಂದಿನ ಪಂದ್ಯ
ಪಂಜಾಬ್ ಕಿಂಗ್ಸ್-ಗುಜರಾತ್ ಟೈಟನ್ಸ್
ತಾಣ: ಏಕಾನಾ ಸ್ಟೇಡಿಯಂ, ಚಂಡೀಗಢ
ಸಮಯ: ರಾ.7 ಗಂಟೆ
ನೇರ ಪ್ರಸಾರ: ಜಿಯೋ ಹಾಟ್‌ಸ್ಟಾರ್

ಐಪಿಎಲ್ ಅಖಾಡ ಪ್ರವೇಶಿಸಿದ 2022ರಲ್ಲಿ ಚೊಚ್ಚಲ ಬಾರಿಗೆ ಪ್ರಶಸ್ತಿ ಗೆದ್ದಿದ್ದ ಗುಜರಾತ್, ಆ ಬಳಿಕ ನಡೆದಿದ್ದ ಮೂರು ಐಪಿಎಲ್ ಟೂರ್ನಿಗಳಲ್ಲಿ ಫೈನಲ್ ತಲುಪಲು ಸಾಧ್ಯವಾಗಲಿಲ್ಲ. ಕಳೆದ ಬಾರಿ ಲೀಗ್‌ನಲ್ಲಿ ಉತ್ತಮ ಪ್ರದರ್ಶನ ನೀಡಿ ಪ್ಲೇ ಆಫ್‌ಗೂ ಜಿಗಿದಿದ್ದ ಗಿಲ್ ಪಡೆ ಎಲಿಮಿನೇಟರ್ ಪಂದ್ಯದಲ್ಲಿ ಸೋತು ಹೊರ ಹೋಗಬೇಕಾಯಿತು.

ಕಳೆದ ಋತುವಿನ ಐಪಿಎಲ್‌ನಲ್ಲಿ ಪಂಜಾಬ್ -ಗುಜರಾತ್ ಐದು ಬಾರಿ ಮುಖಾಮುಖಿಯಾಗಿವೆ. ಆ ಪೈಕಿ ಗುಜರಾತ್ ಮೂರು ಪಂದ್ಯದಲ್ಲಿ ಗೆದ್ದಿದ್ದರೆ, ಪಂಜಾಬ್ ಎರಡು ಪಂದ್ಯದಲ್ಲಿ ಜಯ ಸಾಧಿಸಿತ್ತು.

ಲಂಕಾ ಕ್ರಿಕೆಟ್ ಮಂಡಳಿಯ ಒಪ್ಪಂದದಿಂದ ಹೊರ ಬರಲು ಆಟಗಾರನ ನಿರ್ಧಾರ

ಆರ್‌ಸಿಬಿ ಸೇರ್ಪಡೆಗೆ ತುಷಾರ ಕಾತರ

ಬೆಂಗಳೂರು: ಐಪಿಎಲ್ ಉದ್ಘಾಟನಾ ಪಂದ್ಯದಲ್ಲಿ ಸನ್ ರೈಸರ್ಸ್ ಹೈದರಾಬಾದ್ ತಂಡವನ್ನು ಮಣಿಸಿರುವ ಆರ್‌ಸಿಬಿಯ ಮುಂದಿನ ಪಂದ್ಯವು ಚೆನ್ನೈ ವಿರುದ್ಧ ಇದೇ ಭಾನುವಾರದಂದು ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆಯಲಿದೆ. ಬೆಂಗಳೂರು ತಂಡವನ್ನು ಸೇರಲು ಪಣತೊಟ್ಟಿರುವ ಶ್ರೀಲಂಕಾದ ವೇಗದ ಬೌಲರ್ ನುವಾನ್ ತುಷಾರ, ಲಂಕಾ ಕ್ರಿಕೆಟ್ ಮಂಡಳಿಯ ಕೇಂದ್ರ ಒಪ್ಪಂದದಿಂದ ಹೊರಬರಲು ನಿರ್ಧರಿಸಿದ್ದಾರೆ, ಹೀಗಾಗಿ ಅವರು ನನ್ನನ್ನು ಕೇಂದ್ರ ಒಪ್ಪಂದದಲ್ಲಿ ಸೇರಿಸದಂತೆ ಲಂಕಾ ಕ್ರಿಕೆಟ್ ಮಂಡಳಿಗೆ ಮನವಿ ಮಾಡಿದ್ದಾರೆ ಎಂದು ವರದಿಯಾಗಿದೆ.

ಫಿಟ್ನೆಸ್ ಪರೀಕ್ಷೆಯಲ್ಲಿ ವಿಫಲರಾದ ಕಾರಣದಿಂದಾಗಿ ನುವಾನ್ ತುಷಾರ ಐಪಿಎಲ್‌ನಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ. ಅಂತಹ ಪರಿಸ್ಥಿತಿಯನ್ನು ಎದುರಿಸುವ ಯಾವುದೇ ಆಟಗಾರ ವಿದೇಶಿ ಲೀಗ್‌ಗಳಲ್ಲಿ ಆಡಲು ಸಾಧ್ಯವಿಲ್ಲ ಎಂಬುದು ಶ್ರೀಲಂಕಾ ಕ್ರಿಕೆಟ್ ಮಂಡಳಿಯ ನೀತಿಯಾಗಿದೆ. ಹೀಗಾಗಿ ಐಪಿಎಲ್‌ನಲ್ಲಿ ಆರ್‌ಸಿಬಿ ತಂಡವನ್ನು ಇದುವರೆಗೂ ಅವರಿಗೆ ಸೇರಲಾಗಿಲ್ಲ.



ನುವಾನ್ ತುಷಾರ ಅವರನ್ನು ಆರ್‌ಸಿಬಿ 1.6 ಕೋಟಿ ರು.ಗೆ ಖರೀದಿಸಿದೆ. ಶ್ರೀಲಂಕಾ ಕ್ರಿಕೆಟ್ ಮಂಡಳಿ ಅವರಿಗೆ ಇದುವರೆಗೂ ಎನ್‌ಒಸಿ ನೀಡಿಲ್ಲ, ಹೀಗಾಗಿ ಅವರಿಗೆ ಆರ್‌ಸಿಬಿಗೆ ಸೇರಲಾಗಿಲ್ಲ. ಇದುವರೆಗಿನ ಐಪಿಎಲ್‌ನಲ್ಲಿ 8 ಪಂದ್ಯಗಳನ್ನಾಡಿರುವ ನುವಾನ್ ತುಷಾರ 9 ವಿಕೆಟ್‌ಗಳನ್ನು ಗಳಿಸಿದ್ದಾರೆ. 2024ರ ಐಪಿಎಲ್‌ನಲ್ಲಿ ಮುಂಬೈ ಪರ ಆಡಿದ್ದ ತುಷಾರ, ಕಳೆದ ವರ್ಷ ಆರ್‌ಸಿಬಿ ಪರ ಕೇವಲ ಒಂದು ಪಂದ್ಯವನ್ನು ಮಾತ್ರ ಆಡಿದ್ದರು. ಇದೀಗ ಸದ್ಯದಲ್ಲೇ ಆರ್‌ಸಿಬಿ ಪರ ಆಟವಾಡಬಹುದೆನ್ನುವ ನಿರೀಕ್ಷೆ ಅವರದ್ದಾಗಿದೆ.

ಪಿಎಸ್‌ಎಲ್ ಲಾಹೋರ್ ಖಲಂದರ್ಸ್ ತಂಡದ ಕ್ರಿಕೆಟಿಗ ಫಖರ್ ಜಮಾನ್ ವಿರುದ್ಧ ಮೊಕದ್ದಮೆ ದಾಖಲು

ಪಾಕ್ ಲೀಗ್‌ನಲ್ಲಿ ಚೆಂಡು ವಿರೂಪ ಪ್ರಕರಣ

ಕರಾಚಿ: ಭಾನುವಾರ ಕರಾಚಿ ಕಿಂಗ್ಸ್ ವಿರುದ್ಧದ ಪಂದ್ಯದ ವೇಳೆ ಪಾಕಿಸ್ತಾನ ಸೂಪರ್ ಲೀಗ್ (ಪಿಎಸ್‌ಎಲ್) ಫ್ರಾಂಚೈಸಿಯ ಲಾಹೋರ್ ಖಲಂದರ್ಸ್ ತಂಡದ ಕ್ರಿಕೆಟಿಗ ಫಖರ್ ಜಮಾನ್ ವಿರುದ್ಧ ವಿರುದ್ಧ ಚೆಂಡು ವಿರೂಪಗೊಳಿಸಿದ ಆರೋಪ ಹೊರಿಸಲಾಗಿದೆ. ಆದರೆ ಮ್ಯಾಚ್ ರೆಫರಿ ರೋಷನ್ ನೇತೃತ್ವದ ಶಿಸ್ತಿನ ವಿಚಾರಣೆಯ ಸಂದರ್ಭದಲ್ಲಿ ಫಖರ್ ತಮ್ಮ ವಿರುದ್ಧ ಹೊರಿಸಲಾದ ಆರೋಪವನ್ನು ನಿರಾಕರಿಸಿದ್ದಾರೆ ಎಂದು ಪಾಕಿಸ್ತಾನ ಕ್ರಿಕೆಟ್ ಮಂಡಳಿ ತನ್ನ ಹೇಳಿಕೆಯಲ್ಲಿ ತಿಳಿಸಿದೆ.

ಮುಂದಿನ 48 ಗಂಟೆಗಳ ಒಳಗೆ ಮತ್ತೊಂದು ವಿಚಾರಣೆ ನಡೆಯಲಿದೆ, ನಂತರ ಮ್ಯಾಚ್ ರೆಫರಿ ತಮ್ಮ ತೀರ್ಪನ್ನು ಹೇಳಲಿದ್ದಾರೆ. ತಪ್ಪಿತಸ್ಥರೆಂದು ಸಾಬೀತಾದರೆ, ಲೆವೆಲ್-3 ಅಪರಾಧಕ್ಕೆ ಕನಿಷ್ಠ ಶಿಕ್ಷೆ ಒಂದು ಪಂದ್ಯದ ನಿಷೇಧ ಹೇರಲಾಗುವುದು ಎಂದು ಪಾಕ್ ಕ್ರಿಕೆಟ್ ಮಂಡಳಿ ತಿಳಿಸಿದೆ.

ಕರಾಚಿ ಕಿಂಗ್ಸ್ ಗೆಲುವಿಗೆ ಇನ್ನೂ 14 ರನ್‌ಗಳ ಅಗತ್ಯವಿದ್ದಾಗ, ವೇಗದ ಬೌಲರ್ ಹ್ಯಾರಿಸ್ ರೌಫ್ ಅಂತಿಮ ಓವರ್ ಎಸೆದಾಗ ವಿವಾದ ಭುಗಿಲೆದ್ದಿತು. ಲಾಹೋರ್ ನಾಯಕ ಶಾಹೀನ್ ಶಾ ಅಫ್ರಿದಿ, ಫಖಾರ್ ಜಮಾನ್ ಮತ್ತು ರೌಫ್ ಮೂವರೂ ಪರಸ್ಪರ ಚರ್ಚೆಯ ಸಮಯದಲ್ಲಿ ತೊಡಗಿದ್ದರು. ಈ ವೇಳೆ ಫಖಾರ್ ಜಮಾನ್ ಚೆಂಡನ್ನು ಬಲವಾಗಿ ಬೆರಳಿಂದ ಒತ್ತುವುದು ಕಂಡು ಬಂತು, ತಕ್ಷಣ ಫೀಲ್ಡ್ ಅಂಪೈರ್ ಚೆಂಡನ್ನು ಪರಿಶೀಲನೆ ನಡೆಸಿದರು.

ಅಂಪೈರ್ ಫೈಸಲ್ ಅವರು ನಾಯಕ ಅಫ್ರಿದಿಯನ್ನು ಕರೆದು, ಚೆಂಡನ್ನು ಪರಿಶೀಲಿಸಿ, ಬಾಂಗ್ಲಾದೇಶದ ಎರಡನೇ ಆನ್-ಫೀಲ್ಡ್ ಅಂಪೈರ್ ಅವರೊಂದಿಗೆ ದೀರ್ಘ ಚರ್ಚೆ ನಡೆಸಿದರು. ಇಬ್ಬರೂ ಅಂಪೈರ್‌ಗಳು ಚೆಂಡನ್ನು ಉದ್ದೇಶಪೂರ್ವಕವಾಗಿ ವಿರೂಪಗೊಳಿ ಸಲಾಗಿದೆ ಎಂದು ನಿರ್ಧರಿಸಿ ಕರಾಚಿಗೆ ಐದು ಪೆನಾಲ್ಟಿ ರನ್‌ಗಳನ್ನು ನೀಡಿದರು, ಮಾತ್ರವಲ್ಲದೆ ಚೆಂಡನ್ನು ಕೂಡ ಬದಲಾಯಿಸಿದರು. ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಮುಂದಿನ ವಿಚಾರಣೆಯ ಸಮಯದಲ್ಲಿ ಹೈ-ಡೆಫಿನಿಷನ್ ಪ್ರಸಾರ ದೃಶ್ಯಾವಳಿಗಳು ಮತ್ತು ಮ್ಯಾಚ್ ರೆಫರಿಯ ವರದಿಯನ್ನು ವಿವರವಾಗಿ ಪರಿಶೀಲಿಸುವ ನಿರೀಕ್ಷೆಯಿದೆ.

ವಿಟಾಕೀಸ್

ಲೈಫ್ ಟುಡೆಯ ಹೊಸ ಹಾಡು

ಲೈಫ್ ಟುಡೆ ಚಿತ್ರದ ನೀನೇ ನೀನೇ ನೋಡಲ್ಲಿ ಹಾಡು ಕನ್ನಡ ಮತ್ತು ತಮಿಳು ಭಾಷೆಯಲ್ಲಿ ಬಿಡುಗಡೆಯಾಗಿದ್ದು ಸಂಗೀತ ಪ್ರಿಯರ ಮನಗೆದ್ದಿದೆ. ಕವಿರಾಜ್ ಸಾಹಿತ್ಯ ಬರೆದಿರುವ ಈ ಹಾಡಿಗೆ ಶ್ರೀಧರ್.ವಿ.ಸಂಭ್ರಮ್ ಸಂಗೀತ ಸಂಯೋಜಿಸಿದ್ದಾರೆ. ನಟ ಕಿರಣ್ ಆದಿತ್ಯ ಹಾಗೂ ನಟಿ ಲೇಖಾ ಚಂದ್ರ ಹಾಡಿನಲ್ಲಿ ಕಾಣಿಸಿಕೊಂಡಿದ್ದು, ಮೋಹನ್ ನೃತ್ಯ ನಿರ್ದೇಶನ ಮಾಡಿದ್ದಾರೆ. ಲಹರಿ ವೇಲು ಹಾಡು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಲೈಫ್ ಟುಡೆ ನವಿರಾದ ಪ್ರೇಮಕಥೆಯ ಜತೆಗೆ ಸೆಂಟಿಮೆಂಟ್ ಕಥೆಯನ್ನು ಒಳಗೊಂಡಿದೆ. ಕಾಂತ ಕನ್ನಲ್ಲಿ ಚಿತ್ರಕ್ಕೆ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ.

ಚಿತ್ರದ ಹಾಡು ಕೇಳಲು ಮಧುರವಾಗಿದೆ. ಚಿತ್ರದಲ್ಲಿ ಒಳ್ಳೆಯ ಕಂಟೆಂಟ್ ಇದ್ದರೆ ಸಿನಿಮಾ

ನೋಡಲು ಪ್ರೇಕ್ಷಕರು ಖಂಡಿತಾ ಚಿತ್ರಮಂದಿರಗಳಿಗೆ ಬರುತ್ತಾರೆ, ಹಾಗಾಗಿ ಒಳ್ಳೆಯ ಕಥೆಗಳನ್ನು ಆಯ್ದುಕೊಂಡು ಅದನ್ನು ಪ್ರೇಕ್ಷಕರಿಗೆ ಮನಮುಟ್ಟುವಂತೆ ಕಟ್ಟಿಕೊಡಬೇಕು. ಆ ನಿಟ್ಟಿನಲ್ಲಿ ಲೈಫ್ ಟುಡೆ ಚಿತ್ರದಲ್ಲಿ ಒಳ್ಳೆಯ ಸ್ಟೋರಿ ಇದೆ ಎಂಬುದು ತಿಳಿಯುತ್ತದೆ ಎಂದು ಲಹರಿ ವೇಲು ಹೇಳಿದರು.

ಸಂಬಂಧಗಳು ಮತ್ತು ಅದರ ಜತೆಗೆ ಭಾವನಾತ್ಮಕ ಸೆಳೆತ ಇದ್ದರೆ ಆ ಸಿನಿಮಾ ಪ್ರೇಕ್ಷಕರ ಮನಗೆಲ್ಲುತ್ತದೆ. ಅಂತೆಯೇ ನಮ್ಮ ಸಿನಿಮಾ ಭಾವನಾತ್ಮಕ ನೆಲೆಗಟ್ಟಿನಲ್ಲಿ ಸಾಗುತ್ತದೆ. ಎಲ್ಲರಿಗೂ ಕನೆಕ್ಟ್ ಆಗುವ ಸ್ಟೋರಿ ಚಿತ್ರದಲ್ಲಿದೆ ಎಂದು ನಿರ್ದೇಶಕ ಕಾಂತ ಕನ್ನಲ್ಲಿ ಹೇಳಿದರು.

ಲೈಫ್ ಟುಡೆ ಚಿತ್ರದ ಕಥೆ ಅದ್ಭುತವಾಗಿದೆ. ಎಲ್ಲರಿಗೂ ಹೊಂದುವ ಕಥೆ ಇದಾಗಿದ್ದು ಚಿತ್ರತಂಡದ ಸಹಕಾರದಿಂದ ಸಿನಿಮಾ ಅಂದುಕೊಂಡಂತೆ ಮೂಡಿಬಂದಿದೆ ಎಂದು ನಿರ್ಮಾಪಕ ಪ್ರದೀಪ್ ತಿಳಿಸಿದರು. ಕಿರಣ್ ನಾಯಕನಾಗಿ ಕಾಣಿಸಿಕೊಂಡಿದ್ದು, ಲೇಖಾ ಚಂದ್ರ ಮತ್ತು ಯುಕ್ತಾ ನಾಯಕಿಯರಾಗಿ ಅಭಿನಯಿಸಿದ್ದಾರೆ. ಉಳಿದಂತೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ.

ತೆರೆಗೆ ಸಿದ್ಧವಾದ ಪೀಟರ್

ಈ ಹಿಂದೆ ದೂರದರ್ಶನ ಚಿತ್ರವನ್ನು ನಿರ್ದೇಶನ ಮಾಡಿ ಪ್ರೇಕ್ಷಕರ ಮನಗೆದ್ದಿರುವ ನಿರ್ದೇಶಕ ಸುಕೇಶ್ ಶೆಟ್ಟಿ, ಈಗ ಈ ಮಣ್ಣಿನ ಸೊಗಡಿನ ಮತ್ತೊಂದು ಚಿತ್ರವನ್ನು ತೆರೆಗೆ ತರಲು ಸಿದ್ಧವಾಗಿದ್ದಾರೆ. ಪೀಟರ್ ಶೀರ್ಷಿಕೆಯಲ್ಲಿ ಸಿನಿಮಾ ನಿರ್ಮಾಣವಾಗಿದ್ದು, ಸುಕೇಶ್ ಚಿತ್ರಕ್ಕೆ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಕರಾವಳಿ ಭಾಗದ ಮಣ್ಣಿನ ಸೊಗಡಿನ ಕಥೆ ಸಿನಿಮಾದಲ್ಲಿದ್ದು, ಅದರ ಜತೆಗೆ ಚಂಡೆ ವಾದ್ಯದ ಇತಿಹಾಸವನ್ನು ಸಾರಲಿದೆ.

ಇದರೊಂದಿಗೆ ಒಂದಷ್ಟು ಲವ್ ಸ್ಟೋರಿ, ಸಸ್ಪೆನ್ಸ್, ಥ್ರಿಲ್ಲರ್, ಸೆಂಟಿಮೆಂಟ್ ಕಥನವೂ ಸಿನಿಮಾದಲ್ಲಿ ಬೆರೆತಿದೆ. ರಾಜೇಶ್ ಧ್ರುವ ನಾಯಕನಾಗಿ ನಟಿಸಿದ್ದು, ಆಂಗ್ರಿ ಯಂಗ್‌ಮ್ಯಾನ್ ಆಗಿ ಕಾಣಿಸಿಕೊಂಡಿ

ದ್ದಾರೆ. ರವೀಕ್ಷಾ ಶೆಟ್ಟಿ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಜಾನ್ವಿ ರಾಯಲ, ಪ್ರತಿಮಾ ನಾಯಕ್ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದು, ಉಳಿದಂತೆ ಹೊಸ ಪ್ರತಿಭೆಗಳಿಗೂ ಚಿತ್ರದಲ್ಲಿ ಅವಕಾಶ ನೀಡಲಾಗಿದೆ.

ಅಜಯ್ ಗೊಗಾವಲೆ ದನಿಯಲ್ಲಿ ಮೂಡಿಬಂದಿರುವ ಸ್ನೇಹದ ಮಹತ್ವ ಸಾರುವ ಹಾಡು ಅದ್ಭುತವಾಗಿದೆ. ಇನ್ನು ರಾಜೇಶ್ ಧ್ರುವ ಮತ್ತು ರವೀಕ್ಷಾ ಶೆಟ್ಟಿ ಕಾಣಿಸಿಕೊಂಡಿರುವ ಪ್ರೇಮಗೀತೆ ಕೂಡ ಮಧುರವಾಗಿ ಮೂಡಿಬಂದಿದೆ. ನೂರಕ್ಕೂ ಹೆಚ್ಚು ಸಿನಿಮಾಗಳಿಗೆ ಸೌಂಡ್ ಡಿಸೈನರ್ ಆಗಿ ಕೆಲಸ ಮಾಡಿದ ಅನುಭವ ಹೊಂದಿರುವ ರವಿ ಹಿರೇಮಠ್ ಮತ್ತು ರಾಕೇಶ್ ಹೆಗಡೆ ವೃದ್ಧಿ ಸ್ಟುಡಿಯೋಸ್ ಬ್ಯಾನರ್‌ನಲ್ಲಿ ಒಟ್ಟಾಗಿ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿಸಿದ್ದಾರೆ. ಚಿತ್ರದ ಹಾಡುಗಳಿಗೆ ರಿತ್ವಿಕ್ ಮುರಳಿಧರ್ ಸಂಗೀತ ಸಂಯೋಜಿಸಿದ್ದಾರೆ. ಹಾಡುಗಳು ಹಾಗೂ ಟೀಸರ್‌ನಲ್ಲಿಯೇ ಮನಗೆದ್ದಿರುವ ಪೀಟರ್, ಏಪ್ರಿಲ್ 10ರಂದು ರಾಜ್ಯಾದ್ಯಂತ ಅದ್ದೂರಿಯಾಗಿ ತೆರೆಗೆ ಬರಲಿದೆ.

ಆರದ ಸೇಡಿನ ಜ್ವಾಲೆ

ಈ ವಾರ ತೆರೆಗೆ ಬಂದ ಆಯುಧ ಮೂರೂವರೆ ದಶಕದ ಹಿಂದೆ ಬರುತ್ತಿದ್ದ ಸಿನಿಮಾಗಳನ್ನು ನೆನಪಿಸಿದೆ. ನಾಯಕನಿಗೆ ತನ್ನ ಕುಟುಂಬ ಎಂದರೆ ಪ್ರಾಣ. ತನ್ನ ಕುಟುಂಬಕ್ಕೆ ಏನಾದರೂ ಆದರೆ ಸಹಿಸುವವನಲ್ಲ. ಅದರಲ್ಲಿಯೂ ಬಾಹ್ಯ ಶಕ್ತಿಗಳಿಂದ ಕುಟುಂಬಕ್ಕೆ ಆಪತ್ತು ಎದಿರಾದರೆ ಪ್ರಾಣವನ್ನೇ ಒತ್ತೆ ಇಟ್ಟು ಹೋರಾಡುತ್ತಾನೆ.

ನಾಯಕ ತಾನು ಮೆಚ್ಚಿದ ಹುಡುಗಿಯೊಂದಿಗೆ ಸಂತಸದಿಂದಿರುವಾಗ ಆತನಿಗೆ ಮರೆವು ಕಾಡುತ್ತದೆ. ತನ್ನ ಜೀವನದಲ್ಲಿ ನಡೆದ ಹಳೆಯ ಕಹಿ ಘಟನೆಗಳು ಕಾಡುತ್ತವೆ. ಅಲ್ಲಿಂದ ನಾಯಕನ ಫ್ಲಾಶ್ ಬ್ಯಾಕ್ ಸ್ಟೋರಿ ತೆರೆದುಕೊಳ್ಳುತ್ತದೆ. ಅಷ್ಟಕ್ಕೂ ನಾಯಕನ ಬಾಳಲ್ಲಿ ನಡೆದ ಕಹಿ ಘಟನೆಗಳೇನು. ಆತನಿಗೆ ಯಾಕಾಗಿ ಮರೆವು ಕಾಡುತ್ತಿರುತ್ತದೆ. ಅದರ ಹಿನ್ನೆಲೆ ಏನು ಎಂಬುದನ್ನು ಸಿನಿಮಾ ನೋಡಿಯೇ ತಿಳಿಯಬೇಕು.

ಇದು ಹಳೆಯ ಕಥೆಯಾದರೂ ಅದನ್ನು ಇಂದಿನ ಕಾಲಕ್ಕೆ ಹೊಂದುವಂತೆ ಕಟ್ಟಿ ಕೊಡುವಲ್ಲಿ ನಿರ್ದೇಶಕ ದೇವರಾಜು ಯಶಸ್ವಿಯಾಗಿದ್ದಾರೆ. ಜತೆಗೆ ನಾಯಕನಾಗಿಯೂ ಮೆಚ್ಚುವ ಅಭಿನಯ ತೋರಿದ್ದಾರೆ. ದೇವು ಆ್ಯಕ್ಷನ್ ನಲ್ಲಿ ಅಬ್ಬರಿಸಿದ್ದಾರೆ. ಅಮೃತಾ ಮತ್ತು ಸಂಹಿತಾ ಇಬ್ಬರು ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಸಂಹಿತಾ ಗ್ಲಾಮರ್ ಆಗಿ ಕಂಗೊಳಿಸಿದ್ದು, ಅಮೃತಾ ಪಾತ್ರವೂ ಮೆಚ್ಚುವಂತಿದೆ. ಇನ್ನು ಚಿತ್ರದ ಛಾಯಾಗ್ರಹಣಕ್ಕೆ ಫುಲ್ ಮಾರ್ಕ್ಸ್ ನೀಡಬಹುದು. ಸಂಗೀತ ಮತ್ತು ಹಾಡುಗಳಿಗೆ ಇನ್ನೂ ಒಂದಷ್ಟು ಒತ್ತು ನೀಡಿದ್ದರೆ ಚೆನ್ನಾಗಿರುತ್ತಿತ್ತು. ಅದರ ಜತೆಗೆ ಸಿನಿಮಾದ ಕಥೆಯ ನಿರೂಪಣೆಯ ವೇಗವೂ ಹೆಚ್ಚಬೇಕಿತ್ತು ಅನ್ನಿಸುತ್ತದೆ. ಒಟ್ಟಾರೆ ದೇವರಾಜು ಅವರ ಪ್ರಯತ್ನವನ್ನು ಮಡಚ್ಚಲೇಬೇಕು. ಆಯುಧ ಚಿತ್ರವನ್ನು ಮನೆಮಂದಿಯೆಲ್ಲಾ ಕುಳಿತು ನೋಡಿ ಆನಂದಿಸಬಹುದು.

ನಾದಿಯಾ ಪಾತ್ರ ಮೆಚ್ಚಿದ ಕಿಯಾರಾ

ಕಿಯಾರಾ ಅಡ್ವಾಣಿ ಬಾಲಿವುಡ್‌ನ ಬೇಡಿಕೆಯ ನಟಿಯಾಗಿದ್ದು, ಸಾಲು ಸಾಲು ಸಿನಿಮಾಗಳಲ್ಲಿ ಅಭಿನಯಿಸುತ್ತಿದ್ದಾರೆ. ಟಾಲಿವುಡ್ ಚಿತ್ರರಂಗಕ್ಕೂ ಎಂಟ್ರಿಕೊಟ್ಟ ಕಿಯಾರಾ, ಈಗ ಚಂದನವನದಲ್ಲಿಯೂ ಮಿಂಚಲು ಸಿದ್ಧವಾಗಿದ್ದಾರೆ. ಟಾಕ್ಸಿಕ್‌ನಲ್ಲಿ ನಾದಿಯಾ ಪಾತ್ರದಲ್ಲಿ ಕಿಯಾರಾ ಮನಸೆಳೆಯಲಿದ್ದಾರೆ. ಎಲ್ಲವೂ ಅಂದುಕೊಂಡಂತೆ ಆಗಿದ್ದರೆ ಇಷ್ಟೊತ್ತಿಗೆ ಟಾಕ್ಸಿಕ್ ಬೆಳ್ಳಿತೆರೆಯಲ್ಲಿ ಅಬ್ಬರ ಆರಂಭಿಸಲಿತ್ತು. ಆದರೆ ಚಿತ್ರತಂಡ ಟಾಕ್ಸಿಕ್ ಬಿಡುಗಡೆಯನ್ನು ಮುಂದೂಡಿದೆ. ಸಿನಿಮಾ ನೋಡಲು ಸಿನಿಪ್ರಿಯರು ಕಾತರರಾಗಿದ್ದಾರೆ.

ಈ ನಡುವೆಯೇ ಕಿಯಾರಾ ಅಡ್ವಾಣಿ, ಟಾಕ್ಸಿಕ್ ಚಿತ್ರದ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿದ್ದಾರೆ. ತಾವು ಈ ಚಿತ್ರದಲ್ಲಿ ನಟಿಸಲು ಒಪ್ಪಿದ್ದು ಯಾಕೆ ಎಂಬುದನ್ನು ರಿವಿಲ್ ಮಾಡಿದ್ದಾರೆ. ಟಾಕ್ಸಿಕ್ ನಿಜಕ್ಕೂ ಅಪಾರ ಖುಷಿಕೊಟ್ಟಿದೆ. ಮೊದಲು ನನಗೆ ನಿರ್ದೇಶಕರು ಕಥೆ ಹೇಳಿದಾಗ ಕೇಳಿ ಅಚ್ಚರಿಯಾಯಿತು. ಹೀಗೂ ಪಾತ್ರಗಳನ್ನು ಸೃಷ್ಟಿಸಬಹುದೆ ಅನ್ನಿಸಿತು. ಯಾಕೆಂದರೆ ಅಂತಹ ಅದ್ಭುತ ಕಥೆ ಚಿತ್ರದಲ್ಲಿದೆ. ನಾನು ಈ ಚಿತ್ರದಲ್ಲಿ ನಾದಿಯಾ ಎಂಬ ಪಾತ್ರವನ್ನು ನಿರ್ವಹಿಸಿದ್ದೇನೆ. ನಿರ್ದೇಶಕರು ನನ್ನ ಪಾತ್ರವನ್ನು ವಿವರಿಸುವಾಗ ನಾನು ಅದರಲ್ಲಿಯೇ ಮುಳುಗಿದ್ದೆ. ನಾದಿಯಾ ನಿಜವಾಗಿಯೂ ಚಾಲೆಂಜಿಂಗ್ ಪಾತ್ರವಾಗಿತ್ತು. ಆ ಪಾತ್ರವನ್ನು ಆಯ್ದುಕೊಳ್ಳುವ ಮೂಲಕ ಚಾಲೆಂಜ್ ಸ್ವೀಕರಿಸಲು ಸಿದ್ಧವಾದೆ. ನನ್ನ ಈ ಹಿಂದಿನ ಸಿನಿಮಾಗಳಿಂತಲೂ ಟಾಕ್ಸಿಕ್‌ನಲ್ಲಿನ ಪಾತ್ರ ಬಲು ವಿಶೇಷವಾಗಿದೆ. ನನ್ನನ್ನ ಚಿತ್ರದಲ್ಲಿ ನೋಡಿ ಎಲ್ಲರೂ ಮೆಚ್ಚುತ್ತೀರಾ. ಇನ್ನು ಸಿನಿಮಾದ ಹಾಡು ಕೂಡ ಅದ್ಭುತವಾಗಿ ಮೂಡಿಬಂದಿದೆ ಎಂದು ಕಿಯಾರಾ ಸಂತಸ ಹಂಚಿಕೊಂಡಿದ್ದಾರೆ.

ಈ ಹಿಂದೆ ಟಾಕ್ಸಿಕ್ ಚಿತ್ರದ ತಬಾಹಿ... ಲಿರಿಕಲ್ ಹಾಡು ಬಿಡುಗಡೆಯಾಗಿತ್ತು. ಈ ಹಾಡಿನಲ್ಲಿ ಯಶ್ ಸಿಕ್ಸ್‌ಪ್ಯಾಕ್‌ನಲ್ಲಿ ಮಿಂಚಿದ್ದು,

ಕಿಯಾರಾ ಗ್ಲಾಮರ್ ಲುಕ್‌ನಲ್ಲಿ ಕಂಗೊಳಿಸಿದ್ದಾರೆ. ಕಡಲ ತಡಿಯಲಿ ಸಾಗುವ ಈ ಗೀತೆಯನ್ನು ಕೇಳಿ ಖುಷಿಯಾಗಿರುವ ಸಿನಿಪ್ರಿಯರು ಹಾಡನ್ನು ಕಣ್ತುಂಬಿಕೊಳ್ಳಲು ಕಾತರರಾಗಿದ್ದಾರೆ.

ಟಾಕ್ಸಿಕ್ ಅಂಡರ್ ವರ್ಲ್ಡ್ ಸ್ಟೋರಿಯ ಸಿನಿಮಾವಾಗಿದ್ದು, ಆ್ಯಕ್ಷನ್‌ಗೆ ಹೆಚ್ಚಿನ ಒತ್ತು ನೀಡಲಾಗಿದೆ. ಗೀತು ಮೋಹನ್‌ದಾಸ್ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಯಶ್ ಡಬಲ್ ಶೇಡ್‌ನಲ್ಲಿ ಮಿಂಚಿದ್ದಾರೆ. ಕನ್ನಡತಿ ರುಕ್ಮಿಣಿ ವಸಂತ್, ಹುಮಾ ಖುರೇಶಿ, ನಯನ ತಾರಾ, ತಾರಾ ಸುತಾರಿಯ ಸೇರಿದಂತೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ. ಟಾಕ್ಸಿಕ್ ಪ್ಯಾನ್ ವರ್ಲ್ಡ್ ಸಿನಿಮಾವಾಗಿ ನಿರ್ಮಾಣವಾಗಿದ್ದು, ಜೂನ್ 4 ರಂದು ವಿಶ್ವಾದ್ಯಂತ ಅದ್ದೂರಿಯಾಗಿ ಬಿಡುಗಡೆಯಾಗಲಿದೆ.